ಶುಕ್ರವಾರ, ಆಗಸ್ಟ್ 9, 2024 | ₹ 7.00
www.prajavani.net
prajavani.net prajavani prajavani prajavani

ಪ್ರಜಾ ವಾಣಿ


ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಮಾತುಕತೆ

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮ್ ಹಾಗೂ ಎನ್‌ಸಿಪಿಯ (ಶರದ್ ಬಣ) ಸಂಸದೆ ಸುಪ್ರಿಯಾ ಸುಳೆ ಸಂಸತ್ತಿನ ಮೊಗಸಾಲೆಯಲ್ಲಿ ಮಂಗಳವಾರ ಮಾತುಕತೆಯಲ್ಲಿ ನಿರತರಾಗಿದ್ದರು

ಕಂಚು ತಂದ ಖುಷಿಯ ಮಿಂಚು



ಹರ್ಮನ್‌ಪ್ರೀತ್ ಸಿಂಗ್

ಪ್ಯಾರಿಸ್: ಭಾರತ ಪುರುಷರ ಹಾಕಿ ತಂಡವು ಸತತ ಎರಡನೇ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಜಯಿಸಿತು. ಗುರುವಾರ ನಡೆದ ಪ್ಲೇ ಆಫ್‌ನಲ್ಲಿ ಹರ್ಮನ್‌ಪ್ರೀತ್ ಸಿಂಗ್ ನಾಯಕತ್ವದ ಭಾರತ ತಂಡವು ಜಯಿಸಿತು. 2020ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿಯೂ ಭಾರತ ತಂಡವು ಕಂಚು ಗೆದ್ದಿತ್ತು.

ಭಾರತ ತಂಡವು ಸೆಮಿಫೈನಲ್‌ನಲ್ಲಿ ಜರ್ಮನಿ ಎದುರು ಸೋತಿತ್ತು. ಅದರಿಂದಾಗಿ ಕಂಚಿನ ಪದಕ ಸುತ್ತಿನ ಪ್ಲೇ ಆಫ್‌ನಲ್ಲಿ ಆಡಿತು. ಭಾರತದ ಗೋಲ್ ಕೀಪರ್ ಪಿ.ಆರ್. ಶ್ರೀಜೇಶ್ ನಿವೃತ್ತಿ ಘೋಷಿಸಿದರು. ಈ ಒಲಿಂಪಿಕ್ಸ್‌ನಲ್ಲಿ ಭಾರತ ತಂಡದ ಪದಕ ಜಯದಲ್ಲಿ ಪ್ರಮುಖ ಪಾತ್ರ ವಹಿಸಿದರು. ಒಲಿಂಪಿಕ್ಸ್‌ನಲ್ಲಿ ಭಾರತಕ್ಕೆ ಒಲಿದ ನಾಲ್ಕನೇ ಪದಕ ಇದಾಗಿದೆ.

ಗೋಲು ಗಳಿಸಿದವರು

ಭಾರತ: ಹರ್ಮನ್‌ಪ್ರೀತ್ ಸಿಂಗ್ 30ನಿ, 33ನಿ

ಸ್ಪೇನ್: ಮಾರ್ಕ್ ಮಿರಾಲೆಸ್ 18ನಿ

ಪಂದ್ಯ ಫಲಿತಾಂಶ

ಭಾರತ 2

ಸ್ಪೇನ್ 1

ಸತತ ಎರಡು ಬಾರಿ ಕಂಚು ಜಯಿಸಿದ್ದು

ವರ್ಷ	ಸ್ಥಳ	ನಾಯಕ
1968	ಮೆಕ್ಸಿಕೊ	ಗುರುಭಕ್ಷ್ ಸಿಂಗ್/ಪ್ರೀತ್‌ಪಾಲ್ ಸಿಂಗ್
1972	ಮ್ಯೂನಿಕ್	ಹರ್ಮಿಕ್ ಸಿಂಗ್
2020	ಟೋಕಿಯೊ	ಮನಪ್ರೀತ್ ಸಿಂಗ್
2024	ಪ್ಯಾರಿಸ್	ಹರ್ಮನ್‌ಪ್ರೀತ್ ಸಿಂಗ್

ಒಲಿಂಪಿಕ್ಸ್‌ನಲ್ಲಿ ಭಾರತ ಗೆದ್ದ ಪದಕಗಳು

ಚಿನ್ನ 8 | ಬೆಳ್ಳಿ 1 | ಕಂಚು 4



ಸಂಭ್ರಮ... ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಜಯಿಸಿದ ಭಾರತ ತಂಡದ ಆಟಗಾರರ ಸಂಭ್ರಮ ಪ್ರಜಾವಾಣಿ ಚಿತ್ರ: ಕೆ. ಎನ್. ಶಾಂತಕುಮಾರ್

ಮಹಾರಾಜ ಕಾಲೇಜು ಮೈದಾನದಲ್ಲಿ ಬೃಹತ್ ವೇದಿಕೆ ಸಜ್ಜು • ಮೈತ್ರಿ ಸಮಾವೇಶ ನಾಳೆ

ಕಾಂಗ್ರೆಸ್ ‘ಜನಾಂದೋಲನ’ ಇಂದು

• ಎಂ. ಮಹೇಶ

ಮೈಸೂರು: ಆಡಳಿತಾರೂಢ ಕಾಂಗ್ರೆಸ್, ವಿರೋಧ ಪಕ್ಷಗಳಾದ ಬಿಜೆಪಿ–ಜೆಡಿಎಸ್‌ನಿಂದ ಕೈಗೊಂಡಿರುವ ಹೋರಾಟದ ಸಮಾರೋಪಕ್ಕೆ ನಗರದ ಮಹಾರಾಜ ಕಾಲೇಜು ಮೈದಾನ ಸಜ್ಜಾಗಿದೆ.

‘ಮುಡಾ ನಿವೇಶನಗಳ ಹಂಚಿಕೆಯಲ್ಲಿ ಅಕ್ರಮ ನಡೆದಿದೆ’ ಎಂದು ಆರೋಪಿಸಿರುವ ಬಿಜೆಪಿ–ಜೆಡಿಎಸ್ ನಾಯಕರು, ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆಗೆ ಆಗ್ರಹಿಸಿ ನಡೆಸಿದ ‘ಮೈಸೂರು ಚಲೋ’ ಪಾದಯಾತ್ರೆ ಆ.10ರಂದು ಸಮಾರೋಪಗೊಳ್ಳಲಿದೆ. ಅದಕ್ಕೆ ಒಂದು ದಿನ ಮುಂಚಿತವಾಗಿಯೇ, ಅಂದರೆ ಆ.9ರಂದು (ಶುಕ್ರವಾರ) ‘ಭ್ರಷ್ಟ ಬಿಜೆಪಿ–ಜೆಡಿಎಸ್ ಪಾಪಪೀಡಿತರ ಯಾತ್ರೆ ವಿರುದ್ಧ ಬೃಹತ್ ಜನಾಂದೋಲನ’ಕ್ಕೆ ಕಾಂಗ್ರೆಸ್ ತಯಾರಾಗಿದೆ. ಮೈಸೂರು, ಮಂಡ್ಯ, ಚಾಮರಾಜನಗರ, ಹಾಸನ, ಕೊಡಗು ಜತೆಗೆ ರಾಜ್ಯದಾದ್ಯಂತ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಸಿದ್ದರಾಮಯ್ಯ ಅಭಿಮಾನಿಗಳು ಸಹಸ್ರಾರು ಸಂಖ್ಯೆಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಪಕ್ಷ ತಿಳಿಸಿದೆ.

ಅಪಾರ ಸಂಖ್ಯೆಯಲ್ಲಿ ಜನರನ್ನು ಸೇರಿಸಿ ಶಕ್ತಿ ಪ್ರದರ್ಶಿಸಲು ಮೂರೂ ಪಕ್ಷದವರೂ ಕಸರತ್ತು ನಡೆಸುತ್ತಿದ್ದಾರೆ. ಈ ಎರಡೂ ಸಮಾವೇಶಗಳಿಗೆ ಒಂದೇ ಸ್ಥಳ, ಒಂದೇ ವೇದಿಕೆಯು ಸಾಕ್ಷಿಯಾಗಲಿದೆ. ಪಕ್ಷಗಳ ಬ್ಯಾನರ್ ಮಾತ್ರ ಬದಲಾಗಲಿದೆ.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರತಿನಿಧಿಸುವ ರಾಮನಗರ ಜಿಲ್ಲೆಯಿಂದ ಆರಂಭವಾದ ಎರಡು ದೊಡ್ಡ ಹೋರಾಟಗಳು ಮುಖ್ಯಮಂತ್ರಿ ಸಿದ್ದರಾಮಯ್ಯ ತವರಾದ ಮೈಸೂರಿನಲ್ಲಿ ಸಮಾರೋಪಗೊಳ್ಳುತ್ತಿರುವುದು ವಿಶೇಷ.



ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಶುಕ್ರವಾರ ನಡೆಯಲಿರುವ ‘ಕಾಂಗ್ರೆಸ್ ಜನಾಂದೋಲನ’ ಸಮಾವೇಶಕ್ಕೆ ‘ಸತ್ಯಮೇವ ಜಯತೇ’ ಎಂದು ಬರೆದಿರುವ ವೇದಿಕೆ ಸಜ್ಜುಗೊಳಿಸುವ ಕಾರ್ಯದಲ್ಲಿ ಕಾರ್ಮಿಕರು ಗುರುವಾರ ನಿರತರಾಗಿದ್ದರು– ಪ್ರಜಾವಾಣಿ ಚಿತ್ರ: ಅನೂಪ್ ರಾಘ.ಟಿ.

ಮುಖ್ಯಾಂಶಗಳು

- ಸಿದ್ದರಾಮಯ್ಯ ಶಕ್ತಿ ಪ್ರದರ್ಶನಕ್ಕೆ ವೇದಿಕೆ
- 4 ಲಕ್ಷ ಜನ ಸೇರಿಸ್ತೀವಿ: ಕಾಂಗ್ರೆಸ್

ಆರೋಪ–ಪ್ರತ್ಯಾರೋಪ: ಸರ್ಕಾರವನ್ನು ಉಳಿಸಿಕೊಳ್ಳಲು ಕಾಂಗ್ರೆಸ್ ಹಾಗೂ ಸರ್ಕಾರವನ್ನು ಉರುಳಿಸಲು ಬಿಜೆಪಿ–ಜೆಡಿಎಸ್ ದೋಸ್ತಿಗಳು ಪೈಪೋಟಿ ಕೊಡುತ್ತಿದ್ದು, ಹೋರಾಟದ ಉದ್ದೇಶವನ್ನು ಜನರ ಮುಂದಿಡಲು ಸಮಾವೇಶಗಳ ಮೊರೆ ಹೋಗಿದ್ದಾರೆ. ಆರೋಪ–ಪ್ರತ್ಯಾರೋಪಗಳಿಗೆ ಸಮಾವೇಶ ವೇದಿಕೆಯಾಗಲಿದೆ.

ಕೇಂದ್ರದ ಎನ್‌ಡಿಎ ಸರ್ಕಾರದಿಂದ ಕರ್ನಾಟಕಕ್ಕೆ ಆಗುತ್ತಿರುವ ಅನ್ಯಾಯದ ಮೇಲೆ ಬೆಳಕು ಚೆಲ್ಲಲು, ಬಿಜೆಪಿ–



ಬಿಜೆಪಿ–ಜೆಡಿಎಸ್‌ನವರು ಸುಳ್ಳುಗಳನ್ನು ಹೇಳಿ ಇಲ್ಲಸಲ್ಲದ್ದನ್ನು ಬಿಂಬಿಸುತ್ತಿದ್ದಾರಲ್ಲ ಎಂಬ ನೋವು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗಿದೆ. ಅವರ ಪರವಾಗಿ ಬಂಡೆಯಾಗಿ ನಿಲ್ಲುತ್ತೇನೆ

ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ



ಸುಳ್ಳು ಪ್ರಕರಣಗಳನ್ನೆಲ್ಲಾ ಎದುರಿಸುವ ಶಕ್ತಿ ನನಗಿದೆ. ಸುಳ್ಳು ಕೇಸುಗಳು ಮಾನ್ಯವಾಗುವುದಿಲ್ಲ

ಸಿದ್ದರಾಮಯ್ಯ, ಮುಖ್ಯಮಂತ್ರಿ

(ಆರ್‌ಟಿಐ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ದಾಖಲಿಸಿದ ದೂರಿಗೆ ಪ್ರತಿಕ್ರಿಯೆ)

ಜೆಡಿಎಸ್ ಸರ್ಕಾರದ ಅವಧಿಯಲ್ಲಾದ ಹಗರಣಗಳನ್ನು ಬಿಚ್ಚಿಡಲು ಕಾಂಗ್ರೆಸ್ ತಯಾರಾಗಿದ್ದರೆ, ರಾಜ್ಯ ಕಾಂಗ್ರೆಸ್ ಸರ್ಕಾರದಲ್ಲಿ ನಡೆದಿರುವ ಮುಡಾ ನಿವೇಶನ ಹಂಚಿಕೆ ಹಗರಣ, ಮಹರ್ಷಿ ವಾಲ್ಮೀಕಿ ನಿಗಮದ ಹಗರಣಗಳನ್ನು ಮುಂದಿಟ್ಟುಕೊಂಡು ‘ಮೈತ್ರಿ’ ಪಕ್ಷಗಳಾದ ಬಿಜೆಪಿ–ಜೆಡಿಎಸ್ ಸಜ್ಜಾಗಿವೆ.

ಸಿಎಂ ಹೇಳಿಕೆ– ಕುತೂಹಲ: ‘ಬಿಜೆಪಿ–ಜೆಡಿಎಸ್ ಸರ್ಕಾರ ಹಾಗೂ ಬಿ.ಎಸ್.ಯಡಿಯೂರಪ್ಪ ಅವರ ಕಾಲದಲ್ಲಾಗಿರುವ ಹಗರಣಗಳನ್ನೆಲ್ಲಾ ಬಿಚ್ಚಿಡುತ್ತೇನೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಗುಡುಗಿರುವುದು ಕುತೂಹಲಕ್ಕೆ ಕಾರಣವಾಗಿದೆ. ಅವರ ತವರಿನಲ್ಲೇ ನಿಂತು, ತಿರುಗೇಟು ಕೊಡಲು ದೋಸ್ತಿಗಳೂ ಕಾಯುತ್ತಿದ್ದಾರೆ.

ಮೈದಾನದಲ್ಲಿ ಬೃಹತ್ ವೇದಿಕೆ ಸಿದ್ಧಗೊಳಿಸಲಾಗಿದ್ದು, ಮಳೆಯಾದರೂ ಸೋರದಂತೆ ಪೆಂಡಾಲ್ ವ್ಯವಸ್ಥೆ ಮಾಡಲಾಗಿದೆ. 2 ಲಕ್ಷ ಮಂದಿಯನ್ನು ಸೇರಿಸಬೇಕೆಂದು ಕೆಪಿಸಿಸಿ ಉದ್ದೇಶಿಸಿದೆ. ವೇದಿಕೆಯ ಮುಂಭಾಗ 60 ಸಾವಿರ ಕುರ್ಚಿಗಳನ್ನು ಹಾಕಲಾಗಿದ್ದು, ಜನರ ಸಂಖ್ಯೆಗೆ ತಕ್ಕಂತೆ ಕುರ್ಚಿಗಳ ವ್ಯವಸ್ಥೆ ಮಾಡಿಕೊಳ್ಳಲು ಸಿದ್ಧತೆ ನಡೆದಿದೆ. ಗಣ್ಯರು ಕುಳಿತುಕೊಳ್ಳುವ ಮುಖ್ಯ ವೇದಿಕೆಯೊಂದಿಗೆ (500 ಆಸನ) ಅಕ್ಕಪಕ್ಕದಲ್ಲಿ ಮತ್ತೆರಡು ಡಯಾಸ್‌ಗಳನ್ನು ಹಾಕಲಾಗಿದ್ದು, ಅಲ್ಲಿ ಜನಪ್ರತಿನಿಧಿಗಳು ಹಾಗೂ ಪಕ್ಷದ ಮುಂಚೂಣಿ ನಾಯಕರಿಗೆ ಆಸನಗಳನ್ನು (ತಲಾ 250) ವ್ಯವಸ್ಥೆ ಮಾಡಲಾಗಿದೆ. ಭದ್ರತೆಗೆ ಹೊರ ಜಿಲ್ಲೆಯ ಪೊಲೀಸರನ್ನೂ ನಿಯೋಜಿಸಲಾಗಿದೆ.

ಬಿಜೆಪಿ–ಜೆಡಿಎಸ್ ಸರ್ಕಾರದಲ್ಲಾದ ಹಗರಣಗಳ ಕುರಿತು ಕೆಪಿಸಿಸಿಯಿಂದ ಸಿದ್ಧಪಡಿಸಿರುವ ವಿಡಿಯೊಗಳನ್ನು ಪ್ರದರ್ಶಿಸಲು ವೇದಿಕೆಯ ಅಲ್ಲಲ್ಲಿ ಎಲ್‌ಇಡಿ ಟಿವಿ ಹಾಗೂ ಪರದೆಗಳನ್ನು ಅಳವಡಿಸಲಾಗಿದೆ. ‘ಇಂತಿಷ್ಟು ಜನರನ್ನು ಕರೆದುಕೊಂಡು ಬರಬೇಕು’ ಎಂಬ ಗುರಿಯನ್ನು ಈ ಭಾಗದ ಸಚಿವರು, ಶಾಸಕರು, ವಿಧಾನ ಪರಿಷತ್ ಸದಸ್ಯರು, ಸಂಸದರು, ನಿಗಮ– ಮಂಡಳಿಗಳ ಅಧ್ಯಕ್ಷರು ಹಾಗೂ ಪಕ್ಷದ ನಾಯಕರಿಗೆ ನೀಡಲಾಗಿದೆ. ಗ್ರಾಮಾಂತರ ಪ್ರದೇಶದಿಂದ ಜನರನ್ನು ಕರೆತರಲು ಬಸ್‌ಗಳ ವ್ಯವಸ್ಥೆಯನ್ನು ಪಕ್ಷದಿಂದ ಮಾಡಿಕೊಡಲಾಗಿದೆ.

ಕಾಂಗ್ರೆಸ್ ಜನಾಂದೋಲನದಲ್ಲಿ...

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲಾ, ಸಚಿವ ಸಂಪುಟದ ಎಲ್ಲ ಸದಸ್ಯರು, ಶಾಸಕರು, ಸಂಸದರು, ವಿಧಾನಪರಿಷತ್ ಸದಸ್ಯರು, ನಿಗಮ–ಮಂಡಳಿಗಳ ಅಧ್ಯಕ್ಷರು, ಪಕ್ಷದ ಮುಂಚೂಣಿ ಘಟಕದ ಪದಾಧಿಕಾರಿಗಳು ಕಾಂಗ್ರೆಸ್ ಜನಾಂದೋಲನದಲ್ಲಿ ಪಾಲ್ಗೊಳ್ಳಲಿದ್ದಾರೆ.

ಬಿಜೆಪಿ ‘ಮೈಸೂರು ಚಲೋ’ದಲ್ಲಿ

ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ವಿಧಾನಸಭೆಯ ವಿರೋಧಪಕ್ಷದ ನಾಯಕ ಆರ್. ಅಶೋಕ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಶಾಸಕರು, ಸಂಸದರು, ವಿಧಾನಪರಿಷತ್ ಸದಸ್ಯರು, ಪಕ್ಷದ ಪ್ರಮುಖರು ‘ಮೈಸೂರು ಚಲೋ’ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ.

‘ಕೈ’, ‘ದೋಸ್ತಿ’ ಸಮಾವೇಶ; ಗುತ್ತಿಗೆದಾರನಿಗೆ ಪೀಕಲಾಟ!

ಪ್ರಜಾವಾಣಿ ವಾರ್ತೆ

ಮೈಸೂರು: ನಗರದ ಮಹಾರಾಜ ಕಾಲೇಜು ಮೈದಾನದಲ್ಲಿ ಸಜ್ಜಾಗಿರುವ ಒಂದೇ ವೇದಿಕೆಯಲ್ಲಿ ಆ.9ರಂದು ಕಾಂಗ್ರೆಸ್ ಜನಾಂದೋಲನ ಮತ್ತು ಆ.10ರಂದು ‘ಮೈಸೂರು ಚಲೋ’ ಪಾದಯಾತ್ರೆಯ ಸಮಾರೋಪ ಸಮಾವೇಶ ನಡೆಯುತ್ತಿರುವುದು, ಪೆಂಡಾಲ್ ಗುತ್ತಿಗೆ ಪಡೆದಿರುವವರ ಪೀಕಲಾಟಕ್ಕೆ ಕಾರಣವಾಗಿದೆ.

‘ವೇದಿಕೆ ಸಿದ್ಧಪಡಿಸಿ ಪೆಂಡಾಲ್ ಹಾಕಿಕೊಡುವಂತೆ ಕಾಂಗ್ರೆಸ್‌ನವರು ತಿಳಿಸಿದ್ದರಿಂದ ತಯಾರಿ ಮಾಡಿಕೊಂಡಿದ್ದೆವು. ಬಳಿಕ ಬಿಜೆಪಿಯವರು, ತಾವೂ ಮರುದಿನ ಅಲ್ಲೇ ಸಮಾವೇಶ ನಡೆಸುವುದರಿಂದ ಅದೇ ಪೆಂಡಾಲ್, ವೇದಿಕೆ ಬಿಟ್ಟುಕೊಡಿ ಎಂದಿದ್ದರು. ಆದರೆ, ಈಗ ಎರಡೂ ಪಕ್ಷದವರು ಸಂಪೂರ್ಣ ವೆಚ್ಚ ಕೊಡಲು ನಿರಾಕರಿಸುತ್ತಿದ್ದಾರೆ. ಅವರ ಬಳಿಯೂ ಹಣ ಪಡೆದುಕೊಳ್ಳುತ್ತೀರಲ್ಲಾ, ನಾವೇಕೆ ಸಂಪೂರ್ಣ ವೆಚ್ಚ ಕೊಡಬೇಕು ಎಂದು ಕೇಳುತ್ತಿದ್ದಾರೆ. ನನಗೆ ನಷ್ಟವಾಗುತ್ತಿದೆ’ ಎಂದು ಪೆಂಡಾಲ್‌ನ ಗುತ್ತಿಗೆ ಪಡೆದಿರುವ ಶರೀಫ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ನಾನು ಸಿದ್ದರಾಮಯ್ಯ ಅವರ ಬಳಿ ‘ಇಷ್ಟೇ ಕೊಡಿ’ ಎಂದು ಎಂದಿಗೂ ಕೇಳಿದವನಲ್ಲ. ಖರ್ಚು–ವೆಚ್ಚದ ಲೆಕ್ಕ ಕೊಡುತ್ತೇನೆ. ಅವರು ಕೊಡಿಸಿದಷ್ಟು ತೆಗೆದುಕೊಳ್ಳುತ್ತೇನೆ. ಬಿಜೆಪಿಯವರೊಂದಿಗೂ ನಮ್ಮ ವ್ಯವಹಾರವಿದೆ. ಈ ಬಾರಿ, ಒಂದೇ ಸ್ಥಳದಲ್ಲಿ ದಿನದ ಅಂತರದಲ್ಲೇ ಸಮಾವೇಶ ಬಂದಿರುವುದರಿಂದ ತೊಂದರೆಯಾಗಿದೆ’ ಎಂದರು.

‘ಪೆಂಡಾಲ್ ಮಾತ್ರವೇ ಆಗಿದ್ದರೆ ಹೊಂದಾಣಿಕೆ ಮಾಡಿಕೊಳ್ಳಬಹುದಿತ್ತು. ಆದರೆ, ಧ್ವನಿವರ್ಧಕಗಳು, ವಿದ್ಯುತ್ ದೀಪಗಳ ವ್ಯವಸ್ಥೆ, ಫ್ಯಾನ್‌ಗಳು, ಜನರೇಟರ್, ಎಲ್‌ಇಡಿ ಪರದೆಗಳು, ಎಲ್‌ಇಡಿ ಟಿವಿಗಳನ್ನು ಬಾಡಿಗೆಗೆ ಪಡೆದುಕೊಂಡಿದ್ದೇನೆ. ಅರ್ಧ ಬಾಡಿಗೆಗೆ ಅವರು ಒಪ್ಪುವುದಿಲ್ಲ. ಆದ್ದರಿಂದ ಗರಿಷ್ಠ ವೆಚ್ಚ ಭರಿಸುವಂತೆ ಎರಡೂ ಪಕ್ಷದವರಿಗೆ ಕೋರಿಕೊಂಡಿದ್ದೇನೆ, ಏನು ಮಾಡುತ್ತಾರೋ ನೋಡಬೇಕು’ ಎಂದು ಪ್ರತಿಕ್ರಿಯಿಸಿದರು.

‘ಸಮಾವೇಶಕ್ಕೆ ಎಷ್ಟು ವೆಚ್ಚವಾಗುತ್ತದೆ ಹಾಗೂ ಗುತ್ತಿಗೆದಾರರಿಗೆ ಎಷ್ಟು ಹಣ ಸಂದಾಯ ಮಾಡಲಾಗುತ್ತದೆ ಎಂಬ ಮಾಹಿತಿ ನನಗಿಲ್ಲ. ಹಣಕಾಸಿನ ವಿಷಯವನ್ನೆಲ್ಲಾ ಕೆಪಿಸಿಸಿಯಿಂದಲೇ ನಿರ್ವಹಿಸಲಾಗುತ್ತಿದೆ’ ಎಂದು ಕಾಂಗ್ರೆಸ್ ಗ್ರಾಮಾಂತರ ಜಿಲ್ಲಾ ಸಮಿತಿಯ ಅಧ್ಯಕ್ಷ ಬಿ.ಜೆ. ವಿಜಯ್‌ಕುಮಾರ್ ಪ್ರತಿಕ್ರಿಯಿಸಿದರು.

‘ಲಿಂಗಾಯತ ಧರ್ಮ ಹಿಂದೂ ಧರ್ಮದ ಭಾಗವಲ್ಲ’

ಪ್ರಜಾವಾಣಿ ವಾರ್ತೆ



ಶಿವಾಚಾರ್ಯ ಸ್ವಾಮೀಜಿ



ವಚನಾನಂದ ಸ್ವಾಮೀಜಿ

ಹೊಳಲ್ಕೆರೆ (ಚಿತ್ರದುರ್ಗ ಜಿಲ್ಲೆ): ಇಲ್ಲಿನ ಒಂಟಿಕಂಬದ ಮಠದಲ್ಲಿ ಗುರುವಾರ ನಡೆದ ಮಲ್ಲಿಕಾರ್ಜುನ ಮುರುಘ ರಾಜೇಂದ್ರ ಸ್ವಾಮೀಜಿಯವರ ಸ್ಮರಣೋತ್ಸವ ಕಾರ್ಯಕ್ರಮದಲ್ಲಿ ಸಾಣೆಹಳ್ಳಿ ತರಳಬಾಳು ಮಠದ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಹಾಗೂ ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ ಹಿಂದೂ ಧರ್ಮ ಕುರಿತು ಆಡಿದ ಮಾತುಗಳು ಚರ್ಚೆಗೆ ಗ್ರಾಸವಾದವು.

ಪಂಡಿತಾರಾಧ್ಯ ಶ್ರೀಗಳು ಮಾತನಾಡಿ, ‘ಹಿಂದೂ ಎಂಬುದು ಒಂದರ್ಥದಲ್ಲಿ ಧರ್ಮವೇ ಅಲ್ಲ, ಅದು ಎಲ್ಲಾ ರೀತಿಯ ಅನಿಷ್ಟ, ಅನಾಚಾರಗಳನ್ನು ಒಳಗೊಂಡಿದೆ. ಲಿಂಗಾಯತ ಧರ್ಮ ಹಿಂದೂ ಧರ್ಮದ ಭಾಗವಲ್ಲ ಎಂಬುದನ್ನು ಅರಿಯಬೇಕು. ನಾವು ಸ್ವತಂತ್ರ ಲಿಂಗಾಯತ ಧರ್ಮದವರು’ ಎಂದರು.

‘ವೇದ ಪುರಾಣ, ಶಾಸ್ತ್ರ ಪ್ರಸಾರ ಮಾಡುವ ಕಾಲದಲ್ಲಿ ಶರಣರು ವೇದಗಳನ್ನು ತಿರಸ್ಕಾರ ಮಾಡಿದ್ದರು. ವೇದವೆಂಬುದು ಓದಿನ ಮಾತು, ಪುರಾಣವೆಂಬುದು ಪುಂಡರ ಗೋಷ್ಠಿ, ಶಾಸ್ತ್ರವೆಂಬುದು ಸಂಖ್ಯೆಯ ಸುದ್ದಿ ಎನ್ನುವ ಮೂಲಕ ಬಸವಾದಿ ಶರಣರು ಲಿಂಗಾಯತರ ಹುಟ್ಟಿಗೆ ಕಾರಣಕರ್ತರಾದರು. ವೈದಿಕ ಪರಂಪರೆಯ ಬೇರುಗಳು ನಮ್ಮ ತಲೆಯಲ್ಲಿ ತುಂಬಿಕೊಂಡಿವೆ’ ಎಂದರು.

ಪಂಡಿತಾರಾಧ್ಯ ಶ್ರೀಗಳಿಗೆ ತಿರುಗೇಟು ನೀಡುವಂತೆ ಮಾತನಾಡಿದ ವಚನಾನಂದ ಸ್ವಾಮೀಜಿ ‘ಹಿಂದೂ ಎಂಬುದು ಅತ್ಯಂತ ಸತ್ಯ ಹಾಗೂ ಸನಾತನವಾದುದು, ಅದೊಂದು ವಿಶಾಲ ಮಹಾ ಸಾಗರ. ಅಲ್ಲಿ ಕೇವಲ ವೈದಿಕರು ಮಾತ್ರ ಇಲ್ಲ, ದ್ವೈತ, ಅದ್ವೈತ ಅಷ್ಟೇ ಅಲ್ಲ. ಅದು ಸರ್ವವನ್ನು, ಸರ್ವರನ್ನೂ ಒಳಗೊಂಡಿರುವಂಥದ್ದು. ಎಲ್ಲಾ ಮೂಲ ಪುರುಷರು ಇದ್ದುದು ಹಿಂದೂ ಧರ್ಮದಲ್ಲಿ’ ಎಂದರು.

‘ವೀರಶೈವ, ಲಿಂಗಾಯತ ತತ್ವಗಳು ಬೇರೆ ಬೇರೆ ಇರಬಹುದು. ನಿಮ್ಮ ಮಠ, ಪೀಠಗಳ ತತ್ವ ಏನೇ ಇರಬಹುದು. ಆದರೆ ನಾವೆಲ್ಲಾ ಒಗ್ಗಟ್ಟಾಗಿ ಹೋದಾಗ ಮಾತ್ರ ಸಮಾಜಕ್ಕೆ ಭವಿಷ್ಯವಿದೆ. ಹಿಂದೂ ಧರ್ಮದ ಬಗ್ಗೆ ಹೆಚ್ಚು ಜ್ಞಾನ ಇಲ್ಲದವರು ಅಧ್ಯಯನ ಮಾಡಬೇಕು’ ಎಂದರು.

ವಚನಾನಂದ ಶ್ರೀಗಳ ಮಾತಿಗೆ ಭಕ್ತರೊಬ್ಬರು ಆಕ್ಷೇಪ ವ್ಯಕ್ತಪಡಿಸಿ ‘ನೀವೇಕೆ ಪಂಡಿತಾರಾಧ್ಯ ಶ್ರೀಗಳ ವಿರುದ್ಧ ಮಾತನಾಡುತ್ತೀರಿ’ ಎಂದು ಪ್ರಶ್ನಿಸಿದರು. ಸಂಘಟಕರು ಅವರನ್ನು ಸಮಾಧಾನಪಡಿಸಿದರು.

ರಾಜಶೇಖರ ನೀರಮಾನ್ವಿ ನಿಧನ

ಬಳ್ಳಾರಿ: ಕಥೆಗಾರ ರಾಜಶೇಖರ ನೀರಮಾನ್ವಿ (83) ಗುರುವಾರ ನಿಧನರಾದರು. ಅವರಿಗೆ ಪತ್ನಿ, ಇಬ್ಬರು ಪುತ್ರರು ಮತ್ತು ಪುತ್ರಿ ಇದ್ದಾರೆ. ನಗರದ ವೀರನಗೌಡ ಕಾಲೊನಿಯ ಅವರ ಮನೆಯಲ್ಲಿ ಅವರ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ಶುಕ್ರವಾರ ಮಧ್ಯಾಹ್ನ ಅಂತ್ಯಕ್ರಿಯೆ ನಡೆಯಲಿದೆ.



ರಾಜಶೇಖರ ನೀರಮಾನ್ವಿ

ರಾಯಚೂರು ಜಿಲ್ಲೆಯ ನೀರಮಾನ್ವಿ ಗ್ರಾಮದ ರಾಜಶೇಖರ ಅವರು ಬಳ್ಳಾರಿಯ ವೀರಶೈವ ಪದವಿ ಕಾಲೇಜಿನಲ್ಲಿ ಭೂಗರ್ಭಶಾಸ್ತ್ರದ ಪ್ರಾಧ್ಯಾಪಕರಾಗಿ, ನಿವೃತ್ತರಾಗಿದ್ದರು. ಗೋಕಾಕ ಚಳವಳಿ, ಜೆಪಿ ಚಳವಳಿ ಮತ್ತು ವಾಟಾಳ್ ಚಳವಳಿಗಳಲ್ಲಿ ಭಾಗವಹಿಸಿದ್ದರು.

1978ರಲ್ಲಿ ಪ್ರಕಟವಾದ ನೀರಮಾನ್ವಿ ಅವರ ‘ಹಂಗಿನ ಅರಮನೆಯ ಹೊರಗೆ’ ಮೊದಲ ಕಥಾ ಸಂಕಲನಕ್ಕೆ ಅದೇ ವರ್ಷ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸಿಕ್ಕಿತ್ತು. 1990ರಲ್ಲಿ ಅವರ ‘ಕರ್ಪೂರದ ಕಾಯದಲ್ಲಿ’ ಎರಡನೇ ಕಥಾ ಸಂಕಲನವನ್ನು ಬಳ್ಳಾರಿಯ ಲೋಹಿಯಾ ಪ್ರಕಾಶನ ಪ್ರಕಟಿಸಿತು. ಪ್ರಕಾಶನ ಅಸ್ತಿತ್ವಕ್ಕೆ ಬರಲೂ ಕಾರಣವಾಯಿತು. ನೀರಮಾನ್ವಿ ಅವರಿಗೆ ಸಾಹಿತ್ಯ ಅಕಾಡೆಮಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಬೆಟಗೇರಿ ಕೃಷ್ಣ ಶರ್ಮ ಪ್ರಶಸ್ತಿ ಸಂದಿವೆ.


‘ನೀರಮಾನ್ವಿ ಅವರು ಬರೆದಿದ್ದು ಕಡಿಮೆ. ಎರಡು ಕಥಾ ಸಂಕಲನ ಮತ್ತು 12 ಕತೆಗಳನ್ನು ಮಾತ್ರ ಬರೆದರು. ಅವರ ಕಥೆಗಳು ದೇಶದ 8 ಭಾಷೆಗಳಿಗೆ ಅನುವಾದಗೊಂಡಿವೆ’ ಎಂದು ಲೋಹಿಯಾ ಪ್ರಕಾಶನದ ಮುಖ್ಯಸ್ಥ ಸಿ. ಚನ್ನಬಸಣ್ಣ ತಿಳಿಸಿದರು.

ಪ್ರೀತಂ ಗೌಡ ಭಾವಚಿತ್ರದ ಫ್ಲೆಕ್ಸ್‌ಗೆ ಬೆಂಕಿ

ಪ್ರಜಾವಾಣಿ ವಾರ್ತೆ

ಮಂಡ್ಯ: ಬಿಜೆಪಿ–ಜೆಡಿಎಸ್ ‘ಮೈಸೂರು ಚಲೋ’ ಪಾದಯಾತ್ರೆ ವೇಳೆ, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರೀತಂ ಗೌಡ ಹಾಗೂ ಜೆಡಿಎಸ್ ಬೆಂಬಲಿಗರ ನಡುವೆ ನಡೆದ ಮಾತಿನ ಚಕಮಕಿಯು, ಬುಧವಾರ ತಡರಾತ್ರಿ ಪ್ರೀತಂಗೌಡರ ಭಾವಚಿತ್ರವಿದ್ದ ಫ್ಲೆಕ್ಸ್ ಹರಿದು, ಬೆಂಕಿ ಹಚ್ಚುವವರೆಗೆ ಮುಂದುವರಿದಿದೆ. ಹೊರವಲಯದ ಉಮ್ಮಡಹಳ್ಳಿ ಸಮೀಪ ಮೈಸೂರು–ಬೆಂಗಳೂರು ಹೆದ್ದಾರಿಯ ಅಂಡರ್‌ಪಾಸ್‌ನಲ್ಲಿ ಘಟನೆ ನಡೆದಿದೆ.

‘ಗೌಡರ ಗೌಡ ಪ್ರೀತಂಗೌಡ’ ಎಂದು ಬೆಂಬಲಿಗರು ಘೋಷಣೆ ಕೂಗಿದ್ದನ್ನು ಆಕ್ಷೇಪಿಸಿ, ಜೆಡಿಎಸ್ ಕಾರ್ಯಕರ್ತರು ಮಾತಿನ ಚಕಮಕಿ ನಡೆಸಿದ್ದರು. ನಂತರ ಕೈ ಮಿಲಾಯಿಸುವ ಹಂತಕ್ಕೂ ಹೋಗಿತ್ತು.



ಪ್ರೀತಂಗೌಡ ಭಾವಚಿತ್ರವಿರುವ ಫ್ಲೆಕ್ಸ್‌ಗೆ ಬೆಂಕಿ ಹಚ್ಚಲಾಗಿದೆ

ಎತ್ತಿನಗಾಡಿಯಲ್ಲಿದ್ದ ಬಿ.ವೈ.ವಿಜಯೇಂದ್ರ ಅವರನ್ನು ಅಡ್ಡಗಟ್ಟಿ, ‘ನಿಮ್ಮವರಿಗೆ ಬುದ್ಧಿಮಾತು ಹೇಳಿ’ ಎಂದು ಆಕ್ರೋಶ ವ್ಯಕ್ತಪಡಿಸಿದ್ದರು.

ಗುರುವಾರ ಜೆಡಿಎಸ್‌ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ‘ಸ್ವಾಭಿಮಾನಕ್ಕೆ ಧಕ್ಕೆಯಾಗದಂತೆ ಎಚ್ಚರವಹಿಸಬೇಕು’ ಎಂದು ಪರೋಕ್ಷವಾಗಿ ಬಿಜೆಪಿ ಕಾರ್ಯಕರ್ತರಿಗೆ ಹೇಳಿದರು.

ಪ್ರೀತಂಗೌಡ ಗೈರು: ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರೀತಂಗೌಡ ಅವರು ಗುರುವಾರ ನಡೆದ 6ನೇ ದಿನದ ಪಾದಯಾತ್ರೆಗೆ ಗೈರು ಹಾಜರಾಗಿದ್ದರು. ಮಂಡ್ಯ ನಗರದಲ್ಲಿ ಪ್ರೀತಂ ಬೆಂಬಲಿಗರು ಮತ್ತು ಜೆಡಿಎಸ್ ಕಾರ್ಯಕರ್ತರ ನಡೆದ ಮಾತಿನ ಚಕಮಕಿ ಘಟನೆ ಹಿನ್ನೆಲೆಯಲ್ಲಿ ಪ್ರೀತಂಗೌಡ ಅವರು ಪಾದಯಾತ್ರೆಗೆ ಬರದಂತೆ ನಿರ್ಬಂಧ ಹಾಕಿರಬಹುದು ಎಂಬ ಗುಸುಗುಸು ಹರಿದಾಡುತ್ತಿದೆ.

ಪಾದಯಾತ್ರೆಯಲ್ಲಿ ಪ್ರತ್ಯೇಕ ನಡಿಗೆ!

ಶ್ರೀರಂಗಪಟ್ಟಣ ತಾಲ್ಲೂಕಿನ ಗಣಂಗೂರಿನಿಂದ ಕೆ.ಶೆಟ್ಟಹಳ್ಳಿವರೆಗೆ ಜೆಡಿಎಸ್ ಮತ್ತು ಬಿಜೆಪಿ ನಾಯಕರು ಮತ್ತು ಕಾರ್ಯಕರ್ತರು ಪ್ರತ್ಯೇಕವಾಗಿ ಹೆಜ್ಜೆ ಹಾಕಿದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ವಿರೋಧ ಪಕ್ಷದ ನಾಯಕ ಆರ್. ಅಶೋಕ್, ಮಾಜಿ ಸಚಿವ ಸಿ.ಟಿ. ರವಿ ನೇತೃತ್ವದಲ್ಲಿ ಬಿಜೆಪಿ ಕಾರ್ಯಕರ್ತರು ಸಾಗಿದರು. ಬಿಜೆಪಿ ಗುಂಪಿನ ಹಿಂದೆ ಫರ್ಲಾಂಗು ದೂರ ಅಂತರದಲ್ಲಿ ಜೆಡಿಎಸ್ ಯುವ ಘಟಕ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ನೇತೃತ್ವದಲ್ಲಿ ನೂರಾರು ಕಾರ್ಯಕರ್ತರು ಸಾಗಿದರು.


ಮೂರು ವರ್ಷದ ಪ್ರಶಸ್ತಿ ಪ್ರಕಟಿಸಿದ ಕರ್ನಾಟಕ ನಾಟಕ ಅಕಾಡೆಮಿ

ಉಮಾಶ್ರೀ, ಶಿವಪ್ರಕಾಶ್ ಸೇರಿ 93 ಮಂದಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ



ಉಮಾಶ್ರೀ



ಕೋಟಿಗಾನಹಳ್ಳಿ ರಾಮಯ್ಯ



ಎಚ್.ಎಸ್. ಶಿವಪ್ರಕಾಶ್

ಬೆಂಗಳೂರು: ಕರ್ನಾಟಕ ನಾಟಕ ಅಕಾಡೆಮಿಯು ಮೂರು ವರ್ಷಗಳ ವಾರ್ಷಿಕ ಪ್ರಶಸ್ತಿಗಳನ್ನು ಪ್ರಕಟಿಸಿದ್ದು, ನಟಿ ಉಮಾಶ್ರೀ, ನಾಟಕಕಾರರಾದ ಎಚ್.ಎಸ್. ಶಿವಪ್ರಕಾಶ್ ಹಾಗೂ ರಂಗಕರ್ಮಿ ಕೋಟಿಗಾನಹಳ್ಳಿ ರಾಮಯ್ಯ ಅವರು ‘ಜೀವಮಾನ ಸಾಧನೆ ಪ್ರಶಸ್ತಿ’ಗೆ (ಗೌರವ ಪ್ರಶಸ್ತಿ) ಆಯ್ಕೆಯಾಗಿದ್ದಾರೆ.

ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜ ಮೂರ್ತಿ ಅವರು ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ 93 ಮಂದಿ ಪ್ರಶಸ್ತಿ ಪುರಸ್ಕೃತರ ಪಟ್ಟಿ ಬಿಡುಗಡೆ ಮಾಡಿದರು.

‘ಜೀವಮಾನ ಸಾಧನೆ ಪ್ರಶಸ್ತಿ’ಯು ತಲಾ ₹ 50 ಸಾವಿರ ನಗದು ಹಾಗೂ ನಟರಾಜ ವಿಗ್ರಹ ಒಳಗೊಂಡಿದೆ. ವಾರ್ಷಿಕ ಪ್ರಶಸ್ತಿಗೆ 75 ಮಂದಿ ಭಾಜನರಾಗಿದ್ದು, ತಲಾ ₹ 25 ಸಾವಿರ ನಗದು ಹಾಗೂ ನಟರಾಜ ವಿಗ್ರಹ ಒಳಗೊಂಡಿವೆ.

15 ಮಂದಿಗೆ ದತ್ತಿನಿಧಿ ಪ್ರಶಸ್ತಿ: ಅಕಾಡೆಮಿಯ ದತ್ತಿನಿಧಿ ಪ್ರಶಸ್ತಿಗೆ ಮೂರು ವರ್ಷಗಳಿಂದ 15 ಮಂದಿ ಆಯ್ಕೆಯಾಗಿದ್ದು, ಈ ಪ್ರಶಸ್ತಿಗಳು ತಲಾ ₹ 10 ಸಾವಿರ ನಗದು ಹಾಗೂ ನಟರಾಜ ವಿಗ್ರಹ ಹೊಂದಿವೆ.

‘ಕಲ್ಚರ್ಡ್ ಕಮೆಡಿಯನ್ ಕೆ.ಹಿರಣ್ಣಯ್ಯ ದತ್ತಿ ಪುರಸ್ಕಾರ’ಕ್ಕೆ ಲಕ್ಷ್ಮಣ ಸುವರ್ಣ, ವಿರೂಪಾಕ್ಷಯ್ಯ ಸ್ವಾಮಿ, ಚನ್ನಬಸಪ್ಪ ಶಿವಪ್ಪ ಕಾಳೆ, ‘ನಟರತ್ನ ಚಿಂದೋಡಿ ವೀರಪ್ಪನವರ ದತ್ತಿ ಪುರಸ್ಕಾರ’ಕ್ಕೆ ಬಲರಾಮ, ಹೇಮಾ ಮಾಲಿನಿ, ನಂದರಾಣಿ ಕೋಲ್ಕತ್ತ, ‘ಪದ್ಮಶ್ರೀ ಚಿಂದೋಡಿ ಲೀಲಾ ದತ್ತಿ ಪುರಸ್ಕಾರ ಪ್ರಶಸ್ತಿ’ಗೆ ಟಿ. ತಿಮ್ಮೇಶ್, ರೇವಣ್ಣ, ಬಿ.ಎಸ್. ಲಕ್ಷ್ಮಯ್ಯ, ‘ಕೆ. ರಾಮಚಂದ್ರಯ್ಯ ದತ್ತಿನಿಧಿ ಪುರಸ್ಕಾರ’ಕ್ಕೆ ನರಸಿಂಹ ಪ್ರಸಾದ್, ಬಿ. ರುದ್ರೇಶ್, ಸಿದ್ಧಲಿಂಗಸ್ವಾಮಿ ಹಾಗೂ ‘ಮಾಲತಿಶ್ರೀ ಮೈಸೂರು ದತ್ತಿನಿಧಿ ಪುರಸ್ಕಾರ’ಕ್ಕೆ ಶಂಕರ ಜೆ. ಹಿಪ್ಪರಗಿ, ಫ್ಲೋರಾ ಅಚ್ಯುತ್ ಮತ್ತು ಎಚ್.ಬಿ. ಶಿವಲಿಂಗಮೂರ್ತಿ ಆಯ್ಕೆಯಾಗಿದ್ದಾರೆ.

75 ಮಂದಿಗೆ ವಾರ್ಷಿಕ ಪ್ರಶಸ್ತಿ

2022–23 ಸಾಲಿನ ವಾರ್ಷಿಕ ಪ್ರಶಸ್ತಿ: ಅಚ್ಯುತ್ ಕುಮಾರ್, ಲಕ್ಷ್ಮೀಪತಿ ಕೋಲಾರ, ರಮೇಶ್ ಪಂಡಿತ್, ಆಶಾರಾಣಿ, ಆಡುಗೋಡಿ ಶ್ರೀನಿವಾಸ್, ರಮೇಶ್ ಬೇಗಾರ್, ವೀರಭದ್ರಾಚಾರ್, ಪ್ರಕಾಶ್ ಆರ್., ಶಂಕರ ಹಲಗತ್ತಿ, ಎಲ್.ಎಚ್. ರಂಗನಾಥ್, ಅನುಪಮ ಎಚ್. (ಅಂಬಿಕಾ), ಬಸವರಾಜ ಮುರುಗೋಡ, ಬಿ.ಎಂ.ಎಸ್.ಪ್ರಭು, ಬೇಲೂರು ರಘುನಂದನ್, ಮಂಜುನಾಥ ತಿಮ್ಮಣ್ಣ ಭಟ್ಟ, ಕೆ.ಎಂ. ಕೃಷ್ಣಮೂರ್ತಿ, ಅನಿಲ್ ಕುಮಾರ್, ಗ್ಯಾರಂಟಿ ರಾಮಣ್ಣ, ನೂರ್ ಅಹಮ್ಮದ್ ಶೇಖ್, ಕೊಟ್ರಯ್ಯ ಹಿರೇಮಠ, ಗಂಗಮ್ಮ ಅರೇರ, ಎನ್. ಎಚ್. ಶಿವಕುಮಾರ್, ಎಸ್.ಎ.ಖಾನ್, ನಂದಿತಾ ಯಾದವ್, ಗುರಯ್ಯ ಸ್ವಾಮಿ

2023–24ನೇ ಸಾಲಿನ ವಾರ್ಷಿಕ ಪ್ರಶಸ್ತಿ: ಬಿ.ಸುರೇಶ್, ಜೆರ್ರಿ ಅನಂತರಾಮ್, ಮುರುಡಯ್ಯ, ಮಯ ಬ್ರಹ್ಮಾಚಾರ್, ರಜನಿ ಗರುಡ, ನೀಲಗುಂದ ಬಸವನಗೌಡ, ಯ. ಮೃತ್ಯುಂಜಯ, ಪವಿತ್ರಾ, ಮಹಾದೇವ ವೆಂಕಪ್ಪ ಕಂಬಾಗಿ, ಕೆ. ಹುಸೇನ್ ಸಾಬ್, ಪ್ರಸಾದ್ ಕುಂದೂರು, ಕೆ. ಜಿ.ಮಹಾಬಲೇಶ್ವರ್, ದೇವರಾಜ್ ದೇವನಹಳ್ಳಿ, ವೆಂಕಟೇಶ್ (ಹಾಪ್‌ಕಾಮ್), ಸುರೇಶ್ ರಾಮಚಂದ್ರ, ಗ.ನ.ಅಶ್ವತ್, ನಾಗರಾಜ ಶಿವರುದ್ರಪ್ಪ ಕಮ್ಮಾರ, ಚಿಕ್ಕ ಹನುಮಂತಯ್ಯ, ಮಂಜುನಾಥ ಸಂಗನಾಳ, ಜನಾರ್ದನ್ ಎಂ.ಎ., ಶೋಭಾ ರಾಘವೇಂದ್ರ, ಆರ್.ಸಿ.ಉಮಾಶಂಕರ್, ಬಸವರಾಜ ಯಮನಪ್ಪ ಮಣ್ಣೂರ, ರಾಜಗುರು ಹೊಸಕೋಟೆ

2024–25ನೇ ಸಾಲಿನ ವಾರ್ಷಿಕ ಪ್ರಶಸ್ತಿ: ಪ್ರಕಾಶ್ ರಾಜ್, ಸಂಚಯ ಗಣೇಶ್, ಆರ್.ಶ್ರೀನಾಥ್, ಎಚ್.ಎನ್.ದ್ಯಾಮೇಶ್, ತೋಟಪ್ಪ ಕಾಮನೂರು, ಚಂದ್ರಶೇಖರ್ ಹೊನ್ನಾಳಿ, ಕೆ.ಪಿ.ಅಶ್ವಥ್ ನಾರಾಯಣ, ಅಬ್ರಾಹಿಂ ಡಿ. ಸಿಲ್ವಾ, ಸಿದ್ದಪ್ಪ ರೊಟ್ಟಿ, ರಾಯಪ್ಪ ಅನಂತಕಲ್, ವಸಂತ್ ಅಮೀನ್, ಚಂದ್ರಶೇಖರ ವಸ್ತ್ರದ, ಎ. ಮುನಿನಾರಾಯಣ, ಚಂದ್ರಶೇಖರ ಆಚಾರ್, ಸಿದ್ಧರಾಜು, ಮಲ್ಲಿಕಾರ್ಜುನ ಜಿ., ಬಿ.ಎಸ್.ವಿದ್ಯಾರಣ್ಯ, ಅಪ್ಪಣ್ಣ ರಾಮದುರ್ಗ, ಶಶಿಧರ್, ಮಾಲರಾಣಿ ಬೆಳವಣಕಿ, ರೇಣುಕಾ ಬಾವಳ್ಳಿ, ರಂಗಸ್ವಾಮಿ, ಗಿರಿಜಾ ಸಿದ್ಧಿ, ಕೋಟೆ ಅನಂತು, ಚಾಂದಿನಿ (ಲಿಂಗತ್ವ ಅಲ್ಪಸಂಖ್ಯಾತೆ)

ಮಹದೇವಪ್ಪ ಸಹೋದರನ ಪುತ್ರನಿಗೂ ನಿವೇಶನ

ಪ್ರಜಾವಾಣಿ ವಾರ್ತೆ

ಮೈಸೂರು: ರಿಯಲ್ ಎಸ್ಟೇಟ್ ಉದ್ಯಮಿಯೊಬ್ಬರು ತಮಗೆ ಮುಡಾದಿಂದ ಮಂಜೂರಾದ ಬದಲಿ ನಿವೇಶನವನ್ನು ಎರಡೇ ತಿಂಗಳಲ್ಲಿ ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ ಸಹೋದರನ ಪುತ್ರ ನವೀನ್ ಬೋಸ್ ಹೆಸರಿಗೆ ನೋಂದಣಿ ಮಾಡಿಕೊಟ್ಟಿದ್ದು, ಚರ್ಚೆಗೆ ಗ್ರಾಸವಾಗಿದೆ.


ಬೆಂಗಳೂರಿನ ಡಾಲರ್ಸ್ ಕಾಲೊನಿ ನಿವಾಸಿ ಎನ್. ಮಂಜುನಾಥ್ ತಮಗೆ ಮುಡಾದಿಂದ ವಿಜಯನಗರ ನಾಲ್ಕನೇ ಹಂತದ ಎರಡನೇ ಫೇಸ್‌ನಲ್ಲಿ ಮಂಜೂರಾಗಿದ್ದ 15X24 ಚದರ ಮೀಟರ್ ಅಳತೆಯ ನಿವೇಶನವನ್ನು 2023ರ ಜೂನ್ 7ರಂದು ‘ಸೆಟ್ಲ್‌ಮೆಂಟ್ ಡೀಡ್’ ಹೆಸರಿನಲ್ಲಿ ನವೀನ್ ಬೋಸ್ ಅವರಿಗೆ ಮಾಡಿಕೊಟ್ಟಿದ್ದಾರೆ. ಅದಕ್ಕೆ ₹5.51 ಲಕ್ಷ ಶುಲ್ಕ ಪಾವತಿಸಿದ್ದು, ನಿವೇಶನದ ಖರೀದಿ ಮೌಲ್ಯವನ್ನು ಉಲ್ಲೇಖಿಸಿಲ್ಲ

ರಿಯಲ್ ಎಸ್ಟೇಟ್ ಉದ್ಯಮಿಯಾದ ಮಂಜುನಾಥ್ ಅವರಿಗೆ ಮುಡಾ ನ್ಯಾಯಾಲಯದ ಆದೇಶದಂತೆ ಸುಮಾರು 24 ಬದಲಿ ನಿವೇಶನಗಳನ್ನು 2023ರ ಏಪ್ರಿಲ್‌ನಲ್ಲಿ ನೋಂದಣಿ ಮಾಡಿಕೊಟ್ಟಿತ್ತು. ಅದರಲ್ಲಿ ಒಂದು ನಿವೇಶನವನ್ನು ಮಂಜುನಾಥ್, ನವೀನ್ ಅವರಿಗೆ ನೀಡಿದ್ದಾರೆ.

‘ಯಾವ ಉದ್ದೇಶದಿಂದ ನವೀನ್ ಅವರಿಗೆ ಮಂಜುನಾಥ್ ಈ ನಿವೇಶನವನ್ನು ಉಚಿತವಾಗಿ ಕೊಟ್ಟಿದ್ದಾರೆ. ಅವರಿಬ್ಬರ ನಡುವಿನ ಒಪ್ಪಂದವೇನು? ಬದಲಿ ನಿವೇಶನವನ್ನು ಅಷ್ಟು ತರಾತುರಿಯಲ್ಲಿ ನೋಂದಣಿ ಮಾಡಿಕೊಟ್ಟಿರುವುದು ಏಕೆ ಎಂಬುದಕ್ಕೆ ಸಚಿವರು ಉತ್ತರ ನೀಡಬೇಕು’ ಎಂದು ಒತ್ತಾಯಿಸುತ್ತಾರೆ ಆರ್‌ಟಿಐ ಕಾರ್ಯಕರ್ತ ಗಂಗರಾಜು.

ಪ್ಯಾನಿಕ್ ಬಟನ್ ಅಳವಡಿಕೆಗೆ ಸೆ.10 ಕೊನೇ ದಿನ

ಪ್ರಜಾವಾಣಿ ವಾರ್ತೆ



ಎ.ಎಂ. ಯೋಗೀಶ್

ಬೆಂಗಳೂರು: ಮಹಿಳೆಯರು ಮತ್ತು ಮಕ್ಕಳ ಸುರಕ್ಷತೆಗಾಗಿ ಸಾರ್ವಜನಿಕ ಸೇವಾ ವಾಹನಗಳಿಗೆ ವೆಹಿಕಲ್ ಲೊಕೇಶನ್ ಟ್ರ್ಯಾಕಿಂಗ್ (ವಿಎಲ್‌ಟಿ) ಡಿವೈಸ್ ಮತ್ತು ಎಮರ್ಜೆನ್ಸಿ ಬಟನ್ (ಪ್ಯಾನಿಕ್ ಬಟನ್) ಅನ್ನು ಸೆಪ್ಟೆಂಬರ್ 10ರ ಒಳಗೆ ಅಳವಡಿಸಿಕೊಳ್ಳುವಂತೆ ಸಾರಿಗೆ ಮತ್ತು ರಸ್ತೆ ಸುರಕ್ಷತೆ ಆಯುಕ್ತರು ಗಡುವು ನೀಡಿದ್ದಾರೆ.

ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯವು ಹೊರಡಿಸಿರುವ ಅಧಿಸೂಚನೆ ಮತ್ತು ಮಾರ್ಗಸೂಚಿಯ ಅನ್ವಯ ಈ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ. ಕಾಂಟ್ರಾಕ್ಟ್ ಕ್ಯಾರೇಜ್ ವಾಹನ, ಶಾಲಾ ವಾಹನ, ಖಾಸಗಿ ಸೇವಾ ವಾಹನ, ಮ್ಯಾಕ್ಸಿಕ್ಯಾಬ್, ಮೋಟಾರ್ ಕ್ಯಾಬ್ ಮತ್ತು ರಾಷ್ಟ್ರೀಯ ರಹದಾರಿ (ಪರ್ಮಿಟ್) ಹೊಂದಿರುವ ಸರಕು ಸಾಗಣೆ ವಾಹನಗಳಿಗೆ ವಿಎಲ್‌ಟಿ ಮತ್ತು ಪ್ಯಾನಿಕ್ ಬಟನ್ ಅಳವಡಿಸಬೇಕು ಎಂದು ತಿಳಿಸಿದ್ದಾರೆ.

ವಾಹನ ಹಾದುಹೋಗುವ ಮಾರ್ಗವನ್ನು ಪರಿಶೀಲಿಸಲು, ನಕ್ಷೆಯಲ್ಲಿ ವಾಹನದ ಸ್ಥಳವನ್ನು ಗುರುತಿಸಲು ವಿಎಲ್‌ಟಿ ನೆರವಾಗಲಿದೆ. ಅನಧಿಕೃತ ಮಾರ್ಗದಲ್ಲಿ ಚಲಿಸಿದರೂ ಪತ್ತೆ ಹಚ್ಚಬಹುದು. ಅಪಘಾತದ ಸ್ಥಳ, ವೇಗದ ವಿವರ ಎಲ್ಲವೂ ಸುಲಭದಲ್ಲಿ ಲಭ್ಯವಾಗುತ್ತದೆ. ಸೇವಾ ವಾಹನಗಳಲ್ಲಿ ಮಹಿಳೆಯರಿಗೆ, ಮಕ್ಕಳಿಗೆ, ಇತರ ಪ್ರಯಾಣಿಕರಿಗೆ ತೊಂದರೆಯಾದರೆ ಪ್ಯಾನಿಕ್ ಬಟನ್ ಒತ್ತಿದರೆ ಅದರ ಸಂಕೇತವು ಇಲಾಖೆಯ ನಿಯಂತ್ರಣ ಕೊಠಡಿಗೆ ರವಾನೆಯಾಗುವುದರಿಂದ ಕ್ರಮ ಕೈಗೊಳ್ಳಲು ಸುಲಭವಾಗುತ್ತದೆ. ಈ ಕಾರಣಗಳಿಂದ ವಿಎಲ್‌ಟಿ, ಪ್ಯಾನಿಕ್ ಬಟನ್‌ಗಳನ್ನು ಕಡ್ಡಾಯಗೊಳಿಸಲಾಗಿದೆ ಎಂದು ಸಾರಿಗೆ ಇಲಾಖೆ ಆಯುಕ್ತ ಎ.ಎಂ. ಯೋಗೀಶ್ ತಿಳಿಸಿದ್ದಾರೆ.

ಸೆ.10ರ ಒಳಗೆ ವಿಎಲ್‌ಟಿ, ಪ್ಯಾನಿಕ್ ಬಟನ್ ಅಳವಡಿಸದ ವಾಹನಗಳ ಮೇಲೆ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದ್ದಾರೆ.

ಪ್ರಜ್ವಲ್–ರೇವಣ್ಣ ಅರ್ಜಿ ವಿಚಾರಣೆ ಮುಂದೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಕೆಲಸದಾಕೆಯ ಮೇಲಿನ ಅತ್ಯಾಚಾರ ಆರೋಪಕ್ಕೆ ಸಂಬಂಧಿಸಿದಂತೆ ಮಾಜಿ ಸಂಸದ, ಜೆಡಿಎಸ್‌ನ ಪ್ರಜ್ವಲ್ ರೇವಣ್ಣ ಸಲ್ಲಿಸಿರುವ ನಿಯಮಿತ ಮತ್ತು ನಿರೀಕ್ಷಣಾ ಜಾಮೀನು ಅರ್ಜಿಗಳಿಗೆ ಆಕ್ಷೇಪಣೆ ಸಲ್ಲಿಸಲು ಪ್ರಾಸಿಕ್ಯೂಷನ್ ಕಾಲಾವಕಾಶ ಕೋರಿದ ಹಿನ್ನೆಲೆಯಲ್ಲಿ ಹೈಕೋರ್ಟ್ ವಿಚಾರಣೆ ಮುಂದೂಡಿದೆ.

ಈ ಸಂಬಂಧ ಪ್ರಜ್ವಲ್ ರೇವಣ್ಣ ಸಲ್ಲಿಸಿರುವ ಅರ್ಜಿಗಳನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕ ಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ಎಚ್.ಡಿ.ರೇವಣ್ಣ ಅರ್ಜಿ: ಮೈಸೂರು ಜಿಲ್ಲೆಯ ಕೆ.ಆರ್.ನಗರ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸುವಂತೆ ಕೋರಿ ಶಾಸಕ ಎಚ್.ಡಿ.ರೇವಣ್ಣ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನೂ ಇದೇ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ರೇವಣ್ಣ ಪರ ವಕೀಲ ಜಿ.ಅರುಣ್, ವಿಚಾರಣೆ ಮುಂದೂಡಬೇಕು ಎಂದು ಮನವಿ ಮಾಡಿದರು. ಎರಡೂ ಪ್ರಕರಣಗಳಲ್ಲಿ ಕೋರಿಕೆ ಮನ್ನಿಸಿದ ನ್ಯಾಯಪೀಠ ವಿಚಾರಣೆಯನ್ನು ಇದೇ 29ಕ್ಕೆ ಮುಂದೂಡಿತು.

ಶುಕ್ರವಾರ, ಆಗಸ್ಟ್ 9, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 221 | ಪುಟ 18
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
‘ಭೀಮ’ ಸಿನಿಮಾ ಮೂಲಕ ಚಂದನವನಕ್ಕೆ ಕಾಲಿಟ್ಟಿರುವ ಅಶ್ವಿನಿ ಅಂಬರೀಶ್ ಸಂದರ್ಶನ



ಆಳ-ಅಗಲ ಮಂಡಳಿಯಲ್ಲಿ ಮುಸ್ಲಿಮೇತರರಿಗೂ ಅವಕಾಶ

ಸುನಿತಾ, ವಿಲ್ಮೋರ್ ಫೆಬ್ರುವರಿಯಲ್ಲಿ ವಾಪಸ್ ಸಾಧ್ಯತೆ: ನಾಸಾ 11

ಸದನ ಸಮಿತಿಗೆ ವಕ್ಫ್ ಮಸೂದೆ 10

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
78,886	24,117	₹71,000 (ಬೆಂಗಳೂರು)	₹81,300 (ಬೆಂಗಳೂರು)	83.97

ಕುಸ್ತಿಗೆ ವಿನೇಶ್ ವಿದಾಯ




ಪ್ಯಾರಿಸ್ (ಪಿಟಿಐ): ಭಾರತದ ಕುಸ್ತಿಪಟು ವಿನೇಶ್ ಫೋಗಟ್ ಅವರು ಕುಸ್ತಿಗೆ ನಿವೃತ್ತಿ ಘೋಷಿಸಿದರು.

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಮಹಿಳೆಯರ ಫ್ರೀಸ್ಟೈಲ್ ಕುಸ್ತಿಯ 50 ಕೆ.ಜಿ ವಿಭಾಗದಲ್ಲಿ ಫೈನಲ್ ತಲುಪಿದ್ದ ಅವರು ನಿಗದಿಗಿಂತ 100 ಗ್ರಾಂ ತೂಕ ಹೆಚ್ಚಾದ ಕಾರಣಕ್ಕೆ ಅನರ್ಹಗೊಂಡಿದ್ದರು. ಅದರ ಬೆನ್ನಲ್ಲಿಯೇ ಅವರು ವಿದಾಯ ಹೇಳಿದ್ದಾರೆ.

29 ವರ್ಷದ ವಿನೇಶ್ ಅವರು ‘ಅಮ್ಮಾ, ಕುಸ್ತಿ ಗೆದ್ದಿದೆ. ನಾನು ಸೋತೆ. ದಯವಿಟ್ಟು ನನ್ನನ್ನು ಕ್ಷಮಿಸು. ನಿನ್ನ ಕನಸು, ನನ್ನ ಧೈರ್ಯ ಮತ್ತೆಲ್ಲವೂ ಚೂರಾಗಿವೆ. ನನ್ನಲ್ಲಿ ಇನ್ನೂ ಹೆಚ್ಚಿನ ಶಕ್ತಿ ಉಳಿದಿಲ್ಲ. ವಿದಾಯ ಕುಸ್ತಿ 2001-2024. ತಮಗೆಲ್ಲರಿಗೂ ಆಭಾರಿಯಾಗಿರುವೆ. ಮನ್ನಿಸಿ’ ಎಂದು ಗುರುವಾರ ಸಾಮಾಜಿಕ ಜಾಲತಾಣದಲ್ಲಿ ತಮ್ಮ ತಾಯಿ ಪ್ರೇಮಲತಾ ಅವರನ್ನು ಉದ್ದೇಶಿಸಿ ಸಂದೇಶ ಹಾಕಿದ್ದಾರೆ.

ಪಾಕಿಸ್ತಾನದ ಅರ್ಷದ್ ನದೀಂಗೆ ಚಿನ್ನ

ನೀರಜ್ ಬೆಳ್ಳಿ ಬೆಡಗು



ಪ್ಯಾರಿಸ್ (ಪಿಟಿಐ/ಎಎಫ್‌ಪಿ): ಭಾರತದ ನೀರಜ್ ಚೋಪ್ರಾ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಪುರುಷರ ಜಾವೆಲಿನ್ ಥ್ರೋನಲ್ಲಿ ಬೆಳ್ಳಿ ಪದಕ ಜಯಿಸಿದರು. ಪಾಕಿಸ್ತಾನದ ಅರ್ಷದ್ ನದೀಂ ಚಿನ್ನ ಗೆದ್ದರು.

ಒಲಿಂಪಿಕ್ ಕೂಟದಲ್ಲಿ ಎರಡು ಪದಕಗಳನ್ನು ಗೆದ್ದ ಭಾರತದ ಮೊದಲ ಅಥ್ಲೀಟ್ ಎಂಬ ಹೆಗ್ಗಳಿಕೆಗೆ ನೀರಜ್ ಪಾತ್ರರಾದರು. ಈ ಒಲಿಂಪಿಕ್ಸ್‌ನಲ್ಲಿ ಭಾರತಕ್ಕೆ ಒಲಿದ ಒಟ್ಟಾರೆ ಐದನೇ ಪದಕವಾಗಿದೆ. ಅಲ್ಲದೇ ಇದು ಮೊದಲ ಬೆಳ್ಳಿಯಾಗಿದ್ದು, ಉಳಿದ ನಾಲ್ಕು ಕಂಚಿನ ಪದಕಗಳಾಗಿವೆ.

2020ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಜಯಿಸಿದ್ದ ನೀರಜ್ ಇಲ್ಲಿಯೂ ಅದೇ ಸಾಧನೆ ಮಾಡುವ ಆತ್ಮವಿಶ್ವಾಸದಲ್ಲಿದ್ದರು. ಆದರೆ ಗುರುವಾರ ರಾತ್ರಿ ಅವರಿಗೆ ಲಯ ಕೈಕೊಟ್ಟಿತು. ಆರು ಅವಕಾಶಗಳಲ್ಲಿ ಅವರು ಐದರಲ್ಲಿ ಫೌಲ್ ಮಾಡಿದರು. ಒಂದರಲ್ಲಿ ಮಾತ್ರ 89.45 ಮೀಟರ್ಸ್ ದೂರ ಜಾವೆಲಿನ್ ಥ್ರೋ ಮಾಡಿದರು. ಆದರೆ, ನೀರಜ್ ಅವರ ‘ಸ್ನೇಹಿತ’ ನದೀಂ ಅವರಿಗೆ ಅದೃಷ್ಟ ಜೊತೆಗೂಡಿತು. ಪಾಕಿಸ್ತಾನಕ್ಕೆ ಇದು ಮೊದಲ ಒಲಿಂಪಿಕ್ ಚಿನ್ನದ ಪದಕವಾಗಿದೆ.

ಚಿನಕುರುಳಿ

ಪ್ರಕಾಶ್ ಶೆಟ್ಟಿ



‘ಶಕ್ತಿ’ ಪ್ರದರ್ಶನಕ್ಕೆ ‘ಕೈ’, ಸಿಎಂ ಸಜ್ಜು



ಮೈಸೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ವಿರುದ್ಧದ ಗಂಭೀರ ಆರೋಪಗಳಿಗೆ ತಕ್ಕ ಉತ್ತರ ನೀಡುವ ಜತೆಗೆ, ಬಿಜೆಪಿ-ಜೆಡಿಎಸ್ ಅಧಿಕಾರದ ಅವಧಿಯಲ್ಲಾದ ಹಗರಣಗಳನ್ನು ತೆರೆದಿಡಲು ಮುಂದಾಗಿದ್ದಾರೆ. ಶುಕ್ರವಾರ ಇಲ್ಲಿ ನಡೆಯುವ ‘ಕಾಂಗ್ರೆಸ್ ಜನಾಂದೋಲನ’ ಸಮಾವೇಶದಲ್ಲಿ ‘ಶಕ್ತಿ’ ಪ್ರದರ್ಶನ ಮಾಡಲಿದ್ದಾರೆ.

ಕೆಪಿಸಿಸಿಯಿಂದ ಆಯೋಜಿಸಿರುವ ಸಮಾವೇಶಕ್ಕೆ ಭರ್ಜರಿ ತಯಾರಿ ನಡೆದಿದ್ದು, ರಾಜ್ಯದ ಹಲವೆಡೆಯಿಂದ ಕಾರ್ಯಕರ್ತರು ಪಾಲ್ಗೊಳ್ಳುವ ನಿರೀಕ್ಷೆ ಇದೆ. ನಗರದಲ್ಲೇ ತಂಗಿರುವ ಮುಖ್ಯಮಂತ್ರಿ ಸಮಾವೇಶದ ಯಶಸ್ಸಿಗೆ ಅಗತ್ಯ ಕಾರ್ಯತಂತ್ರಗಳನ್ನು ರೂಪಿಸಿದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕಿಯರಾದ ಸೋನಿಯಾ ಗಾಂಧಿ, ಪ್ರಿಯಾಂಕಾ ಗಾಂಧಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕಟೌಟ್‌ಗಳು ರಾರಾಜಿಸುತ್ತಿವೆ. ಸಮಾವೇಶದ ಸ್ಥಳದ ಸುತ್ತಮುತ್ತಲಿನ ವೃತ್ತ, ರಸ್ತೆಗಳಲ್ಲಿ ಹಾಗೂ ನಗರದ ಪ್ರಮುಖ ವೃತ್ತಗಳಲ್ಲಿ ಕಾಂಗ್ರೆಸ್ ಬಾವುಟಗಳು ಮತ್ತು ಬಂಟಿಂಗ್‌ಗಳನ್ನು ಕಟ್ಟಲಾಗಿದೆ.

ಬಾಂಗ್ಲಾ: ಯೂನಸ್ ಪ್ರಮಾಣ

ಢಾಕಾ (ಪಿಟಿಐ, ಎಎಫ್‌ಪಿ): ಆರ್ಥಿಕ ತಜ್ಞ, ನೊಬೆಲ್ ಶಾಂತಿ ಪ್ರಶಸ್ತಿ ಪುರಸ್ಕೃತ ಮೊಹಮ್ಮದ್ ಯೂನಸ್ (84) ಅವರು ಬಾಂಗ್ಲಾದೇಶದ ಮಧ್ಯಂತರ ಸರ್ಕಾರದ ಮುಖ್ಯಸ್ಥರಾಗಿ ಗುರುವಾರ ರಾತ್ರಿ ಪ್ರಮಾಣ ವಚನ ಸ್ವೀಕರಿಸಿದರು.

ಬಾಂಗ್ಲಾದೇಶದ ಅಧ್ಯಕ್ಷರ ‘ವಂಗ-ಭವನ’ದಲ್ಲಿ ನಡೆದ ಸಮಾರಂಭದಲ್ಲಿ, ಅಧ್ಯಕ್ಷ ಮೊಹಮ್ಮದ್ ಶಹಾಬುದ್ದೀನ್ ಅವರು ಯೂನಸ್ ಅವರಿಗೆ ಪ್ರಮಾಣ ವಚನ ಬೋಧಿಸಿದರು.

‘ಸಂವಿಧಾನದ ಆಶಯಗಳನ್ನು ಎತ್ತಿ ಹಿಡಿಯುತ್ತೇನೆ ಮತ್ತು ರಕ್ಷಿಸುತ್ತೇನೆ’ ಎಂದು ಯೂನಸ್ ಸಮಾರಂಭದಲ್ಲಿ ಹೇಳಿದರು.

ಇದೇ ವೇಳೆ, ಯೂನಸ್ ನೇತೃತ್ವದ ಸಂಪುಟದ ಸಲಹೆಗಾರರಾಗಿ 12ಕ್ಕೂ ಹೆಚ್ಚು ಸದಸ್ಯರು ಪ್ರಮಾಣ ವಚನ ಸ್ವೀಕರಿಸಿದರು. ಇವರಲ್ಲಿ ವಿದ್ಯಾರ್ಥಿ ನಾಯಕರಾದ ನಹೀದ್ ಇಸ್ಲಾಂ ಮತ್ತು ಆಸಿಫ್ ಮೊಹಮ್ಮದ್ ಹಾಗೂ ಮಾಜಿ ವಿದೇಶಾಂಗ ಕಾರ್ಯದರ್ಶಿ ತೌಹೀದ್ ಹುಸೇನ್, ಮಾಜಿ ಅಟಾರ್ನಿ ಜನರಲ್ ಹಸನ್ ಆರಿಫ್ ಪ್ರಮುಖರು.

ರಾಜಕೀಯ ಮುಖಂಡರು, ಸೇನೆಯ ಅಧಿಕಾರಿಗಳು ಮತ್ತು ರಾಜತಾಂತ್ರಿಕರು ಸಮಾರಂಭದಲ್ಲಿ ಭಾಗವಹಿಸಿದ್ದರು.

ಮೀಸಲಾತಿ ನೀತಿ ವಿರೋಧಿಸಿ ದೇಶದಾದ್ಯಂತ ನಡೆದ ಹಿಂಸಾಚಾರದ ಬೆನ್ನಲ್ಲೇ, ಪ್ರಧಾನಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದ ಶೇಖ್ ಹಸೀನಾ ಅವರು ದೇಶ ತೊರೆದಿದ್ದರು. ಬಳಿಕ ಯೂನಸ್ ಅವರನ್ನು ಮಧ್ಯಂತರ ಸರ್ಕಾರದ ಮುಖ್ಯಸ್ಥರನ್ನಾಗಿ ನೇಮಿಸಲಾಗಿತ್ತು.

ಇನ್ನಷ್ಟು ಸುದ್ದಿಗಳು 10

ಶುಕ್ರವಾರದ ಉಷ್ಣಾಂಶ 28° ಗರಿಷ್ಠ 21° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಇಂದು ಮೋಡ ಕವಿದ ವಾತಾವರಣ ಇರಲಿದ್ದು, ಅಲ್ಲಲ್ಲಿ ಹಗುರ ಮಳೆಯಾಗುವ ಸಾಧ್ಯತೆ ಇದೆ.

ತಾಪಮಾನ: ಶನಿವಾರ 29° 20° | ಭಾನುವಾರ 29° 20° | ಸೋಮವಾರ 29° 20°

ಸೂರ್ಯೋದಯ: 6:06 ಸೂರ್ಯಾಸ್ತ : 6:44 ಚಂದ್ರೋದಯ: ರಾ. 9:00 ಚಂದ್ರಾಸ್ತ: ಬೆ. 9:19 ಗುರುವಾರದ ಹವಾಮಾನ : ಗರಿಷ್ಠ 27° ಕನಿಷ್ಠ 21°

‘ಎಚ್‌ಡಿಕೆ ವಿರುದ್ಧ ಪ್ರಾಸಿಕ್ಯೂಷನ್ ರಾಜ್ಯಪಾಲರ ನಡೆ ಕಾದು ನೋಡುವೆ’

ಪ್ರಜಾವಾಣಿ ವಾರ್ತೆ



ಬೆಂಗಳೂರು: ‘ಎಚ್.ಡಿ. ಕುಮಾರಸ್ವಾಮಿ ಅವರು 2007ರಲ್ಲಿ ಮುಖ್ಯಮಂತ್ರಿ ಆಗಿದ್ದಾಗ ಅಕ್ರಮ ಗಣಿಗಾರಿಕೆಗೆ ಅನುಮತಿ ನೀಡಿದ್ದ ವಿಚಾರದಲ್ಲಿ ಅವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲು ಅನುಮತಿ ಕೋರಿ ಲೋಕಾಯುಕ್ತ ಸಲ್ಲಿಸಿರುವ ಪ್ರಸ್ತಾವದಲ್ಲಿ ರಾಜ್ಯಪಾಲರು ಯಾವ ತೀರ್ಮಾನ ತೆಗೆದುಕೊಳ್ಳುತ್ತಾರೆಂದು ಕಾದು ನೋಡಬೇಕು’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, ‘ಲೋಕಾಯುಕ್ತ ಎಸ್‌ಐಟಿ ಅನುಮತಿ ಕೇಳಿರುವ ವಿಚಾರ ಮಾಧ್ಯಮಗಳ ಮೂಲಕ ತಿಳಿಯಿತು. ಸುಪ್ರೀಂ ಕೋರ್ಟ್‌ನಲ್ಲಿ ಈ ಪ್ರಕರಣದ ವಿಚಾರಣೆಯ ಬಳಿಕ ಲೋಕಾಯುಕ್ತ ತನಿಖೆ ಮಾಡಿ ಕುಮಾರಸ್ವಾಮಿ ಅವರ ವಿಚಾರಣೆಗೆ ರಾಜ್ಯಪಾಲರಿಂದ ಅನುಮತಿ ಕೇಳಿದೆ ಎಂಬ ಮಾಹಿತಿಯಿದೆ. ರಾಜ್ಯಪಾಲರು ಆ ಕಡತವನ್ನು ತಮ್ಮಲ್ಲೇ ಇರಿಸಿ ಕೊಂಡಿದ್ದಾರೆ ಎಂದೂ ಮಾಹಿತಿ ಸಿಕ್ಕಿದೆ’ ಎಂದರು.

ಆರೋಪಕ್ಕೆ ದಾಖಲೆ ಎಲ್ಲಿವೆ?: ‘ನನ್ನ ಮೇಲೆ ಕುಮಾರಸ್ವಾಮಿ ಅನೇಕ ಆರೋಪಗಳನ್ನು ಮಾಡಿದ್ದಾರೆ. ಆ ಆರೋಪಗಳಿಗೆ ದಾಖಲೆಗಳು ಬೇಕಲ್ಲವೇ. ಅವರು ನನ್ನ ಯಾವುದೇ ಪ್ರಶ್ನೆಗಳಿಗೆ ಉತ್ತರ ನೀಡುತ್ತಿಲ್ಲ. ಅವರ ಸಹೋದರನ ಆಸ್ತಿ ಹೇಗೆ ಬಂತು, ಎಲ್ಲಿಂದ ಬಂತು ಎಂಬುದನ್ನು ನಾನು ಬಿಚ್ಚಿಡಬೇಕಲ್ಲವೇ’ ಎಂದೂ ಪ್ರಶ್ನಿಸಿದರು. ‘ಹಿಂದುಳಿದ ವರ್ಗದ ನಾಯಕ ಎರಡನೇ ಬಾರಿಗೆ ಮುಖ್ಯಮಂತ್ರಿ ಆಗಿರುವುದನ್ನು ಸಹಿಸಲಾಗದೆ ಬಿಜೆಪಿ–ಜೆಡಿಎಸ್‌ನವರು ಪಾದಯಾತ್ರೆ ಮಾಡುತ್ತಿದ್ದಾರೆ. ಅವರ ತಟ್ಟೆಯಲ್ಲೇ ಹೆಗ್ಗಣ ಬಿದ್ದಿದ್ದರೂ ಬೇರೆಯವರ ತಟ್ಟೆ ನೋಡುತ್ತಿದ್ದಾರೆ. ಅವರ ಪಾದಯಾತ್ರೆಗೆ ಜನರಿಂದ ಸ್ಪಂದನೆಯಿಲ್ಲ. ಜೆಡಿಎಸ್ ಕಾರ್ಯಕರ್ತರೇ ಇಲ್ಲ’ ಎಂದರು.

ಸೊಸೈಟಿ ಕಾಯ್ದೆ ತಿದ್ದುಪಡಿ ಸಂವಿಧಾನ ಬಾಹಿರ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಹಕಾರ ಸಂಘಗಳಲ್ಲಿ ನೇಮಕಾತಿ ವೃಂದ ರಚನೆ, ನೇಮಕಾತಿ, ನೌಕರರ ವರ್ಗಾವಣೆ ಹಾಗೂ ಅವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವ ಅಧಿಕಾರವನ್ನು ಸಹಕಾರ ಸಂಘಗಳಿಂದ ಮೊಟಕುಗೊಳಿಸಿ; ಕರ್ನಾಟಕ ಸಹಕಾರ ಸಂಘಗಳ ಕಾಯ್ದೆಯ ಕಲಂ 128ಎ ಗೆ ರಾಜ್ಯ ಸರ್ಕಾರ ತಂದಿರುವ ತಿದ್ದುಪಡಿ ಸಂವಿಧಾನಬಾಹಿರ’ ಎಂದು ಹೈಕೋರ್ಟ್ ಮಹತ್ವದ ತೀರ್ಪು ನೀಡಿದೆ.

ತಿದ್ದುಪಡಿ ಪ್ರಶ್ನಿಸಿ ಸಲ್ಲಿಸಲಾಗಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ಆದೇಶವನ್ನು ನ್ಯಾಯಮೂರ್ತಿ ಅನಂತ ರಾಮನಾಥ ಹೆಗ್ಡೆ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ಪ್ರಕಟಿಸಿದೆ.

ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಕಾಯ್ದೆ-2023ರ ಕಲಂ 128ಎಗೆ ತರಲಾಗಿದ್ದ ತಿದ್ದುಪಡಿ ಪ್ರಶ್ನಿಸಿ ದಕ್ಷಿಣ ಕನ್ನಡ ಜಿಲ್ಲೆ ಪುತ್ತೂರು ತಾಲ್ಲೂಕಿನ, ‘ಉಪ್ಪಿನಂಗಡಿ ಸಹಕಾರ ಕೃಷಿ ಸೊಸೈಟಿ ಲಿಮಿಟೆಡ್’ನ ಅಧ್ಯಕ್ಷ ಕೆ.ವಿ.ಪ್ರಸಾದ್, ಬಜತ್ತೂರಿನ ಎಂ.ಜಗದೀಶ್ ರಾವ್, ಜಿ.ಯಶವಂತ ಹಾಗೂ ಬೆಳ್ತಂಗಡಿ ತಾಲ್ಲೂಕಿನ ಇಳಂತಿಲ ಗ್ರಾಮದ ಕೆ.ಗೋಪಾಲ ಕೃಷ್ಣ ಭಟ್ ಈ ಅರ್ಜಿ ಸಲ್ಲಿಸಿದ್ದರು. ಅರ್ಜಿದಾರರ ಪರ ಹೈಕೋರ್ಟ್ ವಕೀಲ ಎ.ಕೇಶವ ಭಟ್ ವಾದ ಮಂಡಿಸಿದ್ದರು.

ಅರ್ಜಿಯಲ್ಲಿ ಏನಿತ್ತು?: ‘ಸಹಕಾರ ಸಂಘಗಳನ್ನು ರಚಿಸಿ, ಅವುಗಳನ್ನು ನಿರ್ವಹಿಸುವುದು ಸಂವಿಧಾನದ 19 (1)(ಸಿ) ವಿಧಿಯ ಪ್ರಕಾರ ನಾಗರಿಕರ ಮೂಲಭೂತ ಹಕ್ಕು. ಆದರೆ, ಸರ್ಕಾರವು ಸಹಕಾರ ಸಂಘಗಳ ಕಾಯ್ದೆಯ ಕಲಂ 128ಎ ಗೆ ತಿದ್ದುಪಡಿ ತರುವ ಮೂಲಕ ಸಂವಿಧಾನದತ್ತವಾದ ಆ ಮೂಲಭೂತ ಹಕ್ಕನ್ನು ಮೊಟಕುಗೊಳಿಸಿದೆ’ ಎಂದು ಅರ್ಜಿದಾರರು ಪ್ರತಿಪಾದಿಸಿದ್ದರು.

ಬಸವನಗುಡಿ ವಾರ್ಡ್ ಹೆಸರು ಬದಲಾವಣೆ: ಪಿಐಎಲ್ ವಜಾ

ಬೆಂಗಳೂರು: ‘ಬಸವನಗುಡಿ ವಾರ್ಡ್’ ಹೆಸರನ್ನು ‘ದೊಡ್ಡಗಣಪತಿ ವಾರ್ಡ್’ ಎಂದು ಬದಲಾಯಿಸುವ ಸರ್ಕಾರದ ನಿರ್ಧಾರ ಪ್ರಶ್ನಿಸಿ ಸಲ್ಲಿಸಲಾದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಈ ಸಂಬಂಧ, ಪೂರ್ವ ಆಂಜನೇಯ ರಸ್ತೆಯ ಸತ್ಯಲಕ್ಷ್ಮಿ ರಾವ್ ಸೇರಿದಂತೆ ಐವರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹಿರಿಯ ವಕೀಲ ಎಸ್.ಪಿ.ಶಂಕರ್, ‘ಬಸವನಗುಡಿ ಬೆಂಗಳೂರಿನ ಐತಿಹಾಸಿಕ ಹಾಗೂ ಸಾಂಸ್ಕೃತಿಕ ಪ್ರಾಮುಖ್ಯತೆಗೆ ಹೆಸರುವಾಸಿಯಾಗಿದೆ. ಆದರೆ, ನಗರಾಭಿವೃದ್ಧಿ ಇಲಾಖೆ 2023ರ ಸೆಪ್ಟೆಂಬರ್ 25ರಂದು ಹೊರಡಿಸಿರುವ ಅಧಿಸೂಚನೆಯಲ್ಲಿ ಬಸವನಗುಡಿ ವಾರ್ಡ್ ಹೆಸರನ್ನು ದೊಡ್ಡಗಣಪತಿ ಎಂದು ಬದಲಾಯಿಸಲು ನಿರ್ಧರಿಸಿದೆ. ಹೆಸರು ಬದಲಾವಣೆ ಮಾಡದಂತೆ ಸರ್ಕಾರಕ್ಕೆ ಆದೇಶಿಸಬೇಕು’ ಎಂದು ಕೋರಿದರು.



ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ವಾರ್ಡ್ ಅಥವಾ ನಗರದ ಹೆಸರು ಬದಲಾಯಿಸುವ ವಿಚಾರ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಷಯವಲ್ಲ. ಹೆಸರು ಬದಲಾವಣೆಯಿಂದ ಸಾರ್ವಜನಿಕ ಹಿತಾಸಕ್ತಿಗೆ ಯಾವುದೇ ತೊಂದರೆ ಆಗುತ್ತದೆ ಎಂಬುದನ್ನು ಅರ್ಜಿದಾರರು ಸಾಬೀತುಪಡಿಸಿಲ್ಲ. ಹಾಗಾಗಿ, ಈ ಅರ್ಜಿ ವಜಾಗೊಳಿಸಲಾಗುತ್ತಿದೆ’ ಎಂದು ಹೇಳಿತು.


‘ಹೆಸರು ಬದಲಾಯಿಸದಂತೆ ಸರ್ಕಾರಕ್ಕೆ ಮನವಿ ನೀಡಲಾಗಿದ್ದರೂ ಅದನ್ನು ಪರಿಗಣಿಸಿಲ್ಲ. ಇದು ಬಸವನಗುಡಿ ನಿವಾಸಿಗಳ ಭಾವನಾತ್ಮಕ ವಿಚಾರ. ಹಾಗಾಗಿ, ಹಳೆಯ ಹೆಸರು ಉಳಿಸಿಕೊಳ್ಳುವಂತೆ ನಿರ್ದೇಶಿಸಬೇಕು’ ಎಂದು ಅರ್ಜಿದಾರರು ಕೋರಿದ್ದರು.

ಸುದ್ದಿ 2 ನಿಮಿಷ

ಒಟಿಎಸ್: ಸೆ.30ರವರೆಗೆ ವಿಸ್ತರಣೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿನ ಆಸ್ತಿ ಮಾಲೀಕರು ಬಾಕಿ ಉಳಿಸಿಕೊಂಡಿರುವ ಆಸ್ತಿ ತೆರಿಗೆಯನ್ನು ದಂಡ ಹಾಗೂ ಬಡ್ಡಿ ಇಲ್ಲದೆ ಪಾವತಿಸುವ ಒಂದು ಬಾರಿ ಪರಿಹಾರ (ಒಟಿಎಸ್) ಯೋಜನೆಯನ್ನು ಸೆಪ್ಟೆಂಬರ್ 30ರವರೆಗೆ ವಿಸ್ತರಿಸಿ ಸರ್ಕಾರ ಆದೇಶ ಹೊರಡಿಸಿದೆ.

ಫೆಬ್ರುವರಿಯಲ್ಲಿ ಜಾರಿಯಾಗಿದ್ದ ಒಟಿಎಸ್ ಯೋಜನೆ ಜುಲೈ 31ರಂದು ಕೊನೆಗೊಂಡಿತ್ತು. ಇನ್ನಷ್ಟು ಕಾಲಾವಕಾಶ ನೀಡಬೇಕು ಎಂದು ನಾಗರಿಕರು, ಸಂಘ–ಸಂಸ್ಥೆಗಳು ಮನವಿ ಮಾಡಿಕೊಂಡಿದ್ದವು. ಅದರಂತೆಯೇ, ಸರ್ಕಾರ ಒಟಿಎಸ್ ಅವಧಿಯನ್ನು ಎರಡು ತಿಂಗಳು ವಿಸ್ತರಿಸಿದೆ.



ಜುಲೈ 31ರ ಅಂತ್ಯಕ್ಕೆ ಒಂದು ಬಾರಿ ಪರಿಹಾರ (ಒಟಿಎಸ್) ಯೋಜನೆಯಡಿ ಹಲವು ವರ್ಷಗಳಿಂದ ತೆರಿಗೆ ಬಾಕಿ ಉಳಿಸಿಕೊಂಡಿದ್ದ 1.07 ಲಕ್ಷ ಆಸ್ತಿಗಳ ಮಾಲೀಕರು ಪ್ರಯೋಜನ ಪಡೆದುಕೊಂಡು, ₹217.50 ಕೋಟಿ ಪಾವತಿಸಿದ್ದರು. 6,723 ಆಸ್ತಿಗಳ ತೆರಿಗೆಯ ಪುನರ್ ವಿಮರ್ಶೆಯೂ ಸೇರಿ ಒಟ್ಟು ₹380.83 ಕೋಟಿ ಸಂಗ್ರಹವಾಗಿತ್ತು.

2024ರ ಆಗಸ್ಟ್ 1ರಂತೆ 3,04,810 ಆಸ್ತಿಗಳಿಂದ₹831.53 ಕೋಟಿ ತೆರಿಗೆ ಹಿಂಬಾಕಿ ಪಾವತಿಯಾಗಬೇಕಿದೆ.

ಕಟ್ಟಡ ತ್ಯಾಜ್ಯ ತೆರವಾಗದಿದ್ದರೆ ಗುತ್ತಿಗೆದಾರರ ಬಿಲ್ ಕಡಿತ

ಬೆಂಗಳೂರು: ಬಿಬಿಎಂಪಿ ಕಾಮಗಾರಿಗಳಲ್ಲಿ ಕಟ್ಟಡ ತ್ಯಾಜ್ಯ ವಿಲೇವಾರಿ ಮಾಡದ ಗುತ್ತಿಗೆದಾರರ ಬಿಲ್‌ಗಳಲ್ಲಿ ನಿಗದಿತ ಮೊತ್ತ ಕಡಿತ ಮಾಡಲು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಆದೇಶ ಹೊರಡಿಸಿದ್ದಾರೆ.

ಬಿಬಿಎಂಪಿ ವತಿಯಿಂದ ಕೈಗೊಳ್ಳಲಾಗುವ ಸಿವಿಲ್ ಕಾಮಗಾರಿಗಳಿಂದಾಗಿ ಉತ್ಪತ್ತಿಯಾಗುವ ಕಟ್ಟಡ ಭಗ್ನಾವಶೇಷಗಳ (ಡೆಬ್ರಿಸ್) ತೆರವು ಮತ್ತು ನಿರ್ಮೂಲನೆಗಾಗಿ ತಗಲುವ ವೆಚ್ಚವನ್ನು ಆಯಾ ಕಾಮಗಾರಿಯ ಬಿಲ್ಲುಗಳಲ್ಲಿ ಕಡಿತಗೊಳಿಸಬೇಕು ಎಂದು ಸೂಚಿಸಿದ್ದಾರೆ.

ಕಾಮಗಾರಿಗಳಿಂದ ಆಗಾಗ್ಗೆ ಸೃಷ್ಟಿಯಾಗುವ ಡೆಬ್ರಿಸ್ ಅನ್ನು ಆಯಾ ಗುತ್ತಿಗೆದಾರರಿಂದ ತೆರವುಗೊಳಿಸಲು ಉಸ್ತುವಾರಿ ಅಧಿಕಾರಿ ಕ್ರಮ ಕೈಗೊಳ್ಳಬೇಕು. ಕಾಮಗಾರಿ ಮುಕ್ತಾಯಗೊಂಡ ನಂತರ ಡೆಬ್ರಿಸ್ ಸೃಷ್ಟಿಯಾಗದಂತೆ ಗುತ್ತಿಗೆದಾರರು ನೋಡಿಕೊಳ್ಳಬೇಕು.

ಕಾಮಗಾರಿಗಳು ಮುಕ್ತಾಯಗೊಂಡ ನಂತರ ಡೆಬ್ರಿಸ್ ಸೃಷ್ಟಿಯಾಗಿ, ಅದನ್ನು ತೆರವುಗೊಳಿಸದೆ ಇದ್ದಲ್ಲಿ ಪಾಲಿಕೆಯಿಂದಲೇ ತೆರವುಗೊಳಿಸಬೇಕು. ಅಂತಿಮ ಬಿಲ್ಲುಗಳಲ್ಲಿ ಡೆಬ್ರಿಸ್ ತೆರವಿಗೆ ತಗುಲಿದ ವೆಚ್ಚಗಳ ಶೇ 150ರಷ್ಟು ಮೊತ್ತವನ್ನು ಕಡಿತ ಮಾಡಬೇಕು ಎಂದು ಎಂಜಿನಿಯರ್‌ಗಳಿಗೆ ಸೂಚಿಸಿದ್ದಾರೆ.

‘ರಿವರ್ ಮೊಬಿಲಿಟಿಗೆ ಸೌಲಭ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯುತ್ ಚಾಲಿತ ವಾಹನಗಳ ತಯಾರಿಕೆ ಪ್ರಮಾಣವನ್ನು ಹೆಚ್ಚಿಸಲು ಉದ್ದೇಶಿಸಿರುವ ರಿವರ್ ಮೊಬಿಲಿಟಿ ಕಂಪನಿಗೆ ಜಮೀನು ಸೇರಿ ಎಲ್ಲ ಸೌಲಭ್ಯಗಳನ್ನು ಒದಗಿಸಲಾಗುವುದು ಎಂದು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಹೇಳಿದ್ದಾರೆ.

ಗುರುವಾರ ತಮ್ಮನ್ನು ಭೇಟಿಯಾದ ಕಂಪನಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅರವಿಂದ್ ಮಣಿ ಮತ್ತು ಉಪಾಧ್ಯಕ್ಷೆ ಮಯೂರಿ ಮೋಹಿಡೇಕರ್ ಜತೆ ಭವಿಷ್ಯದ ಸಂಪರ್ಕ ಸಾರಿಗೆ ವ್ಯವಸ್ಥೆ ಕುರಿತು ಮಾತುಕತೆ ನಡೆಸಿದರು.

ಸದ್ಯಕ್ಕೆ ರಿವರ್ ಮೊಬಿಲಿಟಿ ಕಂಪನಿಯು ಹೊಸಕೋಟೆ ಬಳಿ ಇರುವ ತನ್ನ ಉತ್ಪಾದನಾ ಘಟಕದಲ್ಲಿ ವರ್ಷಕ್ಕೆ 1.20 ಲಕ್ಷ ಇ.ವಿ ದ್ವಿಚಕ್ರ ವಾಹನಗಳನ್ನು ತಯಾರಿಸುತ್ತಿದೆ. ಇದನ್ನು ವರ್ಷಕ್ಕೆ 5 ಲಕ್ಷಕ್ಕೆ ಕೊಂಡೊಯ್ಯಲು ಕಂಪನಿ ಬಯಸಿದ್ದು, ಅದಕ್ಕಾಗಿ ಜಮೀನಿಗೆ ಬೇಡಿಕೆ ಇಟ್ಟಿದೆ. ಗೌರಿಬಿದನೂರು, ಕೋಲಾರದ ನರಸಾಪುರ, ಹಾರೋಹಳ್ಳಿ ಕೈಗಾರಿಕಾ ಪ್ರದೇಶಗಳಲ್ಲಿ ಭೂಮಿ ತೋರಿಸಿದ್ದು, ಅವರು ಬಯಸಿದ ಪ್ರಕಾರ ಜಮೀನು ಹಂಚಿಕೆ ಮಾಡಲಾಗುವುದು ಎಂದು ಸಚಿವರು ಭರವಸೆ ನೀಡಿದರು.



ವಿದ್ಯುತ್ ಚಾಲಿತ ವಾಹನ ಚಲಾಯಿಸಿದ ಸಚಿವ ಎಂ.ಬಿ.ಪಾಟೀಲ

ಕಂಪನಿಯು ಇ.ವಿ ಬ್ಯಾಟರಿಯನ್ನು ಕೂಡ ಇಲ್ಲೇ ತಯಾರಿಸುತ್ತಿದ್ದು, ₹400 ಕೋಟಿ ಹೂಡಿಕೆ ಮಾಡಿದೆ. ಕಂಪನಿಯ ಇ.ವಿ ವಾಹನವು ಒಂದು ಸಲ ಚಾರ್ಜ್ ಮಾಡಿದರೆ 120 ಕಿ.ಮೀ ಓಡಲಿದೆ ಎಂದು ಎಂ.ಬಿ. ಪಾಟೀಲ ಮಾಹಿತಿ ನೀಡಿದರು.

ರಾಜ್ಯದಲ್ಲಿ ಇ.ವಿ.ಕ್ಷೇತ್ರದಲ್ಲಿ ಹೂಡಿಕೆಗೆ ವಿಪುಲ ಅವಕಾಶಗಳಿವೆ. ಅಲ್ಲದೇ, ಸರ್ಕಾರ ಕೂಡ ನಾನಾ ಬಗೆಯ ಉತ್ತೇಜನ ಕ್ರಮಗಳನ್ನು ಕೈಗಾರಿಕಾ ನೀತಿಯಲ್ಲಿ ಅಳವಡಿಸಿಕೊಂಡಿದೆ. ಮುಂದಿನ ದಿನಗಳಲ್ಲಿ ಅಸಾಂಪ್ರದಾಯಿಕ ವಾಹನಗಳು ಜನಪ್ರಿಯವಾಗಲಿವೆ ಎಂದು ಅವರು ಹೇಳಿದರು.


ಬೆಂಗಳೂರಿಗೆ ಮೆಟ್ರೊ ನಗರ ಸ್ಥಾನದ ಪ್ರಸ್ತಾವ ಇಲ್ಲ: ಕೇಂದ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರಿಗೆ ‘ಮೆಟ್ರೊ ನಗರ’ ಸ್ಥಾನಮಾನ ನೀಡುವ ಯಾವುದೇ ಯೋಜನೆ ಮತ್ತು ಪ್ರಸ್ತಾವ ಕೇಂದ್ರ ಸರ್ಕಾರದ ಮುಂದಿಲ್ಲ ಎಂದು ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ರಾಜ್ಯಸಭೆಯಲ್ಲಿ ತಿಳಿಸಿದರು.

‘ಹೆಚ್ಚಿನ ನಗರಗಳಿಗೆ ಮೆಟ್ರೊ ನಗರಗಳ ಸ್ಥಾನಮಾನ ನೀಡುವುದು ಮತ್ತು ಆ ನಗರಗಳಿಗೆ ಮನೆ ಬಾಡಿಗೆ ಭತ್ಯೆಯ (ಎಚ್‌ಆರ್‌ಎ) ಮೇಲೆ ಹೆಚ್ಚಿನ ವಿನಾಯಿತಿ ಮಿತಿಯ ಲಾಭವನ್ನು ವಿಸ್ತರಿಸುವುದು ನೀತಿಗೆ ವಿರುದ್ಧವಾಗಿದೆ’ ಎಂದು ಅವರು ಕಾಂಗ್ರೆಸ್ ಸದಸ್ಯ ಅಜಯ್ ಮಾಕನ್ ಅವರ ಪ್ರಶ್ನೆಗೆ ಉತ್ತರಿಸಿದರು.

1962ರ ಆದಾಯ ತೆರಿಗೆ ನಿಯಮಗಳ ಪ್ರಕಾರ ಮುಂಬೈ, ಕೋಲ್ಕತ್ತ, ದೆಹಲಿ, ಚೆನ್ನೈ ನಗರಗಳನ್ನು ಮಾತ್ರ ‘ಮೆಟ್ರೊ ನಗರಗಳು’ ಎಂದು ಪರಿಗಣಿಸಲಾಗುತ್ತದೆ. ಈ ನಗರಗಳಲ್ಲಿ ವಾಸಿಸುವವರು ತೆರಿಗೆ ಆಕರಿಸಬಹುದಾದ ತಮ್ಮ ವೈಯಕ್ತಿಕ ಆದಾಯದಲ್ಲಿ ಎಚ್‌ಆರ್‌ಎ ರೂಪದಲ್ಲಿ ಗರಿಷ್ಠ ಶೇಕಡ 50ರಷ್ಟು ವಿನಾಯಿತಿಯನ್ನು ಪಡೆಯಲು ಅವಕಾಶವಿದೆ. ಬೆಂಗಳೂರು ಸೇರಿದಂತೆ ಇತರ ನಗರಗಳಿಗೆ ಆ ವಿನಾಯಿತಿ ಮಿತಿ ಶೇ 40ರಷ್ಟಿದೆ ಎಂದು ಸಚಿವರು ತಿಳಿಸಿದರು.



ಮೆಟ್ರೊ ನಗರಗಳ ವ್ಯಾಪ್ತಿಗೆ ಬೆಂಗಳೂರನ್ನೂ ಸೇರಿಸಿದರೆ, ಇಲ್ಲಿನ ಆದಾಯ ತೆರಿಗೆದಾರರು ಇತರ ಮೆಟ್ರೊ ನಗರಗಳಂತೆಯೇ ಎಚ್‌ಆರ್‌ಎ (ಶೇ 50) ವಿನಾಯಿತಿ ಪಡೆಯಲು ಸಾಧ್ಯವಾಗುತ್ತದೆ.

‘ನಾಟಕೋತ್ಸವದ ಮೂಲಕ ರಂಗಭೂಮಿಗೆ ನವಚೈತನ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೋವಿಡ್ ಬಳಿಕ ಸ್ತಬ್ಧವಾಗಿದ್ದ ರಂಗಭೂಮಿಗೆ ನವಚೈತನ್ಯ ತುಂಬಲು ನಾಟಕೋತ್ಸವ, ನಾಟಕ ರಚನಾ ಸ್ಪರ್ಧೆ ಸೇರಿ ವಿವಿಧ ವಿಶೇಷ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ’ ಎಂದು ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜ ಮೂರ್ತಿ ಅವರು ತಿಳಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ರಾಜ್ಯದ ನಾಲ್ಕು ಕಂದಾಯ ವಿಭಾಗ ಗಳಲ್ಲಿ ಮೂರು ದಿನಗಳ ನಾಟಕೋತ್ಸವಗಳನ್ನು ಆಯೋಜಿಸಲು ನಿರ್ಧರಿಸಲಾಗಿದೆ. ಇದೇ ವೇಳೆ ಆ ವಿಭಾಗಕ್ಕೆ ಬರುವ ಜಿಲ್ಲೆಗಳ ರಂಗಭೂಮಿ ಬೆಳವಣಿಗೆ ಕುರಿತಂತೆ ವಿಚಾರ ಸಂಕಿರಣ ಆಯೋಜಿಸಿ, ಕಳೆದ 50 ವರ್ಷಗಳ ರಂಗಭೂಮಿ ಇತಿಹಾಸವನ್ನು ಸುವರ್ಣ ಕರ್ನಾಟಕ ಮಹೋತ್ಸವದ ಸವಿನೆನಪಿಗಾಗಿ ದಾಖಲಿಸಲಾಗುತ್ತದೆ. ಪ್ರತಿ ಕಂದಾಯ ವಿಭಾಗಕ್ಕೆ ನಾಲ್ಕರಂತೆ 16 ಜಿಲ್ಲೆಗಳಲ್ಲಿ ಕಾಲೇಜು ರಂಗ ಶಿಬಿರಗಳನ್ನು ನಡೆಸಲಾಗುತ್ತದೆ’ ಎಂದರು.

‘ಡಿಸೆಂಬರ್ ತಿಂಗಳಲ್ಲಿ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಕಾಲೇಜು ನಾಟಕೋತ್ಸವ ಆಯೋಜಿಸಲಾಗುವುದು. ನಾಟಕ ಸ್ಪರ್ಧೆಯನ್ನೂ ಹಮ್ಮಿಕೊಳ್ಳಲಾಗುವುದು. ಪ್ರಥಮ ಬಹುಮಾನ ಪಡೆದ ತಂಡಕ್ಕೆ ₹50 ಸಾವಿರ ನಗದು ಬಹುಮಾನ ನೀಡಲಾಗುತ್ತದೆ. ಹೊಸ ನಾಟಕಗಳ ಕೊರತೆ ನೀಗಿಸಲು ನಾಟಕ ರಚನಾ ತರಬೇತಿ ಶಿಬಿರ ನಡೆಸಲಾಗುತ್ತದೆ’ ಎಂದು ತಿಳಿಸಿದರು.



ಕೆ.ವಿ. ನಾಗರಾಜ ಮೂರ್ತಿ


‘ನವದೆಹಲಿ, ಮುಂಬೈ, ಗೋವಾ ಮತ್ತು ಚೆನ್ನೈನಲ್ಲಿ ಹೊರ ರಾಜ್ಯ ನಾಟಕೋತ್ಸವವನ್ನು ಈ ವರ್ಷಾಂತ್ಯದೊಳಗೆ ಆಯೋಜಿಸಲಾಗುತ್ತದೆ. ಪ್ರತಿ ತಿಂಗಳ ಮೂರನೆ ಶನಿವಾರ ಇಲ್ಲಿನ ಮಲ್ಲತ್ತಹಳ್ಳಿಯ ಕಲಾ ಗ್ರಾಮದಲ್ಲಿರುವ ಸಾಂಸ್ಕೃತಿಕ ಸಮುಚ್ಚಯದಲ್ಲಿ ತಿಂಗಳ ನಾಟಕ ಸಂಭ್ರಮ ಕಾರ್ಯಕ್ರಮದಡಿ ಹವ್ಯಾಸಿ ರಂಗಭೂಮಿ ಮತ್ತು ವೃತ್ತಿ ರಂಗಭೂಮಿಯ ನಾಟಕಗಳ ಪ್ರದರ್ಶನ ನಡೆಸಲಾಗುತ್ತದೆ’ ಎಂದು ಹೇಳಿದರು. ಅಕಾಡೆಮಿ ರಿಜಿಸ್ಟ್ರಾರ್ ನಿರ್ಮಲಾ ಮಠಪತಿ ಹಾಗೂ ಸದಸ್ಯ ಲವ ಕುಮಾರ್ ಉಪಸ್ಥಿತರಿದ್ದರು.

ನಗರದಲ್ಲಿ ಇಂದು

‘ಹವಾಮಾನ ಬದಲಾವಣೆ-ವಿಜ್ಞಾನ, ಯೋಜನೆ ಹಾಗೂ ಹವಾಮಾನ ಕ್ರಿಯೆ’ ಕುರಿತು ವಿಚಾರಸಂಕಿರಣ: ಅತಿಥಿಗಳು: ಎಸ್. ಸೋಮನಾಥ್, ಜೆ. ಶ್ರೀನಿವಾಸನ್, ರವಿ ನಂಜುಂಡಯ್ಯ, ವಿಮಲ್ ಮಿಶ್ರಾ, ಆರ್. ಕೃಷ್ಣನ್, ಸಿ.ಪಿ. ರಾಜೇಂದ್ರನ್, ಆಯೋಜನೆ ಮತ್ತು ಸ್ಥಳ: ಏಟ್ರಿಯಾ ವಿಶ್ವವಿದ್ಯಾಲಯ ಹೆಬ್ಬಾಳ, ಬೆಳಗ್ಗೆ 8.30

ಕ್ರೀಡಾಕೂಟಕ್ಕೆ ಚಾಲನೆ: ಎಸ್.ಆರ್. ಉಮಾಶಂಕರ್, ತುಷಾರ್ ಗಿರಿನಾಥ್, ಆಯೋಜನೆ: ಬಿಬಿಎಂಪಿ, ಸ್ಥಳ: ಕಿತ್ತೂರು ರಾಣಿ ಚನ್ನಮ್ಮ ಕ್ರೀಡಾಂಗಣ, ಜಯನಗರ, ಬೆಳಿಗ್ಗೆ 9.45

ಬುಕ್ ಬ್ರಹ್ಮ ಸಾಹಿತ್ಯ ಉತ್ಸವ–2024: ಬೆಳಿಗ್ಗೆ 10ಕ್ಕೆ ‘ತೆಂಕಣ ನುಡಿ ಕೌದಿ’ ಉದ್ಘಾಟನೆ: ಎಚ್.ಎಸ್. ಶಿವಪ್ರಕಾಶ್, ಬಿ. ಜಯಮೋಹನ್, ವೋಲ್ಗಾ, ವಿವೇಕ್ ಶಾನಭಾಗ್, ಕೆ.ಸಚ್ಚಿದಾನಂದನ್, ಮಧ್ಯಾಹ್ನ 2ಕ್ಕೆ ‘ಕಾವ್ಯಾಭಿನಯ’: ಮಾನಸಿ ಸುಧೀರ್, ಸಂಜೆ 6.30ಕ್ಕೆ ‘ಕನ್ನಡ ಕಾವ್ಯ ಕಣಜ’ ನಾಟಕ ಪ್ರದರ್ಶನ: ನಿರ್ದೇಶನ: ಶ್ರೀಪಾದ್ ಭಟ್, ಆಯೋಜನೆ: ಬುಕ್‌ಬ್ರಹ್ಮ ಸಂಸ್ಥೆ, ಸ್ಥಳ: ಸೇಂಟ್ ಜಾನ್ಸ್ ಸಭಾಂಗಣ, ಕೋರಮಂಗಲ



ಎಚ್.ಎಸ್. ಶಿವಪ್ರಕಾಶ್

ಗಂಗಮ್ಮ ದೇವಿ ಜಾತ್ರೆ, ನಾಗರ ಪಂಚಮಿಯ 42ನೇ ವಾರ್ಷಿಕೋತ್ಸವ ಮತ್ತು ಮಹಾಮಂಗಳಾರತಿ: ಆಯೋಜನೆ ಮತ್ತು ಸ್ಥಳ: ಪಾತಾಳ ಪಂಚನಾಗೇಂದ್ರಸ್ವಾಮಿ ಮತ್ತು ಗಂಗಮ್ಮ ದೇವಸ್ಥಾನ, ಮೈಕೋ ಲೇಔಟ್, ಕುರುಬರಹಳ್ಳಿ ಮಹಾಲಕ್ಷ್ಮಿಪುರಂ, ಮಧ್ಯಾಹ್ನ 12

ಪುಸ್ತಕ ಹಾಗೂ ಆಲ್ಬಮ್ ಬಿಡುಗಡೆ: ಉದ್ಘಾಟನೆ: ಮಾರ್ಗರೇಟ್ ಆಳ್ವ, ಅತಿಥಿಗಳು: ಎಚ್.ಕೆ. ಪಾಟೀಲ, ಲಕ್ಷ್ಮೀ ಹೆಬ್ಬಾಳ್ಕರ, ಶಿವರಾಜ್ ತಂಗಡಗಿ, ಬಿ.ಸಿ. ಚಂದ್ರಶೇಖರ್, ಉಷಾ ಕೋಕಿಲ, ‘ತಲ್ಕಿ’ ನಾಟಕ ಪ್ರದರ್ಶನ: ನಿರ್ದೇಶನ: ಶ್ರೀಜಿತ್ ಸುಂದರಂ, ಆಯೋಜನೆ: ಸಾಮಾಜಿಕ ನ್ಯಾಯಕ್ಕಾಗಿ ಲಿಂಗತ್ವ ಮತ್ತು ಲೈಂಗಿಕತೆ ಅಲ್ಪ ಸಂಖ್ಯಾತರ ಮೈತ್ರಿಕೂಟ, ಸ್ಥಳ: ಸೇಂಟ್ ಜೋಸೆಫ್ ಸಂಜೆ ಕಾಲೇಜಿನ ಸಭಾಂಗಣ, ಮ್ಯೂಸಿಯಂ ರಸ್ತೆ, ಮಧ್ಯಾಹ್ನ 2

‘ರಂಗಪ್ರವೇಶದ ಝಲ್ಲರಿ’: ಪ್ರಸ್ತುತಿ: ನಿರೂಪ ಆರ್. ರಾವ್, ಅತಿಥಿಗಳು: ಎಂ. ಸೂರ್ಯಪ್ರಸಾದ್, ಮಹಾಬಲಮೂರ್ತಿ ಕೊಡ್ಲಕೆರೆ, ಸೀತಾ, ರುಕ್ಮಾಂಗದ ನಾಯ್ಡು, ಆಯೋಜನೆ: ನೃತ್ಯ ಸಂಜೀವಿನಿ ಅಕಾಡೆಮಿ, ಸ್ಥಳ: ಎಡಿಎ ರಂಗಮಂದಿರ, ಜೆ.ಸಿ.ರಸ್ತೆ, ಸಂಜೆ 4

ಉಮಂಗ್–2024: ಅತಿಥಿಗಳು: ರಾಜೇಂದ್ರ ಗೆಹಲೋತ್, ಮಹೇಂದರ್ ಮುನ್ನೊತ್, ಆಯೋಜನೆ: ಮಹಾವೀರ ಅಂತರರಾಷ್ಟ್ರೀಯ ಕೇಂದ್ರ, ಸ್ಥಳ: ಪುರಭವನ, ಜೆ.ಸಿ.ರಸ್ತೆ, ಸಂಜೆ 4

ಗ್ರಂಥಾಲಯ ಪಿತಾಮಹ ಡಾ.ಎಸ್.ಆರ್. ರಂಗನಾಥನ್ ಅವರ ಜನ್ಮ ದಿನಾಚರಣೆ, ಹಿರಿಯ ಸಾಧಕರಿಗೆ ಅಭಿನಂದನಾ ಸಮಾರಂಭ: ಅತಿಥಿಗಳು: ವಿ.ಜಿ. ತಳವಾರ, ರಾಜಪ್ಪ ದಳವಾಯಿ, ಅಧ್ಯಕ್ಷತೆ: ಎಂ. ಕೃಷ್ಣಮೂರ್ತಿ, ಅಭಿನಂದಿತರು: ಸದಾಶಿವಮೂರ್ತಿ ಪಿ., ಎ.ವೈ. ಅಸುಂಡಿ, ಮಲ್ಲೇಶಪ್ಪ ಟಿ., ಚಿಕ್ಕಮಲ್ಲಯ್ಯ, ಆಯೋಜನೆ: ಕರ್ನಾಟಕ ರಾಜ್ಯ ಗ್ರಂಥಾಲಯ ಸಂಘ, ಸ್ಥಳ: ಗ್ರಂಥಾಂಗಣ ನಗರ ಕೇಂದ್ರ ಗ್ರಂಥಾಲಯ, ಹಂಪಿನಗರ, ವಿಜಯನಗರ, ಸಂಜೆ 4.15



‘ಪೊಲೀಸ್ ಕಲಾ ಸಂಗಮ ಹಾಗೂ ಆರಕ್ಷಕ ಕಲಾರತ್ನ ಪ್ರಶಸ್ತಿ’ ಪ್ರದಾನ: ಉದ್ಘಾಟನೆ: ಹಂಸಲೇಖ, ಅಧ್ಯಕ್ಷತೆ: ಪಿ. ಹರಿಶೇಖರನ್, ಅತಿಥಿಗಳು: ಹಮ್ಮಾಹುಸೇನ್, ಅತಿಥಿಗಳು: ಉಮಾರಾಣಿ, ಶ್ರೀಶೈಲ್ ಎಸ್. ಮೇಟಿ, ಕೆ. ವಿಶ್ವನಾಥ, ಭೈರ, ಜ್ಯೋತಿರ್ಲಿಂಗ ಹೊನಕಟ್ಟಿ, ಎನ್.ಎಂ. ಬಿರಾದಾರ, ವೀರಕಪುತ್ರ ಶ್ರೀನಿವಾಸ್, ಕೆ.ವೆಂಕಟೇಶ್, ಆಯೋಜನೆ: ನಬಿರೋಶನ್ ಪ್ರಕಾಶನ, ಸ್ಥಳ: ಕೆ.ಎಸ್.ಆರ್.ಪಿ 4ನೇ ಬೆಟಾಲಿಯನ್, ಕೋರಮಂಗಲ, ಬೆಳಗ್ಗೆ 11

‘ಕಾಯ’ ನಾಟಕ ಪ್ರದರ್ಶನ

ನಿರ್ದೇಶನ: ವೀಣಾ ಬಸವರಾಜು, ಸಂಗೀತ: ಮುರಳಿ ಮನೋಹರಗೌಡ, ಸಹ ಸಂಯೋಜನೆ ಹಾಗೂ ಅಭಿನಯ: ಲಕ್ಷ್ಮೀ ಚಂದ್ರಶೇಖರ್, ದೀಪ್ತಿ ನಾಗೇಂದ್ರ, ಪ್ರಿಯಾಂಕ ರಾವ್, ಅನಘಾ ಕಶ್ಯಪ್, ಶ್ರೀಪ್ರಿಯಾ, ಆಯೋಜನೆ: ಕ್ರಿಯೇಟಿವ್ ಥಿಯೇಟರ್, ಸ್ಥಳ: ರಂಗಶಂಕರ, ಜೆ.ಪಿ.ನಗರ, ಸಂಜೆ 7.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ)ಕಳುಹಿಸಿ.
nagaradalli_indu@prajavani.co.in

ಕಲಾ ದ್ವಾರಕ ಉತ್ಸವ: ಅತಿಥಿಗಳು: ಸುಭಾಷ್ ಭರಣಿ, ಧರಣಿದೇವಿ ಮಾಲಗತ್ತಿ, ಎಸ್.ಜಿ. ಸುಶೀಲಮ್ಮ, ಬಲ್ವಂತ್ ರಾವ್ ಪಾಟೀಲ್, ಅನುರಾಧ ಡಿ., ಸಿ.ಎ. ಸತೀಶ್, ಅನುಪಮಾ ಸಂತೋಷ್, ಆಯೋಜನೆ: ಸರಸ್ವತಿ ನೃತ್ಯಾಲಯ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5

ಲಾಲ್‌ಬಾಗ್ ಫಲಪುಷ್ಪ ಪ್ರದರ್ಶನಕ್ಕೆ ಸಿದ್ದರಾಮಯ್ಯ ಚಾಲನೆ

ಹೂರಾಶಿಯಲ್ಲಿ ಅಂಬೇಡ್ಕರ್ ನೆನಪಿನ ಚಿತ್ತಾರ





ಲಾಲ್‌ಬಾಗ್‌ನ ಫಲಪುಷ್ಪ ಪ್ರದರ್ಶನದಲ್ಲಿ ನಾಗರಿಕರು ಸೆಲ್ಫಿ ಕ್ಲಿಕ್ಕಿಸಿಕೊಂಡರು (ಎಡಚಿತ್ರ) ಗಮನ ಸೆಳೆದ ಡಾ.ಬಿ.ಆರ್ ಅಂಬೇಡ್ಕರ್ ಜ್ಞಾನ ವೃಕ್ಷ —ಪ್ರಜಾವಾಣಿ ಚಿತ್ರಗಳು/ಪ್ರಶಾಂತ್ ಎಚ್‌.ಜಿ.

ಲಾಲ್‌ಬಾಗ್ ಫಲಪುಷ್ಪ ಪ್ರದರ್ಶನ ವೀಕ್ಷಣೆಗೆ 12 ಲಕ್ಷ ಜನರು ಬರುವ ನಿರೀಕ್ಷೆ ಇದೆ. ದೇಶದ ವಿವಿಧ ರಾಜ್ಯಗಳಿಂದ ವಿವಿಧ ತಳಿಗಳ ಸುಮಾರು 30 ಲಕ್ಷ ಹೂವುಗಳನ್ನು ಫಲಪುಷ್ಪ ಪ್ರದರ್ಶನಕ್ಕೆ ಬಳಸಲಾಗಿದೆ
ಸಿದ್ದರಾಮಯ್ಯ, ಮುಖ್ಯಮಂತ್ರಿ

ಪ್ರಜಾವಾಣಿ ಚಿತ್ರ

ಬೆಂಗಳೂರು: ಬಣ್ಣ ಬಣ್ಣದ ಹೂಗಳಲ್ಲಿ ಅರಳಿದ ಸಂಸತ್ ಭವನ, ಅದರ ಮೇಲೆ ರಾಷ್ಟ್ರ ಲಾಂಛನ, ನೂರಾರು ಪುಷ್ಪಗಳ ಮಧ್ಯ ಡಾ.ಬಿ.ಆರ್. ಅಂಬೇಡ್ಕರ್ ಅವರ ಪ್ರತಿಮೆ ನೋಡಗರ ಕಣ್ಮನ ಸೆಳೆಯುತ್ತಿದೆ.

ಇವು ಲಾಲ್‌ಬಾಗ್‌ನ ಗಾಜಿನ ಮನೆಯಲ್ಲಿ ಕಂಡುಬರುವ ದೃಶ್ಯಗಳು...

ತೋಟಗಾರಿಕೆ ಇಲಾಖೆಯಿಂದ ಲಾಲ್‌ಬಾಗ್‌ನಲ್ಲಿ ಸ್ವಾತಂತ್ರ್ಯೋತ್ಸವ ಅಂಗವಾಗಿ ಹಮ್ಮಿಕೊಂಡಿರುವ 'ವಿಶ್ವಜ್ಞಾನಿ, ಸಂವಿಧಾನ ಶಿಲ್ಪಿ ಭಾರತರತ್ನ ಡಾ.ಬಿ. ಆರ್. ಅಂಬೇಡ್ಕರ್' ವಿಷಯ ಆಧಾರಿತ 216ನೇ ಫಲಪುಷ್ಪ ಪ್ರದರ್ಶನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗುರುವಾರ ಚಾಲನೆ ನೀಡಿದರು.

3.6 ಲಕ್ಷ ಗುಲಾಬಿ ಹಾಗೂ 2.4 ಲಕ್ಷ ಸೇವಂತಿಗೆ ಹೂಗಳನ್ನು ಬಳಸಿ ಗಾಜಿನ ಮನೆಯ ಕೇಂದ್ರ ಭಾಗದಲ್ಲಿ ಸಂಸತ್ ಭವನದ ಪ್ರತಿಕೃತಿಯನ್ನು ಅನಾವರಣಗೊಳಿಸಲಾಗಿದೆ. ಗಾಜಿನ ಮನೆಯ ಬಲಭಾಗದಲ್ಲಿ ಶ್ವೇತ ವರ್ಣದ ಡಚ್ ಗುಲಾಬಿ, ನೇರಳೆ, ಶ್ವೇತ ಮತ್ತು ಕಂದು ಬಣ್ಣದ ಹೂಗಳನ್ನು ಬಳಸಿ ನಿರ್ಮಿಸಿರುವ ಮಧ್ಯಪ್ರದೇಶದ ಮಾಹೋನಲ್ಲಿರುವ ಡಾ.ಬಿ. ಆರ್. ಅಂಬೇಡ್ಕರ್ ಅವರ ಜನ್ಮಸ್ಥಳದ ಸ್ಮಾರಕದ ಮಾದರಿ ಕಂಗೊಳಿಸುತ್ತಿದೆ. ಅದರ ಮುಂಭಾಗದಲ್ಲಿ ಅಂಬೇಡ್ಕರ್ ಅವರ ಕುಳಿತಿರುವ ಭಂಗಿಯ ಪ್ರತಿಮೆ ವೀಕ್ಷಣೆಗೆ ಬರುವವರ ಗಮನ ಸೆಳೆಯುವಂತಿದೆ.



ಅಂಬೇಡ್ಕರ್ ಅವರ ಚೈತ್ಯಭೂಮಿ ಸ್ಮಾರಕ ಸ್ತೂಪದ ಮಾದರಿಯನ್ನು ಗಾಜಿನ ಮನೆ ಕೇಂದ್ರ ಭಾಗದ ಹಿಂಭಾಗದಲ್ಲಿ ರಚಿಸಲಾಗಿದೆ. ಅಂಬೇಡ್ಕರ್ ಅವರ ವ್ಯಕ್ತಿತ್ವ ಮತ್ತು ಸಾಧನೆಗಳನ್ನು ಬಿಂಬಿಸುವ ಮಹಾಡ್ ಸತ್ಯಾಗ್ರಹ, ಕಲಾ ರಾಮ್ ದೇವಸ್ಥಾನದ ಪ್ರವೇಶ, ಕೋರೆಗಾಂವ್ ವಿಜಯೋತ್ಸವದ ಸ್ತಂಭದ ಮಾಹಿತಿಯುಳ್ಳ ಕಲಾಕೃತಿಗಳು, ಅಂಬೇಡ್ಕರ್ ಅವರ ತಂದೆ ಸತ್ಪಾಲ್ ರಾಮ್‌ಜಿ, ತಾಯಿ ಭೀಮಾಬಾಯಿ, ಸಾವಿತ್ರಿಬಾಯಿ ಫುಲೆ, ಜ್ಯೋತಿಬಾ ಫುಲೆ ಪ್ರತಿಮೆಗಳು ನೋಡುಗರನ್ನು ಆಕರ್ಷಿಸುತ್ತಿವೆ. ಅಂಬೇಡ್ಕರ್ ಅವರ ಜೀವನ, ಸಾಧನೆ ಮತ್ತು ಹೋರಾಟಗಳು, ಸಂದೇಶ ಮತ್ತು ವಿಚಾರಧಾರೆಗಳನ್ನು ಪುಷ್ಪಗಳಲ್ಲಿ ಪ್ರಸ್ತುತಪಡಿಸಲಾಗಿದೆ.

ಗಮನ ಸೆಳೆವ ಅಂಬೇಡ್ಕರ್ ಜ್ಞಾನ ವೃಕ್ಷ: ಗಾಜಿನ ಮನೆಯ ಕೇಂದ್ರ ಭಾಗದ ಹಿಂಭಾಗದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅವರು ಯಾವೆಲ್ಲ ವಿಷಯಗಳಲ್ಲಿ ಜ್ಞಾನ ಪಡೆದಿದ್ದರು? ಯಾವ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ್ದರು? ಎಂಬ ಮಾಹಿತಿಯುಳ್ಳ ಜ್ಞಾನ ವೃಕ್ಷವು ಸಂದರ್ಶಕರ ಗಮನ ಸೆಳೆಯುತ್ತಿದೆ. ಪ್ರದರ್ಶನ ವೀಕ್ಷಣೆಗೆ ಬಂದಿದ್ದ ಬಹುತೇಕರು ಜ್ಞಾನವೃಕ್ಷದ ಮುಂಭಾಗದಲ್ಲಿ ನಿಂತುಕೊಂಡು ಸೆಲ್ಫಿ ಕ್ಲಿಕ್ಕಿಸಿಕೊಳ್ಳುತ್ತಿದ್ದರು.

ಬೆಳಿಗ್ಗೆಯಿಂದಲೇ ಸಾರ್ವಜನಿಕರು ತಂಡೋಪತಂಡವಾಗಿ ಲಾಲ್‌ಬಾಗ್ ನತ್ತ ಬರುತ್ತಿದ್ದರು. ಕೆಲವರು 'ಜೈ ಭೀಮ್' ಘೋಷಣೆಗಳನ್ನು ಕೂಗಿ ಹರ್ಷ ವ್ಯಕ್ತಪಡಿಸಿದರು.

ಮುಖ್ಯಾಂಶಗಳು

- ಗಮನ ಸೆಳೆದ ಗೌತಮ ಬುದ್ಧ, ಸಂತ ಕಬೀರರ ಪ್ರತಿಮೆ
- ಫಲಪುಷ್ಪ ಪ್ರದರ್ಶನಕ್ಕೆ 30 ಲಕ್ಷ ಪುಷ್ಪಗಳ ಬಳಕೆ
- ಆಗಸ್ಟ್ 8ರಿಂದ 19ರವರೆಗೆ ಫಲಪುಷ್ಪ ಪ್ರದರ್ಶನ

ಜನರು ಏನಂತಾರೆ?



ಅಂಬೇಡ್ಕರ್ ಅವರ ಜೀವನದ ಸಂಪೂರ್ಣ ಮಾಹಿತಿಯನ್ನು ಪುಷ್ಪಗಳಲ್ಲಿ ಅನಾವರಣಗೊಳಿಸಲಾಗಿದೆ. ಪ್ರತಿಯೊಬ್ಬರೂ ಪ್ರದರ್ಶನಕ್ಕೆ ಭೇಟಿ ನೀಡಿ ಅಂಬೇಡ್ಕರ್ ಅವರ ಕುರಿತು ಹೆಚ್ಚಿನ ಮಾಹಿತಿ ಪಡೆದುಕೊಳ್ಳಬಹುದು
ಸುಶ್ಮಾ



ಬಾಬಾಸಾಹೇಬ್ ಅಂಬೇಡ್ಕರ್ ಅವರ ವಂಶವೃಕ್ಷ ಸೇರಿದಂತೆ ಅವರ ಕುಟುಂಬದ ಸಂಪೂರ್ಣ ಮಾಹಿತಿಯನ್ನು ಪ್ರದರ್ಶನದಲ್ಲಿ ಅನಾವರಣ ಮಾಡಲಾಗಿದೆ
ಮಹಾಲಕ್ಷ್ಮಿ, ವಿದ್ಯಾರ್ಥಿನಿ



ಅಂಬೇಡ್ಕರ್ ಅವರು ಸಂವಿಧಾನ ಬರೆದಿರುವುದು, ಕಾನೂನು ಮಂತ್ರಿಗಳಾಗಿದ್ದ ಕುರಿತು ಮಾತ್ರ ಪುಸ್ತಕಗಳಲ್ಲಿ ಓದಿದ್ದೆವು. ಆದರೆ, ಅವರ ಹೋರಾಟದ ಬದುಕು, ಸಾಧನೆಗಳನ್ನು ಫಲಪುಷ್ಪಗಳಲ್ಲಿ ಚಿತ್ರಿಸಲಾಗಿದೆ
ಶ್ರಾವಣಿ ಮಹೇಂದ್ರ, ವಿದ್ಯಾರ್ಥಿನಿ



ಅಂಬೇಡ್ಕರ್ ದೇಶಕ್ಕೆ ನೀಡಿದ ಕೊಡುಗೆ, ಹೋರಾಟಗಳನ್ನು ಪ್ರದರ್ಶನದಲ್ಲಿ ಪ್ರಸ್ತುತಪಡಿಸಲಾಗಿದೆ. ಸಂವಿಧಾನ ಬುಡಮೇಲು ಮಾಡಲು ಯತ್ನಿಸುವ ಈ ಸಂದರ್ಭದಲ್ಲಿ ಇಲ್ಲಿನ ಪ್ರದರ್ಶನ ಹೆಚ್ಚು ಪ್ರಸ್ತುತವಾಗಿದೆ
ಮಾವಳ್ಳಿ ಶಂಕರ್, ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ರಾಜ್ಯ ಸಂಚಾಲಕ


'ಅಂಬೇಡ್ಕರ್ ಎಂದೆಂದಿಗೂ ಪ್ರಸ್ತುತ'

'ಡಾ.ಬಿ.ಆರ್. ಅಂಬೇಡ್ಕರ್ ಅವರು ಎಂದೆಂದಿಗೂ ಪ್ರಸ್ತುತ. ಜನರು ಸಂವಿಧಾನದ ಆಶಯಗಳನ್ನು ತಿಳಿದುಕೊಳ್ಳಲು ಲಾಲ್‌ಬಾಗ್ ಫಲಪುಷ್ಪ ಪ್ರದರ್ಶನ ಉತ್ತಮ ಅವಕಾಶ ಕಲ್ಪಿಸಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

'ಅಂಬೇಡ್ಕರ್ ಅವರು ಎಲ್ಲ ಜಾತಿ, ಧರ್ಮ, ಭಾಷೆ, ಪ್ರದೇಶಗಳಿಗೆ ಸೇರಿದ ಜನರಿಗೂ ಸಮಾನ ಅವಕಾಶಗಳು ದೊರೆಯಬೇಕು. ಜನರಿಗೆ ಆರ್ಥಿಕ, ಸಾಮಾಜಿಕ ಸ್ವಾತಂತ್ರ್ಯ ದೊರೆತರೆ ರಾಜಕೀಯ ಸ್ವಾತಂತ್ರ್ಯ ಪಡೆಯಲು ಸಾಧ್ಯ ಎಂಬುದರಲ್ಲಿ ನಂಬಿಕೆ ಇಟ್ಟಿದ್ದರು' ಎಂದರು.

'ಅಂಬೇಡ್ಕರ್ ಅವರ ಜೀವನಸಾಧನೆ, ದೇಶಕ್ಕೆ ನೀಡಿದ ಕೊಡುಗೆ, ಸಾಮಾಜಿಕ ನ್ಯಾಯಕ್ಕಾಗಿ ಹೋರಾಟ, ಬೌದ್ಧ ಧರ್ಮ ಸ್ವೀಕಾರ, ಸಂವಿಧಾನ ರಚನಾ ಸಮಿತಿಯಲ್ಲಿ ಮಹತ್ವದ ಪಾತ್ರ ವಹಿಸಿದ್ದುದು, ಸಂವಿಧಾನದ ಆಶಯಗಳು, ಪ್ರಜಾಪ್ರಭುತ್ವ ವ್ಯವಸ್ಥೆ ಸೇರಿದಂತೆ ಹಲವು ಪ್ರಮುಖ ವಿಷಯಗಳನ್ನು ಆಧರಿಸಿದ ಫಲಪುಷ್ಪ ಪ್ರದರ್ಶವನ್ನು ಏರ್ಪಡಿಸಲಾಗಿದೆ ಎಂದು ತಿಳಿಸಿದರು.

ಡಾ.ಬಿ.ಆರ್. ಅಂಬೇಡ್ಕರ್ ಮೊಮ್ಮಗ ಯಶವಂತ್ ಭೀಮರಾವ್ ಅಂಬೇಡ್ಕರ್, ಸಚಿವರಾದ ಜಮೀರ ಅಹಮದ್ ಖಾನ್, ರಾಮಲಿಂಗಾರೆಡ್ಡಿ, ಎಸ್.ಎಸ್. ಮಲ್ಲಿಕಾರ್ಜುನ್, ಶಾಸಕ ಉದಯ್ ಬಿ. ಗರುಡಾಚಾರ್ ಭಾಗವಹಿಸಿದ್ದರು.



ಭಾರತದ ಶೂರ ಮತ್ತು ಧೈರ್ಯಶಾಲಿ ಕುಸ್ತಿಪಟು ಪಂದ್ಯಕ್ಕೆ ವಿದಾಯ ಹೇಳಲಿದ್ದಾಳೆ!

ಅಂತರರಾಷ್ಟ್ರೀಯ ಸಮ್ಮೇಳನಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಆರ್.ವಿ. ವಿಶ್ವವಿದ್ಯಾಲಯದಲ್ಲಿ ಆಯೋಜಿಸಿರುವ 'ಗ್ಲೋಬಲ್ ಕ್ರಿಮಿನಾಲಜಿ ಅಂಡ್ ವಿಕ್ಟಿಮಾಲಜಿ (ಐಸಿಜಿಸಿವಿ) 2024' ನಾಲ್ಕು ದಿನಗಳ ಅಂತರರಾಷ್ಟ್ರೀಯ ಸಮಾವೇಶಕ್ಕೆ ಗುರುವಾರ ಚಾಲನೆ ನೀಡಲಾಯಿತು.

ಈಸ್ಟ್ ಲಂಡನ್ ವಿಶ್ವವಿದ್ಯಾಲಯ ಮತ್ತು ಬ್ರಿಟಿಷ್ ಸೊಸೈಟಿ ಆಫ್ ಕ್ರಿಮಿನಾಲಜಿಯ ಕ್ರಿಟಿಕಲ್ ಕ್ರಿಮಿನಾಲಜಿ ನೆಟ್‌ವರ್ಕ್ ಸಹಯೋಗದಲ್ಲಿ ಆಯೋಜಿಸಿರುವ ಸಮಾವೇಶದಲ್ಲಿ ಅಪರಾಧ ಮತ್ತು ನ್ಯಾಯ ವ್ಯವಸ್ಥೆಗಳ ವಿವಿಧ ಮುಖಗಳ ಕುರಿತು ಸಂವಾದ ನಡೆಸಲಾಗುತ್ತದೆ. ತಜ್ಞರು ವಿಷಯ ಮಂಡಿಸಲಿದ್ದಾರೆ.

ವಿಷಯ ಪರಿಣತರು, ಶಿಕ್ಷಣ ತಜ್ಞರು, ಸಂಶೋಧಕರು ಭಾಗವಹಿಸುವರು. ಹಲವು ವಿಷಯಗಳ ಕುರಿತು ವಿಚಾರ ಗೋಷ್ಠಿ ಹಾಗೂ ಸಂವಾದ ನಡೆಯಲಿದೆ.

ವಿಶ್ವವಿದ್ಯಾಲಯ ಡೀನ್ ಪ್ರೊ. ವೈ.ಎಸ್.ಆರ್. ಮೂರ್ತಿ, ಸಹಾಯಕ ಪ್ರಾಧ್ಯಾಪಕ ಡಾ.ಭಾನು ಪ್ರಕಾಶ್ ನುನ್ನಾ, ಗುಜರಾತ್‌ನ ಮಾಜಿ ಪೊಲೀಸ್ ಮಹಾನಿರ್ದೇಶಕ ಕೇಶವ್ ಕುಮಾರ್ ಮಾತನಾಡಿದರು.



ಆರ್‌.ವಿ. ವಿವಿಯಲ್ಲಿ ಆಯೋಜಿಸಿದ್ದ ಸಮಾವೇಶದಲ್ಲಿ ಡಾ.ಭಾನುಪ್ರಕಾಶ್, ಪ್ರೊ. ವೈ.ಎಸ್‌ಆರ್‌ಮೂರ್ತಿ, ಕೇಶವ ಕುಮಾರ್, ಪ್ರೊ. ಚಾಂಕಗ್ಲಿಮ್ ಪಾಲ್ಗೊಂಡಿದ್ದರು

ಕನ್ನಡ ರಥಕ್ಕೆ ಅದ್ದೂರಿ ಸ್ವಾಗತ



ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ನಾಗಸಂದ್ರ ಮೆಟ್ರೊ ನಿಲ್ದಾಣ ಬಳಿ ಕನ್ನಡ ರಥಕ್ಕೆ ಸ್ವಾಗತ ಕೋರಲಾಯಿತು.

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: 'ಹೆಸರಾಯಿತು ಕರ್ನಾಟಕ ಸುವರ್ಣ ಸಂಭ್ರಮ 50' ಅಭಿಯಾನದ ಅಂಗವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಯೋಜಿಸಿರುವ ಕನ್ನಡ ರಥಕ್ಕೆ ನಗರದಲ್ಲಿ ಅದ್ದೂರಿ ಸ್ವಾಗತ ಕೋರಲಾಯಿತು.

ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ನಾಗಸಂದ್ರ ಮೆಟ್ರೊ ನಿಲ್ದಾಣದ ಬಳಿ ಕನ್ನಡ ರಥದಲ್ಲಿನ ಭುವನೇಶ್ವರಿ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಸ್ವಾಗತಿಸಲಾಯಿತು. ವಿಜಯಶ್ರೀ ಪಬ್ಲಿಕ್ ಶಾಲೆ, ವಿಐಪಿ ಗಾರ್ಡನ್ ಮಾರ್ವೆಲ್ ಶಾಲೆ, ಇಂಡಿಯನ್ ಪಬ್ಲಿಕ್ ಶಾಲೆಗಳ ಮಕ್ಕಳು ಮತ್ತು ಶಿಕ್ಷಕರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ಇಲಾಖೆಯ ಸಹಾಯಕ ನಿರ್ದೇಶಕ ಆರ್.ಚಂದ್ರಶೇಖರ್, ಬೆಂಗಳೂರು ಉತ್ತರ ತಾಲ್ಲೂಕು ತಹಶೀಲ್ದಾರ್ ವಿಜಯ್ ಕುಮಾರ್, ಜಾನಪದ ವಿದ್ವಾಂಸ ಟಿ.ಗೋವಿಂದರಾಜು ಹಾಗೂ ಸಿಬ್ಬಂದಿಗೆ ವಸ್ತ್ರ ಮತ್ತು ಪುಸ್ತಕಗಳನ್ನು ನೀಡಿ ಗೌರವಿಸಲಾಯಿತು.

ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಎಂ.ಪ್ರಕಾಶಮೂರ್ತಿ, ವಿವಿಧ ಘಟಕಗಳ ಅಧ್ಯಕ್ಷರಾದ ಕಾಳೇನಹಳ್ಳಿ ಲಿಂಗರಾಜು, ಎಂ.ನಾಗೇಶ್, ಆದೂರು ಪ್ರಕಾಶ್, ವರ್ಧಮಾನ ಕಳಸೂರು, ಗೌಡಗೆರೆ ಮಾಯುಶ್ರೀ, ಹನುಮಂತ ಪಿ ಶೆಟ್ಟಿ ಹಾಗೂ ಪದಾಧಿಕಾರಿಗಳಾದ ಭೀಮ್ ಜಿ, ಗೋವಿಂದರಾಜು ಪಟೇಲ್, ಶಿವಲಿಂಗಯ್ಯ , ಖಾದ್ರಿ ನರಸಿಂಹಯ್ಯ ಹಾಗೂ ಸಾಹಿತಿ ವೈ.ಬಿ. ಎಚ್.ಜಯದೇವ್, ಸಾಮಾಜಿಕ ಕಾರ್ಯಕರ್ತ ರಾಜೇಂದ್ರ ಕೊಣ್ಣೂರ್, ಕಲಾವಿದ ಉಪಾದ್ರಿ ನರಸಿಂಹಮೂರ್ತಿ ಪಾಲ್ಗೊಂಡಿದ್ದರು.

₹3,200 ಕೋಟಿ ಹೂಡಿಕೆಗೆ ಪ್ರಸ್ತಾವ: ಮೋಹನ್‌ಯಾದವ್

ಉದ್ಯಮಿಗಳೊಂದಿಗೆ ಮಧ್ಯಪ್ರದೇಶದ ಸಿ.ಎಂ ಸಮಾಲೋಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎರಡು ದಿನದ ಬೆಂಗಳೂರು ಭೇಟಿಯಲ್ಲಿ ₹3,200 ಕೋಟಿ ಹೂಡಿಕೆಯ ಪ್ರಸ್ತಾವ ಸ್ವೀಕರಿಸಲಾಗಿದೆ. ಇದರಿಂದ ಮಧ್ಯಪ್ರದೇಶದಲ್ಲಿ 7 ಸಾವಿರಕ್ಕೂ ಹೆಚ್ಚು ಉದ್ಯೋಗಾವಕಾಶಗಳು ಸೃಷ್ಟಿಯಾಗಲಿವೆ' ಎಂದು ಮಧ್ಯಪ್ರದೇಶದ ಮುಖ್ಯಮಂತ್ರಿ ಮೋಹನ್ ಯಾದವ್ ತಿಳಿಸಿದರು.

ನಗರದಲ್ಲಿ ಗುರುವಾರ ಹಮ್ಮಿಕೊಂಡಿದ್ದ 'ಮಧ್ಯಪ್ರದೇಶದಲ್ಲಿ ಹೂಡಿಕೆಗೆ ಅವಕಾಶಗಳು' ಕುರಿತ ಸಮಾವೇಶದಲ್ಲಿ ಅವರು ಮಾತನಾಡಿದರು.

'ಭೋಪಾಲ್‌ನಲ್ಲಿ 2025ರ ಫೆಬ್ರುವರಿ 7 ಮತ್ತು 8ರಂದು ಜಾಗತಿಕ ಹೂಡಿಕೆದಾರರ ಶೃಂಗಸಭೆ ಆಯೋಜಿಸಲಾಗಿದೆ. ಮಧ್ಯಪ್ರದೇಶದಲ್ಲಿ ಸ್ಟಾರ್ಟ್‌ಅಪ್ ಹಬ್ ಮತ್ತು ಸೆಂಟರ್ ಆಫ್ ಎಕ್ಸಲೆನ್ಸ್ (ಶ್ರೇಷ್ಠತಾ ಕೇಂದ್ರ) ಸ್ಥಾಪಿಸಲು ಗೂಗಲ್ ಕ್ಲೌಡ್ ಪ್ರಸ್ತಾವ ಸಲ್ಲಿಸಿದೆ' ಎಂದರು.

ಬುಧವಾರ ಹಿಂದುಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್‌ಗೆ ಭೇಟಿ ನೀಡಲಾಗಿತ್ತು. ಎಚ್‌ಎಎಲ್ ಕೇಂದ್ರವನ್ನು ನಮ್ಮ ರಾಜ್ಯದಲ್ಲಿಯೂ ಸ್ಥಾಪಿಸುವ ಕುರಿತು ಚರ್ಚಿಸಲಾಗಿದ್ದು, ಸಕಾರಾತ್ಮಕ ಫಲಿತಾಂಶ ಬರುವ ನಿರೀಕ್ಷೆಯಿದೆ ಎಂದು ಹೇಳಿದರು.

ರಾಜ್ಯಗಳು ಅಭಿವೃದ್ಧಿಯಾದರೆ ಮಾತ್ರ ದೇಶದ ಸರ್ವಾಂಗೀಣ ಪ್ರಗತಿ ಸಾಧ್ಯ. ಆದ್ದರಿಂದ ಹೂಡಿಕೆದಾರರು ಮಧ್ಯಪ್ರದೇಶದಲ್ಲಿ ಹೂಡಿಕೆಗೆ ಮುಂದಾಗಬೇಕು. ಇದಕ್ಕೆ ಅಗತ್ಯವಿರುವ ಎಲ್ಲಾ ಸವಲತ್ತು ಒದಗಿಸಲಾಗುವುದು ಎಂದು ತಿಳಿಸಿದರು.

ಪ್ರವಾಸೋದ್ಯಮ, ಎಂಎಸ್‌ಎಂಇ, ತಂತ್ರಜ್ಞಾನ ಸೇರಿ ಇತರೆ ವಲಯಗಳಲ್ಲಿ ಹೂಡಿಕೆಗೆ ಅವಕಾಶಗಳಿವೆ. ಹೂಡಿಕೆದಾರರಿಗೆ ಅನುಕೂಲ ಕಲ್ಪಿಸಲು ಏಕಗವಾಕ್ಷಿ ಪದ್ಧತಿಯನ್ನು ಅಳವಡಿಸಿಕೊಳ್ಳಲಾಗಿದೆ. ಮಧ್ಯಪ್ರದೇಶವು ಹೇರಳ ಖನಿಜ ಸಂಪನ್ಮೂಲಗಳನ್ನು ಹೊಂದಿದೆ ಎಂದು ಹೇಳಿದರು.

ಉದ್ಯಮಿ ಮೋಹನ್‌ದಾಸ್ ಪೈ ಮಾತನಾಡಿ, ಕರ್ನಾಟಕ ಮತ್ತು ಮಧ್ಯಪ್ರದೇಶ ಸಹೋದರರಿದ್ದಂತೆ. ಅಲ್ಲಿಯೂ ಹೂಡಿಕೆ ಮಾಡಬೇಕು. ಕರ್ನಾಟಕದಲ್ಲಿಯೂ ಹೂಡಿಕೆ ಮಾಡಬೇಕು. ಇದರಿಂದ ಎರಡೂ ರಾಜ್ಯಗಳಿಗೆ ಅನುಕೂಲವಾಗಲಿದೆ ಎಂದು ಹೇಳಿದರು.



ಬೆಂಗಳೂರಿನಲ್ಲಿ ಗುರುವಾರ ಹಮ್ಮಿಕೊಂಡಿದ್ದ 'ಮಧ್ಯಪ್ರದೇಶದಲ್ಲಿ ಹೂಡಿಕೆಗೆ ಅವಕಾಶಗಳು' ಕುರಿತ ಸಮಾವೇಶದಲ್ಲಿ ಮಧ್ಯಪ್ರದೇಶದ ಮುಖ್ಯಮಂತ್ರಿ ಮೋಹನ್ ಯಾದವ್ (ಮಧ್ಯದಲ್ಲಿ ಇದ್ದಾರೆ) ಹಾಗೂ ಉದ್ಯಮಿಗಳು, ವಿವಿಧ ಇಲಾಖೆಯ ಅಧಿಕಾರಿಗಳು ಪಾಲ್ಗೊಂಡಿದ್ದರು

ಎಚ್‌ಕೆ. ರಂಗನಾಥ ಜನ್ಮ ಶತಮಾನೋತ್ಸವದಲ್ಲಿ ಗುರುರಾಜ ಕರಜಗಿ ಅಭಿಮತ

ಮಾತು, ಬರಹದಲ್ಲೂ ಎಚ್‌ಕೆಆರ್ ಪರಿಣಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಲವರು ಒಳ್ಳೆಯ ಮಾತುಗಾರರಾಗಿರುತ್ತಾರೆ, ಉತ್ತಮ ಬರಹಗಾರರಾಗಿರುವುದಿಲ್ಲ. ಇನ್ನು ಕೆಲವರು ಉತ್ತಮ ಬರಹಗಾರರಾಗಿರುತ್ತಾರೆ, ವಾಗ್ಮಿಗಳಾಗಿರುವುದಿಲ್ಲ. ಎಚ್.ಕೆ. ರಂಗನಾಥ ಅವರು ಎರಡೂ ಕ್ಷೇತ್ರಗಳಲ್ಲಿ ಹಿಡಿತ ಸಾಧಿಸಿದ್ದರು ಎಂದು ಶಿಕ್ಷಣ ತಜ್ಞ ಗುರುರಾಜ ಕರಜಗಿ ತಿಳಿಸಿದರು.

ರಂಗ ಸಂಗ, ಭಾರತೀಯ ವಿದ್ಯಾಭವನ, ಕಲಾಗಂಗೋತ್ರಿ, ನವಚೇತನ ಟ್ರಸ್ಟ್ ಸಹಯೋಗದಲ್ಲಿ ಗುರುವಾರ ನಗರದಲ್ಲಿ ನಡೆದ ಎಚ್.ಕೆ. ರಂಗನಾಥ ಜನ್ಮ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಕರ್ನಾಟಕ ರಂಗಭೂಮಿ' ಸೇರಿದಂತೆ ಅನೇಕ ಕೃತಿಗಳನ್ನು ವಿಶಿಷ್ಟ ಶೈಲಿಯಲ್ಲಿ ಬರೆದಿರುವ ಅವರು ಆಕರ್ಷಕ ಮಾತುಗಾರರೂ ಆಗಿದ್ದರು ಎಂದರು.

ಭಾರತೀಯ ವಿದ್ಯಾಭವನದ ನಿರ್ದೇಶಕ ಎಚ್.ಎನ್. ಸುರೇಶ್ ಮಾತನಾಡಿ, 'ಭಾರತೀಯ ವಿದ್ಯಾಭವನದಲ್ಲಿ 20 ವರ್ಷ ಅನೇಕ ಪ್ರಯೋಗಗಳನ್ನು ಎಚ್‌ಕೆಆರ್ ಮಾಡಿದ್ದರು. ಶಿಸ್ತು ಮತ್ತು ಸಮಯ ಪಾಲನೆಗೆ ಮಹತ್ವ ನೀಡುತ್ತಿದ್ದರು. ಅದ್ಭುತ ಸಂವಹನ ಕೌಶಲ ಹೊಂದಿದ್ದರು' ಎಂದು ನೆನಪು ಮಾಡಿಕೊಂಡರು.

ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ ಮಾತನಾಡಿ, 'ಎಚ್‌ಕೆಆರ್ ತಾನೊಬ್ಬನೇ ಬೆಳೆಯದೇ ಅನೇಕರನ್ನು ಬೆಳೆಸಿದರು. ಎಚ್. ನರಸಿಂಹಯ್ಯ, ಬಿ.ಚಂದ್ರಶೇಖರ್ ಜೊತೆಗೆ ಸೇರಿ ಅನೇಕ ರಂಗಚಟುವಟಿಕೆ ಮಾಡಿದ್ದಲ್ಲದೇ, ವೈಜ್ಞಾನಿಕ ಮನೋಭಾವವನ್ನು ಬೆಳೆಸಿದರು. ಅವರ ಕಾಲದ ರಂಗಭೂಮಿ ಮತ್ತು ಈಗಿನ ರಂಗಭೂಮಿಯ ಬಗ್ಗೆ ಚರ್ಚೆಗಳಾಗಬೇಕು. ಮರುಕಟ್ಟುವ ಕೆಲಸಗಳಾಗಬೇಕು' ಎಂದು ಸಲಹೆ ನೀಡಿದರು.

ಹಾಸ್ಯ ಸಾಹಿತಿ ವೈ.ವಿ. ಗುಂಡೂರಾವ್ ಮಾತನಾಡಿ, 'ಬರಹಗಾರನಾಗಿ, ಬೋಧಕನಾಗಿ, ಕಲಾವಿದನಾಗಿ ಅನೇಕ ಕೊಡುಗೆಗಳನ್ನು ನೀಡಿದ್ದಾರೆ. ಧಾರವಾಡ ಆಕಾಶವಾಣಿ ಆರಂಭವಾಗಲು ಕಾರಣಕರ್ತರಾಗಿದ್ದರು. ಅವರು ರಂಗನಟರೂ ಆಗಿದ್ದರಿಂದ ವಾರ್ತಾವಾಚನವು ನಾಟಕದ ಭಾವ ಬರುವಂತೆ ಇರುತ್ತಿತ್ತು' ಎಂದು ಬಣ್ಣಿಸಿದರು.

ರಂಗಸಂಗದ ಮುಖ್ಯಸ್ಥೆ ಅಂಜನಾ ಪ್ರಭಾಕರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಆನೂರು ಅನಂತ ಕೃಷ್ಣಶರ್ಮ ಮತ್ತು ತಂಡದಿಂದ ವಾದ್ಯವೃಂದ ಕಾರ್ಯಕ್ರಮ ನಡೆಯಿತು.



ಎಚ್‌.ಕೆ. ರಂಗನಾಥ್ ಜನ್ಮಶತಮಾನೋತ್ಸವ ಕಾರ್ಯಕ್ರಮದಲ್ಲಿ ರಂಗಸಂಗ ಮುಖ್ಯಸ್ಥೆ ಅಂಜನಾ ಪ್ರಭಾಕರ್, ಭಾರತೀಯ ವಿದ್ಯಾ ಭವನದ ನಿರ್ದೇಶಕ ಎಚ್‌. ಎನ್‌. ಸುರೇಶ್, ಶಿಕ್ಷಣ ತಜ್ಞ ಗುರುರಾಜ ಕರಜಗಿ, ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಕೆ. ವಿ. ನಾಗರಾಜ್ ಮೂರ್ತಿ, ಹಾಸ್ಯ ಸಾಹಿತಿ ವೈ. ವಿ. ಗುಂಡೂರಾವ್ ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

₹4.54 ಲಕ್ಷ ದಂಡ ಸಂಗ್ರಹ

ಬೆಂಗಳೂರು: ಸಂಚಾರ ನಿಯಮ ಉಲ್ಲಂಘನೆ ಮಾಡುವ ವಾಹನ ಸವಾರರು, ಚಾಲಕರ ವಿರುದ್ಧ ವಿಶೇಷ ಕಾರ್ಯಾಚರಣೆ ನಡೆಸಿದ ಪೂರ್ವ ಸಂಚಾರ ವಿಭಾಗದ ಪೊಲೀಸರು, 909 ಪ್ರಕರಣ ದಾಖಲಿಸಿಕೊಂಡಿದ್ದಾರೆ. ಅಲ್ಲದೇ, ಆರೋಪಿಗಳಿಂದ ₹4.54 ಲಕ್ಷ ದಂಡ ಸಂಗ್ರಹಿಸಿದ್ದಾರೆ.

ಪ್ರಯಾಣಿಕರು ಕೇಳಿದ ಸ್ಥಳಕ್ಕೆ ಬಾಡಿಗೆಗೆ ತೆರಳಲು ನಿರಾಕರಣೆ, ದುಬಾರಿ ಬಾಡಿಗೆ, ಕರ್ಕಶವಾಗಿ ಶಬ್ದ ಮಾಡುವ ಸೈಲೆನ್ಸರ್ ಅಳವಡಿಕೆ, ಟ್ರಾಫಿಕ್ ಸಿಗ್ನಲ್ ದಾಟಿ ನಿಯಮ ಉಲ್ಲಂಘನೆ, ಪಾದಚಾರಿ ಮಾರ್ಗದಲ್ಲಿ ದ್ವಿಚಕ್ರ ಹಾಗೂ ನಾಲ್ಕು ಚಕ್ರದ ವಾಹನಗಳ ನಿಲುಗಡೆ, ದ್ವಿಚಕ್ರ ವಾಹನದಲ್ಲಿ ಮೂವರ ಸವಾರಿ, ವಾಹನ ಚಾಲನೆ ವೇಳೆ ಮೊಬೈಲ್ ಬಳಕೆ, ಸುರಕ್ಷತಾ ಬೆಲ್ಟ್ ಧರಿಸದೆ ವಾಹನ ಚಾಲನೆ, ನಿಗದಿಗಿಂತ ಹೆಚ್ಚಿನ ಶಾಲಾ ಮಕ್ಕಳನ್ನು ವಾಹನದಲ್ಲಿ ಕರೆದೊಯ್ಯುವುದು, ಹೆಲ್ಮೆಟ್ ಧರಿಸದೆ ದ್ವಿಚಕ್ರ ವಾಹನ ಸವಾರಿ ಮಾಡಿ ನಿಯಮ ಉಲ್ಲಂಘಿಸುತ್ತಿದ್ದವರ ವಿರುದ್ಧ ಎಫ್‌ಐಆರ್ ದಾಖಲು ಮಾಡಿಕೊಳ್ಳಲಾಗಿದೆ ಎಂದು ಪೂರ್ವ ಸಂಚಾರ ವಿಭಾಗದ ಡಿಸಿಪಿ ಕುಲದೀಪ್ ಕುಮಾರ್ ಆರ್. ಜೈನ್ ತಿಳಿಸಿದ್ದಾರೆ.




ಅಶ್ವಿನಿ ಅಂಬರೀಶ್

‘ಭೀಮ’ ಹುಡುಕಿದ ಅಶ್ವಿನಿ ನಕ್ಷತ್ರ

‘ಭೀಮ’ ಸಿನಿಮಾ ಮೂಲಕ ಅಶ್ವಿನಿ ಅಂಬರೀಶ್ ಚಂದನವನಕ್ಕೆ ಕಾಲಿಡುತ್ತಿದ್ದಾರೆ. ‘ಸ್ಯಾಂಡಲ್‌ವುಡ್ ಸಲಗ’ ದುನಿಯಾ ವಿಜಯ್‌ಗೆ ಜೋಡಿಯಾಗಿ ಅಶ್ವಿನಿ ತೆರೆ ಮೇಲೆ ಕಾಣಿಸಿಕೊಳ್ಳಲಿದ್ದು, ಕನಸು ನನಸಾದ ಸಂಭ್ರಮದಲ್ಲಿ ಅವರಿದ್ದಾರೆ. ‘ಸಿನಿಮಾ ಪುರವಣಿ’ ಜೊತೆ ‘ಭೀಮ’ನ ಅನುಭವಗಳನ್ನು ಹಂಚಿಕೊಳ್ಳುತ್ತಾ ಅಶ್ವಿನಿ ಹೆಜ್ಜೆ ಹಾಕಿದರು...

ಅಭಿಲಾಷ್ ಪಿ.ಎಸ್.

- **ಅಶ್ವಿನಿ ಹಿನ್ನೆಲೆ...**

ನಾನು ಬೆಂಗಳೂರಿನವಳು. ಮಹಾರಾಣಿ ಲಕ್ಷ್ಮಿ ಅಮ್ಮಣ್ಣಿ ಕಾಲೇಜಿನಲ್ಲಿ ಡಿಗ್ರಿ ಪೂರ್ಣಗೊಳಿಸಿ, ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಡಿಸ್ಟೆನ್ಸ್‌ನಲ್ಲಿ ಎಂಬಿಎ ಮುಗಿಸಿದೆ. ಎಂಬಿಎ ಶಿಕ್ಷಣದ ಸಂದರ್ಭದಲ್ಲೇ ಮಲ್ಲೇಶ್ವರದಲ್ಲಿರುವ ಡಿಸಿ ಲ್ಯಾಬ್ಸ್ ಎಂಬ ಕಂಪನಿಯೊಂದರಲ್ಲಿ ಕೆಲಸಕ್ಕೆ ಸೇರಿದ್ದೆ. ಚಿಕ್ಕವಯಸ್ಸಿನಲ್ಲೇ ನಟನೆಯ ಆಸಕ್ತಿ ಇತ್ತು. ಬೆಂಗಳೂರಿನಲ್ಲಿ ಹಲವು ನಟನೆ, ಮಾಡೆಲಿಂಗ್‌ನ ಕ್ಲಾಸ್‌ಗಳು ಇದ್ದರೂ ಯಾವುದೂ ನನ್ನನ್ನು ಸೆಳೆಯಲಿಲ್ಲ. ನಟನೆಯನ್ನು ಕಲಿಯುವ ಮೊದಲ ಹೆಜ್ಜೆಯಾಗಿ ರಂಗಭೂಮಿ ನನ್ನನ್ನು ಆಕರ್ಷಿಸಿತು. ಈ ವೇದಿಕೆಯಲ್ಲೇ ನಟನೆ ಕಲಿಯಬೇಕು ಎನ್ನುವ ಆಸಕ್ತಿ ಹುಟ್ಟಿಕೊಂಡಿತು. ಅದೇ ಸಂದರ್ಭದಲ್ಲಿ ಸಹೋದ್ಯೋಗಿಯೊಬ್ಬರು ನಾಟಕದ ಉಚಿತ ಕಾರ್ಯಾಗಾರದ ಬಗ್ಗೆ ಮಾಹಿತಿ ನೀಡಿದ್ದರು. ಈ ಮೂಲಕ ರಂಗಭೂಮಿಯ ನಂಟು ಬೆಳೆಯಿತು. ‘ಥಿಯೇಟರ್ ತತ್ಕಾಲ್’ ತಂಡದ ಮೂಲಕ ಬಣ್ಣದ ಲೋಕಕ್ಕೆ ಕಾಲಿಟ್ಟೆ. ಅಚ್ಯುತ್ ಕುಮಾರ್, ಗೋಪಾಲಕೃಷ್ಣ ದೇಶಪಾಂಡೆ ಗರಡಿಯಲ್ಲಿ ಬೆಳೆದೆ. ‘ವಿಗಡ ವಿಕ್ರಮರಾಯ’ ನಾಟಕದ ಮೂಲಕ ರಂಗಭೂಮಿಯಲ್ಲಿ ಪಯಣ ಆರಂಭವಾಯಿತು.

‘ಜೀವನದಿ’ ಹಾಗೂ ‘ಮಗಳು ಜಾನಕಿ’ ಎಂಬ ಧಾರಾವಾಹಿಗಳಲ್ಲೂ ನಾನು ನಟಿಸಿದ್ದೇನೆ. ಇವೆರಡೂ ನನಗೆ ಒಳ್ಳೆಯ ಅನುಭವ ನೀಡಿದವು. ಆದರೆ, ಕೋವಿಡ್ ಸಂದರ್ಭದಲ್ಲಿ ಇವುಗಳ ಪ್ರಸಾರ ಕೊನೆಗೊಂಡಿತು.

- **‘ಭೀಮ’ನಿಗೆ ಜೋಡಿಯಾಗಿದ್ದು ಹೇಗೆ?**

ನಾನು ಕೆಲಸ ಮಾಡುತ್ತಿರುವಾಗ, ರಂಗಭೂಮಿಯಲ್ಲಿ ಸಕ್ರಿಯವಾಗಿದ್ದ ಸಂದರ್ಭದಲ್ಲಿ ಸಿನಿಮಾದಲ್ಲಿ ನಟನೆಯ ಅವಕಾಶ ಹುಡುಕುತ್ತಿದ್ದೆ. ಒಂದು ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ವಿಜಯ್ ಅವರು ನನ್ನನ್ನು ಗುರುತಿಸಿ ‘ಭೀಮ’ ಸಿನಿಮಾದಲ್ಲಿ ನಟನೆಯ ಆಫರ್ ನೀಡಿದ್ದರು. ಇದು ಆಕಸ್ಮಿಕವಾಗಿ ಬಂದ ಅವಕಾಶ. ‘ಭೀಮ’ನಿಗೆ ಜೋಡಿಯಾಗಿ ಫ್ರೆಶ್ ಫೇಸ್ ಬೇಕಿತ್ತು. ಹೀಗಾಗಿ ಆಯ್ಕೆಯಾದೆ. ನಟಿಯಾಗಬೇಕು ಎನ್ನುವ ಕನಸು ಆಕಸ್ಮಿಕವಲ್ಲ. ಆದರೆ ಅವಕಾಶ ಏಕಾಏಕಿ ಸಿಕ್ಕಿತು. ಸದ್ಯ ಕೆಲಸ ಬಿಟ್ಟು ಪೂರ್ಣಪ್ರಮಾಣದಲ್ಲಿ ರಂಗಭೂಮಿ ಹಾಗೂ ಸಿನಿಮಾದಲ್ಲಿ ತೊಡಗಿಸಿಕೊಂಡಿದ್ದೇನೆ.

- **ವಿಜಯ್ ಜೊತೆ ನಟನೆಯ ಅನುಭವ...**

ಸಿನಿಮಾದಲ್ಲಿ ನಟಿಸುತ್ತಿದ್ದೇನೆ ಎನ್ನುವುದೇ ಕನಸು ನನಸಾದ ಕ್ಷಣ. ಇದನ್ನು ಪದಗಳಲ್ಲಿ ಕಟ್ಟಿಕೊಡಲು ಸಾಧ್ಯವಿಲ್ಲ. ಸಿನಿಮಾ ಕೆಲಸ, ಅನುಭವ ಖುಷಿ ನೀಡಿದೆ. ನನ್ನ ಸಿನಿ ಪಯಣದ ಆರಂಭದಲ್ಲೇ ದೊಡ್ಡ ದಾರಿಯಾಗಿ ಈ ‘ಭೀಮ’ ಪ್ರಾಜೆಕ್ಟ್ ದೊರಕಿತ್ತು. ಈ ಸಿನಿಮಾ, ಕಲಿಕೆಯ ಅನುಭವ ನೀಡಿದೆ. ಸಿನಿಮಾದ ಎಲ್ಲ ವಿಭಾಗಗಳ ವಿಷಯ ತಿಳಿದುಕೊಂಡೆ. ನಟನೆ, ತಾಂತ್ರಿಕ ವಿಷಯಗಳ ಬಗ್ಗೆ ಅರಿತೆ. ವಿಜಯ್ ಅವರ ಅನುಭವ ಅಗಾಧ. ಅವರು ಓರ್ವ ನಿರ್ದೇಶಕರಾಗಿ, ನಟನಾಗಿ ತಿಳಿಸಿಕೊಡುವ ಅಂಶಗಳು ನನ್ನನ್ನು ನಟಿಯಾಗಿ ರೂಪಿಸಿದೆ. ನನಗೆ ಪ್ರತಿಯೊಂದು ದಿನವೂ ಕಲಿಕೆಯಾಗಿತ್ತು. ಚಿತ್ರೀಕರಣದ ಅನುಭವವೂ ಭಿನ್ನವಾಗಿತ್ತು.

- **ನಿಮ್ಮ ಪಾತ್ರಕ್ಕೆ ತೆರೆ ಅವಧಿ ಎಷ್ಟಿದೆ?**

ವಿಜಯ್ ಅವರ ಬರವಣಿಗೆಯ ವಿಶೇಷತೆ ಏನೆಂದರೆ, ಎಲ್ಲಾ ಪಾತ್ರಗಳಿಗೂ ಅದರದ್ದೇ ಆದ ತೂಕವನ್ನು ಕಥೆ ಮೂಲಕ ತುಂಬುತ್ತಾರೆ. ಕಥೆಯನ್ನು ಬಿಟ್ಟು ಬೇರೇನೂ ಮಾಡಿಸುವುದಿಲ್ಲ. ‘ಸಲಗ’ದಲ್ಲಿ ನಾಯಕಿಗೆ ತೆರೆ ಅವಧಿ ಉಳಿದ ಪಾತ್ರಗಳಿಗೆ ಹೋಲಿಸಿದರೆ ಕಡಿಮೆ ಇತ್ತು. ಆದರೆ ಆ ಪಾತ್ರ ಪರಿಣಾಮಕಾರಿಯಾಗಿತ್ತು. ಅಲ್ಲಿ ಪ್ರತೀಕಾರದ ಕಥೆಗೆ ಹೆಚ್ಚು ಪ್ರಾಮುಖ್ಯತೆ ಇತ್ತು. ‘ಭೀಮ’ ಸಿನಿಮಾ ‘ಸಲಗ’ದ ನೂರು ಪಟ್ಟು ಇದೆ ಎಂದು ವಿಜಯ್ ಅವರು ಹಲವು ಬಾರಿ ಹೇಳಿದ್ದಾರೆ. ಹೀಗಾಗಿ ‘ಭೀಮ’ನ ನಾಯಕಿಯ ಪಾತ್ರಕ್ಕೂ ತೂಕ ತುಂಬಿದ್ದಾರೆ. ‘ಭೀಮ’ನ ಕಥೆಗೆ ನಾಯಕಿಯ ಪಾತ್ರ ಬಹಳ ಅವಶ್ಯವಾಗಿದೆ. ಇದು ಪ್ರತಿಯೊಬ್ಬ ಪ್ರೇಮಿಗಳಿಗೂ ಕನೆಕ್ಟ್ ಆಗುವ ಪಾತ್ರ.

- **ನಿಮ್ಮ ಪಾತ್ರದ ಬಗ್ಗೆ...**

ನನ್ನ ಪಾತ್ರದ ಗುಣಲಕ್ಷಣಗಳನ್ನು ತೆರೆಯ ಮೇಲೆಯೇ ನೋಡಬೇಕು. ನನ್ನ ಪಾತ್ರದ ಹೆಸರನ್ನು ಇನ್ನೂ ಬಿಟ್ಟುಕೊಟ್ಟಿಲ್ಲ. (ನಗುತ್ತಾ) ಎಲ್ಲರನ್ನೂ ಕಮಾಂಡ್ ಮಾಡುವ ಪಾತ್ರ ಇರಬಹುದೇನೋ..ಬಹಳ ಪರಿಣಾಮಕಾರಿಯಾಗಿ ಈ ಪಾತ್ರ ಹೊರಬರಲಿದೆ ಎಂದಷ್ಟೇ ಹೇಳಬಲ್ಲೆ.

- **ಹೊಸ ಪ್ರಾಜೆಕ್ಟ್ ಒಪ್ಪಿಕೊಂಡಿದ್ದೀರಾ?**

‘ಭೀಮ’ನ ಪಯಣ ಆರಂಭವಾಗಿ ಮೂರು ವರ್ಷವಾಯಿತು. ಈ ಅವಧಿಯಲ್ಲಿ ವೈಯಕ್ತಿಕವಾಗಿ ಹಲವು ವಿಷಯಗಳನ್ನು ಕಲಿತಿದ್ದೇನೆ. ಹಲವು ಕಥೆಗಳು ಚರ್ಚೆಯ ಹಂತದಲ್ಲಿದೆ. ನಾನು ಯಾವುದನ್ನೂ ಇಲ್ಲಿಯವರೆಗೆ ಒಪ್ಪಿಕೊಂಡಿಲ್ಲ. ಇಷ್ಟು ವರ್ಷ ಕಾದಿದ್ದೇನೆ, ಇನ್ನೊಂದು ತಿಂಗಳು ಕಾಯುವುದರಲ್ಲಿ ತಪ್ಪೇನು ಇಲ್ಲ ಎಂದುಕೊಂಡಿದ್ದೇನೆ. ಬಳಿಕ ಹೊಸ ಸಿನಿಮಾ ಒಪ್ಪಿಕೊಳ್ಳಲಿದ್ದೇನೆ. ರಂಗಭೂಮಿಗೆ ಹೆಜ್ಜೆ ಇಟ್ಟಿದ್ದು ನಟನೆಯ ಕಲಿಕೆಗೋಸ್ಕರ. ಈಗ ಸಿನಿಮಾ ಕ್ಷೇತ್ರಕ್ಕೆ ಹೆಜ್ಜೆ ಇಟ್ಟಿರುವುದರಿಂದ ರಂಗಭೂಮಿಗೆ ಸಮಯ ನೀಡುವುದು ಕಷ್ಟಸಾಧ್ಯ. ಹಾಗೆಂದು ಪೂರ್ಣಪ್ರಮಾಣದಲ್ಲಿ ನಟನೆ ಕಲಿತಿದ್ದೇನೆ ಎಂದಲ್ಲ. ಸಮಯ, ಅವಕಾಶ ಸಿಕ್ಕಾಗ ರಂಗಭೂಮಿಯಲ್ಲೂ ತೊಡಗಿಸಿಕೊಳ್ಳುತ್ತೇನೆ. ❖

ಆ.30ಕ್ಕೆ ‘ಲಾಫಿಂಗ್ ಬುದ್ಧ’ ತೆರೆಗೆ


ತೇಜು ಬೆಳವಾಡಿ

ನಟ ರಿಷಬ್ ಶೆಟ್ಟಿ ನಿರ್ಮಿಸಿ, ಪ್ರಮೋದ್ ಶೆಟ್ಟಿ ಮೊದಲ ಬಾರಿಗೆ ನಾಯಕನಾಗಿ ನಟಿಸಿರುವ ‘ಲಾಫಿಂಗ್ ಬುದ್ಧ’ ಸಿನಿಮಾ ಆಗಸ್ಟ್ 30ರಂದು ತೆರೆಗೆ ಬರಲಿದೆ. ಚಿತ್ರದ ‘ಎಂಥಾ ಚಂದಾನೇ’ ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ.

ಚಿತ್ರಕ್ಕೆ ಭರತ್ ರಾಜ್ ನಿರ್ದೇಶನವಿದೆ. ಈ ಗೀತೆಗೆ ಕೆ.ಕಲ್ಯಾಣ್ ಸಾಹಿತ್ಯವಿದ್ದು, ವಿಷ್ಣು ವಿಜಯ್ ಸಂಗೀತ ನಿರ್ದೇಶನವಿದೆ. ‘ಭರತ್ ಈ ಹಿಂದೆ ನನ್ನ ‘ಹೀರೋ’ ಚಿತ್ರ ನಿರ್ದೇಶಿಸಿದ್ದರು. ‘ಸರ್ಕಾರಿ ಹಿರಿಯ..’ ಸಿನಿಮಾ ಆದ ತಕ್ಷಣ ಭರತ್ ‘ಲಾಫಿಂಗ್ ಬುದ್ಧ’ ಸಿನಿಮಾ ಕಥೆ ಹೇಳಿದ್ದರು. ಆದರೆ ಕೋವಿಡ್‌ನಿಂದ ಈ ಸಿನಿಮಾ ಮುಂದೂಡಲ್ಪಟ್ಟಿತು. ಅವರು ಈ ಚಿತ್ರದ ಕಥೆ ಹೇಳಿದಾಗ ಮನಸ್ಸಿಗೆ ಹತ್ತಿರವಾಯಿತು. ಪೊಲೀಸ್ ಕುಟುಂಬ ಹಾಗೂ ಅವರ ಭಾವನೆಗಳ ಸುತ್ತ ಈ ಸಿನಿಮಾದ ಕಥೆ ಸಾಗುತ್ತದೆ. ನಾನೂ ಈ ಸಿನಿಮಾದಲ್ಲಿ ನಟಿಸಬೇಕಿತ್ತು. ಆದರೆ ‘ಕಾಂತಾರ’ ಸಿನಿಮಾದ ಚಿತ್ರೀಕರಣದ ಕಾರಣದಿಂದ ಹಿಂದಕ್ಕೆ ಸರಿದೆ. ನನ್ನ ಆ ಪಾತ್ರದ ಜಾಗಕ್ಕೆ ದಿಗಂತ್ ಅವರು ಸೇರ್ಪಡೆಯಾದರು’ ಎನ್ನುತ್ತಾರೆ ನಿರ್ಮಾಪಕ ರಿಷಬ್ ಶೆಟ್ಟಿ.

ಪ್ರಮೋದ್ ಶೆಟ್ಟಿ ‘ಗೋವರ್ಧನ’ ಎಂಬ ಪೊಲೀಸ್ ಪೇದೆ ಪಾತ್ರದಲ್ಲಿ ಅಭಿನಯಿಸಿದ್ದಾರೆ. ತೇಜು ಬೆಳವಾಡಿ ‘ಸತ್ಯವತಿ’ ಎಂಬ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ದಿಗಂತ್ ಮಂಚಾಲೆ ಕೂಡ ಪಾತ್ರವೊಂದನ್ನು ನಿಭಾಯಿಸಿದ್ದಾರೆ. ಭದ್ರಾವತಿ ಹಾಗೂ ಸುತ್ತಮುತ್ತಲಿನ ಸ್ಥಳದಲ್ಲೇ ಹೆಚ್ಚು ಚಿತ್ರೀಕರಣ ನಡೆದಿದೆ. ಚಿತ್ರಕ್ಕಾಗಿ 30 ಕೆ.ಜಿ. ತೂಕ ಹೆಚ್ಚಿಸಿಕೊಂಡು ಇದೀಗ ಆ ತೂಕವನ್ನು ಇಳಿಸಿಕೊಂಡಿದ್ದಾರೆ ಪ್ರಮೋದ್ ಶೆಟ್ಟಿ.

‘ಚೀನಾ ದೇಶದಲ್ಲಿ ಬುದ್ಧ ಎಂಬುವವನು ಒಂದು ಚೀಲದಲ್ಲಿ ಮಕ್ಕಳಿಗೆ ಬೇಕಾದ ಸಿಹಿ ಪದಾರ್ಥಗಳನ್ನು ತುಂಬಿಕೊಂಡು, ಮಕ್ಕಳನ್ನು ಹಾಗೂ ಎಲ್ಲರನ್ನು ನಗೆಗಡಲಲ್ಲಿ ತೇಲಿಸುತ್ತಿದ್ದ. ನಮ್ಮ ಚಿತ್ರದ ನಾಯಕ ‘ಗೋವರ್ಧನ’ನ ಪಾತ್ರವು ಕೂಡ ಇದೇ ರೀತಿ. ಅದಕ್ಕಾಗಿ ಈ ಶೀರ್ಷಿಕೆ ಇಟ್ಟಿದ್ದೇವೆ’ ಎಂದು ನಿರ್ದೇಶಕ ಭರತ್ ರಾಜ್ ತಿಳಿಸಿದರು. ಕೆ.ಎಸ್ ಚಂದ್ರಶೇಖರ್ ಅವರ ಛಾಯಾಚಿತ್ರಗ್ರಹಣ, ಕೆ.ಎಂ.ಪ್ರಕಾಶ್ ಅವರ ಸಂಕಲನ ಈ ಚಿತ್ರಕ್ಕಿದೆ. ❖


ಪ್ರಮೋದ್ ಶೆಟ್ಟಿ, ರಿಷಬ್ ಶೆಟ್ಟಿ

ಇಂದು ನಾಲ್ಕು ಚಿತ್ರಗಳು ರಿಲೀಸ್


ಭೀಮ
ದುನಿಯಾ ವಿಜಯ್

ಚಂದನವನದ ತೆರೆಗಳಲ್ಲಿ ಸ್ಟಾರ್ ನಟರ ಸಿನಿಮಾಗಳಿಲ್ಲ ಎನ್ನುವಾಗಲೇ ‘ದುನಿಯಾ’ ವಿಜಯ್ ನಟನೆಯ ‘ಭೀಮ’ ಸಿನಿಮಾ ತೆರೆಕಂಡಿದೆ. ಇಂದು(ಆಗಸ್ಟ್ 9) ‘ಭೀಮ’ ಸೇರಿ ನಾಲ್ಕು ಸಿನಿಮಾಗಳು ತೆರೆಕಾಣುತ್ತಿವೆ.

ಭೀಮ: ‘ಸಲಗ’ ಸಿನಿಮಾ ಮೂಲಕ ನಿರ್ದೇಶಕನಾಗಿ ತೆರೆಯಲ್ಲಿ ಮಿಂಚಿದ ‘ದುನಿಯಾ’ ವಿಜಯ್ ನಿರ್ದೇಶನದ ಎರಡನೇ ಸಿನಿಮಾ ‘ಭೀಮ’. ಸೆಟ್ಟೇರಿದ ಎರಡು ವರ್ಷಗಳ ಬಳಿಕ ಸಿನಿಮಾ ತೆರೆಕಾಣುತ್ತಿದೆ. ರೌಡಿಸಂ, ಮಾದಕ ವಸ್ತು, ಪ್ರೀತಿ ಹೀಗೆ ಹಲವು ವಸ್ತು ವಿಷಯಗಳನ್ನು ಇಟ್ಟುಕೊಂಡು ಚಿತ್ರದ ಕಥೆ ಹೆಣೆಯಲಾಗಿದೆ. ಚಿತ್ರದಲ್ಲಿ ‘ಭೀಮ’ನಿಗೆ ಜೋಡಿಯಾಗಿ ಅಶ್ವಿನಿ ನಟಿಸಿದ್ದು, ರಂಗಾಯಣ ರಘು, ಅಚ್ಯುತ್ ಕುಮಾರ್, ಕಾಕ್ರೋಚ್ ಸುಧಿ, ಕಲ್ಯಾಣಿ ಮತ್ತಿತರರು ತಾರಾಬಳಗದಲ್ಲಿದ್ದಾರೆ. ಮಾಸ್ತಿ ಸಂಭಾಷಣೆ ಚಿತ್ರಕ್ಕಿದ್ದು, ಕೃಷ್ಣ ಸಾರ್ಥಕ್, ಜಗದೀಶ್ ಗೌಡ ಈ ಸಿನಿಮಾವನ್ನು ನಿರ್ಮಾಣ ಮಾಡಿದ್ದಾರೆ.

ಕಬಂಧ



ಪ್ರಸಾದ್ ವಶಿಷ್ಠ, ಪ್ರಿಯಾಂಕ

ಕುಂಜಾರ ಫಿಲಂಸ್ ಲಾಂಛನದಲ್ಲಿ ಸಿದ್ಧಗೊಂಡಿರುವ ಈ ಸಿನಿಮಾವನ್ನು ಸತ್ಯನಾಥ್ ನಿರ್ದೇಶಿಸಿದ್ದಾರೆ. ಸಿನಿಮಾದಲ್ಲಿ ಕಿಶೋರ್, ಪ್ರಸಾದ್ ವಶಿಷ್ಠ, ಪ್ರಿಯಾಂಕ ಮುಖ್ಯಭೂಮಿಕೆಯಲ್ಲಿದ್ದಾರೆ. ‘ಕೆಲವು ವರ್ಷಗಳ ಹಿಂದೆ ರಾಜ್ಯದಲ್ಲಿ ನಡೆದ ಪ್ರಕರಣವೊಂದನ್ನು ಬಳಸಿಕೊಂಡು ಒಂದಷ್ಟು ಹಾರರ್ ರೂಪಕೊಟ್ಟು ಸನ್ನಿವೇಶಗಳನ್ನು ಸೃಷ್ಟಿಸಲಾಗಿದೆ. ವ್ಯವಸಾಯದಲ್ಲಿಯೂ ಸಮಸ್ಯೆಗಳು ಹಲವು ವರ್ಷಗಳಿಂದ ಇವೆ. ಇಂತಹ ವಿಚಾರ, ವಿಷಯಗಳನ್ನು ಹೆಕ್ಕಿ ಮನರಂಜನೆ ಮೂಲಕ ಕಥೆ ಹೇಳಿದ್ದೇನೆ’ ಎಂದಿದ್ದಾರೆ ನಿರ್ದೇಶಕರು. ಅವಿನಾಶ್, ನಿರ್ದೇಶಕ ಯೋಗರಾಜ್ ಭಟ್, ವಂದನ, ವಚನ, ವಿಶಾಲ್, ನಾಗಾರ್ಜುನ ಸ್ವಾಮಿ, ಚಂದ್ರು, ಛಾಯಾಶ್ರೀ, ಪ್ರಶಾಂತ್ ಸಿದ್ದಿ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ.

ಇದು ಎಂಥಾ ಲೋಕವಯ್ಯಾ

ಸಿತೇಶ್ ಸಿ ಗೋವಿಂದ್ ನಿರ್ದೇಶನದ ಈ ಚಿತ್ರ ಕರ್ನಾಟಕ ಮತ್ತು ಕೇರಳ ಗಡಿಯಲ್ಲಿನ ಹಳ್ಳಿಗಳಲ್ಲಿ ನಡೆಯುವ ಕಥೆ ಹೊತ್ತು ಬಂದಿದೆ. ಈ ಚಿತ್ರವನ್ನು ಮಲಯಾಳ ನಿರ್ದೇಶಕ ಜಿಯೋ ಬೇಬಿ ಪ್ರಸ್ತುತಪಡಿಸುತ್ತಿದ್ದಾರೆ. ಕಡ್ಲೆಕಾಯಿ ಫಿಲ್ಮ್ಸ್ ಬ್ಯಾನರ್ ಅಡಿಯಲ್ಲಿ ಮಂಗಲ್ವಾಡಿ ನರೇಶ್ ನಾಮದೇವ್ ಶೆಣೈ ಅವರು ಈ ಚಿತ್ರವನ್ನು ನಿರ್ಮಿಸಿದ್ದಾರೆ. ನಿರ್ದೇಶಕನಾಗಿ ಸಿತೇಶ್ ಅವರಿಗೆ ಇದು ಮೊದಲ ಸಿನಿಮಾ. ಅನುರಾಜ್ ಕಕ್ಯಪದವ್, ಮೈತ್ರಿ, ಮೈಮ್ ರಾಮದಾಸ್, ಗೋಪಿನಾಥ್ ಭಟ್, ಸುಕನ್ಯಾ, ವಿಶ್ವನಾಥ್ ಅಸೈಗೋಳಿ, ಚಂದ್ರಹಾಸ ಉಳ್ಳಾಲ್, ದೀಪಕ್ ರೈ, ಪ್ರಕಾಶ್ ತುಮ್ಮಿನಾಡ್ ಮುಂತಾದವರು ತಾರಾಬಳಗದಲ್ಲಿದ್ದಾರೆ.

ಜೀನಿಯಸ್ ಮುತ್ತ


ನಾಗಿಣಿ ಭರಣ

ನಿರ್ದೇಶಕ ಟಿ.ಎಸ್. ನಾಗಾಭರಣ ಅವರ ಪತ್ನಿ ನಾಗಿಣಿ ಭರಣ ನಿರ್ದೇಶನದ ಚಿತ್ರವಿದು. ಇದು ಇವರ ನಿರ್ದೇಶನದ ಚೊಚ್ಚಲ ಸಿನಿಮಾ. ಜಿ.ಎಸ್. ಲತಾ ಜೈಪ್ರಕಾಶ್ ನಿರ್ಮಾಣದ ಈ ಚಿತ್ರದಲ್ಲಿ ‘ಜೀನಿಯಸ್ ಮುತ್ತ’ನಾಗಿ ಶ್ರೇಯಸ್ ಜೈಪ್ರಕಾಶ್ ನಟಿಸಿದ್ದಾರೆ. ವಿಶೇಷ ಪಾತ್ರದಲ್ಲಿ ವಿಜಯ ರಾಘವೇಂದ್ರ ನಟಿಸಿದ್ದಾರೆ. ಟಿ.ಎಸ್.ನಾಗಾಭರಣ, ಗಿರಿಜಾ ಲೋಕೇಶ್, ಸುಂದರರಾಜ್, ಪನ್ನಗಾಭರಣ ಮುಂತಾದವರು ತಾರಾಬಳಗದಲ್ಲಿದ್ದಾರೆ. ❖

ಏಕಲವ್ಯನಂತೆ ಧ್ರುವ: ಅರ್ಜುನ್ ಸರ್ಜಾ

ಎ.ಪಿ. ಅರ್ಜುನ್ ನಿರ್ದೇಶನದ, ‘ಆ್ಯಕ್ಷನ್ ಪ್ರಿನ್ಸ್’ ಧ್ರುವ ಸರ್ಜಾ ನಟನೆಯ ‘ಮಾರ್ಟಿನ್’ ಸಿನಿಮಾ ಅಕ್ಟೋಬರ್ 11ರಂದು ಬಿಡುಗಡೆಯಾಗುತ್ತಿದ್ದು, ಚಿತ್ರದ ಮೊದಲ ಟ್ರೇಲರ್ ಆಗಸ್ಟ್ 5ರಂದು ಮುಂಬೈನಲ್ಲಿ ಬಿಡುಗಡೆಯಾಯಿತು.

ಮುಂಬೈನ ಪಿವಿಆರ್ ಚಿತ್ರಮಂದಿರದಲ್ಲಿ ವಿದೇಶಗಳಿಂದ ಬಂದಿದ್ದ ಪತ್ರಕರ್ತರ ಸಮ್ಮುಖದಲ್ಲಿ ಟ್ರೇಲರ್ ರಿಲೀಸ್ ಕಾರ್ಯಕ್ರಮ ನಡೆಯಿತು. ಬಳಿಕ ನಡೆದ ಸುದ್ದಿಗೋಷ್ಠಿಯಲ್ಲಿ ‘ಮಾರ್ಟಿನ್’ ಚಿತ್ರಕ್ಕೆ ಕಥೆ ಬರೆದ ನಟ ಅರ್ಜುನ್ ಸರ್ಜಾ, ಧ್ರುವ ಸರ್ಜಾ ಅವರನ್ನು ‘ಏಕಲವ್ಯ’ನಿಗೆ ಹೋಲಿಸಿದರು.

‘ನಿಮಗೆ ಯಾರು ಸ್ಫೂರ್ತಿ’ ಎಂಬ ಪತ್ರಕರ್ತರೊಬ್ಬರ ಪ್ರಶ್ನೆಗೆ ಉತ್ತರಿಸಿದ ಧ್ರುವ ಸರ್ಜಾ, ‘ಅರ್ಜುನ್ ಸರ್ಜಾ ಅವರ ವರ್ಚಸ್ಸು ಅವರನ್ನು ಹಿಂಬಾಲಿಸುವಂತೆ ಮಾಡಿತು. ಸಾಕಷ್ಟು ಕಲಾವಿದರಿಗೆ ಅರ್ಜುನ್ ಸರ್ಜಾ ಅವರು ಸ್ಫೂರ್ತಿಯಾಗಿದ್ದಾರೆ. ಅವರಲ್ಲಿ ನಾನೂ ಒಬ್ಬ. ನಾನು ಹೀರೊ ಆಗಬೇಕು ಎಂದು ಅವರಲ್ಲಿ ಹೇಳಿದಾಗ ಎರಡು ದಿನ ಅವರು ನನ್ನೊಂದಿಗೆ ಮಾತನಾಡಿರಲಿಲ್ಲ. ಯಾರು ಬೇಕಿದ್ದರೂ ಹೀರೊ ಆಗಬಹುದು, ಮೊದಲು ನಟನಾಗು ಎಂದು ಅವರು ಹೇಳಿದ್ದರು. ನನಗೆ ಅವರು ಎಂದಿಗೂ ಸೂಪರ್ ಹೀರೊ’ ಎಂದರು.

ಇದಕ್ಕೆ ಪ್ರತಿಕ್ರಿಯೆಯಾಗಿ ಮಾತನಾಡಿದ ಅರ್ಜುನ್ ಸರ್ಜಾ, ‘ಧ್ರುವನ ಅಣ್ಣ ನಟ ಚಿರಂಜೀವಿಯನ್ನು ನಾನು ಎಲ್ಲ ವಿಭಾಗಗಳಲ್ಲಿ ತರಬೇತಿ ನೀಡಿ ನಟನಾಗಿ ಸಿದ್ಧಪಡಿಸಿದ್ದೆ. ಆದರೆ ಧ್ರುವನಿಗೆ ನಾನು ಯಾವುದೇ ತರಬೇತಿ ನೀಡಿಲ್ಲ. ಧ್ರುವ ಏಕಲವ್ಯನಂತೆ. ಎಲ್ಲವನ್ನೂ ಆತನೇ ಕಲಿತ. ನಾನು ಅವನನ್ನು ಲಾಂಚ್ ಕೂಡಾ ಮಾಡಿಲ್ಲ. ಧ್ರುವ ಒಬ್ಬ ಉತ್ತಮ ಬಾಕ್ಸಿಂಗ್ ಪಟು. ಆತ ನನಗೆ ಸಣ್ಣ ಹುಡುಗನಾದರೂ, ಆತನಿಂದ ನಾನೂ ಕೆಲ ವಿಷಯಗಳನ್ನು ಕಲಿಯುತ್ತಿದ್ದೇನೆ. ಆತನ ಶ್ರದ್ಧೆ, ಆಸಕ್ತಿ ಕೆಲವೊಮ್ಮೆ ಆಶ್ಚರ್ಯ ಹುಟ್ಟಿಸುತ್ತದೆ’ ಎಂದರು.


ವೈಭವಿ ಶಾಂಡಿಲ್ಯ, ಧ್ರುವ ಸರ್ಜಾ, ಅನ್ವೇಶಿ ಜೈನ್

ಜಾಗತಿಕ ಮಟ್ಟಕ್ಕೆ ಹೆಜ್ಜೆ ಇಡುವ ಸಮಯ: ‘ಇದು ನಾವು ಹೇಳುವ ಅದ್ಭುತವಾದ ಕಥೆಗಳನ್ನು ಜಗತ್ತು ನೋಡುವ ಕಾಲ. ನಮ್ಮ ಸಾಮರ್ಥ್ಯವನ್ನು ಜಾಗತಿಕ ಮಟ್ಟದಲ್ಲಿ ಪ್ರದರ್ಶಿಸುವ ಸಮಯ ಇದಾಗಿದೆ. ಪ್ರಾಮಾಣಿಕವಾಗಿ ಹೇಳಬೇಕೆಂದರೆ ನಟನಾಗಿ ನನ್ನನ್ನು ನಾನು ಸ್ಥಿರವಾಗಿ ಸ್ಥಾಪಿಸಬೇಕಿತ್ತು. ಹಾಗೆಯೇ ನಿರ್ಮಾಪಕನಾಗಿ ಹೆಚ್ಚಿನ ಗಳಿಕೆಯ ಉದ್ದೇಶದಿಂದಲೇ ಸಿನಿಮಾವನ್ನು ಪ್ಯಾನ್ ವರ್ಲ್ಡ್ ಮಟ್ಟದಲ್ಲಿ ತೆಗೆದುಕೊಂಡು ಹೋಗುತ್ತಿದ್ದೇವೆ. ಈ ಸಿನಿಮಾವನ್ನು ನೋಡಿದ ಬಳಿಕ ಎಲ್ಲರೂ ಭಾರತೀಯ ಸಿನಿಮಾದ ಬಗ್ಗೆ ಹೆಮ್ಮೆಪಡಲಿದ್ದಾರೆ. Good things do take time...ನಾವು 150 ನಿಮಿಷದ ಸಿನಿಮಾಗಾಗಿ 250 ದಿನ ಚಿತ್ರದ ಚಿತ್ರೀಕರಣ ನಡೆಸಿದೆವು’ ಎನ್ನುತ್ತಾರೆ ಧ್ರುವ ಸರ್ಜಾ.

ಮಸ್ಟಾಂಗ್ ಉಡಾಯಿಸಿದ ರವಿ ವರ್ಮಾ!: ಮುಂಬೈನ ರೈಲು ನಿಲ್ದಾಣವೊಂದರ ಬಳಿ ಕಾರು ಚೇಸಿಂಗ್ ದೃಶ್ಯದ ಚಿತ್ರೀಕರಣದ ವೇಳೆ ಭಾರಿ ಮೌಲ್ಯದ ಮಸ್ಟಾಂಗ್ ಕಾರೊಂದು ಹಾನಿಯಾಗಿ ನಿರ್ಮಾಪಕರಿಗೆ ಬಹಳ ನಷ್ಟವಾಗಿದ್ದಕ್ಕೆ ಸಾಹಸ ನಿರ್ದೇಶಕ ರವಿವರ್ಮಾ ವೇದಿಕೆಯಲ್ಲೇ ಕ್ಷಮೆ ಕೋರಿದರು.

ಚಿತ್ರದ ನಿರ್ಮಾಪಕ ಉದಯ್ ಕೆ.ಮೆಹ್ತಾ, ನಟಿಯರಾದ ವೈಭವಿ ಶಾಂಡಿಲ್ಯ, ಅನ್ವೇಶಿ ಜೈನ್, ಸಂಗೀತ ನಿರ್ದೇಶಕ ರವಿ ಬಸ್ರೂರ್, ಛಾಯಾಚಿತ್ರಗ್ರಾಹಕ ಸತ್ಯ ಹೆಗಡೆ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು. ❖

‘ಟಾಕ್ಸಿಕ್’ಗೆ ಕ್ಲ್ಯಾಪ್ ಮಾಡಿದ ಸೆಟ್ ಬಾಯ್


ಯಶ್ ಹಾಗೂ ಕೆವಿಎನ್ ಪ್ರೊಡಕ್ಷನ್ಸ್‌ನ ಕೆ. ವೆಂಕಟ್ ನಾರಾಯಣ

ಯಶ್ ನಟನೆಯ ಹೊಸ ಸಿನಿಮಾ, ಗೀತು ಮೋಹನ್‌ದಾಸ್ ಆ್ಯಕ್ಷನ್ ಕಟ್ ಹೇಳುತ್ತಿರುವ ‘ಟಾಕ್ಸಿಕ್’ ಸಿನಿಮಾದ ಮುಹೂರ್ತ ಬೆಂಗಳೂರಿನಲ್ಲಿ ಗುರುವಾರ(ಆಗಸ್ಟ್ 8) ನಡೆಯಿತು. ವಿಶೇಷ ಏನೆಂದರೆ ಸೆಟ್ ಬಾಯ್ ಆಗಿ ಕಾರ್ಯನಿರ್ವಹಿಸುತ್ತಿರುವ ಸುನೀಲ್ ಎಂಬುವವರು ಕ್ಲ್ಯಾಪ್ ಮಾಡುವುದರ ಮೂಲಕ ಚಿತ್ರೀಕರಣಕ್ಕೆ ಚಾಲನೆ ನೀಡಿದರು.

2023ರ ಡಿಸೆಂಬರ್ 8ರಂದು ‘ಟಾಕ್ಸಿಕ್’ ಸಿನಿಮಾ ಶೀರ್ಷಿಕೆ ಘೋಷಣೆಯಾಗಿತ್ತು. ಇದಾದ ಬಳಿಕ ಬೆಂಗಳೂರಿನ ಎಚ್‌ಎಂಟಿ ಮೈದಾನದಲ್ಲಿ ಚಿತ್ರದ ಚಿತ್ರೀಕರಣಕ್ಕಾಗಿ ಬೃಹತ್ ಸೆಟ್‌ಗಳ ನಿರ್ಮಾಣ ಆರಂಭವಾಗಿತ್ತು. ಇಲ್ಲೇ ಮುಹೂರ್ತವೂ ನಡೆದಿದೆ. ಶೀರ್ಷಿಕೆ ಘೋಷಣೆಯಾಗಿ ಎಂಟು ತಿಂಗಳ ಬಳಿಕ ಚಿತ್ರದ ಶೂಟಿಂಗ್ ಆರಂಭವಾಗಿದೆ. ಈ ಸಿನಿಮಾವನ್ನು ಕೆವಿಎನ್ ಪ್ರೊಡಕ್ಷನ್ಸ್ ಹಾಗೂ ಯಶ್ ಅವರ ಮಾನ್‌ಸ್ಟರ್ ಮೈಂಡ್ ಕ್ರಿಯೇಷನ್ಸ್ ನಿರ್ಮಾಣ ಮಾಡುತ್ತಿದೆ. 2025ರ ಏಪ್ರಿಲ್ 10ರಂದು ಸಿನಿಮಾ ಬಿಡುಗಡೆಯಾಗಲಿದೆ ಎಂದು ಈಗಾಗಲೇ ಘೋಷಿಸಲಾಗಿದ್ದು, ಎಂಟು ತಿಂಗಳಲ್ಲಿ ಚಿತ್ರೀಕರಣ ಪೂರ್ಣಗೊಳಿಸಿ ಬಿಡುಗಡೆ ಸಾಧ್ಯವೇ ಎಂಬ ಪ್ರಶ್ನೆಯೂ ಉದ್ಭವಿಸಿದೆ.

‘ಟಾಕ್ಸಿಕ್’ ಯಶ್ ನಟನೆಯ 19ನೇ ಸಿನಿಮಾ. ಯಶ್ ನಟನೆಯ ‘ಕೆ.ಜಿ.ಎಫ್. ಚಾಪ್ಟರ್–2’ ಬಿಡುಗಡೆಗೊಂಡು ಎರಡು ವರ್ಷಗಳ ಉರುಳಿವೆ. ಹೀಗೆ ಒಟ್ಟಾರೆ ಮೂರು ವರ್ಷಗಳ ಬಳಿಕ ಯಶ್ ನಟನೆಯ ಹೊಸ ಸಿನಿಮಾ ಬಿಡುಗಡೆಯಾಗಲಿದೆ. ‘ಟಾಕ್ಸಿಕ್’ ಸಿನಿಮಾದ ತಾರಾಬಳಗವನ್ನು, ತಾಂತ್ರಿಕ ವರ್ಗವನ್ನು ಚಿತ್ರತಂಡ ಇನ್ನೂ ಘೋಷಿಸಿಲ್ಲ.

8ರ ನಂಟು: ಯಶ್ ಜನ್ಮದಿನ ಜ. 8ರಂದಿದೆ, ‘ಟಾಕ್ಸಿಕ್’ ಶೀರ್ಷಿಕೆ ಘೋಷಣೆಯಾಗಿದ್ದು ಡಿ.8ರಂದು. ಇದೀಗ ಚಿತ್ರದ ಮುಹೂರ್ತವೂ ಆಗಸ್ಟ್ 8ರಂದು ನಡೆದಿದೆ. ಹೀಗೆ ಯಶ್ ಅವರಿಗೆ ‘8’ರ ನಂಟು ಬಹಳಷ್ಟಿದೆ. ❖


ಕಿಶೋರ್

‘ಆಪರೇಷನ್ ಕೊಂಬುಡಿಕ್ಕಿ’ಗೆ ಕಿಶೋರ್ ನಾಯಕ

‘ಶಿವಾಜಿ ಸುರತ್ಕಲ್’ ಸಿನಿಮಾ ಸರಣಿಯ ನಿರ್ಮಾಪಕ ಅನುಪ್ ಹನುಮಂತೇಗೌಡ ತಮ್ಮ ಮೂರನೇ ಸಿನಿಮಾ ನಿರ್ಮಾಣಕ್ಕೆ ಸಜ್ಜಾಗಿದ್ದಾರೆ. ಎಸ್.ಮಹೇಂದರ್ ಆ್ಯಕ್ಷನ್ ಕಟ್ ಹೇಳಲಿರುವ ಈ ಚಿತ್ರದಲ್ಲಿ ನಟ ಕಿಶೋರ್ ಮುಖ್ಯಭೂಮಿಕೆಯಲ್ಲಿರಲಿದ್ದಾರೆ.

ಚಿತ್ರಕ್ಕೆ ‘ಆಪರೇಷನ್ ಕೊಂಬುಡಿಕ್ಕಿ’ ಎಂಬ ಶೀರ್ಷಿಕೆ ಇಡಲಾಗಿದೆ. ‘ಸಿಲ್ವರ್ ಸ್ಕ್ರೀನ್ ಸ್ಟುಡಿಯೋಸ್’ ಎಂಬ ನಿರ್ಮಾಣ ಸಂಸ್ಥೆಯಡಿ ಈ ಸಿನಿಮಾವನ್ನು ಅನುಪ್ ನಿರ್ಮಾಣ ಮಾಡುತ್ತಿದ್ದಾರೆ. ‘ಕಂಠಿ’ ಸಿನಿಮಾ ಮೂಲಕ ಚಿತ್ರರಂಗಕ್ಕೆ ಹೆಜ್ಜೆ ಇಟ್ಟು, ಹಿಂದಿ ವೆಬ್ ಸರಣಿಯಲ್ಲೂ ನಟಿಸಿ ದಕ್ಷಿಣ ಭಾರತದ ಬೇಡಿಕೆಯ ನಟರಾಗಿರುವ ಕಿಶೋರ್ ಈ ಸಿನಿಮಾದ ನಾಯಕ. ‘ಕೆ.ಜಿ.ಎಫ್.’, ‘ಸಲಾರ್’ ಖ್ಯಾತಿಯ ರವಿ ಬಸ್ರೂರ್ ಈ ಚಿತ್ರಕ್ಕೆ ಸಂಗೀತ ನೀಡಲಿದ್ದಾರೆ. ಕರುಣಾಕರ್ ಛಾಯಾಚಿತ್ರಗ್ರಹಣ, ದೀಪು ಎಸ್. ಕುಮಾರ್ ಸಂಕಲನ ಈ ಚಿತ್ರಕ್ಕಿದೆ. ❖



ಮೈಸೂರು ಚಲೋ

ಸಿದ್ದರಾಮಯ್ಯ ರಾಜೀನಾಮೆಯೇ ಪರಿಹಾರ

ಪಾದಯಾತ್ರೆಗೆ ಬೆಚ್ಚಿದ ಕಾಂಗ್ರೆಸ್

ಭ್ರಷ್ಟ ಕಾಂಗ್ರೆಸ್ ಹಗರಣಗಳ ಸರ್ಕಾರ

ಬೆಂಗಳೂರು: ಕಾಂಗ್ರೆಸ್ ಸರ್ಕಾರವನ್ನು ಜನ-ಸಾಮಾನ್ಯರು ಪ್ರಶ್ನಿಸುವ ಮಟ್ಟಿಗೆ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಹಗರಣ, ಮುಡಾ ನಿವೇಶನಗಳ ಹಂಚಿಕೆ ಅಕ್ರಮವು ಚರ್ಚೆಯ ಕೇಂದ್ರ ಬಿಂದುವಾಗಿ ರಾಷ್ಟ್ರ ಮಟ್ಟದಲ್ಲೂ ಗಮನಸೆಳೆದಿವೆ.

ಅಹಿಂದ ಹೆಸರು ಹೇಳಿಕೊಂಡು ಅಧಿಕಾರ, ಸಾಮಾಜಿಕ ನ್ಯಾಯದ ಬಗ್ಗೆ ಪುಂಖಾನುಪುಂಖವಾಗಿ ಸಾರುತ್ತಾ ಬಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಈ ಹಗರಣಗಳು ಸುತ್ತುವರಿದಿವೆ.

ಭ್ರಷ್ಟಚಾರಮುಕ್ತ ಆಡಳಿತ ಕೊಡುತ್ತೇವೆ ಎಂದು ಭರವಸೆಯಿತ್ತವರು, ಅಧಿಕಾರದ ಗದ್ದುಗೆ ಏರಿದ 15 ತಿಂಗಳಲ್ಲಿ ಹೀಗಾ ಮಾಡೋದು? ಎಂದು ಜನರು ನೇರವಾಗಿ ಕೇಳುತ್ತಿದ್ದಾರೆ. ಭ್ರಷ್ಟ ಸರ್ಕಾರದ ವಿರುದ್ಧ ಜನರ ಪರವಾಗಿ ಧ್ವನಿ ಎತ್ತುವುದು ಪ್ರತಿಪಕ್ಷಗಳ ಜವಾಬ್ದಾರಿ. ಪ್ರತಿಪಕ್ಷಗಳ ಹೋರಾಟವು ತಮ್ಮನ್ನೇ ಗುರಿ ಮಾಡಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭಾವಿಸುವುದು ಏಕೆ? ಸಿದ್ದರಾಮಯ್ಯ ಹೆಸರು ತಳುಕು ಹಾಕಿಕೊಂಡ ಕಾರಣ ಅವ್ಯವಹಾರ, ಅಕ್ರಮಗಳನ್ನು ಮಟ್ಟಹಾಕಬೇಕಾದ ಸರ್ಕಾರ ಕೈಚೆಲ್ಲಿ ಕುಳಿತಿದೆ ಎಂಬ ಸಂದೇಹ ಬಲವಾಗಿದೆ.

ಸರ್ಕಾರ ಅಸ್ಥಿರಗೊಳಿಸುವ ಹೇಳಿಕೆ ಹಾಸ್ಯಾಸ್ಪದ

ಎರಡೂ ಹಗರಣಗಳ ಬಗ್ಗೆ ವಿಧಾನ ಮಂಡಲದಲ್ಲಿ ಸರ್ಕಾರ ಸ್ಪಷ್ಟವಾಗಿ ಉತ್ತರಿಸಲಿಲ್ಲ. ಮುಡಾ ವಿಚಾರ ಪ್ರಸ್ತಾಪಿಸಿದಾಗ ಚರ್ಚೆಗೂ ಅವಕಾಶ ಕೊಡದೆ ಮುಖ್ಯಮಂತ್ರಿ ಓಡಿ ಹೋದರು. ಇದು, ಹಗರಣಗಳಲ್ಲಿ ಮುಖ್ಯಮಂತ್ರಿ ಭಾಗಿಯಾಗಿದ್ದಾರೆ ಎನ್ನುವುದು ಮೇಲ್ನೋಟಕ್ಕೆ ಸ್ಪಷ್ಟಪಡಿಸಿತು. ವಂಚಿತ ಜನರಿಗೆ ನ್ಯಾಯಕೊಡಿಸಲು ಬೀದಿಗೆ ಇಳಿದರೆ, ಸರ್ಕಾರ ಅಸ್ಥಿರಗೊಳಿಸುವ ಪ್ರಯತ್ನವೆಂದು ಕಾಂಗ್ರೆಸ್ ನಾಯಕರು ಹೇಳುತ್ತಿರುವುದು ಹಾಸ್ಯಾಸ್ಪದ.

ಅನುಮಾನಾಸ್ಪದ ನಡೆ: ವಾಲ್ಮೀಕಿ ಹಗರಣ, ಮುಡಾ ಅಕ್ರಮ ಬಯಲಿಗೆ ಬಂದ ಹೊಸತರಲ್ಲಿ ಸಿದ್ದರಾಮಯ್ಯ ನಡೆ-ನುಡಿ ಎರಡೂ ಅನುಮಾನಾಸ್ಪದವೇ ಸರಿ. ವಾಲ್ಮೀಕಿ ನಿಗಮದ ಹಗರಣದ ತನಿಖೆಗೂ ಮುನ್ನವೇ ಅಂದಿನ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವ ಬಿ. ನಾಗೇಂದ್ರಗೆ ಕ್ಲೀನ್ ಚಿಟ್ ಕೊಟ್ಟು ನಂತರ ಸಚಿವ ಸ್ಥಾನಕ್ಕೆ ರಾಜೀನಾಮೆ ಪಡೆದರು.

ಆಡಳಿತದ ಚುಕ್ಕಾಣಿ ಹಿಡಿಯುತ್ತಲೇ ಬಿಜೆಪಿ ಆಡಳಿತಾವಧಿಯ ಟೆಂಡರ್‌ಗಳು, ಆದೇಶಗಳ ರದ್ದು ಇಲ್ಲವೇ ತಡೆಹಿಡಿಯಲಾಯಿತು. ಅದೇ ರೀತಿ 50:50 ನಿವೇಶನ ಹಂಚಿಕೆ ನಿಯಮವನ್ನು ರದ್ದು ಮಾಡಲು ಅವಕಾಶವಿತ್ತಲ್ಲ. ಹಾಗೆ ಮಾಡುವ ಬದಲು ಸಿದ್ದರಾಮಯ್ಯ ತಮ್ಮನ್ನು ರಕ್ಷಿಸಿಕೊಳ್ಳುವ ಗುರಾಣಿಯಾಗಿ ಬಳಸಿಕೊಳ್ಳುತ್ತಿದ್ದಾರೆ.

ವರ್ಗಾವಣೆ ದಂಧೆಯಿಂದ ಹಿಡಿದು ಬಯಲಾದ ಅಕ್ರಮಗಳವರೆಗೆ ಕಾಂಗ್ರೆಸ್ ಸರ್ಕಾರ ಹಗರಣಗಳ ಸರದಾರ ಎನ್ನುವುದು ದೃಢಪಟ್ಟಿದೆ. ಸತ್ಯಾಂಶ ಹೊರಬರಲು ಮುಖ್ಯಮಂತ್ರಿ ಸ್ಥಾನಕ್ಕೆ ಸಿದ್ದರಾಮಯ್ಯ ರಾಜೀನಾಮೆಯೊಂದೇ ಪರಿಹಾರವಾಗಿದೆ.

ಯಶಸ್ವಿ ಯಾತ್ರೆಯ ಹಿಂದಿನ ಶಕ್ತಿ

ಬೆಂಗಳೂರಿನಿದ ಮೈಸೂರು ವರೆಗಿನ ಪಾದಯಾತ್ರೆ ರೂಪಿಸುವುದು ಕಷ್ಟಕರವಲ್ಲ, ಆದರೆ ಅದರ ಅನುಷ್ಠಾನ ಮಾಡುವುದು ಸಲೀಸಲ್ಲ. ಆದರೆ ಪಕ್ಷದ ಮುಖಂಡರು, ಕಾರ್ಯಕರ್ತರನ್ನೊಳಗೊಂಡ ಸಮನ್ವಯ ಸಮಿತಿ ರಚಿಸಿ ಆ ಮೂಲಕ ಯಶಸ್ವಿ ನಿರ್ವಹಣೆ ಮಾಡಲಾಗಿದೆ. ಬಿಜೆಪಿ- ಜೆಡಿಎಸ್ ಸಮನ್ವಯ ಸಮಿತಿ, ಮಾರ್ಗ ನಿರ್ವಹಣಾ ಸಮಿತಿ, ಮಾಧ್ಯಮ, ಸಮಾರೋಪ, ಪ್ರಚಾರ, ರಕ್ಷಣೆ, ಅಡ್ವಾನ್ಸ್ ಟೀಮ್, ಕಾನ್ ವೇ, ಊಟ ಉಪಾಹಾರ, ಕುಡಿಯುವ ನೀರು, ಪಾನೀಯ, ವಸತಿ, ಮಧ್ಯಾಹ್ನ ವಿಶ್ರಾಂತಿ, ಸಾಮಾಜಿಕ ಜಾಲತಾಣ, ಘೋಷಣೆ ಮತ್ತು ಭಜನೆ, ವೈದ್ಯಕೀಯ, ಕಲಾತಂಡ, ಪ್ರಮುಖರ ಸಂಪರ್ಕ, ವಾಹನ, ಸ್ವಚ್ಛತೆ, ದಲಿತ ಸಂಘಟನೆಗಳ ಸಂಪರ್ಕ ಹೀಗೆ 21 ತಂಡಗಳು ಬಿ.ವೈ.ವಿಜಯೇಂದ್ರ ನೇತೃತ್ವದಲ್ಲಿ ರಚನೆಯಾಗಿ, ತಮ್ಮ ಕರ್ತವ್ಯ ನಿರ್ವಹಿಸಿದ್ದವು.

ಶೋಷಿತ ಸಮುದಾಯದ ಅಧಿಕಾರಿ/ ಸಿಬ್ಬಂದಿ ಸಾವು

- ಅಕ್ರಮ ಹಣ ವರ್ಗಾವಣೆಗೆ 'ಬಲಿಪಶು'ವಾಗಲು ಸಿದ್ದವಿಲ್ಲದೆ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧೀಕ್ಷಕ ಚಂದ್ರಶೇಖರನ್ ಆತ್ಮಹತ್ಯೆಗೆ ಶರಣು
- ವರ್ಗಾವಣೆ ದಂಧೆಯ ದಾಹ ತಣಿಸಲು ಪ್ರಯತ್ನಿಸಿ ಸೋತ ಯಾದಗಿರಿ ಪಿಎಸ್‌ಐ ಪರಶುರಾಮ್ ಅನುಮಾನಾಸ್ಪದ ಸಾವು
- ಅಕ್ರಮ ಮರಳು ಸಾಗಣೆ ತಡೆಗೆ ಮುಂದಾದ ಕಲಬುರಗಿ ಜಿಲ್ಲೆ ನೆಲೋಗಿ ಠಾಣೆಯ ಮುಖ್ಯಪೇದೆ ಮಯೂರ ಎನ್ನುವವರ ಮೇಲೆ ವಾಹನ ಚಲಾಯಿಸಿ ಹತ್ಯೆ
- ಕಲಬುರಗಿ ಜಿಲ್ಲೆಯ ಶಹಪುರ ಉಪವಲಯ ಅರಣ್ಯಾಧಿಕಾರಿ ಹಿಂದುಳಿದ ವರ್ಗಕ್ಕೆ ಸೇರಿದ ಮಹೇಶ್ ಕನಕಟ್ಟಿ ಬರ್ಬರ ಕೊಲೆ



ಯಾತ್ರೆಗೆ ಚಾಲನೆ ನೀಡಿದ ಕ್ಷಣ

- ಪ್ರತಿ ದಿನ ಒಂದೊಂದು ಮೋರ್ಚಾಗೆ ಜವಾಬ್ದಾರಿ, ರಾಜ್ಯವ್ಯಾಪಿ ಪದಾಧಿಕಾರಿಗಳ ಉಪಸ್ಥಿತಿ
- ಪ್ರತಿ ಜಿಲ್ಲೆಯಿಂದ ತಲಾ 100 ಕಾರ್ಯಕರ್ತರಂತೆ 3000 ಮಂದಿ ಪೂರ್ಣ ಯಾತ್ರೆಯಲ್ಲಿ ಭಾಗಿ
- ಪ್ರತಿ ದಿನ ಎಂಟು ವಿಧಾನಸಭಾ ಕ್ಷೇತ್ರದಿಂದ ಕಾರ್ಯಕರ್ತರು ಯಾತ್ರೆಗೆ ಸಾಥ್
- ಪ್ರತಿ ಹೊತ್ತಿಗೆ 15 ಸಾವಿರ ಮಂದಿಗೆ ಊಟ ಉಪಹಾರ ವ್ಯವಸ್ಥೆ
- ಪ್ರತಿ ಹಂತದಲ್ಲೂ ಯುವ ಸ್ವಯಂಸೇವಕರ ನಿಗಾ ವ್ಯವಸ್ಥೆ, ಪ್ರಕೋಷ್ಠಗಳ ಜವಾಬ್ದಾರಿ
- ರಾಜ್ಯದ ವಿವಿಧ ಕಡೆಗಳಿಂದ ಆಗಮಿಸಿದ್ದ ಕಾರ್ಯಕರ್ತರಿಗೆ ಅಚ್ಚುಕಟ್ಟಾದ ವಸತಿ ವ್ಯವಸ್ಥೆ
- ಪ್ರತಿ ದಿನ ಬೆಳಗ್ಗೆ ಉಪಾಹಾರ, ಮಧ್ಯಾಹ್ನ- ರಾತ್ರಿ ಭೋಜನದಲ್ಲಿ ವಿಶೇಷತೆ
- ಕಾರ್ಯಕರ್ತರ ಆರೋಗ್ಯ ಗಮನಿಸಲು ವಿಶೇಷ ತಂಡ, ತುರ್ತು ಸೇವೆಗೆ ಆಂಬುಲೆನ್ಸ್ ಬಳಕೆ
- ಯಾತ್ರೆ ಸಾಗುವ ಮಾರ್ಗದುದ್ದಕ್ಕೂ ಅಡೆತಡೆ ಬರದಂತೆ ನೋಡಿಕೊಳ್ಳಲು ಯುವಮೋರ್ಚಾ ತಂಡ
- ಮುಡಾ ಹಾಗೂ ವಾಲ್ಮೀಕಿ ನಿಗಮದಲ್ಲಿ ನಡೆದ ಹಗರಣದ ಬಗ್ಗೆ ಜನರಿಗೆ ಮಾಹಿತಿ ನೀಡಲು ವ್ಯವಸ್ಥೆ

ಹಗರಣಗಳ ಹೂರಣ, ಸಿಎಂ ಶಾಮೀಲು ಕಾರಣ

ಭ್ರಷ್ಟಾಚಾರಕ್ಕೆ ಸೆಡ್ಡು ಹೊಡೆದ ಮೈಸೂರು ಚಲೋ ● ಬಿ.ವೈ.ವಿಜಯೇಂದ್ರ ಸಾರಥ್ಯಕ್ಕೆ ಸಿಕ್ಕ ಫಲ

ಸರ್ಕಾರದ ಹಗರಣಗಳ ವಿರುದ್ಧ ಜನಜಾಗೃತಿ ಮೂಡಿಸಲು ಹಾಗೂ ಪ್ರಧಾನ ಪ್ರತಿಪಕ್ಷ ವಾಗಿ ಜವಾಬ್ದಾರಿ ನಿರ್ವಹಿಸುವ ಪ್ರಯತ್ನದ ಭಾಗವಾಗಿ ನಡೆದಿರುವ ಮೈಸೂರು ಚಲೋ ಪಾದಯಾತ್ರೆ ನಿರೀಕ್ಷೆಗೂ ಮೀರಿ ಯಶಸ್ಸು ಕಂಡಿದೆ.

ಮುಡಾ ವಿಚಾರದಲ್ಲಿ ಮೈಸೂರಿನಲ್ಲಿ ಹೋರಾಟ ನಡೆಸಲು ಹೊರಟುನಿಂತ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರನ್ನು ಯಾವಾಗ ರಾಜ್ಯ ಸರ್ಕಾರ ಬೆಂಗಳೂರಿನಲ್ಲೇ ತಡೆದು ಹೋರಾಟ ಹತ್ತಿಕ್ಕಲು ಮುಂದಾಯಿತೋ ಆಗಲೇ ಹಗರಣದ ಬಗೆಗಿನ ಅನುಮಾನ ಇನ್ನಷ್ಟು ದೃಢಪಟ್ಟಿದ್ದಲ್ಲದೇ ಹೋರಾಟ ತೀವ್ರಗೊಳ್ಳುವುದಕ್ಕೂ ಕಾರಣವಾಯಿತು.

ನಿರಂತರ ಹೋರಾಟ: ಬರಗಾಲ ನಿರ್ವಹಣೆ ವೈಫಲ್ಯ, ಅಭಿವೃದ್ಧಿ ಶೂನ್ಯ, ಬೆಲೆಗಳ ಏರಿಕೆ ವಿರುದ್ಧ ಕಾಂಗ್ರೆಸ್ ಸರ್ಕಾರಕ್ಕೆ ಎಚ್ಚರಿಕೆ ಗಂಟೆ ಬಾರಿಸಲು ಬಿಜೆಪಿ ಒಂದಿಲ್ಲೊಂದು ಚಳವಳಿ ನಡೆಸುತ್ತಲೇ ಬಂದಿದೆ. ಮೊದಲ ಆರು ತಿಂಗಳು ಅವಕಾಶ ಕೊಡಬೇಕು ಎಂದು ಪ್ರತಿಪಕ್ಷ ಬಯಸಿತ್ತು. ಆದರೆ ಕಾಂಗ್ರೆಸ್ ಪಕ್ಷ ಸ್ವಯಂ ಘೋಷಣೆಯಂತೆ ಅಧಿಕಾರಕ್ಕೆ ಬಂದ ತಕ್ಷಣ ಗ್ಯಾರಂಟಿಗಳನ್ನು ಜಾರಿಗೆ ತರಲಿಲ್ಲ. ಕೊಟ್ಟ ಮಾತಿನಂತೆ ನಡೆದುಕೊಳ್ಳುವಂತೆ ಹೇಳುವುದಕ್ಕೂ ಹೋರಾಟ ಮಾಡಬೇಕಾಯಿತು. ಒತ್ತಡಕ್ಕೆ ಮಣಿದ ಕಾಂಗ್ರೆಸ್ ಸರ್ಕಾರ ಐದು ಗ್ಯಾರಂಟಿಗಳನ್ನು ಜಾರಿಗೊಳಿಸಿತು.

ಹಗರಣಗಳ ಹೆಬ್ಬಾಗಿಲು: ಅಲ್ಪಾವಧಿಯಲ್ಲಿ ಜನರ ವಿಶ್ವಾಸ ಕಳೆದುಕೊಂಡಿದ್ದಕ್ಕೆ ಕಲಿಯುವ ಬದಲು ಅಸಾಧ್ಯವಾದಷ್ಟು ಬಾಚಿಕೋಡಿ ಎನ್ನುವ ಅಘೋಷಿತ ಸೂಚನೆ ಪರಿಣಾಮ ಹಗರಣಗಳ ಹೆಬ್ಬಾಗಿಲು ತೆರೆದು ಬಿಟ್ಟಿದೆ. ಪರಿಶಿಷ್ಟ ಜಾತಿ, ಪಂಗಡಗಳ ಉಪ ಯೋಜನೆ ಅನುದಾನ ಅನ್ಯ ಉದ್ದೇಶಕ್ಕೆ ಬಳಸಿಕೊಂಡು ಪರಿಶಿಷ್ಟ ಸಮುದಾಯಗಳಿಗೆ ವಂಚಿಸಿತು. ವಾಲ್ಮೀಕಿ ನಿಗಮ ಮತ್ತು ಮುಡಾ ಅಕ್ರಮದ ವಿರುದ್ಧ ಕೈಗೆತ್ತಿಕೊಂಡ ಪ್ರತಿಭಟನೆಯನ್ನು ಪೊಲೀಸ್ ಬಲ ಬಳಸಿ ಹತ್ತಿಕ್ಕಲು ಪ್ರಯತ್ನಿಸಿತು. ಮುಖ್ಯಮಂತ್ರಿ ಸಿದ್ದರಾಮಯ್ಯ ಪಲಾಯನವು ಭ್ರಷ್ಟಾಚಾರದ ವಿರುದ್ಧ ಸೆಡ್ಡು ಹೊಡೆಯಲು ಹುರಿದುಂಬಿಸಿತು. ಮಳೆಗಾಲದಲ್ಲೂ 130 ಕಿ.ಮೀ. ದೂರ ಅಂತರದ 'ಮೈಸೂರು ಚಲೋ ಪಾದಯಾತ್ರೆ'ಗೆ ಸರ್ಕಾರದ ಹಗರಣಗಳು ಹೂರಣ, ಮುಖ್ಯಮಂತ್ರಿ ಸಿದ್ದರಾಮಯ್ಯ ಶಾಮೀಲು ಕಾರಣ.

ಶನಿವಾರ ಸಮಾರೋಪ

ಮೈಸೂರು ಚಲೋ ಪಾದಯಾತ್ರೆ ಶನಿವಾರ ಬೃಹತ್ ಸಮ್ಮೇಳನದ ಮೂಲಕ ಸಮಾರೋಪಗೊಳ್ಳಲಿದ್ದು, ರಾಜ್ಯ, ಕೇಂದ್ರ ನಾಯಕರು ಭಾಗವಹಿಸಲಿದ್ದಾರೆ. ಸಾರ್ವಜನಿಕರು ಲಕ್ಷ ಲಕ್ಷ ಸಂಖ್ಯೆಯಲ್ಲಿ ಭಾಗವಹಿಸಿ ಹಗರಣಗಳ ಕಾಂಗ್ರೆಸ್ ಸರ್ಕಾರವನ್ನು ಕೊನೆಗೊಳಿಸಬೇಕಿದೆ.

07 ದಿನಗಳ ಪಾದಯಾತ್ರೆ

130 ಕಿಮೀಗಳ ದೂರ ಅಂತರ

07 ಕಡೆ ಬಹಿರಂಗ ಸಮಾವೇಶ

07 ನಗರಪಟ್ಟಣಗಳಲ್ಲಿ ಜನಜಾತ್ರೆ



ಕಾರ್ಯಕರ್ತರೊಂದಿಗೆ ರಸ್ತೆ ಬದಿ ಗೂಡಂಗಡಿಯಲ್ಲಿ ಕಾಫಿ ಸೇವಿಸಿ ಸರಳತೆ ಮೆರೆದರು.

ಪರಿವರ್ತನೆಯ ಗಾಳಿ

ಬಿಜೆಪಿ-ಜೆಡಿಎಸ್ ಜಂಟಿ ಪಾದಯಾತ್ರೆಗೆ ಕಾಂಗ್ರೆಸ್ ಪಕ್ಷದ ಜನಾಂದೋಲನ ಪ್ಲಸ್ ಪಾಯಿಂಟ್ ಆಗಿದೆ. ಭ್ರಷ್ಟಾಚಾರದ ವಿರುದ್ಧ ಹೋರಾಟವೆಂಬ ಸಂದೇಶ ರವಾನೆಯಾಗಿ ಪರಿವರ್ತನೆ ಗಾಳಿ ಬೀಸಿದೆ.



ಕಾಂಗ್ರೆಸ್‌ಗೆ ನಡುಕ

ಚುನಾವಣೆಗಳಿಲ್ಲದ ಹೊತ್ತಲ್ಲದಿದ್ದರೂ ಪಾದಯಾತ್ರೆ ಶುರುವಾದ ದಿನದಿಂದಲೇ ನಿರೀಕ್ಷೆಗೆ ಮೀರಿ ಜನ ಸ್ಪಂದಿಸ ಲಾರಂಭಿಸಿದರು. ರಾಜಕೀಯ ಲಾಭಕ್ಕಲ್ಲವೆಂದು ಜನರಿಗೆ ಮನವರಿಕೆ ಮಾಡಿಕೊಡುವಲ್ಲಿ 'ಮೈಸೂರು ಚಲೋ' ಯಶಸ್ವಿಯಾಗಿದೆ. ಭ್ರಷ್ಟಾಚಾರ ವಿರುದ್ಧದ ಹೋರಾಟ ತಾರ್ಕಿಕ ಅಂತ್ಯ ಕಾಣಿಸುವುದಕ್ಕೆಂದು ಸ್ವಯಂ ಸ್ಫೂರ್ತಿಯಿಂದ ಭಾಗಿಯಾಗುತ್ತಿದ್ದಾರೆ.

ಭಾರಿ ಪ್ರಮಾಣದಲ್ಲಿ ಜನರ ಜಮಾವಣೆ ಕಾಂಗ್ರೆಸ್‌ಗೆ ನಡುಕ ಹುಟ್ಟಿಸಿದೆ ಎನ್ನುವುದಕ್ಕೆ ಆ ಪಕ್ಷದ ಜನಾಂದೋಲನ ಯಾತ್ರೆಯೇ ಸಾಕ್ಷಿ.

ಬೆಸುಗೆಯ ಹೊಸಗೆ

ಲೋಕಸಭೆ ಚುನಾವಣೆಯಾಚೆಗೂ ಬಿಜೆಪಿ-ಜೆಡಿಎಸ್ ಒಂದಾಗಿ ಪಾದಯಾತ್ರೆ ಇಳಿದಿರುವುದು ಉಭಯ ಪಕ್ಷಗಳ ಬೆಸುಗೆ ಮತ್ತಷ್ಟು ಗಟ್ಟಿಗೊಳಿಸಿದೆ. ಲೋಕಸಭೆ ಚುನಾವಣೆ ಮಾತ್ರ ಮೈತ್ರಿ ಸೀಮಿತವಲ್ಲ. ಆಳುವ ಪಕ್ಷದ ಲೋಪದೋಷ ಎತ್ತಿ ತೋರಿಸಿ, ಸರ್ಕಾರದ ಕಿವಿ ಹಿಂಡುತ್ತೇವೆ ಎಂದು ಹೇಳಿದಂತೆ ಹೆಜ್ಜೆ ಹಾಕುತ್ತಿರುವುದು ಜನರಲ್ಲಿ ವಿಶ್ವಾಸ ಹೆಚ್ಚಿಸಿದೆ.

ವಾಲ್ಮೀಕಿ ಹಗರಣ ಏನು-ಎತ್ತ?



₹187.5 ಕೋಟಿ ಹಗರಣ

16 ಉದ್ಯಮಗಳ ಹೆಸರಿಗೆ ಕಾರಣವಿಲ್ಲದೇ ದೊಡ್ಡ ಮೊತ್ತ ವರ್ಗ

₹4-6 ಕೋಟಿ ಗಳಂತೆ ದೊಡ್ಡ ಮೊತ್ತ ವರ್ಗ

ಸಿದ್ದರಾಮಯ್ಯ ಹೇಗೆ ಹೊಣೆಗಾರರು

ಬೆಂಗಳೂರು: ಕಾಂಗ್ರೆಸ್ ಸರ್ಕಾರ ರಚನೆಯಾಗಿ ಒಂದು ವರ್ಷ ಪೂರ್ಣಗೊಂಡ ಸಂದರ್ಭದಲ್ಲಿಯೇ ವಾಲ್ಮೀಕಿ ಹಗರಣ ಹೊರಬಿದ್ದಿತು. ಈ ಸರ್ಕಾರ ಬಂದಾಗಲೆಲ್ಲ ಹಗರಣ ಎಂದು ಪ್ರತಿಪಕ್ಷದ ಆರೋಪಕ್ಕೆ ತಕ್ಕಂತೆ ಈ ಪ್ರಕರಣದಲ್ಲಿ ರೆಡ್ ಹ್ಯಾಂಡ್ ಆಗಿ ಸಿಕ್ಕಿಬಿದ್ದಿತು. ಹಗರಣ ನಡೆದೇ ಇಲ್ಲ ಎಂದು ಹೇಳುವ ಸ್ಥಿತಿಯಲ್ಲಿ ಸರ್ಕಾರವಿಲ್ಲ.

ಪರಿಶಿಷ್ಟ ಪಂಗಡದ ಜನರಿಗೆ ವಿವಿಧ ಯೋಜನೆಗಳಡಿ ತಲುಪಬೇಕಿದ್ದ ಹಣದ ಮೇಲೆ ಕಣ್ಣಿಟ್ಟು ಅದನ್ನು ಬೇನಾಮಿ ಖಾತೆಗೆ ವರ್ಗಾಯಿಸಲು ವ್ಯವಸ್ಥೆ ರೂಪಿಸಿರುವುದು ಇದರಿಂದ ಸ್ಪಷ್ಟವಾಗಿ ಗೋಚರಿಸಿದೆ. ಮುಖ್ಯವಾಗಿ ಪ್ರಭಾವಿಗಳ ಹಸ್ತಕ್ಷೇಪ ಇಲ್ಲದೆ ಇಷ್ಟೊಂದು ಧೈರ್ಯವಾಗಿ ಹಣ ವರ್ಗಾವಣೆ ಅಸಾಧ್ಯದ ಮಾತು. ಒಟ್ಟಾರೆ 187.5 ಕೋಟಿ ರೂ. ಹಗರಣದಲ್ಲಿ 94.5 ಕೋಟಿ ರೂ. ಗಳನ್ನು 16 ಉದ್ಯಮಗಳಿಗೆ 4-6 ಕೋಟಿ ರೂ. ವರ್ಗಾವಣೆಯಾಗಿರುವುದು ಕಂಡುಬಂದಿದೆ, ರಾಜ್ಯದಲ್ಲಿ3 ಕೋಟಿ ರೂ.ಗೂ ಹೆಚ್ಚಿನ ಹಣ ಬಿಡುಗಡೆಯಾಗಬೇಕಾದಂತಹ ಸಂದರ್ಭದಲ್ಲಿ ಕಡತಗಳನ್ನು ಸರ್ಕಾರದ ಹಣಕಾಸು ಇಲಾಖೆಗೆ ಕಳಿಸುವುದು ವಾಡಿಕೆ, ಈ 16 ಉದ್ಯಮಗಳಿಗೆ ಕೊಟ್ಟಿರುವ ಮೊತ್ತ ಕನಿಷ್ಠ 4.12 ಕೋಟಿ ರೂ., ಗರಿಷ್ಠ 5.98 ಕೋಟಿ ರೂ., ಅಂದರೆ ಇದರ ಕಡತಗಳು ಹಣಕಾಸು ಸಚಿವಾಲಯಕ್ಕೆ ಹೋಗಿರುವುದು ಕಂಡು ಬರುತ್ತದೆ. ಅಂದ ಮೇಲೆ ಸಿಎಂ ಮೂಗಿನ ನೇರಕ್ಕೆ ಹಣ ವರ್ಗಾವಣೆಯಾಗಿದೆ ಎಂದರ್ಥ. ಇದೇ ಕಾರಣಕ್ಕೆ ಹಣಕಾಸು ಸಚಿವರಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಇದಕ್ಕೆ ನೇರ-ಹೊಣೆ ಆಗುತ್ತಾರೆ ಎಂಬುದರಲ್ಲಿ ಅನುಮಾನವೇ ಇಲ್ಲ.

ಇಷ್ಟೇ ಅಲ್ಲದೆ ಕೇಂದ್ರ ಸರ್ಕಾರ ರಾಜ್ಯದ ಪರಿಶಿಷ್ಟ ಪಂಗಡಗಳಿಗೆ ಅಭಿವೃದ್ಧಿಗೊಳ್ಳಲು 2022-23 ನೇ ಸಾಲಿನಲ್ಲಿ 42.97 ಕೋಟಿ ರೂ. ಮತ್ತು 2023-24ನೇ ಸಾಲಿನಲ್ಲಿ 40.70 ಕೋಟಿ ಮೂಲಸೌಕರ್ಯ ಅಭಿವೃದ್ಧಿ ಮತ್ತು ವಸತಿ ಸ್ಥಳ ಅಭಿವೃದ್ಧಿಗೊಳ್ಳಲು ನೀಡಿರುವ ಮೊತ್ತಕ್ಕೆ ಬಳಕೆ ಪ್ರಮಾಣ ಪತ್ರವನ್ನು ಕಳೆದ 13 ತಿಂಗಳಲ್ಲಿ ಕೊಟ್ಟಿಲ್ಲ ಎನ್ನುವುದು ಗಮನಾರ್ಹವಾದಂತಹ ವಿಚಾರ. ಅಂದರೆ ಈ 83 ಕೋಟಿ ರೂ.ಗಳನ್ನೂ ಇದೇ ರೀತಿ ನುಂಗಿದ್ದಾರೆ ಎಂಬ ಅನುಮಾನವಿದೆ.

40 ದಿನ ತಡವೇಕೆ? ಚಾರ್ಜ್ ಶೀಟ್‌ನಲ್ಲಿ ಹೆಸರಿಲ್ಲವೇಕೆ?

ಬೇನಾಮಿ ಹಣ ವರ್ಗಾವಣೆ ಕಾರಣಕ್ಕೆ ಜಾರಿ ನಿರ್ದೇಶನಾಲಯ ತನಿಖೆ ಆರಂಭಿಸುತ್ತಿದ್ದಂತೆ ರಾಜ್ಯ ಸರ್ಕಾರ ರಚಿಸಿದ್ದ ಎಸ್ ಐಟಿ ಮಾಜಿ ಸಚಿವ ನಾಗೇಂದ್ರರನ್ನು ವಿಚಾರಣೆಗೆ ಕರೆಸಿ ವಿಚಾರಣೆ ಶಾಸ್ತ್ರ ಮಾಡಿತು. ಅಚ್ಚರಿ ಎಂದರೆ ಎಸ್ ಐಟಿ ತನಿಖೆ ಆರಂಭಿಸಿ 40 ದಿನಗಳವರೆಗೂ ನಾಗೇಂದ್ರರ ತಂಟೆಗೆ ಹೋಗಿರಲಿಲ್ಲ. ನಿಗಮದ ಅಧ್ಯಕ್ಷಶಾಸಕ ಬಸನಗೌಡ ದದ್ದಲ್ ಬಗ್ಗೆ ಯಾವ ಸುಳಿವೂ ಇದ್ದಿಲ್ಲ. ಈಗ ಎಸ್‌ಐಟಿ ಮಧ್ಯಂತರ ಚಾರ್ಜ್ ಶೀಟ್ ನಲ್ಲಿ ನಾಗೇಂದ್ರ ಹೆಸರಾಗಲಿ, ದದ್ದಲ್ ಹೆಸರಾಗಲಿ ಉಲ್ಲೇಖವೇ ಇಲ್ಲ. ಇದು ಅನುಮಾನಕ್ಕೆ ಇನ್ನಷ್ಟು ಪುಷ್ಟಿ ನೀಡಿದೆ.

ಮುಚ್ಚಿಹಾಕುವ ಹುನ್ನಾರ!

ವಾಲ್ಮೀಕಿ ನಿಗಮದ ಅಧಿಕಾರಿ ಚಂದ್ರಶೇಖರನ್ ಆತ್ಮಹತ್ಯೆ ಮಾಡಿಕೊಳ್ಳದೇ ಹೋಗಿದ್ದರೆ ಇಡೀ ಪ್ರಕರಣ ಮುಚ್ಚೇ ಹೋಗುತ್ತಿತ್ತು. ಸರ್ಕಾರದ ಹಣ ಬೇನಾಮಿ ಖಾತೆಗೆ ವರ್ಗಾವಣೆಯಾಗಿದ್ದು ಸರ್ಕಾರವೇ ರಚಿಸಿದ ಎಸ್‌ಐಟಿಯಿಂದಲೇ ಪತ್ತೆಯಾಯಿತು. ಸಹಕಾರಿ ಸಂಸ್ಥೆಯಲ್ಲಿ ಇರುವ ಹಣವೂ ನಮಗೇ ಸೇರಿದ್ದು ಎಂದು ಸರ್ಕಾರ ವಾದಿಸುತ್ತಿದೆ. ಈ ಮೂಲಕ ಇದೊಂದು ಗಂಭೀರ ಪ್ರಕರಣ ಅಲ್ಲವೇ ಅಲ್ಲ ಎಂದು ಹಾರಿಕೆ ಉತ್ತರ ನೀಡಿ ತಿಪ್ಪೇ ಸಾರಿಸಲು ಹೊರಟಂತಿದೆ.

ಸಿಎಂ ಉತ್ತರಿಸಬೇಕಿರುವ ಪ್ರಶ್ನೆಗಳು

- 1998ರಲ್ಲಿ ಭೂ ಸ್ವಾಧೀನ ಪ್ರಕ್ರಿಯೆಯಿಂದ ಸರ್ವೆ ನಂ.464 ಕೆಸರೆ ಗ್ರಾಮ ಈ ಭೂಮಿಯನ್ನು ಕೈ ಬಿಡಲಾಗಿತ್ತು ಎನ್ನುವ ಆದೇಶ ಇದೆ ಎಂದು ಹೇಳುತ್ತಾರಾದರೆ ಯಾವ ಮಾನದಂಡದಲ್ಲಿ ಈ ಭೂಮಿಯನ್ನು ಭೂಸ್ವಾಧೀನದಿಂದ ಕೈ ಬಿಡಲಾಗಿತ್ತು?
- 2017 ರಲ್ಲಿ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದರು, ಮುಡಾ ಇನ್ನು ಮುಂದೆ ನಿವೇಶನಗಳ ಹಂಚಿಕೆಯ ಪ್ರಕ್ರಿಯೆಗಳನ್ನು ರಾಜ್ಯ ಸರ್ಕಾರಕ್ಕೆ ಕಳಿಸಬೇಕಿಲ್ಲ ಎಂದು ಆದೇಶ ಮಾಡಿದ್ದವರು ಮುಖ್ಯಮಂತ್ರಿಗಳಾಗಿ ತಾವಲ್ಲವೇ?
- 50:50 ಅನುಪಾತದಲ್ಲಿ ಪರಿಹಾರ ಎಂದು ಮುಡಾ ನಿಯಮ ಮಾಡಿಕೊಂಡಿದ್ದು ಇನ್ನು ಮುಂದಿನ ಭೂಸ್ವಾಧೀನಕ್ಕೆ. ಆದರೆ ಹಿಂದಿನ ಎಲ್ಲ ಪ್ರಕರಣಕ್ಕೂ ಅದೇ ಪರಿಹಾರ ಅನುಪಾತ ಅನ್ವಯಿಸುವ ಸಿದ್ದರಾಮಯ್ಯ ಮುಡಾ, ಕೆಎಚ್‌ಬಿ, ಬಿಡಿಎ ಅಥವಾ ಇನ್ನಿತರೆ ಸಂಸ್ಥೆಗಳು ವಶಪಡಿಸಿಕೊಂಡ ಎಲ್ಲ ಕಡೆಯೂ ಇದೇ ರೀತಿಯ ಅನುಪಾತದಲ್ಲಿ ಅನ್ವಯಿಸಲು ಒಪ್ಪಿಗೆ ಕೊಡುತ್ತಾರಾ?

₹5000 ಕೋಟಿ ಹಗರಣ

ಇದು ಕೇವಲ 14 ನಿವೇಶನಗಳ ವಿಚಾರವಲ್ಲ. ಸಿದ್ದರಾಮಯ್ಯ ಸರ್ಕಾರ ರಚನೆಯಾದ ಬಳಿಕ ಮುಡಾದಿಂದ ಹಂಚಿಕೆಯಾದ ಎಲ್ಲ ನಿವೇಶನಗಳ ಬಗೆಗೂ ತನಿಖೆ ಅತ್ಯವಶ್ಯಕವಾಗಿ ಕಾಣಿಸುತ್ತಿದೆ. ಸರಿಸುಮಾರು ಐದು ಸಾವಿರ ಕೋಟಿ ರೂಪಾಯಿ ಮೊತ್ತದ ಹಗರಣವಾಗಿದೆ. ಇದರಲ್ಲಿ ಸಿಎಂ ಅಷ್ಟೇ ಅಲ್ಲ ಸಂಬಂಧಪಟ್ಟ ಸಚಿವರು ಪಾಲುದಾರರು ಎಂಬುದಲ್ಲಿ ಅನುಮಾನವಿಲ್ಲ ಎಂದು ಜನ ಮಾತನಾಡಿಕೊಳ್ಳುತ್ತಿದ್ದಾರೆ. ಪಾರದರ್ಶಕ ತನಿಖೆ ನಡೆದರೆ ಅವರೂ ಕೂಡ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡುವ ಪರಿಸ್ಥಿತಿ ಬರಲಿದೆ. ಒಂದು ಲಕ್ಷ ಜನರಿಗೆ ಸೈಟ್ ಸಿಗದೇ ಹೋದರು ಸಿಎಂ ಸಿದ್ದರಾಮಯ್ಯಗೆ 14 ಸೈಟ್ ಸಿಗುತ್ತದೆ ಎಂಬುದು ಸೋಜಿಗದ ಸಂಗತಿ.

ಜನರು ಅರಿಯಬೇಕಾದ ಸಂಗತಿಗಳು

- ಸಿದ್ದರಾಮಯ್ಯ ಕುಟುಂಬ ಜಮೀನು ಖರೀದಿ ಮಾಡಿದಾಗ ಕೆಸರೆಯಲ್ಲಿ ಕೃಷಿ ಜಮೀನೇ ಇರಲಿಲ್ಲ
- 2001 ರಲ್ಲಿಯೇ ಬಡಾವಣೆ ಆಗಿತ್ತು, ಆ ಹೆಸರಿನಲ್ಲಿ ಸೈಟು ಮಾಡಿ ಜನರಿಗೆ ಹಂಚಿಕೆಯಾಗಿತ್ತು.
- ಯಾರಿಗೋ ಹಂಚಿಕೆಯಾಗಿದ್ದ ನಿವೇಶನವನ್ನು ತಮ್ಮ ಕುಟುಂಬದ ಕೃಷಿ ಜಮೀನೆಂದು ಮಾಡಿಸಿಕೊಂಡಿದ್ದು ಹೇಗೆ? ಕೃಷಿ ಭೂಮಿ ಇಲ್ಲದೇ ಇರುವ ಜಾಗ ಕೃಷಿ ಜಮೀನು ಎಂದು ಮಾರಾಟ ಮಾಡಬಹುದೇ? ಪ್ರಭಾವಿಗಳ ಶಿಫಾರಸು ಇಲ್ಲದೇ ಹೀಗೆಲ್ಲ ಸಾಧ್ಯವೇ?
- ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ವರದಿ ಕೊಟ್ಟಿದ್ದಾರೋ ಅಥವಾ ಕೃಷಿ ಭೂಮಿ ಎಂದು ನಕಲಿ ದಾಖಲೆ ಸೃಷ್ಟಿಸಲಾಗಿದೆಯೇ?
- ನಮ್ಮ ಕುಟುಂಬದ ಜಮೀನು ಮುಡಾಗೆ ಬಿಟ್ಟುಕೊಡಬೇಕೇ ಎಂದು ಸಿಎಂ ಪ್ರಶ್ನಿಸಿದ್ದರು. ಇಲ್ಲದ ಕೃಷಿ ಭೂಮಿಯನ್ನು ಹೇಗೆ ಬಿಟ್ಟು ಕೊಡಲು ಸಾಧ್ಯ?



ಉತ್ತರ ಸಿಗದ ಪ್ರಶ್ನೆಗಳು?

1. ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿರುವಾಗ ಅಷ್ಟು ಮೊತ್ತ ನಿಗಮಕ್ಕೆ ವರ್ಗವಾಗಿದ್ದು ಏಕೆ?
2. ನೀತಿ ಸಂಹಿತೆ ಜಾರಿಯಲ್ಲಿದ್ದಾಗಲೇ ನಿಗಮದಿಂದ ತರಾತುರಿಯಲ್ಲಿ ಹಣ ವರ್ಗಾವಣೆ ಅನುಮಾನವಲ್ಲವೇ?
3. ರಾಜ್ಯದಲ್ಲೇ ಹಣ ವರ್ಗಾವಣೆಯಾದರೆ ಅನುಮಾನ ಬರುತ್ತದೆಂದು ತೆಲಂಗಾಣಕ್ಕೆ ವರ್ಗ ಮಾಡಿದ್ದು ಅನುಮಾನ ಹುಟ್ಟಿಸುವುದಿಲ್ಲವೇ?
4. 3 ಕೋಟಿ ರೂ. ಹೆಚ್ಚಿನ ಮೊತ್ತ 16 ಖಾತೆಗಳಿಗೆ ಹೋಗುವಾಗ ಹಣಕಾಸು ಇಲಾಖೆ ಗಮನಕ್ಕೆ ಬಾರದೇ ಇದ್ದದ್ದು ಹೇಗೆ?
5. ಸರ್ಕಾರದ ಹಣ 100 ಕೋಟಿ ರೂ. ಬೇನಾಮಿ ಖಾತೆಗೆ ಯಾರ ಅನುಮತಿ ಪಡೆಯದೆ ವರ್ಗವಾಗಲು ಸಾಧ್ಯವೇ?
6. ಸರ್ಕಾರಕ್ಕೂ ಹಣ ವರ್ಗಾವಣೆಗೂ ಸಂಬಂಧವೇ ಇಲ್ಲ ಎಂಬ ಸಮಜಾಯಿಷಿ ಹಣಕಾಸು ಖಾತೆ ಹೊಂದಿದವರ ಲೋಪ ಎನಿಸಿಕೊಳ್ಳುತ್ತದೆ ಅಲ್ಲವೇ?
7. ಸಂಚಿನ ಭಾಗದಲ್ಲಿ ದೊಡ್ಡ ಕೈಗಳಿಲ್ಲದೆಯೇ ಸಣ್ಣ ಪುಟ್ಟವರು ಕೈಯಾಡಿಸುತ್ತಾರೆಂದು ಹೇಗೆ ತಾನೆ ನಂಬಲು ಸಾಧ್ಯ?
8. ಸರ್ಕಾರದ ಅಸಲಿ ಖಾತೆಯಿಂದ ಬೇನಾಮಿ ಖಾತೆಗೆ ವರ್ಗವಾದ ಹಣಒಟ್ಟು ಭ್ರಷ್ಟಾಚಾರದ ಭಾಗವೇ ಅಲ್ಲವೇ?



ಮುಡಾ ಅಕ್ರಮದ ಆಳ-ಅಗಲವೆಷ್ಟು?

ಸಿಎಂ ಸಿದ್ದರಾಮಯ್ಯ ಪಾಲೆಷ್ಟು

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ (ಮುಡಾ) ನಡೆದಿರುವ ನಿವೇಶನ ಹಂಚಿಕೆ ಅಕ್ರಮದ ಆಳ-ಅಗಲ ಲೆಕ್ಕಕ್ಕೇ ಸಿಗುತ್ತಿಲ್ಲ. ಜಮೀನು ಸಂಬಂಧ ನಕಲಿ ದಾಖಲೆ ಸೃಷ್ಟಿ ಸ್ವಜನ ಪಕ್ಷಪಾತ, ಇಲ್ಲದ ಭೂಮಿಗೆ ಪರಿಹಾರ ರೂಪದಲ್ಲಿ ನಿವೇಶನ ಪಡೆಯುವಿಕೆ, ಪರಿಹಾರ ಪಡೆಯುವಾಗಲೂ ನಿಯಮಗಳ ಸ್ಪಷ್ಟ ಉಲ್ಲಂಘನೆ ಸೇರಿ ಹಲವು ಅಕ್ರಮ ವಿಕ್ರಮ ಸಾಧಿಸಿರುವುದು ನಿಚ್ಚಳವಾಗಿದೆ.

ನಿವೇಶನ ಪಡೆದಾಗ ನಮ್ಮ ಸರ್ಕಾರ ಇರಲಿಲ್ಲ. ನಾವು ಕೈಯಾಡಿಸಿದ್ದರ ಬಗ್ಗೆ ದಾಖಲೆಯೂ ಇಲ್ಲ, ತುಂಡು ಕಾಗದವೂ ಇಲ್ಲ ಎಂದು ಪ್ರಕರಣದಿಂದ ನುಣುಚಿಕೊಳ್ಳಲು ಸಾಧ್ಯವಾಗುವುದಿಲ್ಲ, ಜನರಿಗೆ ಉತ್ತರ ಕೊಡಲೇ ಬೇಕಾಗುವ ಸಂದರ್ಭ ಬಂದಿದೆ. ಈ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ ಪಾರ್ವತಿ ಅವರು 14 ನಿವೇಶನ ಪಡೆದುಕೊಂಡಿದ್ದು ಸಾಮಾನ್ಯ ವಿಷಯವೇನಲ್ಲ. ಈ ನಿವೇಶನ ಪಡೆದ ವಿಧಾನ, ಅದಕ್ಕೂ ಮುನ್ನ ಯಾವ ಉದ್ದೇಶಕ್ಕೆ ಪರಿಹಾರ ಪಡೆದರು, ಯಾವ ಸಂದರ್ಭದಲ್ಲಿ ಪಡೆದರು, ಯಾವ ಭೂಮಿಗೆ ಪರ್ಯಾಯ ಪಡೆದರು ಎಂಬುದನ್ನು ಕೆದಕುತ್ತಾ ಹೋದಾಗ ಅನೇಕ ಅನುಮಾನಾಸ್ಪದ ಸಂಗತಿ ಕಾಣಸಿಗುತ್ತವೆ.

ದರ್ಖಾಸ್ತ್ ಮಂಜೂರು ಆಗಿರುವ ಭೂಮಿಯನ್ನು ಮಲ್ಲಿಕಾರ್ಜುನ ಸ್ವಾಮಿಗೆ ಜವರ ಅವರ ಮಗ ದೇವರಾಜ್ ಬರೆದುಕೊಟ್ಟಾಗ ಪಹಣಿ ಯಾರ ಹೆಸರಿನಲ್ಲಿ ಬರುತ್ತಿತ್ತು? ಹಾಗೆಯೇ ಮಲ್ಲಿಕಾರ್ಜುನ್ ಸ್ವಾಮಿಯವರು ಪಾರ್ವತಮ್ಮ ಸಿದ್ದರಾಮಯ್ಯನವರಿಗೆ ದಾನಪತ್ರ ಮಾಡಿಕೊಟ್ಟಾಗ ಪಹಣಿ ಯಾರ ಹೆಸರಿನಲ್ಲಿ ಬರುತ್ತಿತ್ತು? ಎಂದು ಕೆದಕಿದರೆ, ಎಲ್ಲ ದಾಖಲೆಗಳ ಪ್ರಕಾರ ಮುಡಾ ಹೆಸರಿನಲ್ಲಿ ಬರುತ್ತಿತ್ತು ಎಂದಿದೆ. ಹಾಗಿದ್ದರೆ ಭೂಮಿ ಅಸಲಿ ತನದ ಬಗ್ಗೆಯೇ ಅನುಮಾನ ಬರುತ್ತದೆ.


1998ರಲ್ಲಿ ಭೂ ಸ್ವಾಧೀನ ಪ್ರಕ್ರಿಯೆಯಿಂದ ಸರ್ವೆ ನಂ.464 ಕೆಸರೆ ಗ್ರಾಮ ಈ ಭೂಮಿಯನ್ನು ಕೈ ಬಿಡಲಾಗಿತ್ತು ಎಂಬ ವಾದ ಮುಖ್ಯಮಂತ್ರಿಯವರು ಮುಂದಿಡುತ್ತಿದ್ದಾರೆ. ಈ ರೀತಿ ಕೈಬಿಟ್ಟಸಂದರ್ಭದಲ್ಲಿ ಅದು ವ್ಯವಸಾಯ ಜಮೀನಾಗಿತ್ತು, ಇದು 2004ರಲ್ಲಿ ವ್ಯವಸಾಯೇತರ ಜಮೀನು ಭೂಪರಿವರ್ತನೆಗೊಂಡಿದೆ, ಅದೂ ಈಗಾಗಲೇ ತೀರಿಕೊಂಡಿದ್ದ ಭೂ ಸ್ವತ್ತಿನ ನೈಜ ಮಾಲೀಕರಾದಂತಹ ನಿಂಗ ಎನ್ನುವವರ ಹೆಸರಿನಲ್ಲೇ ಆಗಿದೆ. ಹಾಗಿದ್ದ ಮೇಲೆ ತೀರಿಕೊಂಡವರ ಹೆಸರಿನಲ್ಲಿ ಭೂ ಪರಿವರ್ತನೆ ಸಾಧ್ಯವೇ ಎಂಬ ಪ್ರಶ್ನೆ ಏಳುತ್ತದೆ.

ಬಿಜೆಪಿಯ ಅವಧಿಯಲ್ಲಿ ಅಕ್ರಮ ನಡೆದಿದ್ದು ಎಂದು ಆರೋಪಿಸುತ್ತಿದ್ದಾರೆ. ಬಿಜೆಪಿಯ ಅವಧಿಯಲ್ಲಿ ಬೆಳಕಿಗೆ ಬಂದಂತಹ ಪ್ರಕರಣಕ್ಕೆ 2022 ನವೆಂಬರ್‌ನಲ್ಲಿ ಒಂದು ತನಿಖಾ ಸಂಸ್ಥೆಯನ್ನು ನೇಮಿಸಿ, ಯಾವ ರೀತಿ ಅಕ್ರಮಗಳು ಆಗಿವೆ ಎಂದು ವರದಿ ನೀಡುವಂತೆ ಸರ್ಕಾರ ಆದೇಶ ಮಾಡಿತು, ಆ ವರದಿ 2023 ಅಕ್ಟೋಬರ್ ಅಂದರೆ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದಾಗ ಒಪ್ಪಿಸಿದ ಮೇಲೆ ಯಾವ ರೀತಿ ಕ್ರಮಕೈಗೊಂಡರು ಎಂಬುದಕ್ಕೂ ಉತ್ತರವಿಲ್ಲ.

ಶರಾವತಿ ನದಿಯ ಇಕ್ಕೆಲಗಳಲ್ಲಿ ರೋಪ್‌ವೇ: ಎರಡು ಬಾರಿ ಪ್ರಸ್ತಾವನೆ ತಿರಸ್ಕೃತ

ಜೋಗ ಬಳಿ ಪಂಚತಾರಾ ಹೋಟೆಲ್?

• ಎಸ್. ರವಿಪ್ರಕಾಶ್



ಬೆಂಗಳೂರು: ಶಿವಮೊಗ್ಗ ಜಿಲ್ಲೆಯ ಜೋಗ ಜಲಪಾತದ ಬಳಿಯ ಅರಣ್ಯ ಭೂಮಿಯಲ್ಲಿ ಪಂಚತಾರಾ ಹೋಟೆಲ್ ಮತ್ತು ರೋಪ್ ವೇ ನಿರ್ಮಿಸಲು ರಾಜ್ಯ ಸರ್ಕಾರ, ಕೇಂದ್ರ ಸರ್ಕಾರಕ್ಕೆ ಮತ್ತೊಮ್ಮೆ ಪ್ರಸ್ತಾವನೆ ಸಲ್ಲಿಸಿದೆ.

'ಜೋಗ ಜಲಪಾತ ಅಭಿವೃದ್ಧಿ ಪ್ರಾಧಿಕಾರ'ಕ್ಕೆ ಅರಣ್ಯಭೂಮಿ ವರ್ಗಾಯಿಸಲು ಶಿವಮೊಗ್ಗ ಜಿಲ್ಲಾಧಿಕಾರಿ ಒಪ್ಪಿಕೊಂಡಿದ್ದು, ಪರ್ಯಾಯವಾಗಿ ನಾಗರಿಕ ಉದ್ದೇಶಕ್ಕೆ ಮೀಸಲಾದ ಭೂಮಿಯನ್ನು ಅರಣ್ಯ ಇಲಾಖೆಗೆ ಹಸ್ತಾಂತರಿಸಲು ಅವರು ಒಪ್ಪಿಗೆ ನೀಡಿದ್ದಾರೆ.

ಪಂಚತಾರಾ ಹೋಟೆಲ್ ನಿರ್ಮಿಸಲು ಆಯ್ಕೆ ಮಾಡಿರುವ ಪ್ರದೇಶವು ಪರಿಸರ ಸೂಕ್ಷ್ಮ ಪ್ರದೇಶ ಎಂಬ ಕಾರಣಕ್ಕೆ ಕೇಂದ್ರ ಸರ್ಕಾರ 2014 ರಲ್ಲಿ ಮೊದಲ ಬಾರಿಗೆ ಪ್ರಸ್ತಾವನೆಯನ್ನು ತಿರಸ್ಕರಿಸಿತ್ತು. ಆ ಬಳಿಕ ರಾಜ್ಯ ಸರ್ಕಾರ 2021 ರಲ್ಲಿ ಮತ್ತೊಮ್ಮೆ ಪ್ರಯತ್ನ ಮಾಡಿತ್ತು.

'ಕೇರಳದ ವಯನಾಡ್ ಮತ್ತು ಕರ್ನಾಟಕದ ಅಂಕೋಲ ಸಮೀಪದ ಶಿರೂರಿನಂತೆ ಶರಾವತಿ ಕಣಿವೆಯೂ ಪರಿಸರ ಸೂಕ್ಷ್ಮ ಪ್ರದೇಶ. ಮುಂದೆ ಇಲ್ಲಿನ ಪರಿಸ್ಥಿತಿ ಹೇಗಿರುತ್ತದೆಯೋ ಹೇಳಲಾಗದು. ಆದ್ದರಿಂದ ಅಲ್ಲಿ ಪಂಚತಾರಾ ಹೋಟೆಲ್ ನಿರ್ಮಿಸುವ ಅಗತ್ಯವಿಲ್ಲ' ಎನ್ನುತ್ತಾರೆ ಪರಿಸರ ಪ್ರೇಮಿಗಳು. ಹೋಟೆಲ್ ಮತ್ತು ರೋಪ್ ವೇ ನಿರ್ಮಿಸಲು ಗುರುತಿಸಿರುವ ಪ್ರದೇಶ ಉತ್ತರಕನ್ನಡ ಜಿಲ್ಲೆಯ ಕೋಡ್ಕಣಿ, ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕು ತಲಕಳಲೆ ಮತ್ತು ಕಾರ್ಗಲ್ ಗ್ರಾಮಗಳ ವ್ಯಾಪ್ತಿಯಲ್ಲಿದೆ. ಒಟ್ಟು ಐದು ಎಕರೆ 9 ಗುಂಟೆ ಜಮೀನಿನಲ್ಲಿ ಈ ಚಟುವಟಿಕೆ ನಡೆಸಲು ಉದ್ದೇಶಿಸಲಾಗಿದೆ. ಭೂಮಿಪುತ್ರ ರೆಸಾರ್ಟ್ಸ್ ಪ್ರೈವೇಟ್ ಲಿಮಿಟೆಡ್ ಹೋಟೆಲ್ ನಿರ್ಮಿಸಲಿದೆ.

> **ಶರಾವತಿ ಕಣಿವೆ ಅತ್ಯಂತ ಸೂಕ್ಷ್ಮ ಪರಿಸರ ಪ್ರದೇಶ. ಪಶ್ಚಿಮಘಟ್ಟದ ಸಂರಕ್ಷಣೆ ಬಗ್ಗೆ ಅತೀವ ಕಾಳಜಿ ಹೊಂದಿರುವ ಅರಣ್ಯ ಸಚಿವ ಈಶ್ವರಖಂಡ್ರೆ ಇಂತಹ ಯೋಜನೆಗಳಿಗೆ ಅನುಮತಿ ನೀಡದೆ ಪಶ್ಚಿಮಘಟ್ಟದ ಸಂರಕ್ಷಣೆಗೆ ಮುಂದಾಗಬೇಕು**
> **ಗಿರಿಧರ ಕುಲಕರ್ಣಿ,** ವನ್ಯಜೀವಿ ಸಂರಕ್ಷಣಾ ಕಾರ್ಯಕರ್ತ

ಶಿವಮೊಗ್ಗ ಜಿಲ್ಲಾಧಿಕಾರಿಯೂ ಆಗಿರುವ ಜೋಗ ನಿರ್ವಹಣಾ ಪ್ರಾಧಿಕಾರದ ಮುಖ್ಯಕಾರ್ಯನಿರ್ವಹಣಾ ಅಧಿಕಾರಿ ಹೋಟೆಲ್ ನಿರ್ಮಾಣದ ಅನುಮತಿಗಾಗಿ ಕೇಂದ್ರ ಅರಣ್ಯ ಮತ್ತು ಪರಿಸರ ಇಲಾಖೆಗೆ 'ಪರಿವೇಶ್' ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಿದ್ದಾರೆ. ಈ ಅರ್ಜಿಯಲ್ಲಿ ಅರಣ್ಯವನ್ನು ಬಳಸಿಕೊಳ್ಳುವ ಮಾಹಿತಿಯೂ ಉಲ್ಲೇಖವಾಗಿದೆ.

2014 ರಲ್ಲಿ ಕೇಂದ್ರ ಅರಣ್ಯ ಮತ್ತು ಪರಿಸರ ಇಲಾಖೆ ಪ್ರಸ್ತಾವನೆಯನ್ನು ತಿರಸ್ಕರಿಸಿತ್ತು. ಆಗ ಆಯುರ್ವೇದ ಕೇಂದ್ರ ಮತ್ತು ವೆಲ್‌ನೆಸ್ ಸೆಂಟರ್ ನಿರ್ಮಿಸುವುದಾಗಿ ಪ್ರಸ್ತಾವನೆಯಲ್ಲಿ ತಿಳಿಸಿತ್ತು. 2021 ರಲ್ಲಿ ಪಂಚತಾರಾ ಹೋಟೆಲ್‌ಗಾಗಿ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಆದರೆ, ಆಗ ವನ್ಯಜೀವಿ ವಿಭಾಗದ ಅನುಮತಿ ಸಿಕ್ಕಿರಲಿಲ್ಲ.

ಪ್ರಸ್ತಾವನೆಯಲ್ಲಿರುವ ಅಂಶ: ಜೋಗಕ್ಕೆ ಪ್ರತಿವರ್ಷ ಲಕ್ಷಗಟ್ಟಲೆ ಪ್ರವಾಸಿಗರು ಬರುತ್ತಾರೆ. ವಿಶೇಷವಾಗಿ ಜೂನ್‌ನಿಂದ ಡಿಸೆಂಬರ್ ಅವಧಿಯಲ್ಲಿ ಪ್ರತಿದಿನ 40 ಸಾವಿರದಿಂದ 50 ಸಾವಿರಕ್ಕೂ ಹೆಚ್ಚು ಪ್ರವಾಸಿಗರು ಭೇಟಿ ನೀಡುತ್ತಾರೆ. ಇಲ್ಲಿ ಉತ್ತಮವಾದ ಹೋಟೆಲ್ ಇಲ್ಲ. ಲೋಕೋಪಯೋಗಿ ಇಲಾಖೆಯ ಅತಿಥಿ ಗೃಹ ಇದ್ದು ಅದನ್ನು ಒಡೆದು ಪಿಪಿಪಿ ಮಾದರಿಯಲ್ಲಿ ಪಂಚತಾರಾ ಹೋಟೆಲ್ ನಿರ್ಮಿಸಲು ಉದ್ದೇಶಿಸಲಾಗಿದೆ. ಜಲಪಾತದ ಸಮೀಪವೇ ಶರಾವತಿ ನದಿಗೆ ಒಂದು ತಟದಿಂದ ಇನ್ನೊಂದು ತಟಕ್ಕೆ ರೋಪ್‌ವೇ ಹಾಕಲಾಗುವುದು. ಇವೆರಡರ ನಿರ್ಮಾಣದ ಅಂದಾಜು ವೆಚ್ಚ ₹100 ಕೋಟಿ.

'ಕನ್ನಡಿಗರಿಗೆ ಉದ್ಯೋಗ ಮೀಸಲಾತಿ: ಹೇರಿಕೆ ಅಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಸಗಿ ಕಂಪನಿಗಳಲ್ಲಿ ಕನ್ನಡಿಗರಿಗೆ ಮೀಸಲಾತಿ ತರಲು ಹೊರಟಿರುವ ನೀತಿಯು ಹೇರಿಕೆ ಸ್ವರೂಪದ್ದಾಗಿರುವುದಿಲ್ಲ ಎಂದು ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ನಗರದಲ್ಲಿ ಆಯೋಜಿಸಿದ್ದ 'ಟೈ ಜಾಗತಿಕ ಶೃಂಗಸಭೆ–2024' ಪೂರ್ವಭಾವಿ ಸಭೆಯಲ್ಲಿ ಸುದ್ದಿಗಾರರ ಪ್ರಶ್ನೆಗೆ ಅವರು ಉತ್ತರಿಸಿದರು. 'ಖಾಸಗಿ ಕಂಪನಿಗಳಲ್ಲಿ ಕನ್ನಡಿಗರಿಗೆ ಮೀಸಲಾತಿ ನೀಡುವುದರ ಬಗ್ಗೆ ಸಾಕಷ್ಟು ತಪ್ಪು ಕಲ್ಪನೆಗಳಿವೆ. ಕನ್ನಡಿಗರಿಗೆ ಮೀಸಲಾತಿ ನೀಡಿದರೆ, ಕೌಶಲಯುಕ್ತ ನೌಕರರ ಕೊರತೆ ಕಾಡಲಿದೆ ಎಂಬುದರ ಬಗ್ಗೆ ಕಳವಳ ವ್ಯಕ್ತಪಡಿಸಲಾಗುತ್ತಿದೆ. ಆದರೆ ಈ ವಿಚಾರದಲ್ಲಿ ಆತಂಕ ಪಡುವ ಅಗತ್ಯವಿಲ್ಲ. ಎಲ್ಲಾ ಆತಂಕಗಳನ್ನು ನಿವಾರಿಸುವ ಸಲುವಾಗಿ ಸಮಾಲೋಚನೆ ನಡೆಯುತ್ತಿದೆ' ಎಂದರು.

'ಈ ಮೀಸಲಾತಿ ಜಾರಿಗೆ ತರುವುದಕ್ಕೂ ಮುನ್ನ, ಯುವಜನರಿಗೆ ಅಗತ್ಯ ತರಬೇತಿ ನೀಡಲು ಕ್ರಮ ತೆಗೆದುಕೊಳ್ಳಲಾಗುತ್ತದೆ. ರಾಜ್ಯದಲ್ಲಿರುವ ಐಟಿಐ ಕೇಂದ್ರಗಳ ಮೂಲಕ ಕನ್ನಡಿಗರ ಯುವಜನರ ಕೌಶಲ ಅಭಿವೃದ್ಧಿಗೆ ಒತ್ತು ನೀಡಲಾಗುತ್ತದೆ. ಕನ್ನಡಿಗರಲ್ಲಿ ಜಾಗತಿಕ ಮಟ್ಟದ ಉದ್ಯೋಗಾರ್ಹತೆ ಮತ್ತು ಕೌಶಲಮಟ್ಟವನ್ನು ಹೆಚ್ಚಿಸಲಾಗುತ್ತದೆ. ಇದರಿಂದ ಉದ್ಯಮಗಳಿಗೂ ತೊಡಕಾಗುವುದಿಲ್ಲ. ಕನ್ನಡಿಗರಿಗೆ ಉದ್ಯೋಗವಕಾಶ ಹೆಚ್ಚಳದ ಉದ್ದೇಶವೂ ಈಡೇರುತ್ತದೆ' ಎಂದರು.

ಇದೇ ಪ್ರಶ್ನೆಗೆ ಉತ್ತರಿಸಿದ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ, 'ರಾಜ್ಯ ಸರ್ಕಾರದಿಂದ ವಿವಿಧ ನೆರವು ಮತ್ತು ವಿನಾಯತಿಗಳನ್ನು ಪಡೆದುಕೊಂಡಿರುವ ಖಾಸಗಿ ಕಂಪನಿಗಳು ಈಗಾಗಲೇ ಕನ್ನಡಿಗರಿಗೆ ಮೀಸಲಾತಿ ನೀಡುತ್ತಿವೆ. ಅಂತಹ ಕಾನೂನು ಈಗಾಗಲೇ ಜಾರಿಯಲ್ಲಿದೆ. ಯಾವುದೇ ನೆರವು ಪಡೆದುಕೊಳ್ಳದೇ ಇರುವ ಕಂಪನಿಗಳೂ ಸಾಕಷ್ಟು ಇದ್ದು, ಅವುಗಳಲ್ಲೂ ಕನ್ನಡಿಗರಿಗೆ ಮೀಸಲಾತಿ ಒದಗಿಸುವ ಪ್ರಯತ್ನವಿದು. ಆದರೆ ಇದು ಹೇರಿಕೆ ಸ್ವರೂಪದ್ದಲ್ಲ' ಎಂದರು.

'ಈ ಸಂಬಂಧ ಮುಖ್ಯಮಂತ್ರಿ ಜತೆಗೆ ಸಮಾಲೋಚನೆ ನಡೆಸಲಾಗಿದೆ. ಉದ್ಯಮ ವಲಯದ ಪ್ರಮುಖರ ಜತೆಗೂ ಚರ್ಚೆ ನಡೆಸಲಾಗುತ್ತಿದೆ. ಯಾರಿಗೂ ತೊಡಕಾಗದ ರೀತಿಯಲ್ಲಿ ಇದನ್ನು ಜಾರಿಗೆ ತರಲಾಗುತ್ತದೆ. ಯಾರೂ ಆತಂಕಪಡುವ ಅಗತ್ಯವಿಲ್ಲ' ಎಂದು ತಿಳಿಸಿದರು.

'14 ತಾಸು ಕೆಲಸ: ಚರ್ಚೆ ಬಳಿಕ ನೀತಿ'

'ಕೆಲಸದ ಅವಧಿಯನ್ನು 14 ತಾಸಿಗೆ ಹೆಚ್ಚಿಸುವ ಸಂಬಂಧ ಉದ್ಯಮ ವಲಯದೊಂದಿಗೆ ದೀರ್ಘ ಸಮಾಲೋಚನೆ ನಡೆಸಬೇಕಿದೆ. ಆನಂತರ ಈ ಸಂಬಂಧ ನೀತಿ ರೂಪಿಸಲಾಗುತ್ತದೆ' ಎಂದು ಸಚಿವ ಎಂ.ಬಿ. ಪಾಟೀಲ ಹೇಳಿದರು.

ಉದ್ಯಮ ಸಂಸ್ಥೆಗಳ ಮುಖ್ಯಸ್ಥರ ಬೇಡಿಕೆಯ ಕಾರ್ಯಸಾಧ್ಯತೆಯನ್ನು ಪರಿಶೀಲಿಸಬೇಕಿದೆ. ಕಾರ್ಮಿಕ ಇಲಾಖೆಯೂ ಸೇರಿ ಇನ್ನೂ ಹಲವು ಇಲಾಖೆಗಳ ಜತೆಗೆ ಚರ್ಚಿಸಬೇಕಿದೆ ಎಂದರು.

ಸಚಿವ ಪ್ರಿಯಾಂಕ್ ಮಾತನಾಡಿ, 'ಉದ್ಯಮ ಸಂಸ್ಥೆಗಳ ಮುಖ್ಯಸ್ಥರ ಬೇಡಿಕೆ ಆಧಾರದಲ್ಲಿಯೇ ಸರ್ಕಾರವು ಕ್ರಮಕ್ಕೆ ಮುಂದಾಗಿದೆ. ಗುಜರಾತ್, ಒಡಿಶಾ ಮತ್ತು ತೆಲಂಗಾಣದಲ್ಲಿ ಈಗಾಗಲೇ 14 ತಾಸು ಕೆಲಸದ ಅವಧಿ ಜಾರಿಯಲ್ಲಿದೆ. ಕರ್ನಾಟಕದಲ್ಲೂ ಇದನ್ನು ಜಾರಿಗೆ ತರಬೇಕು ಎಂದು ಉದ್ಯಮಗಳು ಬೇಡಿಕೆ ಸಲ್ಲಿಸಿದ್ದವು. ಆ ರಾಜ್ಯಗಳಲ್ಲಿ ಇದನ್ನು ಹೇಗೆ ಅನುಷ್ಠಾನಕ್ಕೆ ತರಲಾಗಿದೆ ಎಂಬುದನ್ನು ಪರಿಶೀಲಿಸಲಾಗುತ್ತಿದೆ' ಎಂದರು.

ಸಿರಿಗೆರೆ ಶ್ರೀ ವಿರುದ್ಧ ಮಾನನಷ್ಟ ಮೊಕದ್ದಮೆ: ಬಿ.ಸಿ. ಪಾಟೀಲ

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಸಿರಿಗೆರೆ ಬೃಹನ್ಮಠದ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಅವರು ಏಕವ್ಯಕ್ತಿ ಹೆಸರಿನಲ್ಲಿರುವ ಟ್ರಸ್ಟ್ ರಚಿಸಿಕೊಂಡು ಸರ್ವಾಧಿಕಾರಿಯಂತೆ ಎಲ್ಲ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಮಠದ ಭಕ್ತರನ್ನು ಕುಡುಕರೆಂದು ನಿಂದಿಸಿರುವ ಸ್ವಾಮೀಜಿ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡಲು ಭಕ್ತರು ನಿರ್ಧರಿಸಿದ್ದಾರೆ' ಎಂದು ಮಾಜಿ ಸಚಿವ ಬಿ.ಸಿ. ಪಾಟೀಲ ತಿಳಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಶ್ರೀಮದುಜ್ಜಯಿನಿ ಸದ್ಧರ್ಮ ಸಿಂಹಾಸನ ಶ್ರೀಮಠ ಪಾಲ್ಕುರಿಕೆ–ಸಿರಿಗೆರೆ ಶ್ರೀತರಳಬಾಳು ಜಗದ್ಗುರು ಬೃಹನ್ಮಠ' ಎಂಬ ಹೆಸರಿತ್ತು. ಆದರೆ, ಈಗಿನ ಪೀಠಾಧಿಪತಿಗಳಾಗಿರುವ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಅವರು ಶ್ರೀಮದುಜ್ಜಯಿನಿ ಸದ್ಧರ್ಮ ಸಿಂಹಾಸನ ಶ್ರೀ ತರಳಬಾಳು ಜಗದ್ಗುರು ಬೃಹನ್ಮಠ ಎಂದು ಬದಲಿಸಿಕೊಂಡಿದ್ದಾರೆ. 1990ರಲ್ಲಿ ಏಕಮಾತ್ರ ಟ್ರಸ್ಟಿಯ ಟ್ರಸ್ಟ್ ರಚಿಸಿಕೊಂಡು ಮಠದ ಆಸ್ತಿ ವರ್ಗಾವಣೆ ಮಾಡಿಕೊಂಡಿದ್ದಾರೆ.ಟ್ರಸ್ಟ್‌ನ ಬೈ–ಲಾವನ್ನು ಕಡೆಗಣಿಸಿ ಎಲ್ಲ ರೀತಿಯ ನಿರ್ಧಾರಗಳನ್ನು ಕೈಗೊಳ್ಳುತ್ತಿದ್ದಾರೆ ಎಂದು ದೂರಿದರು.

'60 ವರ್ಷಕ್ಕೆ ಶಿವಾಚಾರ್ಯ ಸ್ವಾಮೀಜಿಯವರು ಪೀಠ ತ್ಯಾಗ ಮಾಡಬೇಕಿತ್ತು. 78 ವರ್ಷಗಳಾಗಿರುವ ಶಿವಮೂರ್ತಿ ಸ್ವಾಮೀಜಿ ಪೀಠ ತ್ಯಾಗ ಮಾಡದೇ ಸರ್ವಾಧಿಕಾರಿ ಧೋರಣೆ ಅನುಸರಿಸುತ್ತಿದ್ದಾರೆ. ಮಠದ ಭಕ್ತರನ್ನು ಒಡೆದು ಎರಡು ಗುಂಪುಗಳನ್ನಾಗಿ ಮಾಡುತ್ತಿದ್ದಾರೆ' ಎಂದು ಆರೋಪಿಸಿದರು.

ರಾಕೇಶ್ ಚೌರಾಸಿಯಗೆ ಗಂಗೂಬಾಯಿ ಹಾನಗಲ್ ರಾಷ್ಟ್ರೀಯ ಪ್ರಶಸ್ತಿ

ಪ್ರಜಾವಾಣಿ ವಾರ್ತೆ



ಧಾರವಾಡ: ಗಂಗೂಬಾಯಿ ಸಂಗೀತ ವಿದ್ಯಾಲಯ ಮತ್ತು ಭಾರತೀಯ ಸಂಗೀತ ವಿದ್ಯಾಲಯ ನೀಡುವ 'ಗಂಗೂಬಾಯಿ ಹಾನಗಲ್ ರಾಷ್ಟ್ರೀಯ ಪ್ರಶಸ್ತಿ'ಗೆ ಕೊಳಲು ವಾದಕ ಮುಂಬೈನ ರಾಕೇಶ್ ಚೌರಾಸಿಯ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ₹ 65 ಸಾವಿರ ನಗದು ಪುರಸ್ಕಾರ, ಮತ್ತು ಫಲಕವನ್ನು ಒಳಗೊಂಡಿದೆ. ಆಗಸ್ಟ್ 11ರಂದು ಧಾರವಾಡದ ಸೃಜನಾ ರಂಗಮಂದಿರದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ವರ್ಗಾವಣೆ: ಕನಿಷ್ಠ ಸೇವಾವಧಿ ಮನವಿ ಪರಿಗಣನೆಗೆ ನಿರ್ದೇಶನ

ಬೆಂಗಳೂರು: ಪೊಲೀಸ್ ಅಧಿಕಾರಿಗಳ ವರ್ಗಾವಣೆಯಲ್ಲಿ ಒಂದು ಹುದ್ದೆಯಲ್ಲಿ ಕನಿಷ್ಠ ಎರಡು ವರ್ಷ ಕಾರ್ಯ ನಿರ್ವಹಿಸಲು ಅವಕಾಶ ನೀಡಬೇಕೆಂಬ ಮನವಿಗಳನ್ನು ಪರಿಗಣಿಸಿ ಆದೇಶ ಹೊರಡಿಸಲು ಕರ್ನಾಟಕ ಆಡಳಿತ ನ್ಯಾಯ ಮಂಡಳಿ (ಕೆಎಟಿ) ಗೃಹ ಇಲಾಖೆಗೆ ನಿರ್ದೇಶನ ನೀಡಿದೆ.

ಆನೇಕಲ್ ಉಪವಿಭಾಗದ ಡಿವೈಎಸ್‌ಪಿ ಬಿ.ಎಸ್. ಮೋಹನ್ ಕುಮಾರ್ ಸೇರಿ 52 ಡಿವೈಎಸ್‌ಪಿ, ಪೊಲೀಸ್ ಇನ್‌ಸ್ಪೆಕ್ಟರ್‌ಗಳು ಸಲ್ಲಿಸಿದ್ದ ಅರ್ಜಿಯನ್ನು ಜುಲೈ30ರಂದು ವಿಲೇವಾರಿ ಮಾಡಿರುವ ಕೆಎಟಿಯ ನ್ಯಾಯಾಂಗ ಸದಸ್ಯ ಟಿ. ನಾರಾಯಣ ಸ್ವಾಮಿ ಮತ್ತು ಆಡಳಿತ ಸದಸ್ಯೆ ಅಮಿತಾ ಪ್ರಸಾದ್ ಅವರಿದ್ದ ಪೀಠ, 'ಅರ್ಜಿದಾರರ ವರ್ಗಾವಣೆ ಪ್ರಸ್ತಾವ ಇದ್ದಲ್ಲಿ ಕನಿಷ್ಠ ಸೇವಾವಧಿಗೆ ಸಂಬಂಧಿಸಿದ ಅವರ ಮನವಿಗಳನ್ನು ಪರಿಗಣಿಸಬೇಕು' ಎಂದು ಹೇಳಿದೆ. ಪೊಲೀಸ್ ಇನ್‌ಸ್ಪೆಕ್ಟರ್‌ಗಳಿಂದ ಎಸ್‌ಪಿವರೆಗಿನ ಅಧಿಕಾರಗಳ ಕನಿಷ್ಠ ಸೇವಾವಧಿಯನ್ನು 2 ವರ್ಷಗಳಿಗೆ ಹೆಚ್ಚಿಸುವ 'ಕರ್ನಾಟಕ ಪೊಲೀಸು (ತಿದ್ದು ಪಡಿ) ಕಾಯ್ದೆ–2024' ಜಾರಿಯಲ್ಲಿದೆ. ಈ ಪ್ರಕಾರ ತಾವು ಈಗಿರುವ ಹುದ್ದೆಗಳಲ್ಲಿ 2 ವರ್ಷದ ಸೇವಾವಧಿ ಪೂರ್ಣಗೊಳಿಸಲು ಅವಕಾಶಕ್ಕೆ ಅರ್ಜಿದಾರರು ಕೋರಿದ್ದರು.

ಸುದ್ದಿ 2 ನಿಮಿಷ

ಶಾಸಕ ಯತ್ನಾಳ್ ವಿರುದ್ಧದ ನೋಟಿಸ್‌ಗೆ ಹೈಕೋರ್ಟ್ ತಡೆ

ಬೆಂಗಳೂರು: ಸಕ್ಕರೆ ಮತ್ತು ಜವಳಿ ಸಚಿವ ಶಿವಾನಂದ ಎಸ್. ಪಾಟೀಲ್ ದಾಖಲಿಸಿರುವ ಮಾನನಷ್ಟ ಮೊಕದ್ದಮೆಗೆ ಸಂಬಂಧಿಸಿದಂತೆ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಅವರಿಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಜಾರಿ ಮಾಡಿದ್ದ ಷೋಕಾಸ್ ನೋಟಿಸ್‌ಗೆ ಹೈಕೋರ್ಟ್ ತಡೆ ನೀಡಿದೆ.

ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ (42ನೇ ಎಸಿಎಂಎಂ)ಜಾರಿಗೊಳಿಸಿದ್ದ ಷೋಕಾಸ್ ನೋಟಿಸ್ ಪ್ರಶ್ನಿಸಿ ಯತ್ನಾಳ್ ಸಲ್ಲಿಸಿದ್ದ ಅರ್ಜಿಯನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಗುರುವಾರ ವಿಚಾರಣೆ ನಡೆಸಿದರು.



ದೂರುದಾರ ಸಚಿವ ಶಿವಾನಂದ ಪಾಟೀಲ್ ಅವರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ ವಿಚಾರಣೆ ಮುಂದೂಡಿತು. ಯತ್ನಾಳ್ ಪರ ಹೈಕೋರ್ಟ್ ವಕೀಲ ವೆಂಕಟೇಶ್ ಪಿ.ದಳವಾಯಿ ವಾದ ಮಂಡಿಸಿದರು.

ಪ್ರಕರಣವೇನು?: 'ಇತ್ತೀಚಿನ ಲೋಕಸಭೆ ಚುನಾವಣಾ ರ‍್ಯಾಲಿ ಸಂದರ್ಭದಲ್ಲಿ ಯತ್ನಾಳ್ ನನ್ನ ವಿರುದ್ಧ ಮಾನಹಾನಿ ಹೇಳಿಕೆ ನೀಡಿದ್ದಾರೆ' ಎಂದು ಆರೋಪಿಸಿ ಶಿವಾನಂದಪಾಟೀಲ್ ಅವರು, ಯತ್ನಾಳ್ ವಿರುದ್ಧ ಮಾನನಷ್ಟ ಮೊಕದ್ದಮೆ ದಾಖಲಿಸಿದ್ದರು. ಇದನ್ನು ವಿಚಾರಣೆಗೆ ಪರಿಗಣಿಸಿದ್ದ ವಿಚಾರಣಾ ನ್ಯಾಯಾಲಯ ಯತ್ನಾಳ್ ಅವರಿಗೆ ಷೋಕಾಸ್ ನೋಟಿಸ್ ಜಾರಿಗೊಳಿಸುವಂತೆ 2024ರ ಜುಲೈ 16ರಂದು ಆದೇಶಿಸಿತ್ತು.

ಕೋಣಸಾಲೆ: ಜೀತ ಪದ್ಧತಿ ಬೆಳಕಿಗೆ

ಮದ್ದೂರು (ಮಂಡ್ಯ ಜಿಲ್ಲೆ): ತಾಲ್ಲೂಕಿನ ಕೋಣಸಾಲೆ ಗ್ರಾಮದ ಹಂದಿ ಸಾಕಾಣಿಕೆ ಕೇಂದ್ರದಲ್ಲಿ ಹಲವು ವರ್ಷಗಳಿಂದ ಜೀತಕ್ಕೆ ದುಡಿಯುತ್ತಿದ್ದ ಗ್ರಾಮದ ಒಂದು ಕುಟುಂಬ ಹಾಗೂ ವಿಜಯಪುರ ಮೂಲದ ಒಂದು ಕುಟುಂಬವನ್ನು ಜಿಲ್ಲಾ ಡಳಿತ ರಕ್ಷಿಸಿ ಮಂಡ್ಯದ ಜ್ಞಾನಸಿಂಧು ವೃದ್ಧಾಶ್ರಮಕ್ಕೆ ಸೇರಿಸಿದೆ. ಕೇಂದ್ರದ ಮಾಲೀಕ ಮುರಳಿ ವಿರುದ್ಧ ಬೆಸಗರಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದೂರು ಬಂದ ಹಿನ್ನೆಲೆಯಲ್ಲಿ ಜಿಲ್ಲಾ ಧಿಕಾರಿ ನೀಡಿದ್ದ ಸೂಚನೆಯ ಮೇರೆಗೆ, ಉಪವಿಭಾಗಾಧಿಕಾರಿ ಶಿವಮೂರ್ತಿ ಅವರೊಂದಿಗೆ ತಹಶೀಲ್ದಾರ್ ಸೋಮಶೇಖರ್ ನೇತೃತ್ವದಲ್ಲಿ ಮಂಗಳವಾರ ರಾತ್ರಿ ಕಾರ್ಯಾಚರಣೆ ನಡೆಸಲಾಗಿದೆ.

ಗ್ರಾಮದ ಪರಿಶಿಷ್ಟ ಜಾತಿಯ ವೆಂಕಟೇಶ್–ಗೀತಾ ದಂಪತಿಯನ್ನು 7 ವರ್ಷಗಳಿಂದ ಜೀತಕ್ಕಿರಿಸಿಕೊಂಡಿದ್ದು, ಅವರಿಗೆ 4 ವರ್ಷದ ಪುತ್ರ, 3 ವರ್ಷದ ಪುತ್ರಿ ಇದ್ದಾರೆ. ವಿಜಯಪುರ ಮೂಲದ ರಮೇಶ್– ಶ್ವೇತಾ ದಂಪತಿಯನ್ನು 6 ವರ್ಷಗಳಿಂದ ಜೀತಕ್ಕಿರಿಸಿಕೊಂಡಿದ್ದು, 12 ವರ್ಷ, 8 ವರ್ಷದ ಪುತ್ರಿಯರು ಗ್ರಾಮದ ಸರ್ಕಾರಿ ಶಾಲೆಯಲ್ಲಿ ಓದುತ್ತಿದ್ದಾರೆ.

'ಜೀತದಾಳುಗಳ ಮೇಲೆ ಮಾಲೀಕ ಮುರಳಿ ಅನೇಕ ಬಾರಿ ಹಲ್ಲೆ ನಡೆಸಿದ್ದ. ಮೂಲಸೌಕರ್ಯವನ್ನೂ ಕೊಟ್ಟಿರಲಿಲ್ಲ. ₹1 ಲಕ್ಷ ಸಾಲದ ಅಸಲು ಮತ್ತು ಬಡ್ಡಿ ತೀರಿಸಬೇಕೆಂದು ಒಂದು ಕುಟುಂಬವನ್ನು ಜೀತಕ್ಕೆ ಇರಿಸಿಕೊಳ್ಳಲಾಗಿತ್ತು. ಮತ್ತೊಂದು ಕುಟುಂಬಕ್ಕೆ ಆಗಾಗ್ಗೆ ಅಲ್ಪಸ್ವಲ್ಪ ಹಣವನ್ನು ಮಾಲೀಕ ನೀಡುತ್ತಿದ್ದ. ದಿನಸಿ ತರಲು ತಿಂಗಳಿಗೊಮ್ಮೆ ಹೊರಗಡೆ ಬಿಡುತ್ತಿದ್ದ' ಎಂದು ಎಂದು ತಹಶೀಲ್ದಾರ್ ತಿಳಿಸಿದ್ದಾರೆ.

ಅಪಘಾತ: 2 ಕಿ.ಮೀ ಶವ ಎಳೆದೊಯ್ದು ಕಾರು ಚಾಲಕ

ಪ್ರಜಾವಾಣಿ ವಾರ್ತೆ

ವಿಜಯಪುರ: ನಗರದಲ್ಲಿ ಗುರುವಾರ ಸಂಜೆ ದ್ವಿಚಕ್ರ ವಾಹನ ಮತ್ತು ಕಾರಿನ ನಡುವೆ ಸಂಭವಿಸಿದ ಅಪಘಾತದಲ್ಲಿ ಕಾರಿನಡಿ ಸಿಲುಕಿ ಮೃತಪಟ್ಟ ದ್ವಿಚಕ್ರ ವಾಹನ ಸವಾರನನ್ನು ಕಾರು ಚಾಲಕ ಎರಡು ಕಿ.ಮೀ.ದೂರ ಎಳೆದೊಯ್ದ ಘಟನೆ ನಡೆದಿದೆ.

'ಇಂಡಿ ತಾಲ್ಲೂಕಿನ ಅಗರಖೇಡ ಗ್ರಾಮದ ನಿವಾಸಿ, ವಕೀಲ ರವಿ ಮೇಲಿನಮನಿ (37) ಮೃತರು. ವಿಜಯಪುರದ ಬಸವನಗರದ ರಸ್ತೆಯಲ್ಲಿ ದ್ವಿಚಕ್ರ ವಾಹನದಲ್ಲಿ ಸಾಗುತ್ತಿದ್ದ ರವಿ ಮೇಲಿಮನಿಯವರಿಗೆ ಕಾರು ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ಮೇಲಿನಮನಿ ಅವರ ದೇಹ ಕಾರಿನಡಿ ಸಿಲುಕಿದೆ. ರಸ್ತೆಯಲ್ಲಿ ನಿಂತಿದ್ದ ಜನರು ಕೂಗಿದರೂ ಕಾರು ಚಾಲಕ ನಿಲ್ಲಿಸದೇ ವೇಗವಾಗಿ ಚಾಲನೆ ಮಾಡಿದ್ದಾನೆ. ಎರಡು ಕಿ.ಮೀ. ದೂರದಲ್ಲಿರುವ ಜಿಲ್ಲಾ ಪಂಚಾಯಿತಿ ಪ್ರವೇಶದ್ವಾರದವರೆಗೆ ಶವನನ್ನು ಎಳೆದೊಯ್ದು, ಅದು ಕಾರಿನಿಂದ ಬೇರ್ಪಟ್ಟ ಬಳಿಕ ಚಾಲಕ ಕಾರಿನೊಂದಿಗೆ ಪರಾರಿಯಾದ. ವಕೀಲ ಮೇಲಿನಮನಿ ದೇಹ ಛಿದ್ರವಾಗಿದೆ' ಎಂದು ಪೊಲೀಸರು ತಿಳಿಸಿದರು.



ರವಿ ಮೇಲಿನಮನಿ

'ಕಾರಿಗೆ ನಂಬರ್ ಪ್ಲೇಟ್ ಇರಲಿಲ್ಲ. ಇದೊಂದು ಪೂರ್ವಯೋಜಿತ ಘಟನೆ ಇರಬಹುದು. ರವಿ ಮೇಲಿನಮನಿ ಅವರು ಭೀಮಾ ತೀರದ ಹಂತಕ ಬಾಗಪ್ಪ ಹರಿಜನ ಅವರ ಸಂಬಂಧಿಕ ಎಂದು ತಿಳಿದುಬಂದಿದೆ. ಕಳೆದ ಎರಡು ವರ್ಷಗಳಿಂದ ವಿಜಯಪುರ ಜಿಲ್ಲಾ ಸೆಷನ್ಸ್ ನ್ಯಾಯಾಲಯದಲ್ಲಿ ವಕೀಲರಾಗಿ ಕಾರ್ಯ ನಿರ್ವಹಿಸುತ್ತಿದ್ದರು' ಎಂದು ಅವರು ಮಾಹಿತಿ ನೀಡಿದರು.

ವಕ್ಫ್ ಕಾಯ್ದೆ ತಿದ್ದುಪಡಿಗೆ ಮುಂದಾಗಿರುವುದಕ್ಕೆ ವಿರೋಧ

'ಅಲ್ಪಸಂಖ್ಯಾತರ ಮೇಲೆ ಬಿಜೆಪಿಗೆ ಕೋಪ'

ಪ್ರಜಾವಾಣಿ ವಾರ್ತೆ



ಮೈಸೂರು: 'ಬಿಜೆಪಿ ಹಾಗೂ ಎನ್‌ಡಿಎಗೆ ಅಲ್ಪಸಂಖ್ಯಾತರ ಮೇಲೆ ಕೋಪವಿರುವುದರಿಂದಲೇ ವಕ್ಫ್ ಕಾಯ್ದೆ ತಿದ್ದುಪಡಿ ನಡೆದಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದರು.

ವಕ್ಫ್ ಬೋರ್ಡ್ ಕಾಯ್ದೆ ತಿದ್ದುಪಡಿಗೆ ಕೇಂದ್ರ ಸರ್ಕಾರ ಪ್ರಯತ್ನಿಸುತ್ತಿರುವ ಕುರಿತು ಇಲ್ಲಿ ಗುರುವಾರ ಪ್ರತಿಕ್ರಿಯಿಸಿ, 'ಬಿಜೆಪಿ ಎಂದಿಗೂ ಜಾತ್ಯತೀತತೆ, ಸಾಮಾಜಿಕ ನ್ಯಾಯದ ಪರವಾಗಿ ನಿಂತಿಲ್ಲ. ಕೋಮುವಾದಿ ಪಕ್ಷವಾಗಿಯೇ ಗುರುತಿಸಿಕೊಂಡಿದ್ದು, ಜಾತ್ಯತೀತ ತತ್ವವನ್ನು ನಂಬುವುದಿಲ್ಲ' ಎಂದು ಆರೋಪಿಸಿದರು.

'ಮತಾಂತರ ನಿಷೇಧ ಕಾನೂನು, ಗೋಹತ್ಯೆ ನಿಷೇಧ ಕಾಯ್ದೆ ತಿದ್ದುಪಡಿಗಳನ್ನು ಮಾಡಿದ್ದು ಬಿಜೆಪಿ. ಈಗ ವಕ್ಫ್ ಬೋರ್ಡ್ ಕಾಯ್ದೆ ತಿದ್ದುಪಡಿ ಪ್ರಯತ್ನಕ್ಕೆ ಕೈಹಾಕಿದ್ದಾರೆ. ಸಂವಿಧಾನದ ಪ್ರಕಾರ ಎಲ್ಲರಿಗೂ ಸಮಾನ ಅವಕಾಶಗಳಿವೆ. ವಕ್ಫ್ ಬೋರ್ಡ್ ಕಾನೂನು ಆ ಸಮುದಾಯದ ವೈಯಕ್ತಿಕ ಕಾನೂನು. ಅದರಲ್ಲಿ ಮಧ್ಯಪ್ರವೇಶಿಸುವುದು ಸಂವಿಧಾನ ಬಾಹಿರವಾಗುತ್ತದೆ. ಸಂವಿಧಾನದ ತತ್ವಗಳಲ್ಲಿ ನಂಬಿಕೆ ಇಟ್ಟುಕೊಂಡಿರುವ ಕಾಂಗ್ರೆಸ್ ಹಾಗೂ ಇಂಡಿಯಾ ಒಕ್ಕೂಟದವರು, ಕೇಂದ್ರದ ನಿಲುವನ್ನು ಸಂಪೂರ್ಣವಾಗಿ ವಿರೋಧಿಸುತ್ತೇವೆ' ಎಂದರು.

ವಿಜಯಪುರ ವರದಿ: 'ಅಲ್ಪಸಂಖ್ಯಾತ ವೋಟ್ ಬ್ಯಾಂಕ್‌ಗೆ ಅಂಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ದೇಶಕ್ಕೆ ಮಾರಕವಾದ ವಕ್ಫ್ ಕಾಯ್ದೆ ತಿದ್ದುಪಡಿ ಮಸೂದೆ ಮಂಡನೆಗೆ ಆಕ್ಷೇಪಿಸಿರುವುದು ಖಂಡನೀಯ' ಎಂದುಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದ್ದಾರೆ.

ಇದರ ಕುರಿತು 'ಎಕ್ಸ್' ಮಾಡಿರುವ ಯತ್ನಾಳ, 'ವಕ್ಫ್ ಟ್ರಿಬ್ಯೂನಲ್‌ನಲ್ಲಿ ನೀಡಿದ ತೀರ್ಪನ್ನು ಸುಪ್ರೀಂ ಕೋರ್ಟ್‌ನಲ್ಲೂ ಪ್ರಶ್ನಿಸುವಂತಿಲ್ಲ. ಮುಸ್ಲಿಂ ಬಹುಸಂಖ್ಯಾತ ರಾಷ್ಟ್ರಗಳಲ್ಲೇ ವಕ್ಫ್ ಎಂಬ ಪರಿಕಲ್ಪನೆ ಇಲ್ಲ' ಎಂದು ತಿಳಿಸಿದ್ದಾರೆ. 'ರಕ್ಷಣಾ ಇಲಾಖೆ ಹಾಗೂ ಭಾರತೀಯ ರೈಲ್ವೆ ಬಿಟ್ಟರೆ ಭಾರತದಲ್ಲಿ ಅತಿ ಹೆಚ್ಚು ಭೂಮಿಯ ಒಡೆತನ ಇರುವುದು ವಕ್ಫ್ ನಲ್ಲಿ. ಈ ಕಾಯ್ದೆಯಿಂದ ಅತಿ ಹೆಚ್ಚು ಅನ್ಯಾಯಕ್ಕೆ ಒಳಪಟ್ಟಿರುವವರು ಹಿಂದೂಗಳು' ಎಂದು ಆರೋಪಿಸಿದ್ದಾರೆ.

'ತಮಿಳುನಾಡಿನ ತಿರುಚಿರಾಪಳ್ಳಿ ಜಿಲ್ಲೆಯ ತಿರುಚೆಂಥುರೈ ಹಳ್ಳಿಯಲ್ಲಿರುವ 1,500 ವರ್ಷಗಳ ಇತಿಹಾಸವಿರುವ ಸುಂದರೇಶ್ವರ ಸ್ವಾಮಿ ದೇವಸ್ಥಾನದ ಮೇಲೂ ವಕ್ಫ್ ಮಂಡಳಿಯ 'ಕಾಕ ದೃಷ್ಟಿ' ಬಿದ್ದಿದ್ದು, ದೇವಸ್ಥಾನದ 369 ಎಕರೆ ಸಂಪೂರ್ಣವಾಗಿ ವಕ್ಫ್ ಗೆ ಸೇರಿದ್ದು ಎಂದು ಹೇಳಿತ್ತು. ಈ ರೀತಿಯಾದ ಏಕಪಕ್ಷೀಯವಾದ ಕಾನೂನು ಸಂವಿಧಾನದ ಆಶಯಗಳಿಗೆ ವಿರುದ್ಧವಾದದ್ದು ಎಂಬುದು ನಿಮಗೆ ಗೊತ್ತಿಲ್ಲವೇ' ಎಂದು ಪ್ರಶ್ನಿಸಿದ್ದಾರೆ.

ಗುಂಡು ತಗುಲಿ ಯೋಧ ಸಾವು

ಪ್ರಜಾವಾಣಿ ವಾರ್ತೆ

ಗುಳೇದಗುಡ್ಡ (ಬಾಗಲಕೋಟೆ ಜಿಲ್ಲೆ): ತಾಲ್ಲೂಕಿನ ಕಟಗೇರಿ ಗ್ರಾಮದ ಬಿಎಸ್‌ಎಫ್ ಯೋಧ ಉಮೇಶ ಡಬಗಲ್ (33) ಬುಧವಾರ ಗುಂಡು ತಗುಲಿ ಮೃತಪಟ್ಟಿದ್ದಾರೆ. ಅವರು ಪಶ್ಚಿಮ ಬಂಗಾಳದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು. ಅವರಿಗೆ ತಂದೆ, ತಾಯಿ, ಪತ್ನಿ ಮತ್ತು ಪುತ್ರಿ ಇದ್ದಾರೆ.



'ಯೋಧ ಉಮೇಶ ಡಬಗಲ್ ಅವರ ಪಾರ್ಥಿವ ಶರೀರವನ್ನು ಶುಕ್ರವಾರ ಬೆಳಿಗ್ಗೆ 11ಕ್ಕೆ ತರಲಾಗುತ್ತಿದ್ದು, ಸಕಲ ಸರ್ಕಾರಿ ಗೌರವದೊಂದಿಗೆ ಅಂತ್ಯಕ್ರಿಯೆಯನ್ನು ಗ್ರಾಮ ಪಂಚಾಯಿತಿ ಕಚೇರಿ ಬಳಿ ಮಾಡಲಾಗುವುದು' ಎಂದು ಗ್ರಾಮ ಪಂಚಾಯಿತಿ ಅಧ್ಯಕ್ಷೆ ಸುಮಿತ್ರಾ ದ್ಯಾವಣ್ಣವರ ತಿಳಿಸಿದ್ದಾರೆ.

27ಕ್ಕೆ ನಿಗದಿಯಂತೆ ಕೆಎಎಸ್ ಪರೀಕ್ಷೆ: ಕೆಎಟಿ ಮೊರೆಹೋದ ಅಭ್ಯರ್ಥಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಎಎಸ್ 40 ಹುದ್ದೆಗಳೂ ಸೇರಿ ಗೆಜೆಟೆಡ್ ಪ್ರೊಬೇಷನರಿ ಒಟ್ಟು 384 ಹುದ್ದೆಗಳಿಗೆ ಇದೇ 27ರಂದು ನಿಗದಿಯಾಗಿರುವ ಪೂರ್ವಭಾವಿ ಪರೀಕ್ಷೆಯನ್ನು ಮುಂದೂಡಬೇಕೆಂಬ ಒತ್ತಾಯದ ನಡುವೆಯೂ ಅದೇ ದಿನ ಪರೀಕ್ಷೆ ನಡೆಸಲು ಕೆಪಿಎಸ್‌ಸಿ ನಿರ್ಧರಿಸಿದೆ.

ಕೆಪಿಎಸ್‌ಸಿ ನಡೆಯನ್ನು ಪ್ರಶ್ನಿಸಿ ಕೆಲವು ಅಭ್ಯರ್ಥಿಗಳು ಕರ್ನಾಟಕ ಆಡಳಿತ ನ್ಯಾಯಮಂಡಳಿಯ (ಕೆಎಟಿ) ಮೊರೆ ಹೋಗಿದ್ದಾರೆ.

15ರಿಂದ ಪ್ರವೇಶಪತ್ರ: 'ಪೂರ್ವಭಾವಿ ಪರೀಕ್ಷೆಯನ್ನು ಇದೇ 25ರಂದು ನಡೆಸಲು ನಿರ್ಧರಿಸಲಾಗಿತ್ತು. ಆದರೆ, ಅಂದು ಐಬಿಪಿಎಸ್ ಪರೀಕ್ಷೆ ನಿಗದಿ ಆಗಿರುವುದರಿಂದ, ಮುಖ್ಯಮಂತ್ರಿ ಜೊತೆ ಚರ್ಚಿಸಿ ಅಲ್ಪ ಅವಧಿಗೆ ಮುಂದೂಡಲು ತೀರ್ಮಾನಿಸಲಾಗಿತ್ತು. ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಇದೇ 15ರ ನಂತರ ಪ್ರವೇಶಪತ್ರವನ್ನು ಆಯೋಗದ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು' ಎಂದು ಕೆಪಿಎಸ್‌ಸಿ ಕಾರ್ಯದರ್ಶಿ ಕೆ. ರಾಕೇಶ್ ಕುಮಾರ್ ತಿಳಿಸಿದ್ದಾರೆ.

'ಆಗಸ್ಟ್ 27 ಕೆಲಸ ದಿನ ಆಗಿರುವುದರಿಂದ ಈಗಾಗಲೇ ಅಭ್ಯರ್ಥಿಗಳನ್ನು ಹಂಚಿಕೆ ಮಾಡಲಾದ ಎಲ್ಲ ಜಿಲ್ಲೆಗಳ ಪರೀಕ್ಷಾ ಕೇಂದ್ರಗಳಿಗೆ ವಿಶೇಷ ಸಾರ್ವತ್ರಿಕ ರಜೆ, ಅರ್ಜಿ ಸಲ್ಲಿಸಿರುವ ರಾಜ್ಯ ಸರ್ಕಾರದ ಸೇವಾನಿರತ ಅಭ್ಯರ್ಥಿಗಳಿಗೆ ವಿಶೇಷ ರಜೆ ಘೋಷಿಸಲು ಕ್ರಮ ತೆಗೆದುಕೊಳ್ಳಲಾಗುವುದು' ಎಂದೂ ಅವರು ತಿಳಿಸಿದ್ದಾರೆ.

ಪರೀಕ್ಷೆ ಮುಂದೂಡುವಂತೆ ಪಟ್ಟು: 'ಆಗಸ್ಟ್ 27ರಂದು ಸರ್ಕಾರದ ಸೇವಾನಿರತರಿಗೆ ಸಾಂದರ್ಭಿಕ ರಜೆ ನೀಡಿದರೂ, ಅರ್ಜಿ ಸಲ್ಲಿಸಿರುವ ಕೇಂದ್ರ ಸರ್ಕಾರ ಮತ್ತು ಖಾಸಗಿ ಸಂಸ್ಥೆಗಳ ನೌಕರರು ಪರೀಕ್ಷೆ ಬರೆಯುವ ಅವಕಾಶದಿಂದ ವಂಚಿತರಾಗಲಿದ್ದಾರೆ. ಹೀಗಾಗಿ, ಪರೀಕ್ಷೆಯನ್ನು ಮುಂದೂಡಲೇಬೇಕು ಎಂದು ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರನ್ನು ಭೇಟಿ ಮಾಡಿ ಕೆಲ ಅಭ್ಯರ್ಥಿಗಳು ಕೋರಿದ್ದಾರೆ.

ಕೆಪಿಎಸ್‌ಸಿ ನಡೆ ಸರಿಯಲ್ಲ: ಸುದ್ದಿಗಾರರ ಜೊತೆ ಮಾಜಿ ಶಾಸಕ ವೈಎಸ್‌ವಿ ದತ್ತ, 'ಒಂದು ತಿಂಗಳ ಅವಧಿಗೆ ಪರೀಕ್ಷೆ ಮುಂದೂಡುವಂತೆ ಅಭ್ಯರ್ಥಿಗಳು ಮನವಿ ಮಾಡಿದರೂ ಕೇಳಿಸಿಕೊಳ್ಳಲು ಕೆಪಿಎಸ್‌ಸಿ ತಯಾರಿಲ್ಲ. ಈ ನಡೆ ಸರಿಯಲ್ಲ' ಎಂದರು.

ವಯನಾಡ್: ರಕ್ಷಣೆಗೆ ನಿಯೋಜಿಸಿದ್ದ ಸೇನೆ ಭಾಗಶಃ ವಾಪಸು

ಭೂಕುಸಿತದಿಂದ ಸಂತ್ರಸ್ತರಿಗೆ ವಿಮೆ ಪಡೆಯಲು ನೆರವಾಗಲು ಕೇರಳ ಸರ್ಕಾರದಿಂದ ಕಾರ್ಯಪಡೆ ರಚನೆ: ಮುಖ್ಯಮಂತ್ರಿ ಕಚೇರಿ

ವಯನಾಡ್ (ಪಿಟಿಐ): ಭೂಕುಸಿತ ಬಾಧಿತ ವಯನಾಡ್‌ನಲ್ಲಿ ರಕ್ಷಣಾ ಕಾರ್ಯದಲ್ಲಿ ನಿಯೋಜಿಸಲಾಗಿದ್ದ ಸೇನೆಯನ್ನು, ಒಂಬತ್ತು ದಿನಗಳ ಬಳಿಕ ಗುರುವಾರ ಭಾಗಶಃ ಹಿಂದೆ ಕರೆಯಿಸಿಕೊಳ್ಳಲಾಗಿದೆ. ರಕ್ಷಣೆಗೆ ನೆರವಾಗಲು ಸೇನೆಯು ಇಲ್ಲಿ ತಾತ್ಕಾಲಿಕ ಸೇತುವೆಯನ್ನು ನಿರ್ಮಿಸಿದೆ.

ಭಾಗಶಃ ಸೇನೆಯನ್ನು ವಾಪಸ್ ಕರೆಯಿಸಿಕೊಳ್ಳುವ ನಿರ್ಧಾರವನ್ನು ರಾಜ್ಯ ಲೋಕೋಪಯೋಗಿ ಸಚಿವ ಪಿ.ಎ.ಮಹಮ್ಮದ್ ರಿಯಾಸ್ ಪ್ರಕಟಿಸಿದರು. 'ಸೇನೆಯು ಬಹುತೇಕ ತನ್ನ ಕಾರ್ಯ ನೆರವೇರಿಸಿದ್ದು, ಅದಕ್ಕಾಗಿ ಕೃತಜ್ಞತೆ ಸಲ್ಲಿಸುತ್ತೇವೆ' ಎಂದು ಹೇಳಿದರು.

ಸೇನೆಯು ಸುಮಾರು 190 ಅಡಿ ಉದ್ದದ ತಾತ್ಕಾಲಿಕ ಸೇತುವೆಯನ್ನು ದಾಖಲೆಯ ಕಡಿಮೆ ಸಮಯದಲ್ಲಿ ನಿರ್ಮಿಸಿತ್ತು. ಚುರುಕಾಗಿ ರಕ್ಷಣೆ ಮತ್ತು ಶೋಧ ಕಾರ್ಯವನ್ನು ನಡೆಸಿತ್ತು. ಸಂಕಷ್ಟದ ಸಂದರ್ಭದಲ್ಲಿ ಪರಿಹಾರ ಕಾರ್ಯಗಳಿಗೆ ಕೈಜೋಡಿಸಿತ್ತು ಎಂದು ಸ್ಮರಿಸಿದರು.

ಉಳಿದವರ ನೆರವಿಗೆ ಕಾರ್ಯಪಡೆ ರಚನೆ (ತಿರುವನಂತಪುರ ವರದಿ): ಭೂಕುಸಿತದಿಂದ ನಷ್ಟ ಅನುಭವಿಸಿದವರಿಗೆ ವಿಮೆ ಪಡೆಯಲು ನೆರವಾಗಲು ಕೇರಳ ಸರ್ಕಾರ ಕಾರ್ಯಪಡೆ ರಚಿಸಿದೆ. ಸಂಪುಟ ಉಪ ಸಮಿತಿಯ ಶಿಫಾರಸು ಆಧರಿಸಿ ಈ ಕ್ರಮಕೈಗೊಳ್ಳಲಾಗಿದೆ ಎಂದು ಮುಖ್ಯಮಂತ್ರಿಯವರ ಕಚೇರಿಯು ತಿಳಿಸಿದೆ.

ಉಪ ವಿಭಾಗಾಧಿಕಾರಿ (ಕಂದಾಯ ವಸೂಲಿ) ಕೆ.ಗೋಪಿನಾಥ್ ತಂಡದ ನೇತೃತ್ವ ವಹಿಸುವರು. ವಾಹನವಿಮೆ, ಜೀವವಿಮೆ, ಗೃಹವಿಮೆ, ಬೆಳೆ ವಿಮೆ ಮತ್ತು ಜಾನುವಾರು ವಿಮೆಗೆ ಸಂಬಂಧಿಸಿದ ವಿವರಗಳನ್ನು ಸಂಗ್ರಹಿಸಿ, ತ್ವರಿತ ಇತ್ಯರ್ಥಪಡಿಸಲು ಇದು ನೆರವಾಗಲಿದೆ ಎಂದು ಹೇಳಿದೆ.

ಹೈಕೋರ್ಟ್‌ನಲ್ಲಿ ಪ್ರಕರಣ ದಾಖಲು ಕೊಚ್ಚಿ ವರದಿ: ಮುಂಡಕ್ಕೈ ಮತ್ತು ಚೂರಲ್‌ಮಲ ಸಂಭವಿಸಿದ ಭೂಕುಸಿತ ಅವಘಡ ಕುರಿತು ಕೇರಳ ಹೈಕೋರ್ಟ್ ಗುರುವಾರ ಸ್ವಯಂಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಂಡಿದೆ.

ನ್ಯಾಯಮೂರ್ತಿಗಳಾದ ಎ.ಕೆ. ಜಯಶಂಕರನ್ ನಂಬಿಯಾರ್ ಮತ್ತು ವಿ.ಎಂ.ಶ್ಯಾಮ್ ಕುಮಾರ್ ಅವರಿದ್ದ ಪೀಠವು, ಮಾಧ್ಯಮ ವರದಿಗಳ ಆಧಾರದಲ್ಲಿ ಪ್ರಕರಣ ದಾಖಲಿಸುವಂತೆ ರಿಜಿಸ್ಟ್ರಾರ್ ಜನರಲ್ ಅವರಿಗೆ ಸೂಚಿಸಿದೆ. ಶುಕ್ರವಾರ ಈ ಪ್ರಕರಣ ಪರಿಶೀಲನೆಗೆ ಬರಲಿಲಿದೆ.

'ಮುಲ್ಲಪ್ಪೆರಿಯಾರ್': ಹೊಸ ಅಣೆಕಟ್ಟೆ ನಿರ್ಮಾಣ ಬೇಡಿಕೆಗೆ ಮರುಜೀವ



ತಿರುವನಂತಪುರ: ಕೇರಳದ ಮುಲ್ಲಪ್ಪೆರಿಯಾರ್ ಬಳಿ ಇರುವ 130 ವರ್ಷ ಹಳೆಯ ಅಣೆಕಟ್ಟೆಯ ಬಳಕೆಯನ್ನು ನಿಲ್ಲಿಸಿ, ಹೊಸದಾಗಿ ಅಣೆಕಟ್ಟೆಯನ್ನು ನಿರ್ಮಿಸಬೇಕು ಎಂಬ ಬೇಡಿಕೆ, ದುರಂತದ ಹಿನ್ನೆಲೆಯಲ್ಲಿ ಮತ್ತಷ್ಟು ತೀವ್ರತೆ ಪಡೆದುಕೊಂಡಿದೆ.

ಎಲ್‌ಡಿಎಫ್ ಹಾಗೂ ಯುಡಿಎಫ್ ಪಕ್ಷಗಳ ಸಂಸದರು ಈ ಕುರಿತು ಕೇಂದ್ರ ಸರ್ಕಾರದ ಗಮನಕ್ಕೆ ತಂದಿದ್ದಾರೆ. ಯುಡಿಎಫ್ ಸಂಸದರೊಬ್ಬರು ಲೋಕಸಭೆಯಲ್ಲೂ ಪ್ರಸ್ತಾಪಿಸಿದ್ದಾರೆ. ಕೇಂದ್ರ ಜಲ ಶಕ್ತಿ ಸಚಿವ ಸಿ.ಆರ್.ಪಾಟೀಲ ಅವರನ್ನು ಭೇಟಿಯಾಗಿ ಬೇಡಿಕೆ ಪ್ರಸ್ತಾಪಿಸಿದ್ದಾರೆ.

ವಯನಾಡ್ ದುರಂತದ ಬಳಿಕ ಮತ್ತೊಂದು ದುರಂತವನ್ನು ತಡೆದುಕೊಳ್ಳುವ ಶಕ್ತಿ ರಾಜ್ಯಕ್ಕಿಲ್ಲ ಎನ್ನುವುದನ್ನು ಸಚಿವರಿಗೆ ಈ ಮೂಲಕ ಮನವರಿಕೆ ಮಾಡಿಕೊಟ್ಟಿದ್ದಾರೆ.

ಸುರ್ಖಿ (ಮರಳಿನ ಬದಲಿಗೆ ಬಳಸುವ ವಸ್ತು) ಮತ್ತು ಸುಣ್ಣದ ಕಲ್ಲಿನ ಮಿಶ್ರಣದಿಂದ 1887–1895ರಲ್ಲಿ ಅಣೆಕಟ್ಟೆ ನಿರ್ಮಿಸಲಾಗಿದೆ. ಈ ಮಿಶ್ರಣವು ಕಾಂಕ್ರೀಟ್‌ನಷ್ಟು ಶಕ್ತಿಯುತವಾದುದಲ್ಲ. ಒಂದು ವೇಳೆ ಅಣೆಕಟ್ಟೆಗೆ ಹಾನಿಯಾದರೆ ರಾಜ್ಯದ ಇಡುಕ್ಕಿ, ಕೊಚ್ಚಿ, ಕೊಟ್ಟಾಯಂ, ಪತ್ತನಂತಿಟ್ಟ, ಆಲಪ್ಪುಳ ಜಿಲ್ಲೆಗಳ ಲಕ್ಷಾಂತರ ಜನರು ಸಂಕಷ್ಟಕ್ಕೆ ಸಿಲುಕಲಿದ್ದಾರೆ ಎಂದು ಅವರು ಉಲ್ಲೇಖಿಸಿದ್ದಾರೆ.

ಹೊಸ ಅಣೆಕಟ್ಟು ನಿರ್ಮಾಣಕ್ಕೆ ತಮಿಳುನಾಡು ವಿರೋಧ

'ಮುಲ್ಲಪ್ಪೆರಿಯಾರ್ ಅಣೆಕಟ್ಟು ಹಾನಿಗೊಳಗಾಗಿದ್ದು, ಇದನ್ನು ಬಲಪಡಿಸುವ ಅಗತ್ಯ ಇದೆ' ಎಂದು ಕೇಂದ್ರ ಜಲ ಆಯೋಗವು 1979ರಲ್ಲಿ ಹೇಳಿತ್ತು. ಈ ಬಳಿಕ, ಇದನ್ನು ಬಲಪಡಿಸುವ ಕಾರ್ಯವೂ ನಡೆದಿತ್ತು. 'ಅಣೆಕಟ್ಟೆಯನ್ನು ಬಲಗೊಳಿಸಲಾಗಿದೆ. ಹಾಗಾಗಿ, ಹೊಸ ಅಣೆಕಟ್ಟೆ ನಿರ್ಮಾಣದ ಅಗತ್ಯ ಇಲ್ಲ' ಎಂದು ತಮಿಳುನಾಡು ವಾದಿಸುತ್ತಿದೆ. ಕೇರಳದಲ್ಲಿ ಅಣೆಕಟ್ಟು ಇದೆಯಾದರೂ ತಮಿಳುನಾಡು ಸರ್ಕಾರವೇ ಇದನ್ನು ನಿರ್ವಹಿಸುತ್ತದೆ.

₹15 ಕೋಟಿ ದೇಣಿಗೆ ನೀಡಲು ಮುಂದಾದ ಆರೋಪಿ ಸುಕೇಶ್

ನವದೆಹಲಿ (ಪಿಟಿಐ): 'ಮುಖ್ಯಮಂತ್ರಿ ಪರಿಹಾರ ನಿಧಿ'ಗೆ ₹15 ಕೋಟಿ ದೇಣಿಗೆ ನೀಡಲು ವಂಚನೆ ಪ್ರಕರಣದ ಆರೋಪಿ ಸುಕೇಶ್ ಚಂದ್ರಶೇಖರ್ ಮುಂದಾಗಿದ್ದಾರೆ.

ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಆರೋಪಿಯಾಗಿರುವ ಸುಕೇಶ್ ಚಂದ್ರಶೇಖರ್ ಈಗ ನವದೆಹಲಿಯ ಮಂಡೋಲಿ ಜೈಲಿನಲ್ಲಿದ್ದಾರೆ.

ಕೇರಳದಲ್ಲಿ ನಡೆದಿರುವ ಭೂಕುಸಿತದಿಂದ ತೀವ್ರ ದುಃಖಿತನಾಗಿದ್ದು, ಅಗತ್ಯವಿರುವ ಸಮಯಲ್ಲಿ ಸೂಕ್ತ ನೆರವು ನೀಡಲು ಸಿದ್ಧ ಎಂದು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

ಪತ್ರ ಬರೆದಿರುವುದನ್ನು ಅವರ ಪರ ವಕೀಲ ಅನಂತ್ ಮಲಿಕ್ ಕೂಡ ಖಚಿತಪಡಿಸಿದ್ದಾರೆ.

'ನನ್ನ ಫೌಂಡೇಶನ್‌ನಿಂದ ₹15 ಕೋಟಿ ದೇಣಿಗೆಯನ್ನು 'ಮುಖ್ಯಮಂತ್ರಿಗಳ ಪರಿಹಾರ ನಿಧಿ'ಗೆ ನೀಡುತ್ತಿದ್ದು, ಇದನ್ನು ಸ್ವೀಕರಿಸುವಂತೆ ನಿಮ್ಮಲ್ಲಿ ಮನವಿ ಮಾಡುತ್ತೇನೆ. ನಾನು ನೀಡುತ್ತಿರುವ ನೆರವನ್ನು ಸಂತ್ರಸ್ತರಿಗೆ ತಕ್ಷಣದಲ್ಲಿ 300 ಮನೆ ನಿರ್ಮಿಸಲು ಬೆಂಬಲವಾಗಿ ನೀಡುತ್ತಿದ್ದೇನೆ' ಎಂದು ಪತ್ರದಲ್ಲಿ ವಿವರಿಸಿದ್ದಾನೆ.



ಪಿಣರಾಯಿ ವಿಜಯನ್

'ಈ ಮೊತ್ತವನ್ನು 'ಕಾನೂನು ಬದ್ಧವಾದ ವ್ಯವಹಾರ ಖಾತೆ'ಯಿಂದ ನೀಡುವುದಾಗಿ ತಿಳಿಸಿರುವ ಸುಕೇಶ್, ಭೂಕುಸಿತದಿಂದ ಮನೆ ಕಳೆದುಕೊಂಡವರಿಗೆ ಪುನರ್ ವಸತಿ, ಕ್ಷೇಮಾಭಿವೃದ್ಧಿಗೆ ಬಳಸಿಕೊಳ್ಳಬೇಕು' ಎಂದು ಮನವಿ ಮಾಡಿದ್ದಾನೆ. ಚಂದ್ರಶೇಖರ್ ಬರೆದ ಪತ್ರಕ್ಕೆ ಕೇರಳ ಸರ್ಕಾರವು ಇನ್ನಷ್ಟೇ ಪ್ರತಿಕ್ರಿಯಿಸಬೇಕಿದೆ.

12ರಿಂದ ಸ್ಥಾನಿಕ ವೈದ್ಯರ ಪ್ರತಿಭಟನೆ

ಬೆಂಗಳೂರು: ವೈದ್ಯಕೀಯ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ಥಾನಿಕ ವೈದ್ಯರ ಶಿಷ್ಯವೇತನ ಹೆಚ್ಚಳಕ್ಕೆ ಆಗ್ರಹಿಸಿ ಕರ್ನಾಟಕ ಸ್ಥಾನಿಕ ವೈದ್ಯರ ಸಂಘವು (ಕೆಎಆರ್‌ಡಿ) ಇದೇ 12ರಿಂದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಹಮ್ಮಿಕೊಂಡಿದೆ.

'ಈಗಾಗಲೇ ಸ್ಥಾನಿಕ ವೈದ್ಯರು ಕಪ್ಪುಪಟ್ಟಿ ಧರಿಸಿ ಕಾರ್ಯನಿರ್ವಹಿಸುತ್ತಿದ್ದಾರೆ. ವಿದ್ಯಾರ್ಥಿ ವೇತನ ಹೆಚ್ಚಳ ಮಾಡುವಂತೆ ಮುಖ್ಯಮಂತ್ರಿ, ವೈದ್ಯಕೀಯ ಶಿಕ್ಷಣ ಸಚಿವರು ಸೇರಿ ಸಂಬಂಧಪಟ್ಟ ಅಧಿಕಾರಿಗಳಿಗೆ ಒಂದು ವರ್ಷದಿಂದ ಪತ್ರದ ಮೂಲಕ ಮನವಿ ಮಾಡಲಾಗಿದೆ. ಆದರೂ ಯಾವುದೇ ಪ್ರತಿಕ್ರಿಯೆ ದೊರೆತಿಲ್ಲ. ಹೀಗಾಗಿ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆಸಲಾಗುವುದು' ಎಂದು ಸಂಘದ ಅಧ್ಯಕ್ಷ ಡಾ. ಸಿರೀಶ್ ಶಿವರಾಮಯ್ಯ ತಿಳಿಸಿದ್ದಾರೆ.

'ರಾಜ್ಯದ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಪ್ರವೇಶ ಶುಲ್ಕ ಅಧಿಕವಿದೆ. ಹೆಚ್ಚು ಪ್ರವೇಶ ಶುಲ್ಕ ಪಡೆದು, ಕಡಿಮೆ ವಿದ್ಯಾರ್ಥಿ ವೇತನ ನೀಡುವ ಮೂಲಕ ವಂಚಿಸಲಾಗುತ್ತಿದೆ' ಎಂದು ದೂರಿದ್ದಾರೆ.

'ಪ್ರತಿಭಟನೆ ವೇಳೆ ತುರ್ತು ಚಿಕಿತ್ಸೆ ಹೊರತುಪಡಿಸಿ, ಹೊರ ರೋಗಿಗಳ ವಿಭಾಗ ಹಾಗೂ ತುರ್ತು ಅಲ್ಲದ ಸೇವೆಗಳನ್ನು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು ನೀಡುವುದಿಲ್ಲ. ಇದಕ್ಕಾಗಿ ವಿಷಾದಿಸುತ್ತೇವೆ ಎಂದು ಹೇಳಿದ್ದಾರೆ.

ಉಕ್ಕೇರಿದ ಭೀಮಾ ಸೇತುವೆ ಮುಳುಗಡೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ಮಹಾರಾಷ್ಟ್ರದ ಉಜನಿ ಮತ್ತು ವೀರ್ ಜಲಾಶಯದಿಂದ ಭೀಮಾ ನದಿಗೆ ಅಪಾರ ಪ್ರಮಾಣದ ನೀರು ಹರಿದು ಬಂದಿದ್ದರಿಂದ ಗುರುವಾರ ಅಫಜಲಪುರ ತಾಲ್ಲೂಕಿನಲ್ಲಿ ಎರಡು ಸೇತುವೆಗಳು ಮುಳುಗಡೆಯಾಗಿವೆ. ನದಿ ಪಾತ್ರದ ಜಮೀನುಗಳಿಗೆ ನೀರು ನುಗ್ಗಿ ಬೆಳೆ ಹಾನಿಯಾಗಿದೆ.

ಮಹಾರಾಷ್ಟ್ರದಲ್ಲಿ ನಿರಂತರ ಮಳೆ ಯಾಗುತ್ತಿದೆ. ಆಗಸ್ಟ್ 5ರಂದು ಒಂದು ಲಕ್ಷಕ್ಕೂ ಹೆಚ್ಚು ಕ್ಯುಸೆಕ್ ನೀರು ಭೀಮಾ ನದಿಗೆ ಹರಿಸಲಾಗಿತ್ತು. ನದಿ ನೀರಿನ ಮಟ್ಟ ಹೆಚ್ಚಳವಾಗಿ ಘತ್ತರಗಾ–ಜೇರಟಗಿ ಮತ್ತು ಗಾಣಗಾಪುರ–ಇಟಗಾ ನಡುವಿನ ಸೇತುವೆಗಳು ಮುಳುಗಡೆಯಾಗಿವೆ. ಬ್ಯಾರಿಕೇಡ್ ಹಾಕಿ 2 ದಿನಗಳ ಮಟ್ಟಿಗೆ ಸಂಚಾರವನ್ನು ನಿರ್ಬಂಧಿಸಲಾಗಿದೆ.

ನದಿ ತೀರದ ಅಫಜಲಪುರ ತಾಲ್ಲೂಕಿನ ಶಿವಪುರ ಹಾಗೂ ಹಾವಳಗಿ ಗ್ರಾಮಗಳ ಜಮೀನಿಗಳಿಗೆ ನೀರು ನುಗ್ಗಿದೆ. ತೊಗರಿ, ಹತ್ತಿ ಬೆಳೆಗಳಿಗೆ ಹಾನಿಯಾಗಿದೆ. ಪ್ರವಾಹಕ್ಕೆ ಸಿಲುಕಿ ನದಿ ದಡದಲ್ಲಿದ್ದ ಕೃಷಿ ಪಂಪ್‌ಸೆಟ್‌ಗಳು ಕೊಚ್ಚಿ ಹೋಗಿವೆ. ನದಿ ತೀರದ ಗ್ರಾಮಗಳಲ್ಲಿ ಆತಂಕ ಮೂಡಿದೆ.

ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ಅವರು ನದಿ ತೀರಕ್ಕೆ ಭೇಟಿ ನೀಡಿ, ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳುವಂತೆ ನೋಡಲ್ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಕೊಪ್ಪಳ ಹಾಗೂ ಕುಷ್ಟಗಿ ತಾಲ್ಲೂಕಿನಲ್ಲಿ ಗುರುವಾರ ಉತ್ತಮವಾಗಿ ಮಳೆಯಾಗಿದೆ. ಮಳೆ ಸುರಿದ ಖುಷಿಗೆ ತಾಲ್ಲೂಕಿನ ಹಲವಾಗಲಿ ಗ್ರಾಮದ ರೈತರೊಬ್ಬರು ಮಳೆಯ ನೀರಿನಲ್ಲಿಯೇ ಉರುಳಾಡಿ ಖುಷಿಪಟ್ಟ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದೆ.

ಕಾಳಿ ನದಿ: ಸಂಚಾರಕ್ಕೆ ಒಂದೇ ಸೇತುವೆ ಆಸರೆ

ಕಾರವಾರ: ಇಲ್ಲಿನ ಕಾಳಿ ನದಿಯ ಹಳೆಯ ಸೇತುವೆ ಕುಸಿತದಿಂದ ಪಕ್ಕದ ಹೊಸ ಸೇತುವೆಗೆ ಯಾವುದೇ ಸಮಸ್ಯೆ ಅಥವಾ ಹಾನಿ ಆಗಿಲ್ಲ. ಸಾರ್ವಜನಿಕರ ಸುರಕ್ಷತೆ ಹಿತದೃಷ್ಟಿಯಿಂದ ಹೊಸ ಸೇತುವೆ ಮೇಲೆ ಭಾರಿ ವಾಹನಗಳ ಸಂಚಾರಕ್ಕೆ ಹೇರಿದ್ದ ನಿಷೇಧ ಆದೇಶವನ್ನು ಜಿಲ್ಲಾಡಳಿತವು ಗುರುವಾರ ಹಿಂಪಡೆದಿದೆ.

ಹಳೆಯ ಸೇತುವೆ ಕುಸಿತದಿಂದ ಹೊಸ ಸೇತುವೆಗೆ ಹಾನಿಯಾಗಿರಬಹುದು ಎಂದು ಭಾರಿ ವಾಹನಗಳ ಸಂಚಾರವನ್ನು ಬುಧವಾರ ನಿರ್ಬಂಧಿಸಲಾಗಿತ್ತು. ಇದರಿಂದ ಕಾರವಾರದಿಂದ ಗೋವಾ ಮತ್ತು ಗೋವಾದಿಂದ ಕಾರವಾರದತ್ತ ಸಂಚರಿಸುವ ವಾಹನಗಳು ಹೆದ್ದಾರಿಯಲ್ಲೇ ನಿಲುಗಡೆಯಾಗಿದ್ದವು. 'ಹೊಸ ಸೇತುವೆ ಸುರಕ್ಷತೆ ಮತ್ತು ಸಾಮರ್ಥ್ಯವನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಪರಿಶೀಲಿಸಿ, ಹಾನಿ ಆಗಿಲ್ಲ ಎಂಬುದನ್ನು ದೃಢಪಡಿಸಿದ್ದಾರೆ' ಎಂದು ಜಿಲ್ಲಾಧಿಕಾರಿ ಕೆ.ಲಕ್ಷ್ಮಿಪ್ರಿಯಾ ತಿಳಿಸಿದ್ದಾರೆ.

29 ಎಕರೆ ಅರಣ್ಯ ಒತ್ತುವರಿ ತೆರವು

ಆಗುಂಬೆ, ಮಂಡಗದ್ದೆ, ತೀರ್ಥಹಳ್ಳಿ, ಆಯನೂರು ಅರಣ್ಯ ವಲಯ ವ್ಯಾಪ್ತಿಯಲ್ಲಿ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ

ತೀರ್ಥಹಳ್ಳಿ: ಅರಣ್ಯ ಸಚಿವ ಈಶ್ವರ ಖಂಡ್ರೆ ಸೂಚನೆ ಮೇರೆಗೆ ತಾಲ್ಲೂಕಿನಲ್ಲಿ 7 ಕಡೆಗಳ ಒಟ್ಟು 29 ಎಕರೆ ಅರಣ್ಯ ಒತ್ತುವರಿಯನ್ನು ಗುರುವಾರ ಅರಣ್ಯ ಇಲಾಖೆ ತೆರವುಗೊಳಿಸಿದೆ.

ಆಗುಂಬೆ ಅರಣ್ಯ ವಲಯ ವ್ಯಾಪ್ತಿಯ ಅಲಗೇರಿ, ಬಿದರಗೋಡು ಗ್ರಾಮದಲ್ಲಿ ಒಟ್ಟು 2 ಪ್ರಕರಣದ 13.24 ಎಕರೆ, ಮಂಡಗದ್ದೆ ಅರಣ್ಯ ವಲಯ ವ್ಯಾಪ್ತಿಯ ಕುಡುವಳ್ಳಿ ಗ್ರಾಮದ 6 ಎಕರೆ, ತೀರ್ಥಹಳ್ಳಿ ಅರಣ್ಯ ವಲಯ ವ್ಯಾಪ್ತಿಯ ಭಾರತೀಪುರ, ಮೇಲಿನಕುರುವಳ್ಳಿ ಗ್ರಾಮದ 3 ಸ್ಥಳದಲ್ಲಿ ಒಟ್ಟು 7.20 ಎಕರೆ, ಆಯನೂರು ಅರಣ್ಯ ವಲಯ ವ್ಯಾಪ್ತಿಯ ಗುಂಡಿಚಟ್ನಳ್ಳಿ ಗ್ರಾಮದ 2 ಎಕರೆ ಒತ್ತುವರಿ ತೆರವು ಕಾರ್ಯಾಚರಣೆ ನಡೆದಿದೆ.



ತೀರ್ಥಹಳ್ಳಿ ತಾಲ್ಲೂಕಿನ ಭಾರತೀಪುರ ವಿಹಂಗಮ ಹಾಲಿಡೇ ರೆಸಾರ್ಟ್ ಪ್ರದೇಶದ ಅಕ್ರಮ ಒತ್ತುವರಿ ಪ್ರದೇಶ ತೆರವುಗೊಳಿಸಲಾಯಿತು

ತೆರವು ಕಾರ್ಯಾಚರಣೆ ವೇಳೆ ಗ್ರಾಮಸ್ಥರ ವಿರೋಧ ವ್ಯಕ್ತವಾಯಿತು. ಒತ್ತುವರಿ ತೆರವುಗೊಳಿಸಿ ವಶಪಡಿಸಿಕೊಂಡ ಜಾಗದಲ್ಲಿ ಜೆಸಿಬಿ ಮೂಲಕ ಕಂದಕ ನಿರ್ಮಿಸಲಾಗಿದೆ. ಕಂದಕದ ಆಜುಬಾಜಿನಲ್ಲಿ ಕಾಡು ಜಾತಿಯ ಸಸಿಗಳನ್ನು ನಾಟಿ ಮಾಡಲಾಗಿದೆ.

ಒತ್ತುವರಿ ತೆರವು ಸ್ಥಳಕ್ಕೆ ಡಿಸಿಎಫ್ಒ ಶಿವಶಂಕರ್ ಇ. ಭೇಟಿ ನೀಡಿ ಪರಿಶೀಲಿಸಿದರು. ಎಸಿಎಫ್ ದಿನೇಶ್ ಎಸ್.ಒ, ತೀರ್ಥಹಳ್ಳಿ ವಲಯ ಅರಣ್ಯ ಅಧಿಕಾರಿ ಸಂಜಯ್ ಬಿ.ಎಸ್, ಮಂಡಗದ್ದೆ ವಲಯ ಅರಣ್ಯ ಅಧಿಕಾರಿ ಎಂ.ಪಿ. ಆದರ್ಶ, ಆಗುಂಬೆ ವಲಯ ಅರಣ್ಯ ಅಧಿಕಾರಿ ಮಧುಕರ್ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ವಿಹಂಗಮ ರೆಸಾರ್ಟ್ ಒತ್ತುವರಿ ತೆರವು

ಇಲ್ಲಿನ ಭಾರತೀಪುರ ಗ್ರಾಮದ ಸರ್ವೆ ನಂ. 81ರ ಭಾರತೀಪುರ ಕಿರು ಅರಣ್ಯ ಪ್ರದೇಶದಲ್ಲಿ ಕೆ.ಆರ್. ದಯಾನಂದ, ಕಾನೀನ ಕಡಿದಾಳ್ ಅವರು ಅಕ್ರಮವಾಗಿ ಕಲ್ಲುಕಂಬ ತಂತಿ ಬೇಲಿ ನಿರ್ಮಿಸಿ, ಅಡಿಕೆ, ಕಾಫಿ ಇನ್ನಿತರೆ ಬೆಳೆ ಬೆಳೆದು ಮನೆ ಮತ್ತು ಇತರೆ ಕಟ್ಟಡ ನಿರ್ಮಿಸಿ ಕಾನೂನು ಬಾಹಿರ ಒತ್ತುವರಿ ಮಾಡಿಕೊಂಡಿದ್ದರು.

ಡಿಸಿಎಫ್ಒ ನೇತೃತ್ವದಲ್ಲಿ ವಿಹಂಗಮ ಹಾಲಿಡೇ ರೆಸಾರ್ಟ್ ಪ್ರದೇಶದ ಅಂದಾಜು 2.20 ಎಕರೆ ಅಕ್ರಮ ಒತ್ತುವರಿ ತೆರವುಗೊಳಿಸಿ ಜಾಗವನ್ನು ಸುಪರ್ದಿಗೆ ಪಡೆದಿದ್ದಾರೆ. ಕಾರ್ಯಾಚರಣೆ ವೇಳೆ ಒತ್ತುವರಿದಾರರು ಕಟ್ಟಡಗಳಿಗೆ ಪಟ್ಟಣ ಪಂಚಾಯಿತಿಯಿಂದ ಭೂ- ಭೂಪರಿವರ್ತನೆ ಮಾಡಿಕೊಂಡಿರುವುದಾಗಿ ತಿಳಿಸಿದ್ದು, ದಾಖಲೆ ಸಲ್ಲಿಸಲು ಕಾಲಾವಕಾಶ ಕೋರಿದ್ದಾರೆ. ಮುಂದಿನ ಹಂತದ ಕಾರ್ಯಾಚರಣೆ ಕೈಗೊಳ್ಳಲು ಒತ್ತುವರಿದಾರರ ಮೇಲೆ ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 64(ಎ) ಅಡಿಯಲ್ಲಿ ನೋಟೀಸ್ ಜಾರಿ ಮಾಡಲಾಗಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್ *	124.80	124.70	15,868	12,757
ಹಾರಂಗಿ	2,859	2,856.97	3,542	2,883
ಕಬಿನಿ	2,284	2,283.40	6,471	6,350
ಹೇಮಾವತಿ	2,922	2,922	12,619	12,675
ಲಿಂಗನಮಕ್ಕಿ	1,819	1,816.35	15,360	14,056
ಸೂಪಾ (ಮೀ)	564	558.30	11,431	4,629.61
ಮಾಣಿ	595	588.50	1,442	-
ತುಂಗಭದ್ರಾ	1,633	1,632.45	57,819	59,839
ಮಲಪ್ರಭಾ	2,079.5	2,076.85	6,250	3,194
ಘಟಪ್ರಭಾ	2175	2,173.50	10,138	8,225
ಭದ್ರಾ	186	180.03	9,114	6,811
ಆಲಮಟ್ಟಿ (ಮೀ)	519.6	518.22	2,77,959	2,01,941
ನಾರಾಯಣಪುರ (ಮೀ)	492.25	490.87	2,00,000	2,06,380

* ನೆಲಮಟ್ಟದಿಂದ

ಸುಧಾ, ಮಯೂರ ಓದಿ

ವಂಡರ್‌ಲಾ: ಎರಡು ಟಿಕೆಟ್ ಖರೀದಿಸಿದರೆ ಒಂದು ಉಚಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ವಂಡರ್‌ಲಾ ಹಾಲಿಡೇಸ್ ಅಮ್ಯೂಸ್‌ಮೆಂಟ್ ಬೆಂಗಳೂರು ಪಾರ್ಕ್ ಆಗಸ್ಟ್ 6ರಿಂದ ವಿಶೇಷ ಕೊಡುಗೆ ಘೋಷಿಸಿದೆ. ಆನ್‌ಲೈನ್‌ನಲ್ಲಿ ಎರಡು ಟಿಕೆಟ್ ಖರೀದಿಸಿದರೆ ಒಂದು ಉಚಿತ ಹಾಗೂ ಆಫ್‌ಲೈನ್‌ನಲ್ಲಿ ಮೂರು ಟಿಕೆಟ್ ಖರೀದಿಸಿದರೆ ಒಂದು ಟಿಕೆಟ್ ಉಚಿತವಾಗಿ ಲಭಿಸಲಿದೆ.

ಆನ್‌ಲೈನ್ ಮೂಲಕ ಟಿಕೆಟ್ ಖರೀದಿಸಿದವರು ಆ.15 ರಿಂದ 19ರ ಅವಧಿಯಲ್ಲಿ ಪಾರ್ಕ್‌ಗೆ ಭೇಟಿ ನೀಡಬಹುದು. ಆಫ್‌ಲೈನ್‌ನಲ್ಲಿ ಬೆಳಿಗ್ಗೆ 11ಗಂಟೆಗೂ ಮುಂಚಿತವಾಗಿ ಪಾರ್ಕ್‌ಗೆ ನೇರವಾಗಿ ಭೇಟಿ ನೀಡಿ ಟಿಕೆಟ್ ಖರೀದಿಸಬಹುದು. ಈ ಕೊಡುಗೆ ಪಡೆದವರು ಆಗಸ್ಟ್ 6ರಿಂದ 31ರವರೆಗೆ ಪಾರ್ಕ್‌ಗೆ ಭೇಟಿ ನೀಡಬಹುದು.

'ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ಈ ಕೊಡುಗೆ ಘೋಷಿಸಲಾಗಿದೆ. ಆಗಸ್ಟ್ 15ರಂದು ಸ್ವಾತಂತ್ರ್ಯೋತ್ಸವದ ಪರೇಡ್, ವಾರಾಂತ್ಯದಲ್ಲಿ ವಿಶೇಷ ಡಿಜೆ ಪ್ರದರ್ಶನವನ್ನು ಆನಂದಿಸಬಹುದು' ಎಂದು ವಂಡರ್‌ಲಾ ಹಾಲಿಡೇಸ್ ಲಿಮಿಟೆಡ್ ವ್ಯವಸ್ಥಾಪಕ ನಿರ್ದೇಶಕ ಅರುಣ್ ಕೆ. ಚಿಟ್ಟಿಲಪ್ಪಿಳ್ಳಿ ತಿಳಿಸಿದ್ದಾರೆ.

ಕೊಡುಗೆಯಡಿ ಟಿಕೆಟ್ ಕಾಯ್ದಿರಿಸಲು ಆನ್‌ಲೈನ್ ಪೋರ್ಟಲ್ https://bookings.wonderla.com/ಗೆ ಭೇಟಿ ನೀಡಬೇಕು. ಇಲ್ಲದಿದ್ದರೆ, ಗ್ರಾಹಕರು ನೇರವಾಗಿ ಪಾರ್ಕ್ ಕೌಂಟರ್‌ಗಳಿಂದ ಟಿಕೆಟ್ ಖರೀದಿಸಬಹುದು. ಹೆಚ್ಚಿನ ಮಾಹಿತಿಗೆ 80372 30333, 80350 73966 ಸಂಪರ್ಕಿಸಬಹುದು.

ಸಿನಿಮಾ ಪುರವಣಿ ಓದಿ

ಜನಾಗ್ರಹದ ತುಲನಾತ್ಮಕ ವಿಶ್ಲೇಷಣೆ ವರದಿಯ ಮಾಹಿತಿ ಬಿಡುಗಡೆಗೊಳಿಸಿದ ಶ್ರೀಕಾಂತ್ ವಿಶ್ವನಾಥನ್

ಜಿಬಿಜಿ ಮಸೂದೆಗೆ 10ರಲ್ಲಿ 3.35 ಅಂಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರ ವಿಧಾನಮಂಡಲದಲ್ಲಿ ಮಂಡಿಸಿರುವ ಗ್ರೇಟರ್ ಬೆಂಗಳೂರು ಆಡಳಿತ ಮಸೂದೆಗೆ (ಜಿಬಿಜಿ) ಜನಾಗ್ರಹದ ತುಲನಾತ್ಮಕ ವಿಶ್ಲೇಷಣೆಯಲ್ಲಿ 10ಕ್ಕೆ 3.35 ಅಂಕ ಲಭಿಸಿದೆ.



ಶ್ರೀಕಾಂತ್ ವಿಶ್ವನಾಥನ್

ಮಸೂದೆಯಲ್ಲಿ ಸ್ಪಂದನಾತ್ಮಕ ಮತ್ತು ಆಧುನಿಕ ಬೆಂಗಳೂರನ್ನು ನಿರ್ಮಿಸಲು ಅಗತ್ಯವಾದ ಪ್ರಗತಿಪರ ಅಂಶಗಳಿಲ್ಲ. ಬ್ರ್ಯಾಂಡ್ ಬೆಂಗಳೂರು ಸಮಿತಿ ನೀಡಿದ್ದ ಹಲವು ಅಪೇಕ್ಷಣೀಯ ಶಿಫಾರಸುಗಳನ್ನು ಸರ್ಕಾರ ನಿರ್ಲಕ್ಷಿಸಿದೆ ಎಂದೂ ಹೇಳಲಾಗಿದೆ.

ಜನಾಗ್ರಹದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶ್ರೀಕಾಂತ್ ವಿಶ್ವನಾಥನ್ ಅವರು ತುಲನಾತ್ಮಕ ವಿಶ್ಲೇಷಣೆ ವರದಿಯ ಮಾಹಿತಿಯನ್ನು ಗುರುವಾರ ನೀಡಿದರು.

2014ರಲ್ಲಿ ರಾಜ್ಯ ಸರ್ಕಾರ ಬಿಬಿಎಂಪಿ ಪುನಾರಚನೆ ಸಮಿತಿ ರಚಿಸಿತ್ತು. ಅದಕ್ಕೆ 2024ರಲ್ಲಿ ಮರುನಾಮಕರಣ ಮಾಡಿ, ಬ್ರ್ಯಾಂಡ್ ಬೆಂಗಳೂರು ಸಮಿತಿ (ಬಿಬಿಸಿ) ಎಂದು ಮರುನಾಮಕರಣ ಮಾಡಲಾಯಿತು. ಈ ಸಮಿತಿಯು ಗ್ರೇಟರ್ ಬೆಂಗಳೂರು ಆಡಳಿತದ (ಜಿಬಿಜಿ) ಕರಡು ಮಸೂದೆಯನ್ನು ಸಿದ್ಧಪಡಿಸಿದೆ. ನಗರ-ವ್ಯವಸ್ಥೆಗಳ ಚೌಕಟ್ಟಿನ ಆಧಾರದ ಮೇಲೆ ಜಿಬಿಜಿ ಮಸೂದೆಯ ಆಳವಾದ ತುಲನಾತ್ಮಕ ವಿಶ್ಲೇಷಣೆಯನ್ನು ಜನಾಗ್ರಹ ಕೈಗೊಂಡಿತ್ತು ಎಂದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಾಯ್ದೆ–2020 ಮತ್ತು ಕರ್ನಾಟಕ ಮಹಾನಗರ ಪಾಲಿಕೆಗಳ (ಕೆಎಂಸಿ) ಕಾಯ್ದೆ–1976 ಅನ್ನೂ ಅಧ್ಯಯನದಲ್ಲಿ ಪರಿಗಣಿಸಲಾಗಿತ್ತು ಎಂದು ಮಾಹಿತಿ ನೀಡಿದರು.

ಜನಾಗ್ರಹದ ಸಹಭಾಗಿತ್ವ ಆಡಳಿತದ ಮುಖ್ಯಸ್ಥ ಸಂತೋಷ ನರಗುಂದ ಮಾತನಾಡಿ, 'ಬೆಂಗಳೂರು ಪುನಾರಚನೆಯ ಪ್ರಯತ್ನವನ್ನು ಜನರು ಆಶಾಭಾವನೆಯಿಂದ ಎದುರು ನೋಡುತ್ತಿದ್ದಾರೆ. ಆದರೆ ವಿಧಾನಸಭೆಯಲ್ಲಿ ಮಂಡನೆಯಾಗಿರುವ ಜಿಬಿಜಿ ಮಸೂದೆ ಅತ್ಯಂತ ನಿರಾಶಾದಾಯಕವಾಗಿದೆ' ಎಂದರು. ಜನಾಗ್ರಹದ ಪೌರ ಕಾನೂನು ಮತ್ತು ನೀತಿಯ ಮುಖ್ಯಸ್ಥರಾದ ವಿ.ಆರ್.ವಚನ ಮಾತನಾಡಿ, 'ನಾಗರಿಕರಿಗೆ ಗುಣಮಟ್ಟದ ಜೀವನ ನೀಡಲು ಸಾಧ್ಯವಾಗಬೇಕಾದರೆ, 21ನೇ ಶತಮಾನದ ಅವಕಾಶಗಳು ಮತ್ತು ಸವಾಲುಗಳನ್ನು ಪೂರೈಸುವ ಕಾಯ್ದೆ ಇರಬೇಕು' ಎಂದರು.

ಸುಧಾರಣೆಗೆ ಜನಾಗ್ರಹದ ಸಲಹೆಗಳು

- ಬಿಬಿಎಂಪಿಗೆ ಮೆಟ್ರೊಪಾಲಿಟನ್ ಮೇಯರ್ ಆಯ್ಕೆಯಾಗಲಿ
- ಮೇಯರ್‌ಗಳು ಮತ್ತು ಕೌನ್ಸಿಲರ್‌ಗಳು, ಅವರ ಕುಟುಂಬದ ಸಾರ್ವಜನಿಕ ಕೆಲಸ, ಒಪ್ಪಂದಗಳು ಬಹಿರಂಗವಾಗಬೇಕು
- ರಾಜ್ಯ ಚುನಾವಣಾ ಆಯೋಗಕ್ಕೆ ವಾರ್ಡ್‌ಗಳ ವಿಂಗಡಣೆ ಮತ್ತು ಮೀಸಲಾತಿ ನಿಗದಿ ಅಧಿಕಾರ
- ಪಾರದರ್ಶಕತೆ ಸುಧಾರಿಸಲು ಎಲ್ಲ ಕಾನೂನುಗಳ ಸಂಯೋಜನೆ
- ಎಲ್ಲ ಹಂತಗಳಲ್ಲೂ ಸಾರ್ವಜನಿಕರ ಭಾಗವಹಿಸುವಿಕೆ, ಡಿಜಿಟಲ್ ಆಡಳಿತ ನೀತಿ ಕಡ್ಡಾಯ
- ಸ್ವಯಂಪ್ರೇರಿತ ಭ್ರಷ್ಟಾಚಾರ ತನಿಖೆಗೆ ಮೇಲ್ವಿಚಾರಕರ ನೇಮಕ
- ಆಂತರಿಕ ನಿಯಂತ್ರಣ, ಪ್ರಕ್ರಿಯೆ ಪರಿಶೀಲನೆಗೆ ಆಂತರಿಕ ಲೆಕ್ಕ ಪರಿಶೋಧನೆಗಳು

ಸರ್ಕಾರ ಕೈಬಿಟ್ಟಿರುವ ಬ್ರ್ಯಾಂಡ್ ಬೆಂಗಳೂರು ಸಮಿತಿಯ ಸಲಹೆಗಳು

- ಬೆಂಗಳೂರು ಮಹಾನಗರ ಪ್ರದೇಶದ ಸಮಗ್ರ ಯೋಜನೆಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಹೊಣೆ
- ಮೇಯರ್–ಇನ್–ಕೌನ್ಸಿಲ್ (ಸಂಪುಟ ವ್ಯವಸ್ಥೆ)
- ದೂರು ಮತ್ತು ಭ್ರಷ್ಟಾಚಾರ ನಿಯಂತ್ರಣಕ್ಕೆ ಮೇಲ್ವಿಚಾರಣೆ
- ಮಹಾನಗರ ಪಾಲಿಕೆಗೆ ತನ್ನ ಸಿಬ್ಬಂದಿ ನೇಮಕಗಳಲ್ಲಿ ಅಧಿಕಾರ, ಪೌರಸೇವಾ ವೃಂದ ಸ್ಥಾಪನೆ
- ಕೌನ್ಸಿಲ್‌ಗೆ ಹಣಕಾಸಿನ ಮೇಲ್ವಿಚಾರಣೆ
- ಪಾಲಿಕೆ ಬಜೆಟ್‌ಗೆ ಕೌನ್ಸಿಲ್ ಅನುಮೋದನೆ
- ವಾರ್ಡ್ ಸಮಿತಿಗಳ ಮೂಲಕ ಬಜೆಟ್‌ಗೆ ನಾಗರಿಕರು ತಮ್ಮ ಸಲಹೆಗಳನ್ನು ನೀಡುವುದು

ಯಾವುದಕ್ಕೆ ಎಷ್ಟು ಅಂಕ? (10ಕ್ಕೆ)	
ಬ್ರ್ಯಾಂಡ್ ಬೆಂಗಳೂರು ಸಮಿತಿಯ ಜಿಬಿಜಿ ಮಸೂದೆ	6.5
ಮಂಡನೆಯಾಗಿರುವ ಜಿಬಿಜಿ ಮಸೂದೆ	3.35
ಬಿಬಿಎಂಪಿ ಕಾಯ್ದೆ	3.23
ಕೆಎಂಸಿ ಕಾಯ್ದೆ	2.04
ಯಾವ ವರ್ಗದಲ್ಲಿ ಎಷ್ಟು ಅಂಕ? (10ಕ್ಕೆ)	
ನಗರ ಯೋಜನೆ ಮತ್ತು ವಿನ್ಯಾಸ	
ಮಂಡನೆಯಾಗಿರುವ ಜಿಬಿಜಿ ಮಸೂದೆ	0
ಬ್ರ್ಯಾಂಡ್ ಬೆಂಗಳೂರು ಸಮಿತಿಯ ಜಿಬಿಜಿ ಮಸೂದೆ	6.33
ನಗರದ ಸಾಮರ್ಥ್ಯ ಮತ್ತು ಸಂಪನ್ಮೂಲಗಳು	
ಮಂಡನೆಯಾಗಿರುವ ಜಿಬಿಜಿ ಮಸೂದೆ	6.5
ಬ್ರ್ಯಾಂಡ್ ಬೆಂಗಳೂರು ಸಮಿತಿಯ ಜಿಬಿಜಿ ಮಸೂದೆ	9
ಅಧಿಕಾರ ಮತ್ತು ನ್ಯಾಯಸಮ್ಮತವಾದ ರಾಜಕೀಯ ಪ್ರಾತಿನಿಧ್ಯ	
ಮಂಡನೆಯಾಗಿರುವ ಜಿಬಿಜಿ ಮಸೂದೆ	4.55
ಬ್ರ್ಯಾಂಡ್ ಬೆಂಗಳೂರು ಸಮಿತಿಯ ಜಿಬಿಜಿ ಮಸೂದೆ	6.21
ಪಾರದರ್ಶಕತೆ, ಹೊಣೆಗಾರಿಕೆ ಮತ್ತು ಭಾಗವಹಿಸುವಿಕೆ	
ಮಂಡನೆಯಾಗಿರುವ ಜಿಬಿಜಿ ಮಸೂದೆ	2.36
ಬ್ರ್ಯಾಂಡ್ ಬೆಂಗಳೂರು ಸಮಿತಿಯ ಜಿಬಿಜಿ ಮಸೂದೆ	4.45

ಡಿ.ಎಸ್. ವೀರಯ್ಯ ಖರೀದಿಸಿದ್ದ ಪೀಠೋಪಕರಣ ವಾಪಸ್‌ಗೆ ದಾವೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಡಿ.ದೇವರಾಜ ಅರಸು ಟ್ರಕ್ ಟರ್ಮಿನಲ್ ನಿಯಮಿತ (ಡಿಡಿಯುಟಿಟಿಎಲ್) ಅಧ್ಯಕ್ಷರಾಗಿದ್ದ ವೇಳೆ ಬಿಜೆಪಿ ಮುಖಂಡ ಡಿ.ಎಸ್.ವೀರಯ್ಯ ಅವರು ಗೃಹ ಬಳಕೆಯ ವಸ್ತುಗಳನ್ನು ಖರೀದಿಸಲು ವೆಚ್ಚ ಮಾಡಿರುವ ₹12.09 ಲಕ್ಷವನ್ನು ಬಡ್ಡಿ ಸಮೇತ ವಸೂಲಿಗೆ ಡಿಡಿಯುಟಿಟಿಎಲ್ ಮರು ಪ್ರಾಪ್ತಿ ದಾವೆ ಹೂಡಿದೆ.

ವೀರಯ್ಯ ಅವರಿಗೆ ರಾಜ್ಯ ಸಚಿವ ಸ್ಥಾನಮಾನ ನೀಡಿ, ಸಂಪುಟ ದರ್ಜೆ ಸೌಲಭ್ಯವನ್ನು ಕಲ್ಪಿಸಲಾಗಿತ್ತು. ವಿವಿಧ ಏಜೆನ್ಸಿ ಮತ್ತು ಡೀಲರ್‌ಗಳಿಂದ ವೀರಯ್ಯ ಅವರು ತಮ್ಮ ನಿವಾಸಕ್ಕೆ ಹವಾ ನಿಯಂತ್ರಕಗಳು, ವಾಷಿಂಗ್ ಮಷಿನ್, ಟಿ.ವಿ, ಫ್ರಿಡ್ಜ್, ಫ್ಯಾನ್, ಸೋಫಾ, ಕಾರ್ಪೆಟ್, ಕುರ್ಚಿಗಳು, ಡೈನಿಂಗ್ ಟೇಬಲ್ ಸೇರಿದಂತೆ ಇತರ ಅನೇಕ ವಸ್ತುಗಳನ್ನು ಖರೀದಿಸಿದ್ದರು.

ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ ಬಳಿಕ ಆ ವಸ್ತುಗಳನ್ನು ಹಿಂತಿರುಗಿಸುವಂತೆ 8–10 ಬಾರಿ ಪತ್ರ ಬರೆದರೂ ಅವರು ಸ್ಪಂದಿಸಿಲ್ಲ. ಹಾಗಾಗಿ ಬಡ್ಡಿ ಸಮೇತ ₹12.09 ಲಕ್ಷ ಮೌಲ್ಯದ ವಸ್ತುಗಳನ್ನು ಹಿಂತಿರುಗಿಸುವಂತೆ ಸಿಟಿ ಸಿವಿಲ್ ನ್ಯಾಯಾಲಯದಲ್ಲಿ ಡಿ.ದೇವರಾಜ ಅರಸು ಟ್ರಕ್ ಟರ್ಮಿನಲ್ ನಿಯಮಿತ ದಾವೆಯನ್ನು ಹೂಡಿದೆ.

ಕಾಂಗ್ರೆಸ್ ಸರ್ಕಾರದ ಭರವಸೆ ಕುರಿತ ಸಮೀಕ್ಷಾ ವರದಿ ಬಿಡುಗಡೆ

ಶೇ 20ರಷ್ಟು ಮಾತ್ರ ಈಡೇರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುವ ಮುನ್ನ ಪ್ರಣಾಳಿಕೆಯಲ್ಲಿ ನೀಡಿದ್ದ ಭರವಸೆಗಳ ಪೈಕಿ ಶೇಕಡ 20ರಷ್ಟನ್ನು ಮಾತ್ರ ಒಂದು ವರ್ಷದ ಅವಧಿಯಲ್ಲಿ ಈಡೇರಿಸಲಾಗಿದೆ ಎಂದು ನಗರದ ಸ್ವಯಂ ಸೇವಾ ಸಂಸ್ಥೆಗಳು ನಡೆಸಿದ ಸರ್ಕಾರದ ಒಂದು ವರ್ಷದ ಸಾಧನೆ ಕುರಿತ ಸಮೀಕ್ಷಾ ವರದಿ ಹೇಳಿದೆ.

ನಗರದ ಸಿವಿಕ್ ಬೆಂಗಳೂರು, ಸಿಟಿಜನ್ಸ್ ಅಜೆಂಡಾ ಫಾರ್ ಬೆಂಗಳೂರು ಹಾಗೂ ಸ್ಮಾರ್ಟ್ ಸಿಟಿಜನ್ಸ್ ಲ್ಯಾಬ್ ಸಂಸ್ಥೆಗಳು ಸರ್ಕಾರದ ವಾರ್ಷಿಕ ಸಾಧನೆ ಕುರಿತು ಎರಡು ತಿಂಗಳು ನಡೆಸಿದ ಸಮೀಕ್ಷೆಯ ವರದಿಯನ್ನು ಗುರುವಾರ ಬಿಡುಗಡೆ ಮಾಡಿವೆ.

ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದ ಬಳಿಕ ಬಜೆಟ್‌ನಲ್ಲಿ ಆರೋಗ್ಯ, ಶಿಕ್ಷಣ, ಪರಿಸರ, ಉದ್ಯೋಗ, ಕೈಗಾರಿಕೆ ಹಾಗೂ ಬೆಂಗಳೂರು ನಗರದ ಅಭಿವೃದ್ಧಿಗೆ ಹೆಚ್ಚಿನ ಅನುದಾನ ನೀಡಿಲ್ಲ. ಜನರಿಗೆ ಆಶ್ವಾಸನೆಗಳನ್ನು ಮಾತ್ರ ನೀಡಿದೆ. ಪಂಚ ಗ್ಯಾರಂಟಿಗಳ ಪೈಕಿ ಶಕ್ತಿ, ಗೃಹ ಜ್ಯೋತಿ ಯೋಜನೆ ಯಶಸ್ವಿಯಾಗಿವೆ. ಆದರೆ, ಗೃಹಲಕ್ಷ್ಮೀ ಹಾಗೂ ಅನ್ನಭಾಗ್ಯ ಯೋಜನೆಗಳಲ್ಲಿ ಸಾಕಷ್ಟು ಸಮಸ್ಯೆ ಇದೆ ಎಂದು ವರದಿ ತಿಳಿಸಿದೆ.



ನಗರದಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ಸಿವಿಕ್ ಬೆಂಗಳೂರು, ಸಿಟಿಜನ್ಸ್ ಅಜೆಂಡಾ ಫಾರ್ ಬೆಂಗಳೂರು ಹಾಗೂ ಸ್ಮಾರ್ಟ್ ಸಿಟಿಜನ್ಸ್ ಲ್ಯಾಬ್ ಸಂಸ್ಥೆಗಳ ವತಿಯಿಂದ ರಾಜ್ಯ ಸರ್ಕಾರದ ಒಂದು ವರ್ಷದ ಸಾಧನೆ ಕುರಿತ ವರದಿಯನ್ನು ಬಿಡುಗಡೆ ಮಾಡಲಾಯಿತು. ಕೃಷ್ಣ ಪ್ರಶಾಂತ್, ಸಂದೀಪ್ ಅನಿರುಧನ್, ಕಾತ್ಯಾಯಿನಿ ಚಾಮರಾಜ್ ಹಾಗೂ ವಿದ್ಯಾರ್ಥಿಗಳು ಇದ್ದಾರೆ —ಪ್ರಜಾವಾಣಿ ಚಿತ್ರ

ಸಿವಿಕ್ ಬೆಂಗಳೂರು ಸಂಸ್ಥೆಯ ಎ.ಕೃಷ್ಣ ಪ್ರಶಾಂತ್ ಮಾತನಾಡಿ, 'ಚುನಾವಣಾ ಪ್ರಣಾಳಿಕೆಯನ್ನಾಧರಿಸಿ ಸಂಬಂಧಪಟ್ಟ ಇಲಾಖೆಗಳು, ಯೋಜನೆಯ ಫಲಾನುಭವಿಗಳು ಹಾಗೂ ನಾಗರಿಕರ ಅಭಿಪ್ರಾಯ ಪಡೆದು ಸರ್ಕಾರದ ಒಂದು ವರ್ಷದ ಸಾಧನೆಯ ವರದಿಯನ್ನು ಬಿಡುಗಡೆ ಮಾಡಲಾಗಿದೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಮೂಲಸೌಕರ್ಯ ಕೊರತೆ ಇದೆ. ಖಾಲಿ ಇರುವ ತಜ್ಞ ವೈದ್ಯರು ಹಾಗೂ ಸಿಬ್ಬಂದಿ ಹುದ್ದೆ ಭರ್ತಿಯಾಗಿಲ್ಲ. ಸರ್ಕಾರಿ ಶಾಲೆಗಳನ್ನು ಸ್ಮಾರ್ಟ್ ಶಾಲೆಗಳಾಗಿ ಮೇಲ್ದರ್ಜೆಗೇರಿಸಿಲ್ಲ. ಗೃಹಲಕ್ಷ್ಮೀ ಯೋಜನೆ ಫಲಾನುಭವಿಗಳು ತಮ್ಮ ಬ್ಯಾಂಕ್ ಖಾತೆಗೆ ಹಣ ಜಮೆಯಾಗಿದೆಯೋ ಇಲ್ಲವೋ ಎಂದು ನೋಡಿಕೊಂಡು ಬರುವಂತಾಗಿದೆ' ಎಂದು ತಿಳಿಸಿದರು.

'ಹಲವು ದೇಶಗಳಲ್ಲಿ 25 ವರ್ಷಗಳ ಅಭಿವೃದ್ಧಿಯ ಮುನ್ನೋಟವಿರುವ ಸಮಗ್ರ ಯೋಜನೆ (ಮಾಸ್ಟರ್ ಪ್ಲಾನ್) ಇರುತ್ತದೆ. ನಮ್ಮಲ್ಲಿ ಯಾವುದೇ ಯೋಜನೆ ಇಲ್ಲ. ಬೆಂಗಳೂರು ನಗರದಲ್ಲಿ ಸಂಚಾರ ದಟ್ಟಣೆ ನಿವಾರಣೆಗೆ ಕ್ರಮ ಕೈಗೊಂಡಿಲ್ಲ. ಹಲವು ಮೆಟ್ರೊ ನಿಲ್ದಾಣಗಳಲ್ಲಿ ಪಾರ್ಕಿಂಗ್ ವ್ಯವಸ್ಥೆ ಇಲ್ಲ. ಐದು ವರ್ಷಕ್ಕೊಮ್ಮೆ ಮತ ಚಲಾಯಿಸಿ ಸುಮ್ಮನೆ ಕೂರಬಾರದು. ಸಾರ್ವಜನಿಕರಿಗೂ ಮಾಹಿತಿ ಇರಬೇಕೆಂಬ ಕಾರಣಕ್ಕೆ ವರದಿ ಬಿಡುಗಡೆ ಮಾಡಲಾಗಿದೆ ' ಎಂದು ವಿವರಿಸಿದರು.

ಸಿಟಿಜನ್ ಅಜೆಂಡಾ ಫಾರ್ ಬೆಂಗಳೂರಿನ ಸಂಚಾಲಕ ಸಂದೀಪ್ ಅನಿರುಧನ್, ಕಾತ್ಯಾಯನಿ ಚಾಮರಾಜ್ ಉಪಸ್ಥಿತರಿದ್ದರು.

ಸಂಕ್ಷಿಪ್ತ ಸುದ್ದಿ

ಕೆಜಿಎಫ್ ಸುತ್ತಮುತ್ತ ಭೂಮಿ ಕಂಪಿಸಿದ ಅನುಭವ

ಕೆಜಿಎಫ್: ನಗರ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಗುರುವಾರ ಬೆಳಗ್ಗೆ 11.30ಕ್ಕೆ ಭೂಮಿ ಕಂಪಿಸಿದ ಅನುಭವವಾಗಿದೆ.

ಕೆಜಿಎಫ್, ಬಂಗಾರಪೇಟೆ ಮತ್ತು ಬೇತಮಂಗಲ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ಕಂಪನದ ಅನುಭವವಾಗಿದ್ದು, ಯಾವುದೇ ಹಾನಿಯಾಗಿಲ್ಲ.

ನಗರದಲ್ಲಿರುವ ರಾಷ್ಟ್ರೀಯ ಶಿಲಾ ತಂತ್ರಜ್ಞಾನ ಸಂಸ್ಥೆಯಲ್ಲಿ ಭೂ ಕಂಪನ ಅಳೆಯುವ ಸಿಸ್ಮೋಗ್ರಾಫ್ ಸಾಧನ ಅಳವಡಿಸಲಾಗಿತ್ತು. ಈಚೆಗೆ ಅದನ್ನು ಉಪಯೋಗಿಸದ ಕಾರಣ ಕಂಪನದ ಪ್ರಮಾಣ ತಿಳಿಯಲು ಸಾಧ್ಯವಾಗಿಲ್ಲ ಎಂದು ಸಿಬ್ಬಂದಿ ತಿಳಿಸಿದ್ದಾರೆ.

ಕೈ ಕತ್ತರಿಸಿದ್ದ 7ನೇ ಆರೋಪಿ ಬಂಧನ

ಕನಕಪುರ: ಮಳಗಾಳು ಗ್ರಾಮದಲ್ಲಿ ದಲಿತ ಯುವಕನ ಕೈ ಕತ್ತರಿಸಿದ ಪ್ರಕರಣದಲ್ಲಿ ತಲೆಮರೆಸಿಕೊಂಡಿದ್ದ ಮತ್ತೊಬ್ಬ ಆರೋಪಿಯನ್ನು ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಬಂಧಿತ ಆರೋಪಿಯನ್ನು ರಾಹುಲ್ (25) ಎಂದು ಗುರುತಿಸಲಾಗಿದೆ.

ನ್ಯಾಯಾಧೀಶರ ಮುಂದೆ ಹಾಜರುಪಡಿಸಿ ಪೊಲೀಸ್ ಕಸ್ಟಡಿಗೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ. ಘಟನೆಯ ನಂತರ ತಲೆಮರೆಸಿಕೊಂಡಿದ್ದ ಈತ ಮಂಡ್ಯದಲ್ಲಿ ಆಶ್ರಯ ಪಡೆದಿದ್ದ ಎನ್ನಲಾಗಿದೆ.

ಕಿಮ್ಸ್ ಅಧ್ಯಕ್ಷರಾಗಿ ಡಾ. ಆಂಜನಪ್ಪ ನೇಮಕ



ಡಾ.ಟಿ.ಎಚ್. ಆಂಜನಪ್ಪ

ಬೆಂಗಳೂರು: ಒಕ್ಕಲಿಗರ ಸಂಘದ ಅಧೀನದಲ್ಲಿರುವ ಕೆಂಪೇಗೌಡ ವೈದ್ಯಕೀಯ ಮಹಾವಿದ್ಯಾಲಯದ (ಕಿಮ್ಸ್) ಆಡಳಿತ ಸಮಿತಿ ಅಧ್ಯಕ್ಷರಾಗಿ ಡಾ.ಟಿ.ಎಚ್.ಆಂಜನಪ್ಪ ಅವರನ್ನು ನೇಮಿಸಲಾಗಿದೆ ಎಂದು ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷ ಸಿ.ಎನ್. ಬಾಲಕೃಷ್ಣ ತಿಳಿಸಿದ್ದಾರೆ.

ರೈಲು ಸಂಚಾರ ಪುನರಾರಂಭ

ಪ್ರಜಾವಾಣಿ ವಾರ್ತೆ

ಹಾಸನ: ಸಕಲೇಶಪುರ–ಸುಬ್ರಹ್ಮಣ್ಯ ನಿಲ್ದಾಣಗಳ ನಡುವಿನ ಭೂಕುಸಿತದ ದುರಸ್ತಿ ಕಾರ್ಯ ಮುಗಿದಿದ್ದು, ಗುರುವಾರ ಯಶವಂತಪುರ–ಮಂಗಳೂರು ಜಂಕ್ಷನ್ ಗೊಮ್ಮಟೇಶ್ವರ ಎಕ್ಸ್‌ಪ್ರೆಸ್ ರೈಲು ಈ ಮಾರ್ಗದಲ್ಲಿ ಸಂಚರಿಸಿದೆ. ಆ ಮೂಲಕ ಬೆಂಗಳೂರು–ಮಂಗಳೂರು ನಡುವಿನ ರೈಲು ಸಂಚಾರ ಪುನರಾರಂಭವಾಗಿದೆ.

ಕಡಗರವಳ್ಳಿ ಮತ್ತು ಯಡಕುಮೇರಿ ನಡುವಿನ ರೈಲು ಮಾರ್ಗದ ಕೆಳಬದಿಯಲ್ಲಿ ಭೂಕುಸಿತವಾದ ಬಳಿಕ ಸಂಚಾರ ಸ್ಥಗಿತವಾಗಿತ್ತು. ನಂತರ, ನಿರಂತರ ಮಳೆಯ ನಡುವೆಯೂ ಕ್ರಿಬ್ ಗೋಡೆ, ತಡೆಗೋಡೆಯನ್ನು ತ್ವರಿತಗತಿಯಲ್ಲಿ ನಿರ್ಮಿಸಲಾಗಿದೆ.

ಆಗಸ್ಟ್ 4 ರಂದು ಈ ಮಾರ್ಗದಲ್ಲಿ ರೈಲು ಸಂಚಾರಕ್ಕೆ ಅನುಮತಿ ನೀಡಲಾಗಿತ್ತು. ರೈಲಿನ ಎಂಜಿನ್ ಓಡಿಸುವ ಮೂಲಕ ಸುರಕ್ಷತೆ ಪರಿಶೀಲಿಸಲಾಯಿತು.

ಸ್ವಾತಂತ್ರ್ಯ ದಿನಾಚರಣೆ: ಉಗ್ರರ ಕರಿನೆರಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾತಂತ್ರ್ಯ ದಿನಾಚರಣೆ ವೇಳೆ ಉಗ್ರರು ನಗರದಲ್ಲಿ ವಿಧ್ವಂಸಕ ಕೃತ್ಯ ಎಸಗಲು ಸಂಚು ರೂಪಿಸಿರುವ ಮಾಹಿತಿ ಪೊಲೀಸರಿಗೆ ಸಿಕ್ಕಿದ್ದು, ಕಟ್ಟೆಚ್ಚರ ವಹಿಸುವಂತೆ ಎಲ್ಲ ವಿಭಾಗದ ಪೊಲೀಸರಿಗೆ ಸೂಚಿಸಲಾಗಿದೆ.

ಆಗಸ್ಟ್ 15ರಂದು ನಗರ ಮಾಣಿಕ್ ಶಾ ಮೈದಾನದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಧ್ವಜಾರೋಹಣ ನೆರವೇರಿಸಲಿದ್ದಾರೆ. ಈ ವೇಳೆ ಹೆಚ್ಚಿನ ನಿಗಾ ವಹಿಸುವಂತೆ ಸೂಚಿಸಲಾಗಿದೆ. ಉಗ್ರರು ಕವಾಯತು ಹಾಗೂ ಕಾರ್ಯಕ್ರಮಗಳನ್ನೇ ಗುರಿಯಾಗಿಸಿರುವ ಮಾಹಿತಿ ಸಿಕ್ಕಿದೆ ಎಂದು ಮೂಲಗಳು ಹೇಳಿವೆ.

ಈ ಸಂಬಂಧ ಹೋಟೆಲ್ ಮಾಲೀಕರ ಸಂಘಕ್ಕೆ ಪತ್ರ ಬರೆದಿರುವ ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಅವರು, 'ಹೋಟೆಲ್ ಮಾಲೀಕರು, ವ್ಯವಸ್ಥಾಪಕರು ಹಾಗೂ ಸಿಬ್ಬಂದಿಗಳು ಹೋಟೆಲ್‌ಗಳಲ್ಲಿ ತಂಗುವ ಸಂಶಯಾಸ್ಪದ ವ್ಯಕ್ತಿಗಳು, ವಿದೇಶಿಯರು ಹಾಗೂ ಅಪರಿಚಿತರ ಬಗ್ಗೆ ನಿಗಾ ವಹಿಸಬೇಕು. ಅಲ್ಲದೇ ವಸತಿ ಗೃಹಗಳಲ್ಲಿ ವಾಸ್ತವ್ಯ ಮಾಡುವವರ ದಾಖಲೆಗಳನ್ನು ಪಡೆದುಕೊಳ್ಳಬೇಕು. ಸಂಶಯಾಸ್ಪದ ವ್ಯಕ್ತಿಗಳು ಕಂಡುಬಂದರೆ ಪೊಲೀಸರಿಗೆ ಮಾಹಿತಿ ನೀಡಬೇಕು' ಎಂದು ಉಲ್ಲೇಖಿಸಿದ್ದಾರೆ.

ಸೂಕ್ಷ್ಮ ಪ್ರದೇಶ: ಕಟ್ಟೆಚ್ಚರ

ಸ್ವಾತಂತ್ರ್ಯ ದಿನಾಚರಣೆ ಆಸುಪಾಸಿನಲ್ಲಿ ಸೂಕ್ಷ್ಮ ಪ್ರದೇಶಗಳಲ್ಲಿ ಕಟ್ಟೆಚ್ಚರ ವಹಿಸುವಂತೆ ಆಯಾ ಡಿಸಿಪಿಗಳು ಕ್ರಮ ಕೈಗೊಳ್ಳಬೇಕು. ಪ್ರಮುಖ ಸ್ಥಳಗಳಲ್ಲಿ ಸಿಸಿ ಟಿ.ವಿ ಕ್ಯಾಮೆರಾ ಪರಿಶೀಲಿಸಬೇಕು. ಅಲ್ಲದೇ ಗಸ್ತು ಹೆಚ್ಚಿಸಬೇಕು. ಸಂಶಯಾಸ್ಪದ ವ್ಯಕ್ತಿಗಳನ್ನು ಕಂಡುಬಂದರೆ ವಶಕ್ಕೆ ಪಡೆಯುವಂತೆ ಸೂಚಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಅಪಘಾತ: ಟೆಕಿ, ಎಲೆಕ್ಟ್ರಿಷಿಯನ್ ಸಾವು

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿಗಳು

ಬೆಂಗಳೂರು: ನಗರದಲ್ಲಿ ನಡೆದ ಎರಡು ಪ್ರತ್ಯೇಕ ಅಪಘಾತ ಪ್ರಕರಣಗಳಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಹಾಗೂ ಎಲೆಕ್ಟ್ರಿಷಿಯನ್ ಮೃತಪಟ್ಟಿದ್ದಾರೆ.

ಮಡಿವಾಳ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬೈಕ್ ನಿಯಂತ್ರಣ ತಪ್ಪಿ ರಸ್ತೆ ವಿಭಜಕಕ್ಕೆ ಡಿಕ್ಕಿಯಾದ ಪರಿಣಾಮ ಬಿಟಿಎಂ ಎರಡನೇ ಹಂತದ ನಿವಾಸಿ, ಟೆಕಿ ಮನೀಶ್ ಕುಮಾರ್(25) ಮೃತಪಟ್ಟಿದ್ದಾರೆ.

ಬುಧವಾರ ಬೆಳಿಗ್ಗೆ 11.45ಕ್ಕೆ ಮಡಿವಾಳದ 21ನೇ ಮುಖ್ಯರಸ್ತೆ ಕಡೆಯಿಂದ ಸಿಲ್ಕ್ ಬೋರ್ಡ್ ಕಡೆಗೆ ತೆರಳುವಾಗ ಮಾರ್ಗಮಧ್ಯೆ ಅಪಘಾತ ಸಂಭವಿಸಿದೆ. ಮಡಿವಾಳ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಉತ್ತರಪ್ರದೇಶದ ಮನೀಶ್ ಕುಮಾರ್ ಅವರು ಕೆಲವು ವರ್ಷಗಳಿಂದ ನಗರದಲ್ಲಿ ವಾಸವಾಗಿದ್ದರು. ಮಹದೇವಪುರದ ಐಟಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು.

ಎಲೆಕ್ಟ್ರಿಷಿಯನ್ ಸಾವು: ಚಿಕ್ಕಜಾಲ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ನಡೆದ ಮತ್ತೊಂದು ಅಪಘಾತ ಪ್ರಕರಣದಲ್ಲಿ ಎರಡು ದ್ವಿಚಕ್ರ ವಾಹನಗಳು ಮುಖಾಮುಖಿ ಡಿಕ್ಕಿಯಾಗಿ ಒಬ್ಬ ಸವಾರ ಮೃತಪಟ್ಟಿದ್ದಾರೆ.

ಬೆಟ್ಟ ಹಲಸೂರು ನಿವಾಸಿ ಹರೀಶ್ (36) ಮೃತ ಸವಾರ. ಅಪಘಾತದಲ್ಲಿ ಇಬ್ಬರು ಸವಾರರು ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

'ವಿಮಾನ ನಿಲ್ದಾಣ ಸಮೀಪದ ಟೋಲ್‌ಗೇಟ್‌ನಲ್ಲಿ ಕೆಲಸ ಮಾಡುತ್ತಿದ್ದ ಹರೀಶ್, ಬುಧವಾರ ರಾತ್ರಿ 10.30ರ ಸುಮಾರಿಗೆ ಕೆಲಸ ಮುಗಿಸಿಕೊಂಡು ಬೆಟ್ಟಹಲಸೂರು ಕಡೆ ಹೋಗುತ್ತಿದ್ದರು. ಅದೇ ವೇಳೆ ಎದುರಿಗೆ ಅತಿವೇಗವಾಗಿ ಬಂದ ಕೆಟಿಎಂ ಬೈಕ್, ಹರೀಶ್ ಅವರ ವಾಹನಕ್ಕೆ ಡಿಕ್ಕಿಯಾಗಿದೆ. ಗಂಭೀರವಾಗಿ ಗಾಯಗೊಂಡಿದ್ದ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ' ಎಂದು ಪೊಲೀಸರು ಹೇಳಿದರು.

18 ಗ್ರಾ.ಪಂಗಳ ಮೇಲೆ 'ಲೋಕಾ' ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆ ವ್ಯಾಪ್ತಿಯ 18 ಗ್ರಾಮ ಪಂಚಾಯತಿಗಳ ಮೇಲೆ ಲೋಕಾಯುಕ್ತ ನ್ಯಾಯಾಂಗ ವಿಭಾಗದ ಅಧಿಕಾರಿಗಳು ಮತ್ತು ಲೋಕಾಯುಕ್ತ ಪೊಲೀಸರು ಗುರುವಾರ ದಾಳಿ ನಡೆಸಿ, ಶೋಧ ಕಾರ್ಯ ನಡೆಸಿದ್ದಾರೆ. ಈ ಶೋಧ ಕಾರ್ಯಗಳು ನಡೆಯುತ್ತಿರುವ ಸಂದರ್ಭದಲ್ಲೇ 12 ಗ್ರಾಮ ಪಂಚಾಯತಿಗಳಿಗೆ ಲೋಕಾಯುಕ್ತ ಮತ್ತು ಉಪಲೋಕಾಯುಕ್ತರು ಭೇಟಿ ನೀಡಿ, ಶೋಧಕಾರ್ಯ ಪರಿಶೀಲಿಸಿದ್ದಾರೆ.

ಬೆಂಗಳೂರು ನಗರ ಜಿಲ್ಲೆಯ ಕಸಘಟ್ಟಪುರ, ರಾಜಾನುಕುಂಟೆ, ಬನ್ನೇರುಘಟ್ಟ, ಕಲ್ಲುಬಾಳು, ಕಣ್ಣೂರು, ಮಂಡೂರು, ಕುಂಬಳಗೋಡು, ಆಗರ, ದಾಸನಪುರ, ಅಡಕಮಾರನಹಳ್ಳಿ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಅಣ್ಣೇಶ್ವರ, ಜಾಲಿಗೆ, ದೊಡ್ಡತುಮಕೂರು, ಮಜಿರೆ ಹೊಸಹಳ್ಳಿ, ಬೂದಿಹಾಳ್, ಸೋಂಪುರ, ನಂದಗುಡಿ, ಸೂಲಿಬೆಲೆ ಗ್ರಾಮ ಪಂಚಾಯತಿಗಳ ಮೇಲೆ ದಾಳಿ ನಡೆಸಲಾಗಿದೆ ಎಂದು ಲೋಕಾಯುಕ್ತ ಕಚೇರಿ ಮಾಹಿತಿ ನೀಡಿದೆ.

ಈ ಗ್ರಾಮ ಪಂಚಾಯತಿಗಳಲ್ಲಿ ಕರ್ತವ್ಯ ನಿರ್ವಹಣೆಯಲ್ಲಿ ಅನಗತ್ಯ ವಿಳಂಬ, ಅನರ್ಹ ಫಲಾನುಭವಿಗಳಿಗೆ ಮನೆ-ಶೌಚಾಲಯ ಅನುದಾನ ಮಂಜೂರಿಗೆ ಶಿಫಾರಸು, ಸಾರ್ವಜನಿಕರ ಅರ್ಜಿಗಳ ವಿಲೇವಾರಿಯಲ್ಲಿ ವಿಳಂಬ, ನರೇಗಾ ಕೂಲಿ ಹಣ ದುರುಪಯೋಗ, ತೆರಿಗೆ ಸಂಗ್ರಹದಲ್ಲಿ ನಿರ್ಲಕ್ಷ್ಯ ವಹಿಸುತ್ತಿರುವ ಸಂಬಂಧ ಹಲವು ದೂರುಗಳು ಬಂದಿದ್ದವು. ಕರ್ತವ್ಯ ಲೋಪ ಮತ್ತು ಅಕ್ರಮ ಪರಿಶೀಲನೆಗೆ ಪೊಲೀಸರ ಮತ್ತು ನ್ಯಾಯಾಂಗ ಅಧಿಕಾರಿಗಳ ತಂಡವನ್ನು ರಚಿಸಲಾಗಿತ್ತು ಎಂದು ಲೋಕಾಯುಕ್ತ ಪ್ರಕಟಣೆ ತಿಳಿಸಿದೆ.

ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ಕೋಲಾರ ಲೋಕಾಯುಕ್ತ ಪೊಲೀಸ್ ಸಿಬ್ಬಂದಿ ಇದ್ದ ತಂಡವು ಗುರುವಾರ ಮಧ್ಯಾಹ್ನ ದಾಳಿ ನಡೆಸಿ ಶೋಧ ಕಾರ್ಯ ನಡೆಸಿದೆ. ಗ್ರಾಮ ಪಂಚಾಯತಿಗಳ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಜತೆಗೆ ಎಲ್ಲ ಸಿಬ್ಬಂದಿಯನ್ನು ವಿಚಾರಣೆಗೆ ಒಳಪಡಿಸಲಾಗಿದೆ. ಶೋಧಕಾರ್ಯ ಮುಂದುವರೆದಿದೆ ಎಂದು ಪ್ರಕಟಣೆ ಹೇಳಿದೆ.

ಈ ಶೋಧ ಕಾರ್ಯ ನಡೆಯುತ್ತಿರುವ ವೇಳೆಯಲ್ಲೇ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ಅವರು ದಾಸನಪುರ ಮತ್ತು ಅಡಕಮಾರನಹಳ್ಳಿ ಗ್ರಾಮ ಪಂಚಾಯತಿಗಳಿಗೆ ದಿಢೀರ್ ಭೇಟಿ ನೀಡಿ, ಶೋಧ ಕಾರ್ಯವನ್ನು ಪರಿಶೀಲಿಸಿದರು. ಉಪ ಲೋಕಾಯುಕ್ತ ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ ಅವರು ಮಂಡೂರು, ಕಣ್ಣೂರು, ರಾಜಾನುಕುಂಟೆ ಮತ್ತು ಕಸಘಟ್ಟಪುರ ಗ್ರಾಮ ಪಂಚಾಯತಿಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಉಪ ಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ ಅವರು ಅಣ್ಣೇಶ್ವರ, ಜಾಲಿಗೆ, ದೊಡ್ಡತುಮಕೂರು, ಮಜಿರೆ ಹೊಸಹಳ್ಳಿ, ಬೂದಿಹಾಳ್ ಮತ್ತು ಸೋಂಪುರ ಗ್ರಾಮ ಪಂಚಾಯತಿಗಳಿಗೆ ಭೇಟಿ ನೀಡಿದರು. ದೊಡ್ಡಬಳ್ಳಾಪುರ ವ್ಯಾಪ್ತಿಯಲ್ಲಿ ಸಂಚರಿಸುವಾಗ ಶಾಲಾಬಸ್ ಕಂಡ ಉಪಲೋಕಾಯುಕ್ತರು, ಬಸ್ ನಿಲ್ಲಿಸಿ ವಿದ್ಯಾರ್ಥಿಗಳೊಂದಿಗೆ ಮಾತನಾಡಿದರು. ಚೆನ್ನಾಗಿ ಓದಬೇಕು ಮತ್ತು ಅನ್ಯಾಯ ಮತ್ತು ಭ್ರಷ್ಟಾಚಾರ ಕಂಡರೆ ದೂರು ನೀಡಿ ಎಂದು ಉಪಲೋಕಾಯುಕ್ತ ಕಚೇರಿಯ ಮೊಬೈಲ್ ಸಂಖ್ಯೆ ನೀಡಿದರು.



ದಾಸನಪುರ ಗ್ರಾಮ ಪಂಚಾಯತಿಯಲ್ಲಿ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ಅವರು ಕಡತಗಳನ್ನು ಪರಿಶೀಲಿಸಿದರು

ಮುಖ್ಯಾಂಶಗಳು

- ತೆರಿಗೆ ಸಂಗ್ರಹದಲ್ಲಿ ನಿರ್ಲಕ್ಷ್ಯ: ದೂರು
- ಸಾರ್ವಜನಿಕರ ಅರ್ಜಿಗಳ ವಿಲೇವಾರಿಯಲ್ಲಿ ವಿಳಂಬ

ಪಿಡಿಒ ಕಾರಿನಲ್ಲಿ ₹42,000



ದಾಸನಪುರ ಗ್ರಾಮ ಪಂಚಾಯತಿ ಮಹಿಳಾ ಪಿಡಿಒ ಕಾರಿನಲ್ಲಿ ₹42,000 ಪತ್ತೆಯಾಗಿದೆ ಎಂದು ಲೋಕಾಯುಕ್ತ ಪೊಲೀಸರು ಮಾಹಿತಿ ನೀಡಿದ್ದಾರೆ.

'ಕಚೇರಿ ಆವರಣದಲ್ಲಿ ಇದ್ದ ಕಾರನ್ನು ಪರಿಶೀಲಿಸುವ ಸಲುವಾಗಿ ಕೀ ನೀಡುವಂತೆ ಕೇಳಿದಾಗ, ಪಿಡಿಒ ನಿರಾಕರಿಸಿದರು. ಕಾರನ್ನು ವಶಕ್ಕೆ ಪಡೆದು ಎಳೆದೊಯ್ಯುತ್ತೇವೆ. ನಂತರ ಪರಿಶೀಲನೆ ನಡೆಸುತ್ತೇವೆ ಎಂದು ಎಚ್ಚರಿಕೆ ನೀಡಿದೆವು. ಆಗ ಕಾರಿನ ಕೀ ನೀಡಿದರು. ಕಾರಿನ ಬಾಗಿಲು ತೆರೆದು ಪರಿಶೀಲಿಸಿದಾಗ ಹಣ ಪತ್ತೆಯಾಯಿತು' ಎಂದು ಪೊಲೀಸರು ತಿಳಿಸಿದ್ದಾರೆ.

- ಗ್ರಾಮ ಪಂಚಾಯತಿಗಳ ಮೇಲಿನ ದಾಳಿ ವೇಳೆ ಬಹುತೇಕ ಕಡೆ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು (ಪಿಡಿಒ) ಕಚೇರಿಯಲ್ಲಿ ಇರಲಿಲ್ಲ
- ಪಿಡಿಒಗಳು ಕಚೇರಿಯಲ್ಲಿ ಇಲ್ಲದೇ ಇರುವ ಬಗ್ಗೆ ಕಚೇರಿ ಸಿಬ್ಬಂದಿಗೆ ಮಾಹಿತಿ ನೀಡಿರಲಿಲ್ಲ, ಹಾಜರಾತಿ ಪುಸ್ತಕದಲ್ಲೂ ನಮೂದಿಸಿರಲಿಲ್ಲ
- ಗ್ರಾಮ ಪಂಚಾಯತಿಗಳಲ್ಲಿ ನಗದು ವಹಿಯನ್ನು ನಿರ್ವಹಣೆ ಮಾಡಿಲ್ಲ. ಕಚೇರಿಗೆ ಸೇರಿದ ನಗದು ಎಷ್ಟು ಮತ್ತು ಸಿಬ್ಬಂದಿ ಬಳಿ ಇರುವ ನಗದಿಗೆ ಸಂಬಂಧಿಸಿದ ಮಾಹಿತಿ ನಮೂದಿಸಿಲ್ಲ



ನೇಮಕಾತಿಗಾಗಿ ಪ್ರತಿಭಟನೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಎಂಟು ವರ್ಷಗಳಿಂದ ಖಾಲಿ ಇರುವ 2,692 ಆರೋಗ್ಯ ನಿರೀಕ್ಷಣಾಧಿಕಾರಿಗಳ ಹುದ್ದೆಗಳಿಗೆ ನೇಮಕಾತಿ ಆದೇಶ ನಡೆಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ಆರೋಗ್ಯ ನಿರೀಕ್ಷಣಾಧಿಕಾರಿ ಉದ್ಯೋಗಾಕಾಂಕ್ಷಿಗಳ ಸಂಘದ ಸದಸ್ಯರು ಸ್ವಾತಂತ್ರ್ಯ ಉದ್ಯಾನದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ಮಹಿಳೆಗೆ ಕಲ್ಲಿನಿಂದ ಜಜ್ಜಿದ ವ್ಯಕ್ತಿ ವಶ

ಬೆಂಗಳೂರು: ಕೊಡಿಗೆಹಳ್ಳಿಯ ಕರ್ನಾಟಕ ಬ್ಯಾಂಕ್ ಎದುರು ಮಹಿಳೆಯೊಬ್ಬರಿಗೆ ಕಲ್ಲಿನಿಂದ ಜಜ್ಜಿ ಹಲ್ಲೆಗೆ ಯತ್ನಿಸಿದ ವ್ಯಕ್ತಿಯನ್ನು ಸಾರ್ವಜನಿಕರೇ ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ.

ಗುರುವಾರ ರಾತ್ರಿ 9 ಗಂಟೆ ಸುಮಾರಿಗೆ ಮಹಿಳೆಯೊಬ್ಬರು ನಡೆದು ತೆರಳುತ್ತಿದ್ದರು. ಬಿಹಾರದ ವ್ಯಕ್ತಿಯೊಬ್ಬ ಏಕಾಏಕಿ ಅವರ ಮೇಲೆ ಹಲ್ಲೆ ನಡೆಸಲು ಮುಂದಾದ. ಆಗ, ಸ್ಥಳದಲ್ಲಿದ್ದವರು ಆತನನ್ನು ಹಿಡಿದು ಪೊಲೀಸರಿಗೆ ಒಪ್ಪಿಸಿದರು.

'ಹಲ್ಲೆ ನಡೆಸಿದ ವ್ಯಕ್ತಿ ಮಾನಸಿಕ ಅಸ್ವಸ್ಥನಂತೆ ವರ್ತಿಸುತ್ತಿದ್ದು ವಿಚಾರಣೆ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

ಸಿಡಿಆರ್ ಅಕ್ರಮ ಸಂಗ್ರಹ ಜಾಲ: ಪೊಲೀಸ್ ಕಾನ್‌ಸ್ಟೆಬಲ್, ಮಧ್ಯವರ್ತಿ ಬಂಧನ

ತನಿಖೆ ಚುರುಕುಗೊಳಿಸಿದ ಸಿಸಿಬಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರ್ವಜನಿಕರ ಮೊಬೈಲ್ ಕರೆ ವಿವರಗಳನ್ನು (ಸಿಡಿಆರ್) ಅಕ್ರಮವಾಗಿ ಸಂಗ್ರಹಿಸಿ, ಕಾನೂನು ಬಾಹಿರ ಚಟುವಟಿಕೆ ನಡೆಸುವವರಿಗೆ ಹಾಗೂ ಪ್ರೇಮಿಗಳಿಗೆ ನೀಡುತ್ತಿದ್ದ ಜಾಲದಲ್ಲಿ ಮತ್ತಿಬ್ಬರು ಆರೋಪಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಕಳೆದ ಮೇನಲ್ಲಿ ಮೂರು ಪತ್ತೆದಾರಿ ಏಜೆನ್ಸಿಗಳ ಕಚೇರಿಗಳ ಮೇಲೆ ದಾಳಿ ನಡೆಸಿದ್ದ ಸಿಸಿಬಿ ಪೊಲೀಸರು, 10 ಮಂದಿಯನ್ನು ಬಂಧಿಸಿದ್ದರು. ಗುರುವಾರ ನಡೆದ ಕಾರ್ಯಾಚರಣೆಯಲ್ಲಿ ಪೊಲೀಸ್ ಸಿಬ್ಬಂದಿ ಮುನಿರತ್ನ ಹಾಗೂ ಪ್ರಕರಣದ ಸೂತ್ರಧಾರ ನಾಗೇಶ್ವರ ರೆಡ್ಡಿ ಅವರನ್ನು ಬಂಧಿಸಿದ್ದಾರೆ.

ಸಿಐಡಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಮುನಿರತ್ನ, ಇತ್ತೀಚೆಗೆ ಕೋಲಾರಕ್ಕೆ ವರ್ಗಾವಣೆಗೊಂಡಿದ್ದರು. ಸಿಐಡಿ ಕಚೇರಿಯಿಂದ ಸಿಡಿಆರ್‌ಗಳನ್ನು ಸಂಗ್ರಹಿಸಿ ಆರೋಪಿಗಳಿಗೆ ನೀಡುತ್ತಿದ್ದರು ಎಂದು ಪೊಲೀಸರು ಹೇಳಿದರು.

'ಮೇನಲ್ಲಿ ಗೋವಿಂದರಾಜನಗರ ಬಳಿಯ ಪ್ರಶಾಂತನಗರದ 'ಮಹಾನಗರಿ ಡಿಟೆಕ್ಟಿವ್', 'ರಾಜಧಾನಿ ಕಾರ್ಪೊರೇಟ್ ಸರ್ವೀಸ್' ಹಾಗೂ ಬಸವೇಶ್ವರನಗರದ 'ಎಲಿಗೆಂಟ್ ಡಿಟೆಕ್ಟಿವ್' ಏಜೆನ್ಸಿಗಳ ಮೇಲೆ ದಾಳಿ ನಡೆಸಲಾಗಿತ್ತು. ಆಗ ಹಲವರನ್ನು ಬಂಧಿಸಲಾಗಿತ್ತು. ಇನ್ನೂ ಹಲವರು ಭಾಗಿ ಆಗಿರುವ ಮಾಹಿತಿ ಸಿಸಿಬಿಗೆ ಸಿಕ್ಕಿತ್ತು. ಅದನ್ನು ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಮೂಲಗಳು ಹೇಳಿವೆ.

'ಮುನಿರತ್ನ ಅವರು ಸಿಐಡಿ ತಾಂತ್ರಿಕ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದರು. ಆಗ ಇಲಾಖೆಯ ಹಿರಿಯ ಅಧಿಕಾರಿಗಳು ಕೆಲವು ಪ್ರಕರಣಗಳ ಸಂಬಂಧ ಅಧಿಕೃತವಾಗಿ ಸಿಡಿಆರ್ ಪಡೆಯಲು ಸರ್ವಿಸ್ ಪ್ರೊವೈಡರ್‌ಗಳಿಗೆ ನೀಡುವ ಪತ್ರದಲ್ಲಿ ತನಗೆ ಬೇಕಾದ ಕೆಲವು ಮೊಬೈಲ್ ಸಂಖ್ಯೆ ಸೇರಿಸಿ ಸಿಡಿಆರ್ ಪಡೆಯುತ್ತಿದ್ದರು. ಸಿಡಿಆರ್ ಬಂದ ನಂತರ ಅಧಿಕೃತವಾದ ಸಿಡಿಆರ್‌ಗಳನ್ನು ಅಧಿಕಾರಿಗಳಿಗೆ ನೀಡಿ ಅನಧಿಕೃತ ಸಿಡಿಆರ್‌ಗಳನ್ನು ಮಧ್ಯವರ್ತಿ ನಾಗೇಶ್ವರ ರೆಡ್ಡಿಗೆ ₹15ರಿಂದ ₹20 ಸಾವಿರಕ್ಕೆ ಮಾರಾಟ ಮಾಡುತ್ತಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ' ಎಂದು ಸಿಸಿಬಿ ಮೂಲಗಳು ತಿಳಿಸಿವೆ.

ಅನುಮಾನ ಬಂದು ಪರಿಶೀಲನೆ: ಅನುಮಾನ ಬಂದು ಪರಿಶೀಲಿಸಿದಾಗ ಈ ವ್ಯವಸ್ಥಿತ ಜಾಲ ಪತ್ತೆಯಾಗಿದೆ. ಸಿಡಿಆರ್ ಪಡೆಯುತ್ತಿದ್ದವರ ಪೈಕಿ ಪತಿ-ಪತ್ನಿ ಮತ್ತು ಪ್ರೇಮಿಗಳೇ ಹೆಚ್ಚಾಗಿದ್ದರು. ತಮ್ಮ ಪ್ರೀತಿಪಾತ್ರರಾದವರು ಯಾರ ಸಂಪರ್ಕದಲ್ಲಿ ಇದ್ದಾರೆ ಎಂಬುದನ್ನು ಪತ್ತೆಹಚ್ಚಲು ಈ ಪತ್ತೇದಾರಿ ಏಜೆನ್ಸಿಗಳ ಮೂಲಕ ಸಿಡಿಆರ್ ಪಡೆದುಕೊಳ್ಳುತ್ತಿದ್ದರು ಎಂದು ಗೊತ್ತಾಗಿದೆ.

ರಾಜಕಾರಣಿಗಳೂ ಸಿಡಿಆರ್ ಪಡೆದಿರುವ ಶಂಕೆ?: ತಮ್ಮ ವಿರೋಧಿಗಳ ಕಾರ್ಯತಂತ್ರವನ್ನು ಪತ್ತೆಹಚ್ಚಲು ಕೆಲವು ರಾಜಕಾರಣಿಗಳೂ ಇದೇ ಪತ್ತೇದಾರಿ ಏಜೆನ್ಸಿಗಳ ಮೊರೆಹೋಗಿರುವ ಅನುಮಾನ ತನಿಖಾ ತಂಡಕ್ಕೆ ಸಿಕ್ಕಿದೆ. ಆ ನಿಟ್ಟಿನಲ್ಲೂ ತನಿಖೆ ಸಾಗುತ್ತಿದೆ ಎಂದು ಸಿಸಿಬಿ ಮೂಲಗಳು ತಿಳಿಸಿವೆ.

'ಅಪರಾಧ, ಕೌಟುಂಬಿಕ ಕಲಹ, ವೈಷಮ್ಯ, ಹಣಕಾಸು ವ್ಯವಹಾರ ಸೇರಿದಂತೆ ಹಲವು ಬಗೆಯ ಪ್ರಕರಣಗಳ ದೂರುದಾರರು ಹಾಗೂ ಸಂತ್ರಸ್ತರನ್ನು ಆರೋಪಿಗಳು ಸಂಪರ್ಕಿಸುತ್ತಿದ್ದರು. ಪೊಲೀಸರು ಮಾಡುವ ಕೆಲಸವನ್ನು ತಾವೇ ಮಾಡಿಕೊಡುವುದಾಗಿ ಹೇಳಿ ನಂಬಿಸುತ್ತಿದ್ದರು. ಆಂತರಿಕ ತನಿಖೆ ನಡೆಸಿ ಪುರಾವೆ ಸಮೇತ ವರದಿ ನೀಡುವುದಾಗಿ ಹೇಳುತ್ತಿದ್ದರು. ಇದಕ್ಕಾಗಿ ಶುಲ್ಕ ಸಹ ನಿಗದಿ ಪಡಿಸಿದ್ದರು' ಎಂದು ಮೂಲಗಳು ಹೇಳಿವೆ.



ನಾಗೇಶ್ವರ ರೆಡ್ಡಿ ಹಾಗೂ ಮುನಿರತ್ನ

ಎಲ್ಲಿಗೆ ಮಾರಾಟ?

'ಸಿಐಡಿ ಸಿಬ್ಬಂದಿಯಿಂದ ಪಡೆದ ಸಿಡಿಆರ್‌ಗಳನ್ನು ಮಧ್ಯವರ್ತಿ ನಾಗೇಶ್ವರ ರಾವ್, 'ಮಹಾನಗರಿ ಡಿಟೆಕ್ಟಿವ್', 'ರಾಜಧಾನಿ ಕಾರ್ಪೊರೇಟ್ ಸರ್ವೀಸ್' ಹಾಗೂ ಬಸವೇಶ್ವರನಗರದ 'ಎಲಿಗೆಂಟ್ ಡಿಟೆಕ್ಟಿವ್'ಗೆ ಕೊಟ್ಟು ಹಣ ಪಡೆಯುತ್ತಿದ್ದರು. ಪ್ರತಿ ಬಾರಿ ಸಿಡಿಆರ್ ಕೊಡುವಾಗ ನಾಗೇಶ್ವರ ರಾವ್ ಮತ್ತಷ್ಟು ನಂಬರ್ ಪಡೆದು ಮುನಿರತ್ನ ಅವರಿಗೆ ನೀಡುತ್ತಿದ್ದರು' ಎಂದು ಮೂಲಗಳು ತಿಳಿಸಿವೆ.

ಅನುಮತಿ ಇಲ್ಲದೇ ಪರಿಶೀಲನೆ ಅಪರಾಧ



'ಅಪರಾಧ ಪ್ರಕರಣಗಳಲ್ಲಿ ಭಾಗಿಯಾದವರ ಸಿಡಿಆರ್ ಪಡೆಯಲು ಕಾನೂನಿನ್ವಯ ತನಿಖಾಧಿಕಾರಿಗಳಿಗೆ ಮಾತ್ರ ಅಧಿಕಾರ ಇದೆ. ಈ ಸಿಡಿಆರ್ ಅನ್ನು ಪಡೆಯಲು ಕಮಿಷನರೇಟ್‌ನಲ್ಲಿ ಡಿಸಿಪಿ ಮತ್ತು ಜಿಲ್ಲಾ ವ್ಯಾಪ್ತಿಯಲ್ಲಿ ಎಸ್‌ಪಿಗಳ ಅನುಮತಿ ಬೇಕು. ಸಿಡಿಆರ್ ಪಡೆಯುವ ಮುನ್ನ ಅಪರಾಧ ಪ್ರಕರಣದ ಆರೋಪಿ ಪಾತ್ರದ ಕುರಿತು ಮಾಹಿತಿ ಸಂಗ್ರಹಿಸಬೇಕು. ಈ ಕಾನೂನು ಪ್ರಕ್ರಿಯೆ ಬಳಿಕ ಸಿಡಿಆರ್ ತನಿಖಾಧಿಕಾರಿಗೆ ಸಿಗುತ್ತದೆ. ಅನುಮತಿಯಿಲ್ಲದೇ ಪರಿಶೀಲನೆ ಅಪರಾಧ ಆಗುತ್ತದೆ' ಎಂದು ಅಧಿಕಾರಿಯೊಬ್ಬರು ಹೇಳಿದರು.

ಸರ್ಕಾರಿ ಸೌಲಭ್ಯ ಕೊಡಿಸುವ ನೆಪದಲ್ಲಿ ಚಿನ್ನಾಭರಣ ಕಸಿದು ಪರಾರಿ

ಸಿನಿಮೀಯ ರೀತಿಯಲ್ಲಿ ಆರೋಪಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತುಮಕೂರು ಜಿಲ್ಲೆಯ ಕೊರಟಗೆರೆಯಲ್ಲಿ ಕಳ್ಳತನ ಹಾಗೂ ಫಲಾನುಭವಿಗಳಿಗೆ ಸರ್ಕಾರಿ ಸೌಲಭ್ಯ ಕೊಡಿಸುವುದಾಗಿ ನಂಬಿಸಿ ವಂಚಿಸುತ್ತಿದ್ದ ಮಂಜೇಶ್ ಎಂಬಾತನನ್ನು ನಗರದಲ್ಲಿ ಸಿನಿಮೀಯ ಶೈಲಿಯಲ್ಲಿ ಕಾರ್ಯಾಚರಣೆ ನಡೆಸಿ, ಪೊಲೀಸರು ಬಂಧಿಸಿದ್ದಾರೆ.

'ಆರೋಪಿ, 32 ಪ್ರಕರಣಗಳಲ್ಲಿ ಭಾಗಿಯಾಗಿ ತಲೆಮರೆಸಿಕೊಂಡು ಓಡಾಡುತ್ತಿದ್ದ. ಬೆಂಗಳೂರಿನಲ್ಲಿ ಇರುವ ಮಾಹಿತಿ ಮೇರೆಗೆ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಗಿದೆ. ಆರೋಪಿಯಿಂದ ₹10 ಸಾವಿರ ನಗದು ಹಾಗೂ ₹6.75 ಲಕ್ಷ ಮೌಲ್ಯದ 135 ಗ್ರಾಂ. ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಸದಾಶಿವನಗರದ ಟ್ರಾಫಿಕ್ ಜಂಕ್ಷನ್ ಬಳಿ ಆರೋಪಿ ಮಂಜೇಶ್ ದ್ವಿಚಕ್ರ ವಾಹನದಲ್ಲಿ ಬರುತ್ತಿರುವ ಮಾಹಿತಿ ಪೊಲೀಸರಿಗೆ ಸಿಕ್ಕಿತ್ತು. ಆಗ ಕೊರಟಗೆರೆ ಪೊಲೀಸ್ ಠಾಣೆಯ ಕಾನ್‌ಸ್ಟೆಬಲ್ ದೊಡ್ಡಲಿಂಗಯ್ಯ ಅವರು ಧೈರ್ಯ ತೋರಿ ಆರೋಪಿಯನ್ನು ಸೆರೆ ಹಿಡಿದಿದ್ದಾರೆ. ಅವರ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತವಾಗಿದೆ. ಆರೋಪಿಯನ್ನು ಕಾನ್‌ಸ್ಟೆಬಲ್ ಸೆರೆ ಹಿಡಿಯುತ್ತಿರುವ ದೃಶ್ಯವುಳ್ಳ ವಿಡಿಯೊ ತುಣುಕು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಕೊರಟಗೆರೆ ಮನೆಯೊಂದರಲ್ಲಿ ಆರೋಪಿ ಕಳ್ಳತನ ಮಾಡಿದ್ದ. ಆರೋಪಿ ಪತ್ತೆಗೆ ಸಿಸಿ ಟಿ.ವಿ ಕ್ಯಾಮೆರಾ ಪರಿಶೀಲನೆ ನಡೆಸಲಾಗಿತ್ತು. ಆರೋಪಿ ಕಳ್ಳತನ ಮಾಡಿ, ನೆಲಮಂಗಲ ಮಾರ್ಗವಾಗಿ ಬೆಂಗಳೂರಿಗೆ ಬಂದಿರುವುದು ಪೊಲೀಸರಿಗೆ ಗೊತ್ತಾಗಿತ್ತು. ಬೆಂಗಳೂರಿನ ಹಲವು ಕಡೆ ಪರಿಶೀಲನೆ ನಡೆಸಿದ್ದರು.

ಸದಾಶಿವನಗರದ ಸಿಗ್ನಲ್ ಬಳಿ ಮಂಗಳವಾರ ಆರೋಪಿಯನ್ನು ಬೈಕ್ ಸಮೇತ ಕಾನ್‌ಸ್ಟೆಬಲ್ ಅಡ್ಡಗಟ್ಟಿದ್ದರು. ಆದರೆ, ಆತ ಬೈಕ್ ನಿಲ್ಲಿಸದೆ ಪರಾರಿ ಆಗಲು ಯತ್ನಿಸಿದ್ದ. ಕಾನ್‌ಸ್ಟೆಬಲ್ ಅನ್ನು ಎಳೆದೊಯ್ದರೂ ಬಿಡದೆ ಸೆರೆ ಹಿಡಿದರು. ಸ್ಥಳದಲ್ಲಿ ಕರ್ತವ್ಯದಲ್ಲಿದ್ದ ಸದಾಶಿವನಗರ ಸಂಚಾರ ಠಾಣಾ ಸಹಾಯಕ ಸಬ್ ಇನ್‌ಸ್ಪೆಕ್ಟರ್ ನಾಗಮ್ಮ ಮತ್ತು ಗೃಹರಕ್ಷಕ ದಳದ ಸಿಬ್ಬಂದಿ ಶ್ರೀಧರ್ ಹಾಗೂ ಸಾರ್ವಜನಿಕರು ನೆರವು ನೀಡಿದರು. ಆದರೂ, ತಪ್ಪಿಸಿಕೊಳ್ಳಲು ಮುಂದಾದ ವೇಳೆ ಸಾರ್ವಜನಿಕರು ಆರೋಪಿಗೆ ಥಳಿಸಿ ಪೊಲೀಸರಿಗೆ ಒಪ್ಪಿಸಿದರು ಎಂದು ಮೂಲಗಳು ಹೇಳಿವೆ.

ಆರೋಪಿ ಕಳ್ಳತನದ ಜತೆಗೆ ವೃದ್ಧಾಪ್ಯ ವೇತನ ಕೊಡಿಸುವುದಾಗಿ ಹೇಳಿ ಜನರಿಂದ ಆಧಾರ್ ಕಾರ್ಡ್, ಪಡಿತರ ಚೀಟಿ ಪಡೆದುಕೊಳ್ಳುತ್ತಿದ್ದ. ಅಲ್ಲದೇ ತನ್ನದೇ ಬೈಕ್‌ನಲ್ಲಿ ಫಲಾನುಭವಿಗಳನ್ನು ಕರೆದೊಯ್ಯುತ್ತಿದ್ದ. ಬ್ಯಾಂಕ್ ಅಥವಾ ಸರ್ಕಾರಿ ಕಚೇರಿಯ ಬಳಿ ಫಲಾನುಭವಿಗಳನ್ನು ಇಳಿಸಿ ಮೈಮೇಲೆ ಚಿನ್ನಾಭರಣ ನೋಡಿದರೆ ಅಧಿಕಾರಿಗಳು ಸೌಲಭ್ಯ ಮಂಜೂರು ಮಾಡುವುದಿಲ್ಲ ಎಂದು ಹೇಳಿ ನಂಬಿಸುತ್ತಿದ್ದ. ಅವರಿಂದ ಚಿನ್ನಾಭರಣ ಪಡೆದು ಪರಾರಿಯಾಗುತ್ತಿದ್ದ. ಚಿನ್ನಾಭರಣ ಮಾರಾಟ ಮಾಡಿ ಅದರಿಂದ ಬಂದ ಹಣದಲ್ಲಿ ಗೋವಾಕ್ಕೆ ತೆರಳಿ ಮೋಜು-ಮಸ್ತಿ ಮಾಡುತ್ತಿದ್ದ ಎಂದು ಮೂಲಗಳು ತಿಳಿಸಿವೆ.



ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ ವಿಡಿಯೊದ ದೃಶ್ಯ



❦ ಸುಭಾಷಿತ ❦
ಮನಸ್ಸು ಬಂಡೆಯಂತೆ ಇರಬೇಕು. ಅಲೆಗಳು ಎಷ್ಟು ಜೋರಾಗಿ ಬಂದು ಬಡಿದರೂ ಬಂಡೆ ಪುಡಿಯಾಗುವುದಿಲ್ಲ.
—ತ್ರಿವೇಣಿ

ಒಲಿಂಪಿಕ್ಸ್: ಪದಕ ಇಲ್ಲವಾದರೂ ವಿನೇಶ್ ಸಾಧನೆ ಚಿರಸ್ಥಾಯಿ

ಯಾವುದೇ ಪದಕದ ಹೊಳಪು ಕಾಲಾನಂತರ ಮಸುಕಾಗಬಹುದು. ಆದರೆ ಭಾರತದ ಕುಸ್ತಿಪಟು ವಿನೇಶ್ ರಾಜಪಾಲ್ ಫೋಗಟ್ ಅವರ ಸಾಧನೆ ಅಚ್ಚಳಿಯದೇ ಉಳಿಯುವಂಥದ್ದು. ಎರಡು ಮಾತಿಲ್ಲ. ಹರಿಯಾಣದ ವಿನೇಶ್ ಅವರು ಒಲಿಂಪಿಕ್ ಫೈನಲ್‌ನಲ್ಲಿ ದೇಹತೂಕ ನಿಯಮದ ವಿವಾದದಲ್ಲಿ ವಿಫಲರಾಗಿ ಅನರ್ಹಗೊಂಡಿರುವುದು. ಆದರೆ ಅದೊಂದರಿಂದಲೇ ಅವರ ದಿಟ್ಟ ವ್ಯಕ್ತಿತ್ವ ಮತ್ತು ಸಾಧನೆಗಳನ್ನು ಅಳೆಯಲಾಗದು. ಅವರ ಹೋರಾಟವು ಮುಂದಿನ ಹಲವಾರು ಪೀಳಿಗೆಗಳಿಗೆ ಪ್ರೇರಣೆಯ ಕಥೆಯಾಗಿದೆ. 29 ವರ್ಷ ವಯಸ್ಸಿನ ವಿನೇಶ್ ಅವರು ಈಗ ಕುಸ್ತಿ ಕ್ರೀಡೆಗೆ ವಿದಾಯ ಹೇಳಿದ್ದಾರೆ. ಅವರು ಈ ಕ್ರೀಡೆಯಲ್ಲಿ ಮಾಡಿರುವ ಸಾಧನೆಗಳು ಹಲವಾರು. ಕಳೆದೊಂದು ದಶಕದಲ್ಲಿ ಅವರು ವಿಶ್ವ ಚಾಂಪಿಯನ್‌ಷಿಪ್, ಏಷ್ಯಾ ಚಾಂಪಿಯನ್‌ಷಿಪ್, ಕಾಮನ್‌ವೆಲ್ತ್ ಗೇಮ್ಸ್ ಮತ್ತು ಏಷ್ಯನ್ ಗೇಮ್ಸ್ ಸೇರಿದಂತೆ ಹಲವು ಅಂತರರಾಷ್ಟ್ರೀಯ ಸ್ಪರ್ಧೆಗಳಲ್ಲಿ ಪದಕ ಜಯಿಸಿದ್ದಾರೆ. ಆದರೆ ಪ್ರತಿಷ್ಠಿತ ತುಂಬಿರುವ ಅವರ ಕಪಾಟಿನಲ್ಲಿ ಒಲಿಂಪಿಕ್ ಪದಕದ ಜಾಗ ಮಾತ್ರ ಖಾಲಿಯಾಗಿದೆ. ಮೂರು ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಿದರೂ ಅವರಿಗೆ ಅದು ಕೈಗೆಟುಕದಿರುವುದು ದುರದೃಷ್ಟಕರ. 2016ರ ರಿಯೊ ಒಲಿಂಪಿಕ್ಸ್‌ನಲ್ಲಿ ಕಾಲಿನ ಗಾಯದಿಂದಾಗಿ ಹೊರಬಿದ್ದರು. 2020ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಮೊದಲ ಸುತ್ತಿನಲ್ಲಿಯೇ ಸೋತರು. ಆದರೆ ಪ್ಯಾರಿಸ್ ಒಲಿಂಪಿಕ್ಸ್‌ನ ಮಹಿಳೆಯರ ಫ್ರೀಸ್ಟೈಲ್ ಕುಸ್ತಿಯ 50 ಕೆ.ಜಿ. ವಿಭಾಗದಲ್ಲಿ ಫೈನಲ್ ತಲುಪಿ ಇತಿಹಾಸ ನಿರ್ಮಿಸಿದರು. ಒಲಿಂಪಿಕ್ ಚಿನ್ನದ ಪದಕ ಸುತ್ತಿಗೆ ಲಗ್ಗೆ ಇಟ್ಟ ಭಾರತದ ಮೊದಲ ಮಹಿಳೆಯೆಂಬ ಹೆಗ್ಗಳಿಕೆ ಅವರದ್ದು. ಆದರೆ ಫೈನಲ್‌ಗೂ ಮೊದಲು ನಡೆಸುವ ತೂಕ ಪರೀಕ್ಷೆಯಲ್ಲಿ ಮತ್ತೊಮ್ಮೆ ಅವರಿಗೆ ದುರದೃಷ್ಟ ಕಾಡಿತು. 100 ಗ್ರಾಂ ಹೆಚ್ಚುವರಿ ತೂಕಕ್ಕೆ ಅವರ ಜೀವಮಾನದ ಪರಿಶ್ರಮ, ತ್ಯಾಗ ಮತ್ತು ಭಾರತೀಯರ ಚಿನ್ನದ ಕನಸು ಅಪ್ಪಚ್ಚಿಯಾಗಿದ್ದು ವಿಪರ್ಯಾಸ. ಈ ನಿಯಮವು ಮೇಲ್ನೋಟಕ್ಕೆ ವಿಚಿತ್ರವೆನಿಸಬಹುದು. ಆದರೆ ನಿಯಮದ ಚೌಕಟ್ಟಿನ ಕುರಿತು ಕ್ರೀಡೆಗೆ ಸಂಬಂಧಿಸಿದವರೆಲ್ಲರಿಗೂ ಅರಿವು ಇದ್ದೇ ಇರುತ್ತದೆ. ಅದಕ್ಕೆ ಬದ್ಧವಾಗಿರುವುದು ಕರ್ತವ್ಯ. 2019ರ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಫೈನಲ್‌ನಲ್ಲಿ ಬೌಂಡರಿ ಕೌಂಟ್ ನಿಯಮವು ನ್ಯೂಜಿಲೆಂಡ್ ಗೆಲುವನ್ನು ತಪ್ಪಿಸಿತ್ತು. ಬಹುತೇಕ ಎಲ್ಲ ಕ್ರೀಡೆಗಳಲ್ಲಿಯೂ ಇಂತಹ ನಿಯಮಗಳಿರುತ್ತವೆ. ಆದರೆ ಅಪರೂಪಕ್ಕೊಮ್ಮೆ ಮುನ್ನೆಲೆಗೆ ಬರುತ್ತವೆ.



ವಿನೇಶ್ ಚಿನ್ನದ ಪದಕದ ಹೊಸ್ತಿಲಲ್ಲಿ ಬಂದು ನಿಂತಿದ್ದು ಸಣ್ಣ ಸಾಧನೆಯೇನಲ್ಲ

ಇವೆಲ್ಲದರಾಚೆ, ವಿನೇಶ್ ಅವರು ತಮ್ಮ ಕ್ರೀಡಾಸಾಧನೆಗಳ ಜೊತೆಜೊತೆಗೆ ಧೈರ್ಯಶಾಲಿ ವ್ಯಕ್ತಿತ್ವದ ಕಾರಣದಿಂದಲೂ ಹೆಗ್ಗುರುತಾಗಿ ಉಳಿಯಲಿದ್ದಾರೆ. ಮಹಿಳಾ ಕುಸ್ತಿಪಟುಗಳ ಮೇಲಿನ ಲೈಂಗಿಕ ದೌರ್ಜನ್ಯಗಳ ವಿರುದ್ಧ ಬೀದಿಗಿಳಿದು ಹೋರಾಟ ಮಾಡಿದ ಛಲಗಾತಿ. ಅದೂ ಭಾರತ ಕುಸ್ತಿ ಫೆಡರೇಷನ್‌ನ ಆಗಿನ ಅಧ್ಯಕ್ಷ ಮತ್ತು ಆಡಳಿತಾರೂಢ ಬಿಜೆಪಿಯ ಸಂಸದರಾಗಿದ್ದ ಬ್ರಿಜ್ ಭೂಷಣ್ ಸಿಂಗ್ ವಿರುದ್ಧ ಅವರು ಬೀದಿಗಿಳಿದಿದ್ದು ಇತಿಹಾಸ. 40 ದಿನಗಳಿಗೂ ಹೆಚ್ಚು ಕಾಲ ತಮ್ಮ ಸಂಗಡಿಗರೊಂದಿಗೆ ನವದೆಹಲಿಯ ಜಂತರ್‌ಮಂತರ್‌ನಲ್ಲಿ ಧರಣಿ ನಡೆಸಿದ್ದರು. ಈ ಹೋರಾಟವನ್ನು ದಮನಿಸಲು ವಿರೋಧಿಗಳು ನಡೆಸಿದ ಹುನ್ನಾರಗಳು ಗುಟ್ಟಾಗಿಯೇನೂ ಉಳಿದಿಲ್ಲ. ಆದರೆ ಯಾರಿಗೂ ಜಗ್ಗದ ವಿನೇಶ್ ತಮ್ಮ ಕ್ರೀಡಾ ಭವಿಷ್ಯವನ್ನೇ ಪಣಕ್ಕೊಡ್ಡಿದ್ದರು. ಈ ಹೋರಾಟವನ್ನು ಬಳಸಿಕೊಂಡು ರಾಜಕೀಯ ಲಾಭ ಪಡೆಯಲು ಅವರು ಎಂದೂ ಯತ್ನಿಸಲಿಲ್ಲ. ಕುಸ್ತಿ ಕಣದಲ್ಲಿ ಕಠಿಣ ತಾಲೀಮು ನಡೆಸಿ ಒಲಿಂಪಿಕ್ ಅರ್ಹತೆಯನ್ನು ಗಿಟ್ಟಿಸಿದರು. ಅಷ್ಟೇ ಅಲ್ಲ, ಚಿನ್ನದ ಪದಕದ ಹೊಸ್ತಿಲಲ್ಲಿ ಬಂದು ನಿಂತಿದ್ದು ಅವರ ಸಣ್ಣ ಸಾಧನೆಯೇನಲ್ಲ. ಈ ಎಲ್ಲ ಕಾರಣಗಳಿಂದಾಗಿಯೇ ಅವರು ಈಗ ಪದಕ ಗೆಲ್ಲಲು ಸಾಧ್ಯವಾಗದಿದ್ದರೂ ದೇಶದ ಕೋಟ್ಯಂತರ ಅಭಿಮಾನಿಗಳ ಕಣ್ಮಣಿಯಾಗಿದ್ದಾರೆ. ತಮ್ಮ ದೊಡ್ಡಪ್ಪ, ಕೋಚ್ ಮಹಾವೀರ್ ಸಿಂಗ್ ಫೋಗಟ್, ಅಕ್ಕಂದಿರಾದ ಗೀತಾ ಫೋಗಟ್, ಬಬಿತಾ ಫೋಗಟ್ ಅವರ ಕುಸ್ತಿಯಾಟವನ್ನು ನೋಡಿ ಪ್ರೇರಣೆ ಪಡೆದವರು ವಿನೇಶ್. ಕುಸ್ತಿ ಕ್ರೀಡೆಯಿಂದ ಮಹಿಳೆಯರನ್ನು ದೂರವಿರಿಸುತ್ತಿದ್ದ ಕಾಲಘಟ್ಟದಲ್ಲಿ ಫೋಗಟ್ ಸಹೋದರಿಯರು ಮಾಡಿದ ಸಾಧನೆಯಲ್ಲಿ ವಿನೇಶ್ ಪಾಲು ಕೂಡ ಇದೆ. ಇದೀಗ ತನ್ನ ಅಕ್ಕಂದಿರಿಗಿಂತ ಮತ್ತಷ್ಟು ಎತ್ತರಕ್ಕೆ ವಿನೇಶ್ ಏರಿದ್ದಾರೆ. ತಮ್ಮ ಅನರ್ಹತೆಯನ್ನು ಪ್ರಶ್ನಿಸಿ ಕ್ರೀಡಾ ನ್ಯಾಯಮಂಡಳಿಯಲ್ಲಿ ವಿನೇಶ್ ಮೇಲ್ಮನವಿ ಸಲ್ಲಿಸಿದ್ದಾರೆ. ಬೆಳ್ಳಿಪದಕವನ್ನು ನೀಡುವಂತೆ ಕೋರಿದ್ದಾರೆ. ಅವರಿಗೆ ಹಲವು ಅಂತರರಾಷ್ಟ್ರೀಯ ಕ್ರೀಡಾಪಟುಗಳೂ ಬೆಂಬಲ ಸೂಚಿಸಿದ್ದಾರೆ. ಅವರ ಈ ಬೇಡಿಕೆ ಈಡೇರುವುದೋ ಇಲ್ಲವೋ ಗೊತ್ತಿಲ್ಲ. ಆದರೆ ವಿನೇಶ್ ಕೋಟಿ ಕೋಟಿ ಹೃದಯಗಳಲ್ಲಿ ತಮ್ಮ ಹೆಸರನ್ನು ಸುವರ್ಣಾಕ್ಷರಗಳಲ್ಲಿ ಬರೆದಿರುವುದಂತೂ ದಿಟ.

ದಿನದ ಟ್ವೀಟ್

ಶ್ಲಾಘನೀಯ ಕಾರ್ಯ




ದೊಡ್ಡಲಿಂಗಯ್ಯ ಅವರದು ಅತ್ಯಂತ ಸಾಹಸಮಯ ಪ್ರಯತ್ನ... ನಿಮಗೆ ನಮ್ಮ ಸೆಲ್ಯೂಟ್. ಪೊಲೀಸರಿಗೆ ಅಗತ್ಯ ಸಲಕರಣೆಗಳನ್ನು ಒದಗಿಸಬೇಕು.

(ವಿವಿಧ ಅಪರಾಧ ಕೃತ್ಯಗಳ ಆರೋಪಿ ಹೊಟ್ಟೆ ಮಂಜನನ್ನು ಬೆಂಗಳೂರಿನ ಸದಾಶಿವನಗರದ ಸಿಗ್ನಲ್‌ನಲ್ಲಿ ಪ್ರಾಣದ ಹಂಗು ತೊರೆದು ಬೆನ್ನಟ್ಟಿ ಹಿಡಿಯಲು ಯಶಸ್ವಿಯಾದ ತುಮಕೂರು ಜಿಲ್ಲೆ ಕೊರಟಗೆರೆ ಪೊಲೀಸ್ ಠಾಣೆಯ ಹೆಡ್‌ಕಾನ್‌ಸ್ಟೆಬಲ್ ದೊಡ್ಡಲಿಂಗಯ್ಯ ಅವರ ಕಾರ್ಯಕ್ಕೆ ಶ್ಲಾಘನೆ)

ವಿನಾಯಕ ಮಗಜಿ, ಸಾಫ್ಟ್‌ವೇರ್ ಡೆವಲಪರ್

ಕಿಡಿನುಡಿ



ಪ್ರಿಯ ವಿನೇಶ್ ಫೋಗಟ್, ಕ್ರೀಡಾ ಫೆಡರೇಷನ್‌ಗಳು ಮತ್ತು ಅವುಗಳ ಮುಖ್ಯಸ್ಥರ ವಿರುದ್ಧ 25 ವರ್ಷಗಳಿಂದಲೂ ನಾನು ಕೋರ್ಟ್‌ಗಳಲ್ಲಿ ಹೋರಾಡುತ್ತಲೇ ಬಂದಿದ್ದೇನೆ. ಆದರೆ, ಹೊಣೆಗಾರಿಕೆ ಇಲ್ಲದ ಮತ್ತು ಅಪಾರದರ್ಶಕವಾಗಿರುವ ಕ್ರೀಡಾ ವ್ಯವಸ್ಥೆಯ ಭ್ರಷ್ಟ, ತುಕ್ಕು ಹಿಡಿದ ಹಾಗೂ ಸಂಘರ್ಷಮಯ ಸ್ಥಿತಿಯ ವಿರುದ್ಧ ಬಹಿರಂಗವಾಗಿ ಹೋರಾಡಿದ ನಿಮ್ಮಂತಹ ಒಬ್ಬರೇ ಒಬ್ಬ ಕ್ರೀಡಾ ದಿಗ್ಗಜರನ್ನೂ ನಾನು ಕಂಡಿಲ್ಲ...

ರಾಹುಲ್ ಮೆಹ್ರಾ, ಕ್ರೀಡಾ ಕಾರ್ಯಕರ್ತ, ವಕೀಲ

25 ವರ್ಷಗಳ ಹಿಂದೆ

ಸೋಮವಾರ, 9-8-1999

• **ಯಾದವ್ ಗುಂಪಿಗೆ 'ಬಾಣ', ಗೌಡರ ಬಣಕ್ಕೆ 'ಟ್ರ್ಯಾಕ್ಟರ್ ಓಡಿಸುವ ರೈತ'**

ನವದೆಹಲಿ, ಆ. 8 (ಪಿಟಿಐ)– ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಮತ್ತು ಶರದ್ ಯಾದವ್ ನೇತೃತ್ವದ ಜನತಾದಳದ ಬಣಗಳಿಗೆ ಚುನಾವಣಾ ಆಯೋಗ ಇಂದು ಪ್ರತ್ಯೇಕ ಹೆಸರು ಮತ್ತು ಚಿಹ್ನೆಗಳನ್ನು ನೀಡಿತು.

ಶರದ್ ಯಾದವ್ ಬಣಕ್ಕೆ ಜನತಾದಳ (ಯು) ಎಂದು ಹೆಸರು ನೀಡಲಾಗಿದ್ದು, ಅದಕ್ಕೆ 'ಬಾಣ'ವನ್ನು ಚಿಹ್ನೆಯಾಗಿ ಕೊಡಲಾಗಿದೆ. ದೇವೇಗೌಡರ ಬಣಕ್ಕೆ ಜನತಾದಳ (ಎಸ್) ಎಂಬ ಹೆಸರು ಮತ್ತು 'ಟ್ರ್ಯಾಕ್ಟರ್ ಓಡಿಸುತ್ತಿರುವ ರೈತ'ನ ಚಿಹ್ನೆ ನೀಡಲಾಗಿದೆ.

• **ಪಟೇಲ್ ಬಣದ ಜತೆ ಮೈತ್ರಿ ಇಲ್ಲ: ಬಿಜೆಪಿ**

ಬೆಂಗಳೂರು, ಆ. 8– ಚುನಾವಣಾ ಆಯೋಗವು ಜನತಾದಳದ 'ಚಕ್ರ' ಚಿಹ್ನೆಯನ್ನು ಮುಟ್ಟುಗೋಲು ಹಾಕಿಕೊಂಡಿರುವ ಹಿನ್ನೆಲೆಯಲ್ಲಿ, ಮುಖ್ಯಮಂತ್ರಿ ಜೆ.ಎಚ್. ಪಟೇಲ್ ನೇತೃತ್ವದ ಬಣ ಹೊಸ ಹೆಸರು– ಚಿಹ್ನೆಯೊಂದಿಗೆ ಬಂದರೂ ಆ ಬಣದೊಂದಿಗೆ ಚುನಾವಣಾ ಹೊಂದಾಣಿಕೆ ಮಾಡಿಕೊಳ್ಳುವ ಸಾಧ್ಯತೆಯನ್ನು ಬಿಜೆಪಿ ತಳ್ಳಿಹಾಕಿದೆ.

'ನಮ್ಮ ಪಕ್ಷ ಬೇರೆ ರಾಜಕೀಯ ಪಕ್ಷಗಳೊಂದಿಗೆ ವ್ಯವಹರಿಸುತ್ತದೆಯೇ ಹೊರತು ಯಾವುದೇ ಒಂದು ಗುಂಪನ್ನು ಮಾನ್ಯ ಮಾಡುವುದಿಲ್ಲ; ಅಲ್ಲದೆ ಒಂದು ಗುಂಪಿನ ಜತೆ ವ್ಯವಹರಿಸುವುದೂ ಇಲ್ಲ' ಎಂದು ಬಿಜೆಪಿ ಪ್ರಧಾನ ಕಾರ್ಯದರ್ಶಿ ಎನ್. ವೆಂಕಯ್ಯ ನಾಯ್ಡು ಪತ್ರಿಕಾಗೋಷ್ಠಿಯಲ್ಲಿ ಸ್ಪಷ್ಟಪಡಿಸಿದರು.

50 ವರ್ಷಗಳ ಹಿಂದೆ

ಶುಕ್ರವಾರ, 9-8-1974

• **ಸೆ.1ರಿಂದ ಹುಬ್ಬಳ್ಳಿ- ಧಾರವಾಡ ಗದಗ, ಬೆಳಗಾವಿ ನಗರಗಳಲ್ಲಿ ಅನೌಪಚಾರಿಕ ಪಡಿತರ ಜಾರಿಗೆ**

ಬೆಂಗಳೂರು, ಆ. 8– ಸೆಪ್ಟೆಂಬರ್ ಒಂದರಿಂದ, ಮೈಸೂರು, ಹುಬ್ಬಳ್ಳಿ- ಧಾರವಾಡ, ಗದಗ ಮತ್ತು ಬೆಳಗಾವಿ ನಗರಗಳಲ್ಲಿ ಅನೌಪಚಾರಿಕ ಪಡಿತರ ಜಾರಿಗೆ ತರಲು ಸರ್ಕಾರ ತೀರ್ಮಾನಿಸಿದೆ.

ಇದಕ್ಕೆ ಸಂಬಂಧಿಸಿದ ಸಿದ್ಧತೆಗಳೆಲ್ಲ ಮುಗಿದಿವೆ ಎಂದು ಆಹಾರ ಮಂತ್ರಿ ಶ್ರೀ ಕೆ.ಎಚ್. ಪಟೇಲ್ ಅವರು ಇಂದು ಇಲ್ಲಿ ವರದಿಗಾರರಿಗೆ ತಿಳಿಸಿದರು.

50,000ಕ್ಕಿಂತ ಹೆಚ್ಚು ಜನಸಂಖ್ಯೆಯಿರುವ ಪಟ್ಟಣಗಳಿಗೆ ಅವಕಾಶವಾದಂತೆಲ್ಲ ಪಡಿತರ ವಿಸ್ತರಿಸುತ್ತಾ ಹೋಗಬೇಕೆನ್ನುವುದು ಸರ್ಕಾರದ ನೀತಿಯಾಗಿದೆ. ಈಗಾಗಲೇ ಬೆಂಗಳೂರು, ಕೆ.ಜಿ.ಎಫ್., ಮಂಗಳೂರಿನಲ್ಲಿ ಅನೌಪಚಾರಿಕ ಪಡಿತರ ಜಾರಿಯಲ್ಲಿದೆ.

• **ಪ್ರವಾಹಪೀಡಿತರಿಗೆ ತುರ್ತು ನೆರವು: ರಾಜ್ಯ ರೆಡ್‌ಕ್ರಾಸ್ ಪ್ರಯತ್ನ**

ಬೆಂಗಳೂರು, ಆ. 8– ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೆರೆಹಾವಳಿಯಿಂದ ನೊಂದವರಿಗೆ ನೀಡುವ ಸಲುವಾಗಿ ತುರ್ತಾಗಿ ಐದು ಸಾವಿರ ಕಂಬಳಿಗಳು, ಐದು ಟನ್ ಹಾಲಿನ ಪುಡಿ ಮತ್ತು ಒಂದು ಲಕ್ಷ ಅನ್ನಾಂಗ ಮಾತ್ರೆಗಳನ್ನು ಒದಗಿಸುವಂತೆ, ದೆಹಲಿಯಲ್ಲಿರುವ ತನ್ನ ಕೇಂದ್ರ ಕಚೇರಿಯನ್ನು ರೆಡ್‌ಕ್ರಾಸ್ ಸೊಸೈಟಿಯ ಕರ್ನಾಟಕ ಶಾಖೆಯು ಆಗ್ರಹಪಡಿಸಿದೆ.

ಬಾಹ್ಯಾಕಾಶ ನಿಲ್ದಾಣದಲ್ಲಿ ಗಗನಯಾತ್ರಿಗಳು ಕ್ಷೇಮವಾಗಿರಲಿ, ಇನ್ನಷ್ಟು, ಮತ್ತಷ್ಟು ಪ್ರಯೋಗ ಕೈಗೊಳ್ಳಲಿ

ಡೋಲಾಯಮಾನ ಬಾಹ್ಯಾಕಾಶಯಾನ



ವಿಶ್ಲೇಷಣೆ

ಗುರುರಾಜ್ ಎಸ್. ದಾವಣಗೆರೆ

'ಗಗನಯಾತ್ರಿ ಸುನಿತಾ ವಿಲಿಯಮ್ಸ್ ಮತ್ತು ಬುಚ್ ವಿಲ್ಮೋರ್ ಅವರನ್ನು ಭೂಮಿಗೆ ವಾಪಸ್ ಕರೆತರಲು ನಾವು ಅವಸರ ಮಾಡುವುದಿಲ್ಲ' ಎಂದು ಪ್ರಾರಂಭದಲ್ಲಿ ಹೇಳಿದ್ದ ನಾಸಾ, ಈಗ ಹಲವು ಪರ್ಯಾಯ ಯೋಜನೆಗಳ ಬಗ್ಗೆ ಗಂಭೀರವಾಗಿ ಚಿಂತನೆ ನಡೆಸಿದೆ. ಅತ್ತ ವಿವಿಧ ಪ್ರಯೋಗಗಳಲ್ಲಿ ಮುಳುಗಿಹೋಗಿರುವ ಸುನಿತಾ, ಸಸ್ಯಗಳ ಬೆಳವಣಿಗೆಯ ಮೇಲೆ ಅಲ್ಲಿನ ಮೈಕ್ರೊಗ್ರ್ಯಾವಿಟಿ ಹೇಗೆ ಕೆಲಸ ಮಾಡುತ್ತದೆ ಎಂಬುದನ್ನು ಪರೀಕ್ಷಿಸುತ್ತಿದ್ದಾರೆ. ನಾಸಾದ ವಾಣಿಜ್ಯ ಹಾರಾಟಗಳ ವಿಭಾಗದ ಮುಖ್ಯಸ್ಥರಾಗಿರುವ ಸ್ಟೀವ್ ಸ್ಟಿಚ್, 'ನಮ್ಮ ಪ್ರಥಮ ಆದ್ಯತೆ ಏನಿದ್ದರೂ ಸ್ಟಾರ್‌ಲೈನರ್ ನೌಕೆಯನ್ನು ಸರಿಪಡಿಸಿ ಅದರಲ್ಲಿಯೇ ಗಗನಯಾತ್ರಿಗಳನ್ನು ವಾಪಸ್ ಕರೆತರುವುದು. ಅದು ಶೀಘ್ರವಾಗಿ ರಿಪೇರಿಯಾಗದಿದ್ದರೆ, 2025ರ ಫೆಬ್ರುವರಿ ತಿಂಗಳಿನಲ್ಲಿ ಭೂಮಿಗೆ ಮರಳಲಿರುವ ಸ್ಪೇಸ್ ಎಕ್ಸ್‌ನ ಕ್ರೂ ಡ್ರ್ಯಾಗನ್ ಫ್ರೀಡಂ ನೌಕೆಯ ಮೂಲಕ ಸುನಿತಾ ಮತ್ತು ಬುಚ್ ಹಿಂತಿರುಗಿ ಬರಬಹುದು' ಎಂದು ಹೇಳಿಕೆ ನೀಡಿದ್ದಾರೆ. ಇದು, ಗಗನಯಾತ್ರಿಗಳ ಮರುಪಯಣ ಇನ್ನಷ್ಟು ತಡವಾಗಬಹುದು ಎಂಬ ಸೂಚನೆ ನೀಡಿದೆ. ಹತ್ತು ದಿನಗಳ ವಾಸ್ತವ್ಯವು 60 ದಿನಗಳವರೆಗೂ ವಿಸ್ತರಿಸಿದ್ದು ಮತ್ತು ಮರುಪಯಣದ ದಿನಾಂಕ ಇನ್ನೂ ನಿಗದಿಯಾಗದಿರುವುದು ಹಲವು ಆತಂಕಗಳಿಗೆ ಕಾರಣವಾಗಿದೆ.

ಈ ನಡುವೆ ನಾಸಾ ಆಡಳಿತ ಮಂಡಳಿಯು ಸ್ಪೇಸ್ ಎಕ್ಸ್‌ನವರು ಈ ತಿಂಗಳ 18ರ ನಂತರ ಭೂಮಿಯಿಂದ ಉಡಾಯಿಸಲಿರುವ ಕ್ರೂ ಡ್ರ್ಯಾಗನ್ ಫ್ರೀಡಂ ನೌಕೆಯ ಮೂಲಕ ಗಗನಯಾತ್ರಿಗಳನ್ನು ವಾಪಸ್ ಕರೆತರುವುದು ಮತ್ತು ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ (ಅಂ.ಬಾ.ನಿ) ಇರುವ ಸ್ಟಾರ್‌ಲೈನರ್ ನೌಕೆಯನ್ನು ಖಾಲಿಯಾಗಿಯೇ ಮರಳಿ ಭೂಮಿಗೆ ತರುವುದರ ಕುರಿತು ಯೋಚಿಸುತ್ತಿದೆ. ಬೋಯಿಂಗ್ ಕಂಪನಿಯ ಬಾಹ್ಯಾಕಾಶ ತಂತ್ರಜ್ಞಾನ ಸರಿಯಾಗಿಲ್ಲ ಎನ್ನುವವರ ಟೀಕೆಗೆ ಉತ್ತರಿಸಿರುವ ಬೋಯಿಂಗ್‌ನ ಅಧಿಕಾರಿ ಮಾರ್ಕ್ ನಪ್ಪಿ, 'ತುರ್ತು ಸಂದರ್ಭ ಎದುರಾದರೆ ನಮ್ಮ ಗಗನಯಾತ್ರಿಗಳು ನಮ್ಮ ನೌಕೆಯನ್ನೇ ಬಳಸಿ ಭೂಮಿಗೆ ಯಾವುದೇ ಕ್ಷಣದಲ್ಲೂ ಹಿಂತಿರುಗಬಹುದು' ಎಂದಿದ್ದಾರೆ.

ಸುನಿತಾ ಅವರಿಗೆ ಬಾಹ್ಯಾಕಾಶ ಯಾನ ಹೊಸದೇನೂ ಅಲ್ಲ. ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಸಹಗಗನಯಾತ್ರಿಗಳೊಂದಿಗೆ ಎರಡು ಸಲ ಯಶಸ್ವಿಯಾಗಿ ಹೋಗಿ ಬಂದಿದ್ದಾರೆ. ಬಾಹ್ಯಾಕಾಶದಲ್ಲಿ ನಾಲ್ಕು ಬಾರಿ ನಡೆದು, ಒಟ್ಟು 29 ಗಂಟೆ ಮತ್ತು 17 ನಿಮಿಷಗಳ ನಡಿಗೆಯ ದಾಖಲೆ ಬರೆದಿದ್ದಾರೆ. ಅಲ್ಲಿ 322 ದಿನ ವಾಸ್ತವ್ಯ ಮಾಡಿರುವ ಸುನಿತಾ ವಿಲಿಯಮ್ಸ್ ಈಗ ದುರದೃಷ್ಟವೆಂಬಂತೆ ತಮ್ಮ ಮೂರನೆಯ ಬಾಹ್ಯಾಕಾಶ ಯಾತ್ರೆಯ ಪ್ರಯತ್ನದಲ್ಲಿ ತುಸು ಆತಂಕದ ಕ್ಷಣಗಳನ್ನು ಎದುರಿಸುತ್ತಿದ್ದಾರೆ.

ಬೋಯಿಂಗ್ ಮತ್ತು ಲಾಕ್ ಹೀಡ್ ಮಾರ್ಟಿನ್ ಕಂಪನಿಗಳು ಜೂನ್ 5ರಂದು ಜಂಟಿಯಾಗಿ ಕೈಗೊಂಡ ಮೊದಲ ಬಾಹ್ಯಾಕಾಶ ಯಾನದ ಪ್ರಯತ್ನದಲ್ಲಿ ಸ್ಟಾರ್‌ಲೈನರ್‌ನ ಅಟ್ಲಾಸ್ V ರಾಕೆಟ್‌ನಲ್ಲಿ ಕುಳಿತು ಫ್ಲಾರಿಡಾದ ಕೇಪ್ ಕೆನವರಲ್ ಉಡ್ಡಯನ ತಾಣದಿಂದ ಹಾರಿದ ಬುಟ್ಟಿ ಆಕಾರದ 'ಕೆಲಿಪ್ಸೋ', ನಾಲ್ಕುನೂರು ಕಿಲೊಮೀಟರ್ ಎತ್ತರದಲ್ಲಿ ಭೂಮಿಯನ್ನು ನಿಮಿಷಕ್ಕೆ 470 ಕಿಲೊಮೀಟರ್ ವೇಗದಲ್ಲಿ ಸುತ್ತುತ್ತಿರುವ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣವನ್ನು 7 ತಾಸುಗಳ ನಂತರ ಸೇರಿಕೊಂಡಿತ್ತು. ತಾವು ನಿರ್ಮಿಸಿದ ನೌಕೆಯ ಹಾರಾಟದ ಕ್ಷಮತೆಯನ್ನು ಪರೀಕ್ಷಿಸಲು ಬೋಯಿಂಗ್ ಮಾಡಿದ ಪ್ರಥಮ ಪ್ರಯತ್ನ ಇದಾಗಿತ್ತು.

ಹತ್ತು ದಿನಗಳ ವಾಸ್ತವ್ಯದ ನಂತರ ಹಿಂತಿರುಗಿ ಪಯಣಿಸಿ ಭೂಮಿಯ ವಾತಾವರಣವನ್ನು ಪ್ರವೇಶಿಸಿ ಪ್ಯಾರಾಚೂಟ್ ಮತ್ತು ಏರ್‌ಬ್ಯಾಗ್‌ಗಳ ಸಹಾಯದಿಂದ ಅಮೆರಿಕದ ನೈರುತ್ಯ ಭಾಗದ ಮರಳುಗಾಡಿನಲ್ಲಿ ನೌಕೆಯನ್ನು ಇಳಿಸುವುದೆಂದು ಯೋಜಿಸಲಾಗಿತ್ತು. ನೌಕೆಯ ಪ್ರೊಪಲ್ಶನ್ ರಾಕೆಟ್‌ಗಳಲ್ಲಿ ಸಂಭವಿಸಿದ ಹೀಲಿಯಂ ಸೋರಿಕೆ ಮತ್ತು ರಿಯಾಕ್ಷನ್ ಕಂಟ್ರೋಲ್ ಸಿಸ್ಟಮ್‌ನಲ್ಲಿನ ದೋಷಗಳಿಂದಾಗಿ ಗಗನಯಾತ್ರಿಗಳ ಮರುಪಯಣ ಸಾಧ್ಯವಾಗುತ್ತಿಲ್ಲ.

ಹೊರಡುವ ಮುನ್ನವೇ ಸರ್ವಿಸ್ ಮಾಡ್ಯೂಲ್‌ನಲ್ಲಿ ಹೀಲಿಯಂ ಅನಿಲ ಸೋರಿಕೆಯಾಗಿತ್ತು. ಪೈಪೋಟಿ ನೀಡುತ್ತಿರುವ ಎಲಾನ್ ಮಸ್ಕ್ ಅವರ ಸ್ಪೇಸ್ ಎಕ್ಸ್ ಕಂಪನಿ ಎದುರು 'ಪ್ರಥಮ ಚುಂಬನಂ ದಂತ ಭಗ್ನಂ' ಎನ್ನುವಂತೆ ಬೋಯಿಂಗ್ ಈಗ ಇರುಸುಮುರುಸು ಅನುಭವಿಸುತ್ತಿದೆ. ನೌಕೆಯ ನಿಯಂತ್ರಣ ಮತ್ತು ಹಾರಾಟಕ್ಕೆ ನೆರವಾಗಲು ನೌಕೆಗೆ ಅಂಟಿಕೊಂಡ 28 ಪ್ರೊಪಲ್ಶನ್ (ಚಿಕ್ಕ) ರಾಕೆಟ್‌ಗಳಿವೆ. ಅವುಗಳಲ್ಲಿ ಐದು ಹಾಳಾಗಿವೆ. ಇವು ರಿಪೇರಿ ಆಗುವವರೆಗೂ ವಿಲಿಯಮ್ಸ್ ಮತ್ತು ಬುಚ್ ಭೂಮಿಗೆ ಹಿಂತಿರುಗುವುದು ಕಷ್ಟಸಾಧ್ಯ. ಅಂ.ಬಾ.ನಿ. ಪ್ರವೇಶಿಸುವುದಕ್ಕೂ ಮುನ್ನ ಗಗನಯಾತ್ರಿಗಳಿಬ್ಬರೂ ತಮ್ಮ ನೌಕೆಯ ಪ್ರೊಪಲ್ಶನ್ ರಾಕೆಟ್‌ಗಳಲ್ಲಿ ಸಂಭವಿಸಿದ ಹೀಲಿಯಂ ಸೋರಿಕೆಯನ್ನು ಸರಿಮಾಡಲು ಸತತ 2 ಗಂಟೆಗಳ ಕಾಲ ಪರೀಕ್ಷೆ ನಡೆಸಿದ್ದರು. ಭೂಮಿಯಿಂದ ಹಾರಿದ ಸ್ಟಾರ್‌ಲೈನರ್, ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಜೋಡಣೆಗೊಳ್ಳುವಾಗ ರಾಕೆಟ್‌ಗಳು ಸರಿಯಾಗಿ ಕೆಲಸ ಮಾಡದ್ದರಿಂದ ಜೋಡಣೆ (ಡಾಕಿಂಗ್) ಕಾರ್ಯ ತಡವಾಗಿತ್ತು.

ಸ್ಟಾರ್‌ಲೈನರ್ ನೌಕೆಯಲ್ಲಿ ಹಿಂದಿನ ಎರಡು ವರ್ಷಗಳಿಂದಲೂ ಒಂದಲ್ಲ ಒಂದು ತಾಂತ್ರಿಕ ದೋಷ ಕಾಣಿಸಿಕೊಳ್ಳುತ್ತಲೇ ಇತ್ತು. ಹಲವು ಬಗೆಯ ರಿಪೇರಿ ಮತ್ತು ಮುನ್ನೆಚ್ಚರಿಕೆಯ ನಂತರ 2022ರಲ್ಲಿ ಮೊದಲ ಮಾನವರಹಿತ ಪರೀಕ್ಷಾರ್ಥ ಉಡ್ಡಯನ ನಡೆದು ಅದು ಯಶಸ್ವಿಯಾಗಿತ್ತು. ತಾಂತ್ರಿಕ ದೋಷಗಳಿಂದಾಗಿ ಇಲ್ಲಿಂದ ಹೊರಡುವಾಗಲೇ ಎರಡು ಸಲ ಉಡಾವಣೆಯನ್ನು ಸ್ಥಗಿತಗೊಳಿಸಲಾಗಿತ್ತು. ನೌಕೆ ಏರಿ ಕುಳಿತವರನ್ನು ಕೆಳಗಿಳಿಸಲಾಗಿತ್ತು. ಸಹ ಗಗನಯಾತ್ರಿ ಬುಚ್‌ರೊಂದಿಗೆ ಬರೀ ಏಳು ತಾಸುಗಳಲ್ಲಿ ಬಾಹ್ಯಾಕಾಶ ನಿಲ್ದಾಣ ತಲುಪಿದ್ದ ವಿಲಿಯಮ್ಸ್‌ಗೆ ಭೂಮಿಗೆ ಮರಳುವ ವಿಷಯ ಇಷ್ಟೊಂದು ಕಗ್ಗಂಟಾಗಿ ಕೂಡುತ್ತದೆ ಎಂಬುದರ ಸಣ್ಣ ಊಹೆಯೂ ಇರಲಿಲ್ಲವೇನೊ.



ಜೂನ್ 6ರಂದು ಅಂ.ಬಾ.ನಿ. ತಲುಪಿದ ಗಗನಯಾತ್ರಿಗಳು 'ಅಂತರಿಕ್ಷದ ದೊಡ್ಡ ನಗರಕ್ಕೆ ಬಂದು ತಲುಪಿರುವುದು ತುಂಬಾ ಖುಷಿ ನೀಡುತ್ತಿದೆ' ಎಂದು ರೇಡಿಯೊ ಸಂದೇಶ ಕಳಿಸಿದ್ದರು. ಜೂನ್ 16ಕ್ಕೆ ನೌಕೆಯು ಭೂಮಿಗೆ ಹಿಂತಿರುಗಬೇಕಿತ್ತು. ಹಿಂತಿರುಗಿ ಬರಲು ಏಳು ಗಂಟೆಗಳ ಸಮಯ ಹಿಡಿಯುತ್ತದೆ. ಅದಕ್ಕೆ ಬೇಕಾದ ಹೀಲಿಯಂ ಇಂಧನ ನೌಕೆಯಲ್ಲಿದೆ. ಅದರ ಬಲದಿಂದ ನೌಕೆಯನ್ನು 70 ತಾಸುಗಳವರೆಗೆ ಹಾರಿಸಬಹುದಾಗಿದೆ. ನೌಕೆಯನ್ನು ತಂಪಾಗಿರಿಸಿರುವ ಘಟಕದಲ್ಲಿ ಆಗಿರುವ ಸೋರಿಕೆಯನ್ನು ತಡೆಯಲು ಇನ್ನೂ ಕೆಲವು ವಾರಗಳು ಬೇಕು. ಸ್ಟಾರ್‌ಲೈನರ್ ನೌಕೆಯು 45 ದಿನಗಳವರೆಗೆ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ ಇರಬಹುದು ಎಂಬ ಪ್ರಾರಂಭಿಕ ಲೆಕ್ಕಾಚಾರಗಳಿದ್ದವು. ಈಗಾಗಲೇ 60 ದಿನಗಳು ಕಳೆದಿವೆ. ನಾಸಾದ ಗ್ರೌಂಡ್ ಸ್ಟೇಷನ್‌ನವರು ನೀಡುವ ಸಲಹೆಗಳನ್ನಾಧರಿಸಿ ಹೀಲಿಯಂ ಸೋರಿಕೆಯ ಭಾಗಗಳ ರಿಪೇರಿ ಕಾರ್ಯ ನಿರಂತರವಾಗಿ ನಡೆಯುತ್ತಿದೆ.

ಉಡಾವಣೆಗೂ ಮುಂಚೆ ನೌಕೆಯ ದಿಕ್ಕು ತೋರಿಸುವ ಮತ್ತು ನಿಯಂತ್ರಿಸುವ ಥ್ರಸ್ಟರ್‌ಗಳಲ್ಲಿ ದೋಷ ಕಾಣಿಸಿಕೊಂಡಿತ್ತು. ಆದರೂ ನೌಕೆಯು ಸುರಕ್ಷಿತವಾಗಿ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣವನ್ನು ತಲುಪಿತ್ತು. ನೌಕೆಯನ್ನು ಭೂಮಿಗೆ ವಾಪಸ್ ತರುವ ಬಲವಾದ ರಾಕೆಟ್‌ಗಳು ಇನ್ನೂ ಸುಸ್ಥಿತಿಯಲ್ಲಿವೆ ಎಂದಿರುವ ನಾಸಾ ಮತ್ತು ಬೋಯಿಂಗ್ ಸಂಸ್ಥೆಗಳು, ಗಗನಯಾತ್ರಿಗಳು ಭೂಮಿಗೆ ಕ್ಷೇಮವಾಗಿ ಹಿಂತಿರುಗುತ್ತಾರೆ ಎಂಬ ಭರವಸೆಯ ಮಾತಾಡಿವೆ.

ಕೆಲ ದಿನಗಳ ಹಿಂದೆ ಬಾಹ್ಯಾಕಾಶ ನಿಲ್ದಾಣದಿಂದ ನಾಸಾದ ಗ್ರೌಂಡ್ ಸ್ಟೇಷನ್‌ನೊಂದಿಗೆ ಸಂಪರ್ಕ ಸಾಧಿಸಿದ್ದ ಬುಚ್ ಮತ್ತು ಸುನಿತಾ, 'ಭೂಮಿಗೆ ಸುರಕ್ಷಿತವಾಗಿ ಬಂದೇ ಬರುತ್ತೇವೆ' ಎಂದಿದ್ದರು. ಹೀಲಿಯಂ ಸೋರಿಕೆಯನ್ನು ಸರಿಪಡಿಸುತ್ತಲೇ ಮರು ಪ್ರಯಾಣಕ್ಕಾಗಿ ನೌಕೆಯ ಏರ್ ಫಿಲ್ಟರ್‌ಗಳ ಕ್ಷಮತೆಯನ್ನು ಪರೀಕ್ಷಿಸಿದ್ದಾರೆ. ಮನುಷ್ಯನ ವಂಶವಾಹಿ ಅನುಕ್ರಮಣಿಕೆ (ಜೀನ್ ಸೀಕ್ವೆನ್ಸಿಂಗ್) ಮೇಲೆ ಮೈಕ್ರೊ ಗ್ರ್ಯಾವಿಟಿ ಹೇಗೆ ಕೆಲಸ ಮಾಡುತ್ತದೆ ಎಂಬುದನ್ನು ಅಲ್ಲಿರುವ ಪ್ರಯೋಗಶಾಲೆಯಲ್ಲಿ ಪರೀಕ್ಷಿಸುತ್ತಿದ್ದಾರೆ. ಬಾಹ್ಯಾಕಾಶದಲ್ಲಿನ ಹೆಚ್ಚಿನ ವಿಕಿರಣ, ಕ್ಷೀಣ ಗುರುತ್ವಗಳಿಂದಾಗಿ ಸ್ನಾಯು ಕ್ಷೀಣವಾಗುವಿಕೆ, ಮೂತ್ರಕೋಶದಲ್ಲಿ ಕಲ್ಲು ಮತ್ತು ಮೂಳೆಸವೆತದಂತಹ ತೊಂದರೆಗಳನ್ನು ಅನುಭವಿಸುತ್ತಿದ್ದಾರೆ.

ಈಗಾಗಲೇ ವರದಿಯಾಗಿರುವಂತೆ, ಸ್ಪೇಸ್ ಎಕ್ಸ್ ಕಂಪನಿಯ ಕ್ರೂ ಡ್ರ್ಯಾಗನ್ ಫ್ರೀಡಂ ನೌಕೆಯು ಆಗಸ್ಟ್ 18ರ ನಂತರ ಅಂ.ಬಾ.ನಿ. ಪ್ರವೇಶಿಸಲಿದೆ. ಅಷ್ಟರಲ್ಲಿ ಸ್ಟಾರ್‌ಲೈನರ್ ನೌಕೆ ಅಲ್ಲಿಂದ ಜಾಗ ಖಾಲಿ ಮಾಡಲೇಬೇಕು.

ಚುರುಮುರಿ



ಮತಸಮರ!

• ಬಿ.ಎನ್.ಮಲ್ಲೇಶ್

ಬಂಡೆ: ಯಾರು ತಿಳಿಯರು ನಿನ್ನ ಭುಜಬಲದ ಪರಾಕ್ರಮಾ... ಮತಸಮರದೋಳ್ ನೀ ಗೆದ್ದ ವಿಜಯಗಳ ಮರ್ಮಾ... ಎಲ್ಲದಕು ಕಾರಣವು ಮೈತ್ರಿ ಪರಮಾತ್ಮಾ... ಅದಿದ್ದರೂ ನೀನೀಗ ತೃಣಕ್ಕೆ ಸಮಾನಾ...

ಬ್ರದರ್: ಅಪ್ರತಿಮ ಶೂರ, ನಾ ನಮೋ-ಶಾ ಬಲನೋ... ಮಂಡ್ಯದಲ್ಲಿ ಹೋರಾಡಿ ಮಂತ್ರಿ ಪದವಿಯಂ ಪಡೆದವನೋ... ನನ್ನ ಭಾವನನ್ ನಿಲ್ಲಿಸಿ, ನಿನ್ನ ಸೋದರನನ್ ಮನೆಗೆ ಕಳಿಸಿದವನೋ... ಉಗ್ರ ಪ್ರತಾಪೀ...

ಬಂಡೆ: ಉಗ್ರ ಪ್ರತಾಪಿ! ಹಹ್ಹ... ಮಂಡ್ಯದಲ್ಲಿ ಮಗ ಸೋತಾಗ ಎಲ್ಲಿ ಅಡಗಿತ್ತೋ ಈ ನಿನ್ನ ಶೌರ್ಯ... ಸೋದರನ ಮಕ್ಕಳು ಜೈಲು ಪಾಲಾದಾಗ ಎಲ್ಲಿ ಮಲಗಿತ್ತೋ ಈ ನಿನ್ನ ಧೈರ್ಯ... ಬಂಡೆ ಹುಲಿಗಳ ಗೆಲ್ಲೋ ಗುಂಡಿಗೆಯು ನಿನಗೆಲ್ಲೋ... ಖಂಡಿಸುವೆ, ಬಿಚ್ಚಿಡುವೆ ನಿನ್ನ ಅಕ್ರಮ ಆಸ್ತಿಯನೆಲ್ಲಾ...

ಬ್ರದರ್: ಫಡಫಡಾ ಆಸ್ತಿ ಬಿಚ್ಚಿಡುವೆ ನೆಂದಡಿಗಡಿಗೆ ನುಡಿಯಬೇಡ ನೋಡಾ... ನಿನ್ನ ಅಕ್ರಮ ಆಸ್ತಿಗಳು ನನಗೂ ಗೊತ್ತಿಲ್ಲವೆನಬೇಡಾ... ನಾ ಗಂಡುಗಲಿಗಳ ಗಂಡ, ಉದ್ದಂಡ, ಕೀರ್ತಿ ಪ್ರಚಂಡಾ...

ಬಂಡೆ: ದಂಡನೋ ಉದ್ದಂಡನೋ ನಿರ್ಧರಿಸುವುದು ನ್ಯಾಯಾಂಗ... ಹಾಕು ಕೇಸುಗಳ ಮಾಡುವೆ ಮಾನಭಂಗಾ...

ಬ್ರದರ್: ಹಾಕುವೆ ಕೇಸುಗಳ, ಬಿಚ್ಚಿಡುವೆ ನಿಮ್ಮ ಬಂಡವಾಳವ, ಉತ್ತರಿಸದೆ ನಿಮ್ಮನು ಬಿಡುವುದಿಲ್ಲಾ... ಗ್ಯಾರಂಟಿ ಗಳಗಂಟಿಯಲಿ ಗೆದ್ದವರು ನೀವು, ಮೂಡಾ ಕೇಸಿನಲಿ ಸಿಕ್ಕಿದ್ದೀರಲ್ಲಾ...

ಬಂಡೆ: ಮೂಡಾ ಮೂಡಾ ಎಂದ್ ಹೆದರಿಸಿದರೆ ಇಲ್ಯಾರಿಗೂ ಭಯವಿಲ್ಲಾ...

ಬ್ರದರ್: ರಾಮನಗರದ ಹೆಸರು ಬದಲಿಸಿ ಉಳಿದವರಿಲ್ಲಾ... ಇ.ಡಿ. ಹಿಡಿತಕ್ಕೊಪ್ಪಿಸಿ ನಿಮ್ಮನು ಜೈಲಿಗಟ್ಟದೆ ಬಿಡುವವನಲ್ಲಾ...

ಬಂಡೆ: ಅಬ್ಬರಿಸಿ ಬೊಬ್ಬಿರಿದರೆ ನಮ್ಮ ಸಿಎಂ ಇಳಿಯುವುದಿಲ್ಲಾ... ನಿಮ್ಮ ಪಾದಯಾತ್ರೆಯ ನಾಟಕ ಬಹಳ ದಿನ ನಡೆಯುವುದಿಲ್ಲಾ...

ಬ್ರದರ್: ಆರ್ಭಟಿಸಿ ಬರುತಿದೇ ನೋಡು ರಾಜ್ಯಪಾಲರ ತನಿಖಾಹ್ವಾನ...!

ಬಂಡೆ: ತನಿಖಾಹ್ವಾನಕ್ಕೇ ಈ ಪಂಥಾಹ್ವಾನ, ಹೆದರುವವನಲ್ಲ ಈ ಬಂಡೆ ಬಬ್ರುವಾಹನಾ...

ಸಂಗತ

ಪುಸ್ತಕ, ಸಾಟಿಯಿಲ್ಲದ ಚಿಕಿತ್ಸಕ

ಓದು ನಮ್ಮ ದಿನಚರಿಯ ಪ್ರತ್ಯೇಕಿಸಲಾಗದ ಭಾಗವಾಗಬೇಕಿದೆ

• ಬಿ.ಎಸ್.ಭಗವಾನ್

ಪುಸ್ತಕಗಳಿಲ್ಲದ ಕೊಠಡಿಯನ್ನು ಆತ್ಮವಿಲ್ಲದ ಶರೀರಕ್ಕೆ ಹೋಲಿಸುವುದಿದೆ. ಪುಸ್ತಕದ ನೋಟವೇ ಜ್ಞಾನ, ನೆನಪುಗಳನ್ನು ಪುಟಿಸುವುದು. 'ಪುಸ್ತಕಂ ಹಸ್ತ ಭೂಷಣಂ' ಎನ್ನುವುದು ಚೆನ್ನುಡಿ. ಅಮೆರಿಕದ ಕಾದಂಬರಿಕಾರ ಜಾರ್ಜ್ ಆರ್.ಆರ್. ಮಾರ್ಟಿನ್ 'ಒಬ್ಬ ಓದುಗ ಸಾಯುವ ಮುನ್ನ ಸಾವಿರ ಬಾರಿ ಜೀವಿಸುತ್ತಾನೆ. ಓದದವ ಒಮ್ಮೆ ಮಾತ್ರ ಜೀವಿಸುತ್ತಾನೆ' ಎನ್ನುತ್ತಾರೆ. ಪುಸ್ತಕವನ್ನು ಓದದೇ ಇಡುವುದು ಅದನ್ನು ಸುಡುವುದಕ್ಕಿಂತಲೂ ಹೀನ ಕೃತ್ಯವೆಂಬ ನಿಷ್ಠುರ ನುಡಿಯಲ್ಲಿ ಓದುವ ಪ್ರಾಮುಖ್ಯವನ್ನು ಗುರುತಿಸಬೇಕು.

ಫೋನಿನಲ್ಲಿ ನಾವು ನಮ್ಮನ್ನು ಇತರರೊಂದಿಗೆ ಹೋಲಿಸಿಕೊಳ್ಳುವುದೇ ಹೆಚ್ಚು. ಇದರ ಫಲವಾಗಿ ಸಲ್ಲದ ಕೀಳರಿಮೆ. ಆದರೆ ಒಂದು ಒಳ್ಳೆಯ ಕೃತಿಯನ್ನು ಓದಿದಾಗ ನಮ್ಮ ಬಗ್ಗೆ ನಮಗೆ ಹೆಮ್ಮೆ ಎನ್ನಿಸುವುದು. ನಾವು ಸಂಪನ್ನರ ಮೂಲಕ ಜಗತ್ತನ್ನು ಕಾಣುವುದೇ ಇದಕ್ಕೆ ಕಾರಣ. ಮನಸ್ಸುಗಳು ಸಮೂಹ ಮಾಧ್ಯಮದಲ್ಲಿ ಎಗ್ಗಿಲ್ಲದೇ ಮುಳುಗಿಹೋಗಿವೆ. 'ಡಿಜಿಟಲ್ ಡಿಸ್ಟ್ರ್ಯಾಕ್ಷನ್' ಅಥವಾ ಅಂಕೀಯ ವ್ಯಾಕುಲ ನಮ್ಮನ್ನು ಅತಿಕ್ರಮಿಸದಂತೆ ಮಾಡುವ ಶಕ್ತಿ ಒಂದು ಪುಸ್ತಕಕ್ಕಿದೆ. ವಾಟ್ಸ್‌ಆ್ಯಪ್‌ನಲ್ಲಿ ಇಷ್ಟೊಂದು ಹರಟಿದೆನಲ್ಲ ಎಂಬ ಪ್ರಮಾದಪ್ರಜ್ಞೆ ಕಾಡಬಹುದು. ಆದರೆ ಎಂತಹ ಪುಸ್ತಕವಾಗಲಿ, ಓದಿದೆನಲ್ಲ ಎನ್ನುವ ಅಪರಾಧ ಭಾವಕ್ಕೆ ಅವಕಾಶವಿರದು. ಓದು ನಮ್ಮ ದಿನಚರಿಯ ಪ್ರತ್ಯೇಕಿಸಲಾಗದ ಭಾಗವಾಗಬೇಕಿದೆ.

ಗ್ರಂಥಗಳು ಅರಿವಿನೊಂದಿಗೆ ಮನ ಬೆಳಗಿಸುತ್ತವೆ ಹಾಗೂ ಕೊನೆಯಿರದ ಸಾಹಸಗಳನ್ನು ಹೊತ್ತ ಕಲ್ಪನೆಗಳ ಕಿಡಿ ಹೊತ್ತಿಸುತ್ತವೆ. ರೋಚಕ ರಹಸ್ಯವೊ, ಪ್ರಣಯವೊ ಅಥವಾ ಇತಿಹಾಸದಲ್ಲಿ ಸಂದ ಘಟನೆಗಳತ್ತ ಜಿಗಿತವೊ, ಗ್ರಂಥಗಳು ಸಾದರಕ್ಕೆ ತೆರೆದುಕೊಳ್ಳುತ್ತವೆ. ವಾಸ್ತವವಾಗಿ ಗ್ರಂಥಾಲಯವೆಂದರೆ, ಗ್ರಂಥಗಳನ್ನು ಒಪ್ಪ ಓರಣವಾಗಿ ಇರಿಸಿದ ಕಪಾಟುಗಳ ಸಾಲುಗಳಲ್ಲ. ಅಲ್ಲಿ ಒಂದೊಂದು ಕೃತಿಯೂ ನಮ್ಮೊಂದಿಗೆ ಮಾತನಾಡುತ್ತದೆ. ಓದು ಕಲಿಕೆಯ ಹೆಬ್ಬಾಗಿಲು. ಅದು ಅನಿವಾರ್ಯ ಕೌಶಲ. ಈಗಂತೂ ಆನ್‌ಲೈನ್ ಪುಸ್ತಕಗಳು, ಇ-ಬುಕ್‌ಗಳು ಓದನ್ನು ಬಹು ಸರಾಗಗೊಳಿಸಿವೆ. ಹಾಗಾಗಿ, ಎಲ್ಲರೂ ದಿನಕ್ಕೆ ಕನಿಷ್ಠ 30 ನಿಮಿಷಗಳನ್ನಾದರೂ ಓದಿಗೆ ಮೀಸಲಿಡಬೇಕು. ಓದು ಎಲ್ಲರ ಹವ್ಯಾಸವಾದರೆ ಬಹುತೇಕ ಸಾಮಾಜಿಕ ಸಮಸ್ಯೆಗಳು ಶಮನಗೊಂಡಾವು. ವಿಶೇಷವಾಗಿ ಯುವಪೀಳಿಗೆಯನ್ನು ಬಾಧಿಸುವ ನಾನಾ ವ್ಯಸನ, ದುಶ್ಚಟ, ದುರಭ್ಯಾಸಗಳಿಗೆ ಓದುವ ಹವ್ಯಾಸವೇ ಸಂಜೀವಿನಿ.

ಮನೆ ನಿರ್ಮಾಣದ ನೀಲನಕ್ಷೆಯಲ್ಲಿ ಪಾದರಕ್ಷೆಗಳನ್ನಿಡಲು ಒಂದು ಗೂಡು ಇದ್ದೇ ಇರುತ್ತದೆ. ಆದರೆ ಪುಸ್ತಕಗಳನ್ನಿಡಲು ಒಂದು ಗೂಡು ಕಲ್ಪಿಸಬೇಕಲ್ಲವೆ? ಮರೆತರೆ ಎಂತಹ ವಿಪರ್ಯಾಸ? ಬೀಚಿಯವರು ಪುಸ್ತಕದ ಮೌಲ್ಯವನ್ನು ಮೊನಚಾಗಿಯೇ ಬಿಂಬಿಸಿದರು. ಒಮ್ಮೆ ತಿಂಮ ಮಾಸ್ತರರ ಮನೆಗೆ ಹೋಗಿ ನಿಘಂಟು ಕೇಳುತ್ತಾನೆ. ಇಲ್ಲೇ ನೋಡಬೇಕು, ಹೊರಗೊಯ್ಯಬಾರದೆಂಬುದು ಗುರುಗಳ ಕರಾರು. ಮುಂದೊಂದು ದಿನ ಗುರುಗಳಿಗೆ ಪೊರಕೆ ತುರ್ತು ಅಗತ್ಯವಾಗುತ್ತದೆ. ತಿಂಮನ ಮನೆಗೆ ಬಂದು ಕೇಳಿದಾಗ ಅವರು ಅದೇ ಉತ್ತರವನ್ನು ಎದುರಿಸಬೇಕಾಗುತ್ತದೆ!

ಪ್ರತಿವರ್ಷ ಆಗಸ್ಟ್ 9 'ರಾಷ್ಟ್ರೀಯ ಪುಸ್ತಕ ಪ್ರೇಮಿಗಳ ದಿನ'. ಓದಲು ತಕ್ಕ ತಾಣವು ಉತ್ತಮ ಗ್ರಂಥದ ಆಯ್ಕೆಗೆ ಪ್ರೇರೇಪಿಸುತ್ತದೆ. ಗ್ರಂಥಕರ್ತರನ್ನು ಮೆಚ್ಚಲು, ನೆನೆಯಲು ಮತ್ತು ಕಥೆ ಹೇಳುವ, ಕೇಳುವ ಕಲೆಯನ್ನು ಉತ್ತೇಜಿಸಲು ಈ ಸಂದರ್ಭ ಸೂಕ್ತವಾಗಿದೆ. ಗ್ರಂಥಗಳ ಮತ್ತು ನಮ್ಮೊಳಗಿನ ಓದುಗನ ಶಕ್ತಿಯನ್ನು ಗುರುತಿಸುವ ದಿನವಿದು. ಪುಸ್ತಕಗಳು ನಮ್ಮ ಸುತ್ತಮುತ್ತಲಿನ ಜಗತ್ತಿನ ಬಗ್ಗೆ ನಮ್ಮ ಕಲ್ಪನೆ ಮತ್ತು ತಿಳಿವಳಿಕೆಯನ್ನು ವಿಸ್ತರಿಸುತ್ತವೆ. ಮಣ್ಣಿನ ಬಿಲ್ಲೆ, ಚರ್ಮದ ಸುರುಳಿ, ಕೆತ್ತನೆಗಳ ಮೂಲಕ ಸಾಗಿ ಕಾಗದಕ್ಕೆ ಸಂದ ಸಾಹಿತ್ಯವು ಇಂದಿನತನಕ ಸಂಸ್ಕೃತಿಗಳ ರಕ್ಷಣೆ ಹಾಗೂ ಜನಶಿಕ್ಷಣದಲ್ಲಿ ಅನನ್ಯ ಪಾತ್ರ ವಹಿಸಿದೆ.



ಪುಸ್ತಕಗಳ ಕುರಿತು ಸಂಭಾಷಿಸುವುದು, ಗ್ರಹಿಸಿದ್ದನ್ನು ವಿನಿಮಯ ಮಾಡಿಕೊಳ್ಳುವುದು ಓದಿನಷ್ಟೇ ಮಹತ್ವದ್ದು. ಪುಸ್ತಕವು ಪ್ರಶ್ನಾತೀತವಾದ ಆಜೀವ ಆಪ್ತಮಿತ್ರ. ಯಾರಾದರೂ ದಿನಪತ್ರಿಕೆಯಲ್ಲಿ ಮುಳುಗಿದ್ದರೆನ್ನಿ. ನಡುವಿನ ಪುಟ ಕೊಡಿ ಎಂದು ಅವರನ್ನು ಗೋಗರೆದರೆ ಮೇಲ್ನೋಟಕ್ಕೆ ಪ್ರಮಾದವಿಲ್ಲ ಎನ್ನಿಸಬಹುದು. ಆದರೆ ಇಲ್ಲಿ ಆಗಿರುವುದು ಎರಡು ತಪ್ಪುಗಳು. ಮೊದಲನೆಯದು, ಅವರ ಏಕಾಗ್ರತೆಯನ್ನು ಕಲಕಿದ್ದು. ಎರಡನೆಯದು, ಎಲ್ಲರೂ ಹೀಗೆ ಉಚಿತ ಮಾರ್ಗ ಹಿಡಿದರೆ ಪತ್ರಿಕಾ ಸಂಸ್ಥೆಯ ಮುದ್ರಣ, ಪ್ರಕಟಣಾ ವೆಚ್ಚ ನಿಭಾಯಿಸುವ ಹೊಣೆ ಹೇಗೆಂದು ಚಿಂತಿಸದಿರುವುದು. ಎಂದಮೇಲೆ, ಉಚಿತ ಓದು ಅನುಚಿತ.

ಗ್ರಂಥಾಲಯದ ಯಶೋಗಾಥೆಯು ಓದುಗರ ಶಿಸ್ತು, ಸಹಕಾರದಲ್ಲಿದೆ. ನೀರವ ಮೌನ, ಎಂಜಲುಮುಕ್ತ ಪುಟಗಳು, ಬೌಂಡು ಸಡಿಲಗೊಳ್ಳದ ಹೊತ್ತಿಗೆಗಳು, ಎರವಲು ಪಡೆದ ಪುಸ್ತಕಗಳ ಸಕಾಲ ವಾಪಸಾತಿ... ಇವೆಲ್ಲ ಸುಸ್ಥಿರ ಗ್ರಂಥಭಂಡಾರ ಕಟ್ಟಿಕೊಡುವ ಸಾಮಾನ್ಯ ಪ್ರಜ್ಞೆಯ ಕುಡಿಗಳು.

ಓದುವುದೆಂದರೆ ಆಲೋಚಿಸುವುದು. ಓದು ಮನಸ್ಸಿಗೆ, ವ್ಯಾಯಾಮ ದೇಹಕ್ಕೆ. ಭೂಮಿಯ ಇನ್ನೊಂದು ಭಾಗಕ್ಕೆ ವಿಮಾನದ ಟಿಕೆಟ್ ಖರೀದಿಸುವುದು ಬೇಡ. ಒಂದು ಶ್ರೇಷ್ಠ ಗ್ರಂಥವೇ ನಮ್ಮನ್ನು ಅಲ್ಲಿಗೆ ತಲುಪಿಸುತ್ತದೆ. ಇತಿಹಾಸದಲ್ಲಿ ಶ್ರೇಷ್ಠರ ಕೃತಿಗಳನ್ನು ಓದಿ ಶ್ರೇಷ್ಠರಾದವರು ಹಲವರಿದ್ದಾರೆ. ಮನುಷ್ಯ ಮಾತ್ರವೇ ಪೀಳಿಗೆಯಿಂದ ಪೀಳಿಗೆಗೆ ಗ್ರಂಥಗಳ ಮೂಲಕ ಅನುಭವ, ಅರಿವನ್ನು ಹಸ್ತಾಂತರಿಸಬಲ್ಲ. ಬಾಲ್ಯದಿಂದಲೇ ಓದುವ ಪ್ರವೃತ್ತಿ ಸ್ವಕಲಿಕೆಗೆ ಅನುಕೂಲಕರ ವೇದಿಕೆ ನಿರ್ಮಿಸಿಕೊಡುವುದು. ಪುಸ್ತಕ ಸರ್ವರ ಪಾಲಿಗೂ ಅಧಿಕಾರಯುತ ಜ್ಞಾನ.

ವಾಚಕರ ವಾಣಿ

ಒತ್ತುವರಿ ತೆರವು: ಆರಂಭಶೂರತ್ವ ಆಗದಿರಲಿ

ಪಶ್ಚಿಮಘಟ್ಟ ವ್ಯಾಪ್ತಿಯಲ್ಲಿ ಅರಣ್ಯ ಭೂಮಿಯನ್ನು ಒತ್ತುವರಿ ಮಾಡಿಕೊಂಡು ಅಕ್ರಮವಾಗಿ ತಲೆ ಎತ್ತಿರುವ ರೆಸಾರ್ಟ್, ಹೋಮ್‌ಸ್ಟೇ ಅಂತಹವುಗಳ ತೆರವು ಕಾರ್ಯಾಚರಣೆಯನ್ನು ರಾಜ್ಯ ಸರ್ಕಾರ ಆರಂಭಿಸಿರುವುದು ಶ್ಲಾಘನೀಯ. ಆದರೆ ಈ ನಡೆ ಆರಂಭಶೂರತ್ವವಷ್ಟೇ ಆಗಬಾರದು.

ಒತ್ತುವರಿ ಮಾಡಿಕೊಂಡವರಲ್ಲಿ ಬಹಳಷ್ಟು ಮಂದಿ ಪ್ರಭಾವಿಗಳಾಗಿದ್ದು, ಅವರನ್ನು ಬಿಟ್ಟು ಅಮಾಯಕರ ವಿರುದ್ಧವಷ್ಟೇ ಕ್ರಮ ಜರುಗಿಸದಂತೆ ಎಚ್ಚರ ವಹಿಸಬೇಕು. ಅಧಿಕಾರಿಗಳ ನಿರ್ಲಕ್ಷ್ಯದಿಂದಲೇ ಇಂತಹ ಅಕ್ರಮಗಳು ಜರುಗಲು ಸಾಧ್ಯ. ಹೀಗಾಗಿ, ಇಂತಹುದಕ್ಕೆ ಅವಕಾಶ ಕಲ್ಪಿಸಿದ ಅಧಿಕಾರಿಗಳ ವಿರುದ್ಧವೂ ಕ್ರಮ ಕೈಗೊಳ್ಳುವಂತೆ ಆಗಬೇಕು.

ಸುರೇಂದ್ರ ಪೈ, ಭಟ್ಕಳ

ಚುನಾವಣಾ ವ್ಯವಸ್ಥೆ: ಬೇಕಿದೆ ಕಾಯಕಲ್ಪ

ಚುನಾವಣಾ ವ್ಯವಸ್ಥೆಗೆ ಸುಧಾರಣೆ ತರಬೇಕು ಎಂಬುದು ಸಾರ್ವಜನಿಕ ವಲಯದಲ್ಲಿ ಆಗಿಂದಾಗ್ಗೆ ಕೇಳಿಬರುವ ಮಾತು. ಟಿ.ಎನ್. ಶೇಷನ್ ಚುನಾವಣಾ ಆಯುಕ್ತರಾಗಿದ್ದಾಗ ಕೆಲವು ಸುಧಾರಣೆಗಳಿಗೆ ಕಾರಣರಾದರು. ಚುನಾವಣಾ ಸಮಯದಲ್ಲಿ ಮೈಕಾಸುರನ ಹಾವಳಿ, ಪೋಸ್ಟರ್‌ಗಳನ್ನು ಅಂಟಿಸಿ ಗೋಡೆಗಳ ಅಂದಗೆಡಿಸುತ್ತಿದ್ದುದನ್ನು ಕಟ್ಟುನಿಟ್ಟಾಗಿ ನಿಲ್ಲಿಸಲಾಯಿತು. ಮತದಾರರಿಗೆ ಗುರುತಿನ ಚೀಟಿ ವಿತರಿಸುವ ಪ್ರಯತ್ನದಲ್ಲಿ ಶೇಷನ್ ಯಶಸ್ವಿಯಾದರು. ಆದರೆ ಅವರ ಸುಧಾರಣಾ ಕ್ರಮದಲ್ಲಿ ಸರ್ವಾಧಿಕಾರಿ ಧೋರಣೆಯನ್ನು ಕಂಡ ಆಗಿನ ಸರ್ಕಾರ, ಅವರೊಂದಿಗೆ ಮತ್ತಿಬ್ಬರು ಆಯುಕ್ತರನ್ನು ನೇಮಿಸುವ ಮೂಲಕ ಅವರ ಅಧಿಕಾರಕ್ಕೆ ಲಗಾಮು ಹಾಕಲು ಮುಂದಾಯಿತು.

ಈಗ ಚುನಾವಣೆಯಿಂದ ಚುನಾವಣೆಗೆ ಅಭ್ಯರ್ಥಿಗಳು ಮಾಡುವ ವೆಚ್ಚವು ಕೋಟಿಗಳ ಲೆಕ್ಕದಲ್ಲಿ ಏರಿಕೆಯಾಗುತ್ತಿದೆ. ಹಿಂದೆ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ ವಿಜೇತರಾಗಿದ್ದ ಶಾಂತವೇರಿ ಗೋಪಾಲಗೌಡ ಅವರ ಚುನಾವಣಾ ವೆಚ್ಚವನ್ನು ಕೇಳಿದರೆ ಈಗಿನ ಜನಪ್ರತಿನಿಧಿಗಳು ನಗಬಹುದು. ಈಗಿನ ಚುನಾವಣೆಗಳ ಅವಿವೇಕದ ಪ್ರಹಸನಕ್ಕೆ ಸ್ಪರ್ಧಾಳುಗಳನ್ನು ಮಾತ್ರ ಹೊಣೆ ಮಾಡುವಂತಿಲ್ಲ. ಮತದಾರರೂ ಅಷ್ಟೇ ಕಾರಣರಾಗಿದ್ದಾರೆ. ವಿಧಾನಪರಿಷತ್ತಿನ ಶಿಕ್ಷಕರ ಕ್ಷೇತ್ರಕ್ಕೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಸುಶಿಕ್ಷಿತ ಮತದಾರ ನಡೆದುಕೊಂಡ ರೀತಿಗೆ ಸಂವಿಧಾನ ರಚನೆಕಾರರ ಆತ್ಮಗಳು ವಿಲವಿಲ ಒದ್ದಾಡಿರಬಹುದು. ಚುನಾವಣಾ ವ್ಯವಸ್ಥೆಗೆ ನಿಜಕ್ಕೂ ಕಾಯಕಲ್ಪ ಬೇಕಿದೆ. ಅದನ್ನು ಈಗಿರುವ ರೀತಿಯಿಂದ ಹೊರತಂದು ಹೊಸ ಪ್ರಯೋಗಗಳಿಗೆ ಒಡ್ಡಬೇಕಿದೆ. ಆದರೆ ಅದನ್ನು ಜಾರಿಗೆ ತರುವವರು ಯಾರು? ಸುಧಾರಣೆ ಯಾರಿಗೆ ಬೇಕಾಗಿದೆ? ಮತವನ್ನು 'ಖರೀದಿ' ಮಾಡುವ ಮೂಲಕ ಪ್ರಜಾಪ್ರಭುತ್ವವನ್ನು ಅಣಕವಾಗಿಸಲು ಹೊರಟಿರುವ ನಮ್ಮ ಪ್ರತಿನಿಧಿಗಳಿಗೆ ಇದನ್ನು ತಿಳಿಯಪಡಿಸುವವರು ಯಾರು? ಮತ್ತೆ ಅದೇ ಪ್ರಶ್ನೆ 'ಬೆಕ್ಕಿನ ಕೊರಳಿಗೆ ಗಂಟೆ ಕಟ್ಟುವವರು ಯಾರು?'

ಮೋದೂರು ಮಹೇಶಾರಾಧ್ಯ, ಹುಣಸೂರು

ತೂಕ– ಮೂಕ!

ನುಚ್ಚುನೂರು ಮಾಡಿತು
ಕುಸ್ತಿಯಲ್ಲಿ ಒಲಿಂಪಿಕ್ಸ್ ಪದಕ
ಗಳಿಸುವ ಭಾರತದ ಕನಸನ್ನು
100 ಗ್ರಾಂ ಹೆಚ್ಚಿನ ತೂಕ,
ಬರಸಿಡಿಲಿನ ಈ ಸುದ್ದಿಗೆ
ಆಘಾತಗೊಂಡ ಕೋಟ್ಯಂತರ
ಕ್ರೀಡಾಪ್ರೇಮಿಗಳೀಗ ಮೂಕ.

ಆನಂದ ರಾಮತೀರ್ಥ, ಜಮಖಂಡಿ

ಗ್ರಾಮೀಣ ಬಸ್ ನಿಲ್ದಾಣ: ಮುಕ್ತಿ ಸಿಗಲಿ

ರಾಜ್ಯದಲ್ಲಿ ಸಾಮಾನ್ಯವಾಗಿ ಎಲ್ಲ ಗ್ರಾಮಗಳಲ್ಲೂ ಬಸ್ ನಿಲ್ದಾಣಗಳನ್ನು ನಿರ್ಮಿಸಲಾಗಿರುತ್ತದೆ. ಆದರೆ ಎಷ್ಟೋ ನಿಲ್ದಾಣಗಳು ಅವ್ಯವಸ್ಥೆಯ ತಾಣಗಳಾಗಿ ಗಬ್ಬೆದ್ದು ನಾರುತ್ತಿರುತ್ತವೆ. ಕುಡುಕರ ಹಾವಳಿಯ ಜೊತೆಗೆ ಕೆಲವು ನಿಲ್ದಾಣಗಳು ಆಕ್ರಮಿತ ಗೂಡಂಗಡಿಗಳಾಗಿ ಪರಿವರ್ತನೆಗೊಂಡಿವೆ. ಇನ್ನು ಕೆಲವು ನಿಲ್ದಾಣಗಳು ಕಸಕಡ್ಡಿ, ಕಲ್ಲುಮಣ್ಣು ಸಂಗ್ರಹದಿಂದ ಕೊಳಚೆ ಪ್ರದೇಶದಂತೆ ಕಾಣುತ್ತವೆ. ಸೊಳ್ಳೆಗಳ ಹಾವಳಿ ಕಂಡುಬರುತ್ತದೆ.

ರಾಜ್ಯ ಸರ್ಕಾರವು ಪ್ರಯಾಣಿಕರ ಅನುಕೂಲಕ್ಕಾಗಿ ಬಸ್ ನಿಲ್ದಾಣಗಳನ್ನು ನಿರ್ಮಿಸಿ, ನಿರ್ವಹಣೆಯ ಜವಾಬ್ದಾರಿ ಮರೆಯುತ್ತದೆ. ಇವುಗಳ ನಿರ್ವಹಣೆ ಮಾಡುವುದು ಲೋಕೋಪಯೋಗಿ ಇಲಾಖೆಯೋ ಸಾರಿಗೆ ಇಲಾಖೆಯೋ ಅಥವಾ ಆಯಾ ಗ್ರಾಮ ಪಂಚಾಯಿತಿ, ಪಟ್ಟಣ ಪಂಚಾಯಿತಿಯೋ ಎಂಬುದು ತಿಳಿಯುವುದಿಲ್ಲ. ಈ ನಿಲ್ದಾಣಗಳಿಗೆ ಮುಕ್ತಿ ಸಿಗಬೇಕಾದದ್ದು ಅವಶ್ಯ.

ಮಹಾಂತೇಶ ರಾಜಗೋಳಿ, ಬೈಲಹೊಂಗಲ

ದಂತ ವೈದ್ಯಕೀಯ: ನಿರುದ್ಯೋಗ ತಪ್ಪಿಸಿ

ರಾಜ್ಯದ ದಂತ ವೈದ್ಯಕೀಯ ಪದವೀಧರರನ್ನು ಅನೇಕ ವರ್ಷಗಳಿಂದ ನಿರುದ್ಯೋಗ ಸಮಸ್ಯೆ ಕಾಡುತ್ತಿದೆ. ಉಳಿದ ಇಲಾಖೆಗಳ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳುವ ರೀತಿಯಲ್ಲಿ ಸರ್ಕಾರವು ತಾತ್ಕಾಲಿಕ ಅಥವಾ ಗುತ್ತಿಗೆ ಆಧಾರದಲ್ಲಿ ದಂತ ವೈದ್ಯರ ನೇಮಕಾತಿ ಮಾಡಿಕೊಳ್ಳುತ್ತಿಲ್ಲ. ಆರಂಭಿಸಿದ ದಂತ ಕ್ಲಿನಿಕ್‌ಗಳಲ್ಲಿ ಬಹುತೇಕರಿಗೆ ಕನಿಷ್ಠ ಆದಾಯವೂ ಸಿಗುವುದಿಲ್ಲ.

ಸರ್ಕಾರವು ನೇಮಕಾತಿಯಲ್ಲಿ ದಂತ ವೈದ್ಯಕೀಯ ಪದವೀಧರರ ಬದಲಿಗೆ ದಂತ ವೈದ್ಯಕೀಯದಲ್ಲಿ ಡಿಪ್ಲೊಮಾ ಪಡೆದಿರುವ ಅಭ್ಯರ್ಥಿಗಳನ್ನು ಪರಿಗಣಿಸುತ್ತದೆ. ಇಂತಹ ಕಾರಣಗಳಿಂದ, ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಿ ಸೀಟು ಪಡೆದು ದಂತ ವೈದ್ಯಕೀಯ ಪದವಿ ಓದಿದ್ದು ವ್ಯರ್ಥ ಎನಿಸುವಂತಾಗಿದೆ. ಒಬ್ಬ ದಂತ ವೈದ್ಯರ ಸಂಬಳದಲ್ಲಿ ಬಿಎಎಂಎಸ್, ಬಿಎಚ್‌ಎಂಎಸ್ ಪದವಿ ಪಡೆದ ಇಬ್ಬರನ್ನು ನೇಮಕ ಮಾಡಿಕೊಂಡು ದುಡಿಸಿಕೊಳ್ಳಲಾಗುತ್ತಿದೆ. ಕೆಎಎಸ್ ಹಾಗೂ ಯುಪಿಎಸ್‌ಸಿ ಪರೀಕ್ಷೆಗಳಿಗೆ ನಿಗದಿಪಡಿಸಿದ ಪಠ್ಯದಲ್ಲಿ ದಂತ ವೈದ್ಯಕೀಯಕ್ಕೆ ಸಂಬಂಧಿಸಿದ ಸಿಲೆಬಸ್ ಇರುವುದಿಲ್ಲ. ಈ ಸ್ಪರ್ಧಾತ್ಮಕ ಪರೀಕ್ಷೆ ಎದುರಿಸುವಷ್ಟರಲ್ಲಿ ವಿದ್ಯಾರ್ಥಿಗಳು ಹೈರಾಣಾಗಿರುತ್ತಾರೆ. ರಾಜ್ಯದ ದಂತ ವೈದ್ಯಕೀಯ ಕಾಲೇಜುಗಳು ಪ್ರತಿವರ್ಷ ಸಾವಿರಾರು ವಿದ್ಯಾರ್ಥಿಗಳಿಗೆ ದಂತ ವೈದ್ಯಕೀಯ ಪದವಿ ಪ್ರಮಾಣಪತ್ರ ವಿತರಿಸುವ ಕಾರ್ಖಾನೆಗಳಂತಾಗಿವೆ. ದಂತ ವೈದ್ಯರನ್ನು ಕಾಡುತ್ತಿರುವ ನಿರುದ್ಯೋಗ ಸಮಸ್ಯೆಗೆ ಉತ್ತರ ಹುಡುಕುವ ಕೆಲಸವನ್ನು ಸರ್ಕಾರ ಮಾಡಬೇಕಾಗಿದೆ.

ಎಂ.ಆಂಜನೇಯ, ಹಾವೇರಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ವಕ್ಫ್ (ತಿದ್ದುಪಡಿ) ಮಸೂದೆ–2024

ಮಂಡಳಿಯಲ್ಲಿ ಮುಸ್ಲಿಮೇತರರಿಗೂ ಅವಕಾಶ

ಕೇಂದ್ರ ಸರ್ಕಾರವು ಲೋಕಸಭೆಯಲ್ಲಿ ಮಂಡಿಸಿರುವ ವಕ್ಫ್ (ತಿದ್ದುಪಡಿ) ಮಸೂದೆ–2024ಕ್ಕೆ ಸಂಸತ್ತಿನ ಒಳಗೂ ಹೊರಗೂ ಪರ–ವಿರೋಧ ವ್ಯಕ್ತವಾಗಿದೆ. ಮಸೂದೆಯಲ್ಲಿರುವ ಅಂಶಗಳ ಬಗ್ಗೆ ಸಂಸತ್ತಿನಲ್ಲಿ ವಿರೋಧ ಪಕ್ಷಗಳಿಂದ ತೀವ್ರ ವಿರೋಧ ವ್ಯಕ್ತವಾದ ಬಳಿಕ, ಮಸೂದೆಯನ್ನು ಪರಿಶೀಲನೆಗಾಗಿ ಜಂಟಿ ಸದನ ಸಮಿತಿಗೆ ಒಪ್ಪಿಸಲಾಗಿದೆ. ಮಸೂದೆಯಲ್ಲಿ ಮಾಡಿರುವ ತಿದ್ದುಪಡಿಗಳ ಬಗ್ಗೆ ಇಲ್ಲಿ ಬೆಳಕು ಚೆಲ್ಲಲಾಗಿದೆ

ವಕ್ಫ್ ಆಸ್ತಿಗಳ ಉತ್ತಮ ನಿರ್ವಹಣೆ ಮತ್ತು ಆಡಳಿತದ ಉದ್ದೇಶದಿಂದ ಕೇಂದ್ರ ಸರ್ಕಾರ 1995ರಲ್ಲಿ ವಕ್ಫ್ ಕಾಯ್ದೆಯನ್ನು ಜಾರಿಗೆ ತಂದಿತ್ತು. ನಂತರದಲ್ಲಿ ಈ ಕಾಯ್ದೆ ಅಷ್ಟೊಂದು ಪರಿಣಾಮಕಾರಿಯಾಗಿಲ್ಲ ಎಂಬ ಅಭಿಪ್ರಾಯ ಬಂದಿದ್ದರಿಂದ ನ್ಯಾಯಮೂರ್ತಿ (ನಿವೃತ್ತ) ರಾಜೇಂದರ್ ಸಾಚಾರ್ ನೇತೃತ್ವದ ಉನ್ನತ ಮಟ್ಟದ ಸಮಿತಿ ಶಿಫಾರಸುಗಳು ಮತ್ತು ವಕ್ಫ್ ಮತ್ತು ಕೇಂದ್ರ ವಕ್ಫ್ ಮಂಡಳಿಗೆ ಸಂಬಂಧಿಸಿದ ಜಂಟಿ ಸಂಸದೀಯ ಸಮಿತಿಯ ವರದಿಗಳ ಆಧಾರದಲ್ಲಿ ಮತ್ತು ಸಂಬಂಧಿಸಿದ ಪಾಲುದಾರರೊಂದಿಗೆ ವಿಸ್ತೃತ ಚರ್ಚೆ ನಡೆಸಿದ ನಂತರ 2013ರಲ್ಲಿ ಕಾಯ್ದೆಗೆ ತಿದ್ದುಪಡಿ ತರಲಾಯಿತು.

ಹೊಸ ಮಸೂದೆ ಏಕೆ?

‘ರಾಜ್ಯ ವಕ್ಫ್ ಮಂಡಳಿಗಳ ಅಧಿಕಾರ, ನೋಂದಣಿ ಮತ್ತು ವಕ್ಫ್ ಆಸ್ತಿಗಳ ಸರ್ವೆ, ಒತ್ತುವರಿ ತೆರವು ಮತ್ತು ವಕ್ಫ್ ವ್ಯಾಖ್ಯಾನ ಸೇರಿದಂತೆ ಹಲವು ವಿಚಾರಗಳಿಗೆ ಸಂಬಂಧಿಸಿದಂತೆ ಕಾಯ್ದೆಯನ್ನು ಇನ್ನಷ್ಟು ಸುಧಾರಿಸುವ ಅಗತ್ಯವಿದೆ ಎಂಬ ಅಭಿಪ್ರಾಯ ವ್ಯಕ್ತವಾದ ಕಾರಣ, ವಕ್ಫ್ ಆಸ್ತಿಗಳ ನಿರ್ವಹಣೆ, ಆಡಳಿತದಲ್ಲಿ ಇನ್ನಷ್ಟು ಕಾರ್ಯ ದಕ್ಷತೆ ತರಲು, ಇರುವ ನ್ಯೂನತೆಗಳನ್ನು ಸರಿಪಡಿಸುವ ಉದ್ದೇಶದೊಂದಿಗೆ ಕಾಯ್ದೆಗೆ ತಿದ್ದುಪಡಿ ಮಾಡಿ ಸಂಸತ್ತಿನಲ್ಲಿ ಮಸೂದೆಯನ್ನು ಮಂಡಿಸಲಾಗಿದೆ’ ಎಂದು ಕೇಂದ್ರ ಸರ್ಕಾರ ಹೇಳಿದೆ.

ಮಸೂದೆ ಏನು, ಎತ್ತ?

- ತಿದ್ದುಪಡಿ ಮಸೂದೆಯು 1995ರ ವಕ್ಫ್ ಕಾಯ್ದೆಯನ್ನು ‘ಏಕೀಕೃತ ವಕ್ಫ್ ನಿರ್ವಹಣೆ, ಮೌಲ್ಯವರ್ಧನೆ, ಕಾರ್ಯದಕ್ಷತೆ ಮತ್ತು ಅಭಿವೃದ್ಧಿ ಕಾಯ್ದೆ–1995’ ಎಂದು ಮರು ನಾಮಕಾರಣ ಮಾಡುತ್ತದೆ
- ‘ವಕ್ಫ್’ ಪದವನ್ನು ಸ್ಪಷ್ಟವಾಗಿ ವ್ಯಾಖ್ಯಾನಿಸುತ್ತದೆ. ಅದರಂತೆ, ಕನಿಷ್ಠ ಐದು ವರ್ಷಗಳಿಂದ ಇಸ್ಲಾಂ ಧರ್ಮವನ್ನು ಅನುಸರಿಸುತ್ತಿರುವ ವ್ಯಕ್ತಿ ತನ್ನ ಒಡೆತನದಲ್ಲಿರುವ ಆಸ್ತಿಯನ್ನು ವಕ್ಫ್‌ಗೆ ನೀಡಬಹುದು
- ದಾನ ನೀಡುವ ಕುಟುಂಬದೊಂದಿಗೆ ದತ್ತಿ ಒಪ್ಪಂದ (ವಕ್ಫ್–ಅಲಲ್–ಔಲಾದ್) ಮಾಡಿಕೊಳ್ಳುವಾಗ ಮಹಿಳೆಯರಿಗೆ ಪಿತ್ರಾರ್ಜಿತವಾಗಿ ಸಿಗುವ ಹಕ್ಕುಗಳನ್ನು ನಿರಾಕರಿಸುತ್ತಿಲ್ಲ ಎಂಬುದನ್ನು ಖಾತ್ರಿಪಡಿಸುತ್ತದೆ
- ವಕ್ಫ್ ಆಸ್ತಿಗಳನ್ನು ಸರ್ವೆ ಮಾಡಲು ಸರ್ವೆ ಆಯುಕ್ತರ ಬದಲು ಜಿಲ್ಲಾಧಿಕಾರಿ ಅವರಿಗೆ ಅಧಿಕಾರ ನೀಡುತ್ತದೆ
- ಮಹಿಳೆಯರು ಮತ್ತು ಮುಸ್ಲಿಮೇತರರನ್ನು ಒಳಗೊಂಡ ಕೇಂದ್ರ ವಕ್ಫ್ ಮಂಡಳಿ ಮತ್ತು ರಾಜ್ಯ ವಕ್ಫ್ ಮಂಡಳಿಗಳ ರಚನೆಗೆ ಅವಕಾಶ ಕಲ್ಪಿಸುತ್ತದೆ
- ಬೊಹರಾ ಮತ್ತು ಆಗಾಖಾನಿ ಸಮುದಾಯದವರಿಗೆ ಪ್ರತ್ಯೇಕ ವಕ್ಫ್ ಮಂಡಳಿ ರಚಿಸುವುದಕ್ಕೆ ಅವಕಾಶ ಕೊಡುತ್ತದೆ
- ಶಿಯಾ, ಸುನ್ನಿ, ಬೊಹರಾ, ಆಗಾಖಾನಿ ಮತ್ತು ಮುಸ್ಲಿಂ ಸಮುದಾಯಗಳಲ್ಲಿರುವ ಇತರ ಹಿಂದುಳಿದ ವರ್ಗಗಳಿಗೆ ಪ್ರಾತಿನಿಧ್ಯ ನೀಡುತ್ತದೆ
- ವಕ್ಫ್ ಆಸ್ತಿಗಳ ನೋಂದಣಿಗೆ ಕೇಂದ್ರೀಕೃತ ಪೋರ್ಟಲ್ ಮತ್ತು ಡಾಟಾಬೇಸ್ ವ್ಯವಸ್ಥೆ ರೂಪಿಸುತ್ತದೆ
- ಆಸ್ತಿ ಹಕ್ಕು ಬದಲಾವಣೆಗೆ ಕಂದಾಯ ಕಾನೂನುಗಳ ಅಡಿಯಲ್ಲಿ ವಿಸ್ತೃತ ಕಾರ್ಯವಿಧಾನವನ್ನು ಅನುಸರಿಸಲಾಗುತ್ತದೆ. ಯಾವುದೇ ಆಸ್ತಿಯನ್ನು ವಕ್ಫ್ ಆಸ್ತಿ ಎಂದು ದಾಖಲು ಮಾಡುವುದಕ್ಕೂ ಮೊದಲು ಸಂಬಂಧಿಸಿದ ಎಲ್ಲರಿಗೂ ನೋಟಿಸ್ ನೀಡಲಾಗುತ್ತದೆ.
- ನಿರ್ದಿಷ್ಟ ಆಸ್ತಿಯು ವಕ್ಫ್ ಆಸ್ತಿಯೇ ಎಂಬುದನ್ನು ನಿರ್ಧರಿಸಲು ವಕ್ಫ್ ಮಂಡಳಿಗೆ ಅಧಿಕಾರ ನೀಡುವ ಸಂಬಂಧಿಸಿದ ಸೆಕ್ಷನ್ 40 ಅನ್ನು ತೆಗೆದು ಹಾಕುತ್ತದೆ
- ಇಬ್ಬರು ಸದಸ್ಯರ ನ್ಯಾಯಮಂಡಳಿಯ ಸ್ವರೂಪದಲ್ಲಿ ಸುಧಾರಣೆ ತರುತ್ತದೆ. ನ್ಯಾಯಮಂಡಳಿಯ ಆದೇಶದ ವಿರುದ್ಧ 90 ದಿನಗಳ ಒಳಗೆ ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲು ಅವಕಾಶ ನೀಡುತ್ತದೆ

1995	2013	2024	44
ವಕ್ಫ್ ಕಾಯ್ದೆ ಜಾರಿಯಾದ ವರ್ಷ	ಕಾಯ್ದೆಗೆ ಮೊದಲ ಬಾರಿಗೆ ತಿದ್ದುಪಡಿ	ಎರಡನೇ ತಿದ್ದುಪಡಿ ಮಸೂದೆ ಮಂಡನೆ	ಹೊಸ ಮಸೂದೆಯಲ್ಲಿರುವ ತಿದ್ದುಪಡಿಗಳು

ಆಸ್ತಿ ಮಾಲೀಕತ್ವ: ಡಿ.ಸಿ ತನಿಖೆ

1995ರ ಕಾಯ್ದೆಯ 3ನೇ ಸೆಕ್ಷನ್‌ಗೆ ಮೂರು ಹೊಸ ಉಪ ಸೆಕ್ಷನ್‌ಗಳನ್ನು (3ಎ, 3ಬಿ, 3ಸಿ) ಮಸೂದೆಯಲ್ಲಿ ಸೇರಿಸಲಾಗಿದೆ.

3ಬಿ ಪ್ರಕಾರ, ಎಲ್ಲ ವಕ್ಫ್ ಆಸ್ತಿಯನ್ನು ಈ ಕಾಯ್ದೆಯ ಅಡಿಯಲ್ಲಿ ನೋಂದಣಿ ಮಾಡಬೇಕು. 2024ರ ತಿದ್ದುಪಡಿ ಕಾಯ್ದೆ ಜಾರಿಗೆ ಬರುವುದಕ್ಕೂ ಮೊದಲು ನೋಂದಣಿ ಮಾಡಿಕೊಂಡಿರುವ ಆಸ್ತಿಯ ವಿವರಗಳನ್ನು ಆರು ತಿಂಗಳ ಒಳಗಾಗಿ ಪೋರ್ಟಲ್, ಡಾಟಾಬೇಸ್‌ಗೆ ಅಪ್‌ಲೋಡ್ ಮಾಡಬೇಕು.

3ಸಿ ಪ್ರಕಾರ, ಈ ಕಾಯ್ದೆ ಜಾರಿಗೆ ಬರುವುದಕ್ಕೆ ಮುನ್ನ ಅಥವಾ ನಂತರ ವಕ್ಫ್ ಆಸ್ತಿ ಎಂದು ಗುರುತಿಸಲಾದ ಅಥವಾ ಘೋಷಿಸಲಾದ ಯಾವುದೇ ಸರ್ಕಾರಿ ಆಸ್ತಿಯನ್ನು ವಕ್ಫ್ ಆಸ್ತಿ ಎಂದು ಪರಿಗಣಿಸುವಂತಿಲ್ಲ. ಒಂದು ವೇಳೆ, ನಿರ್ದಿಷ್ಟ ಆಸ್ತಿ ಸರ್ಕಾರಕ್ಕೆ ಸೇರಿದೆಯೇ ಎಂಬ ಪ್ರಶ್ನೆ ಬಂದರೆ ಈ ವಿಚಾರವನ್ನು ಜಿಲ್ಲಾಧಿಕಾರಿಯವರ ಗಮನಕ್ಕೆ ತರಬೇಕು. ಅವರು ಈ ಬಗ್ಗೆ ತನಿಖೆ ನಡೆಸಿ ಅದು ಸರ್ಕಾರಿ ಆಸ್ತಿಯೇ ಅಲ್ಲವೇ ಎಂಬುದನ್ನು ಪತ್ತೆ ಹಚ್ಚಿ ಸರ್ಕಾರಕ್ಕೆ ವರದಿ ಸಲ್ಲಿಸಬೇಕು. ಅವರು ವರದಿ ಸಲ್ಲಿಸುವವರೆಗೂ ಆ ಆಸ್ತಿಯನ್ನು ವಕ್ಫ್ ಆಸ್ತಿ ಎಂದು ಗುರುತಿಸುವಂತಿಲ್ಲ.

ಸರ್ವೆ ಆಯುಕ್ತರ ಬದಲು ಜಿಲ್ಲಾಧಿಕಾರಿ

ಮೂಲ ಕಾಯ್ದೆಯ ಸೆಕ್ಷನ್ 4ರ ಪ್ರಕಾರ ರಾಜ್ಯದಲ್ಲಿರುವ ವಕ್ಫ್ ಆಸ್ತಿಗಳ ಸರ್ವೆ ನಡೆಸಲು ರಾಜ್ಯ ಸರ್ಕಾರ ಸರ್ವೆ ಆಯುಕ್ತರನ್ನು ನೇಮಕ ಮಾಡಬೇಕು. ಆದರೆ, ಈಗಿನ ತಿದ್ದುಪಡಿ ಮಸೂದೆಯಲ್ಲಿ ಈ ಜವಾಬ್ದಾರಿಯನ್ನು ಸರ್ವೆ ಆಯುಕ್ತರ ಬದಲು ಜಿಲ್ಲಾಧಿಕಾರಿಗೆ ನೀಡಲಾಗಿದೆ. ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಯವರ ಮೇಲ್ವಿಚಾರಣೆಯಲ್ಲಿ ರಾಜ್ಯದ ಕಂದಾಯ ಕಾನೂನುಗಳ ಅನುಸಾರ ಆಸ್ತಿಗಳ ಸರ್ವೆ ಕಾರ್ಯ ನಡೆಯಬೇಕು. ನಂತರ ಅವರು ಸರ್ಕಾರಕ್ಕೆ ವರದಿ ಸಲ್ಲಿಸಬೇಕು.

ಸೆಕ್ಷನ್ 5ರ 2ಎ ಮತ್ತು 3ಬಿ ಉಪ ಸೆಕ್ಷನ್‌ಗಳನ್ನು ಸೇರಿಸಲಾಗಿದ್ದು, ಆಸ್ತಿಯ ಬಗ್ಗೆ ಗೆಜೆಟ್ ಅಧಿಸೂಚನೆ ಹೊರಡಿಸಿದ 15 ದಿನಗಳ ಒಳಗಾಗಿ ಕಂದಾಯ ಇಲಾಖೆಯ ಅಧಿಕಾರಿಗಳು ಆಸ್ತಿಯ ವಿವರಗಳನ್ನು ಪೋರ್ಟಲ್ ಮತ್ತು ಡಾಟಾಬೇಸ್‌ಗೆ ಅಪ್‌ಲೋಡ್ ಮಾಡಬೇಕು. ಜಮೀನಿನ ದಾಖಲೆಗಳ ಹಕ್ಕು ಬದಲಾವಣೆಗಳ ಬಗ್ಗೆ ನಿರ್ಧರಿಸುವುದಕ್ಕೂ 90 ದಿನಗಳ ಮೊದಲು ಈ ಬಗ್ಗೆ ಸಾರ್ವಜನಿಕ ನೋಟಿಸ್ ನೀಡಬೇಕು.



ಇತರೆ ಕೆಲವು ತಿದ್ದುಪಡಿಗಳು

- ಸೆಕ್ಷನ್ 55ಎಗೆ ತಿದ್ದುಪಡಿ ಮಾಡಲಾಗಿದ್ದು, ಇದು ವಕ್ಫ್ ಆಸ್ತಿಗಳ ಮೇಲಿನ ಅನಧಿಕೃತ ಸ್ವಾಧೀನದಾರರನ್ನು ತೆರವುಗೊಳಿಸುವುದಕ್ಕೆ ಸಂಬಂಧಿಸಿದೆ. ಹಿಂದಿನ ಕಾಯ್ದೆಯಲ್ಲಿರುವ ‘ನ್ಯಾಯಮಂಡಳಿಯ ನಿರ್ಣಯವೇ ಅಂತಿಮ’ ಎನ್ನುವುದನ್ನು ಕೈಬಿಡಲಾಗಿದೆ
- ಸೆಕ್ಷನ್ 64ಕ್ಕೆ ತಿದ್ದುಪಡಿ ತರಲಾಗಿದೆ. ವಕ್ಫ್‌ನ ಮುತವಲ್ಲಿ ತಮ್ಮ ನಿರ್ದಿಷ್ಟ ಕಾರ್ಯನಿರ್ವಹಣೆಯಲ್ಲಿ (ಲೆಕ್ಕಪತ್ರ ನಿರ್ವಹಣೆ ಸೇರಿದಂತೆ) ವಿಫಲವಾದರೆ, ಅವರನ್ನು ಹುದ್ದೆಯಿಂದ ತೆಗೆಯಲು ಈ ಹಿಂದೆ ಎರಡು ವರ್ಷಗಳ ಅವಧಿ ಪರಿಗಣಿಸಲಾಗುತ್ತಿತ್ತು. ಮಸೂದೆಯಲ್ಲಿ ಅದನ್ನು ಒಂದು ವರ್ಷಕ್ಕೆ ಇಳಿಸಲಾಗಿದೆ. ಜತೆಗೆ ಮುತವಲ್ಲಿ ಕಾನೂನುಬಾಹಿರ ಎಂದು ಘೋಷಿತವಾದ ಸಂಘಟನೆಯ ಜತೆಗೆ ಸಂಪರ್ಕದಲ್ಲಿದ್ದರೆ, ಅವರ ವಿರುದ್ಧ ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆ 1967ರ ಅಡಿ ಕ್ರಮ ಜರುಗಿಸಲೂ ಅವಕಾಶ ಕಲ್ಪಿಸಲಾಗಿದೆ
- ವಕ್ಫ್ ಮಂಡಳಿಯ ಹಣಕಾಸು ವ್ಯವಹಾರ ಮತ್ತಿತರ ಮಾಹಿತಿಯನ್ನು ಸರ್ಕಾರಕ್ಕೆ ತಿಳಿಸಲು ಕಾಯ್ದೆಯಲ್ಲಿ ಕಾಲಮಿತಿ ನಿಗದಿಪಡಿಸಿರಲಿಲ್ಲ. ಸೆಕ್ಷನ್ 65ಕ್ಕೆ ತಿದ್ದುಪಡಿ ತಂದು ಅದಕ್ಕೆ ಕಾಲಮಿತಿ ನಿಗದಿಪಡಿಸಲಾಗಿದ್ದು, ಹಣಕಾಸು ವರ್ಷ ಮುಗಿದ ಆರು ತಿಂಗಳ ಒಳಗೆ ಮಾಹಿತಿ ನೀಡಬೇಕು
- ವಕ್ಫ್ ಮಂಡಳಿಯ ಅಧಿಕಾರ ನಡೆಸುವುದಕ್ಕೆ ಸಂಬಂಧಿಸಿದಂತೆ ಸೆಕ್ಷನ್ 69ರ ಉಪಸೆಕ್ಷನ್ (4)ಕ್ಕೆ ತಿದ್ದುಪಡಿ ತರಲಾಗಿದ್ದು, ಸರ್ಕಾರದ ನಿಯಮಾವಳಿಯಂತೆ, ಬಾಧಿತ ವ್ಯಕ್ತಿಯಿಂದ ಮತ್ತು ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಆಹ್ವಾನಿಸಿ ಲಿಖಿತ ನೋಟಿಸ್ ಪ್ರಕಟಿಸಬೇಕು
- ಸೆಕ್ಷನ್ 72ರ ಪ್ರಕಾರ, ಮಂಡಳಿಯಲ್ಲಿ ಸೇವೆ ಸಲ್ಲಿಸುವವರಿಗೆ ವಕ್ಫ್‌ನ ವಾರ್ಷಿಕ ಆದಾಯದ ಪೈಕಿ ಶೇ 7ರಷ್ಟನ್ನು ಭತ್ಯೆಯಾಗಿ ಪಾವತಿಸಬೇಕು ಎಂದು ಇತ್ತು. ತಿದ್ದುಪಡಿ ಮಸೂದೆಯಲ್ಲಿ ಅದನ್ನು ಶೇ 5ಕ್ಕೆ ಇಳಿಸಲಾಗಿದೆ. ಜತೆಗೆ, ಆದಾಯ ನಿಷ್ಕರ್ಷೆಯಲ್ಲಿ ಮುತವಲ್ಲಿ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿ ನಡುವೆ ಭಿನ್ನಮತ ತಲೆದೋರಿದರೆ, ಮಂಡಳಿಯ ನಿರ್ಣಯವೇ ಅಂತಿಮ ಎಂದು ಕಾಯ್ದೆಯಲ್ಲಿ ಇತ್ತು. ‘ಮಂಡಳಿಯ ನಿರ್ಣಯವೇ ಅಂತಿಮ’ ಎನ್ನುವುದನ್ನು ಮಸೂದೆಯಲ್ಲಿ ತೆಗೆದುಹಾಕಲಾಗಿದೆ
- ಸೆಕ್ಷನ್ 104 ಅನ್ನು ಸಂಪೂರ್ಣವಾಗಿ ತೆಗೆದುಹಾಕಲಾಗಿದೆ. ಇಸ್ಲಾಂ ಅನ್ನು ಆಚರಿಸದೇ ಇರುವವರು ದಾನವಾಗಿ ನೀಡಿರುವ ಚರ ಮತ್ತು ಸ್ಥಿರಾಸ್ತಿಗಳಿಗೂ ವಕ್ಫ್ ಕಾಯ್ದೆ ಅನ್ವಯವಾಗುತ್ತದೆ ಎಂದು ಹಿಂದಿನ ಕಾಯ್ದೆಯಲ್ಲಿ ಇತ್ತು
- ಸೆಕ್ಷನ್ 108ಕ್ಕೆ ಉಪಸೆಕ್ಷನ್ ಬಿ ಸೇರಿಸಲಾಗಿದೆ (108ಬಿ). ಇದರ ಅನ್ವಯ, ಗೆಜೆಟ್ ಅಧಿಸೂಚನೆ ಹೊರಡಿಸುವ ಮೂಲಕ ಕೇಂದ್ರ ಸರ್ಕಾರ ಕಾಯ್ದೆ ಜಾರಿ ಸಂಬಂಧದ ನಿಯಮ ರೂಪಿಸಬಹುದು. ಜತೆಗೆ, ನೋಂದಣಿ, ಲೆಕ್ಕಪತ್ರ ಮತ್ತಿತರೆ ವಕ್ಫ್ ಆಸ್ತಿ ನಿರ್ವಹಣೆಗೆ ಸಂಬಂಧಿಸಿದಂತೆ ಹಾಗೂ ವಿಧವೆಯರು, ವಿಚ್ಛೇದಿತರು, ಅನಾಥೆಯರಿಗೆ ನೀಡಲಾಗುವ ಹಣದ ಸಂಬಂಧ ಕೇಂದ್ರ ಸರ್ಕಾರ ನಿಯಮ ರೂಪಿಸಬಹುದು
- ಸೆಕ್ಷನ್ 109, ಉಪಸೆಕ್ಷನ್ 2ರಲ್ಲಿ ವಕ್ಫ್ ಮಂಡಳಿ ಸಭೆ ಸೇರುವ ಸ್ಥಳ ಮತ್ತು ಸಮಯ ಹಾಗೂ ಮಂಡಳಿಯ ಅಧ್ಯಕ್ಷರಿಗೆ ಹಾಗೂ ಸದಸ್ಯರಿಗೆ ಭತ್ಯೆ ನೀಡುವ ಸಂಬಂಧದ ಕಾಯ್ದೆಯ ನಿಯಮಗಳನ್ನು ಮಸೂದೆಯು ತೆಗೆದುಹಾಕಿದೆ

ವಕ್ಫ್ ಆಸ್ತಿ ಲೆಕ್ಕಾಚಾರ

8.72 ಲಕ್ಷ	8 ಲಕ್ಷ ಎಕರೆ	₹1 ಲಕ್ಷ ಕೋಟಿ	32
ಭಾರತದಲ್ಲಿರುವ ಒಟ್ಟು ವಕ್ಫ್ ಆಸ್ತಿಗಳು	ವಕ್ಫ್ ಆಸ್ತಿ ವಿಸ್ತೀರ್ಣ	ಆಸ್ತಿಯ ಅಂದಾಜು ಮೌಲ್ಯ	ದೇಶದಲ್ಲಿರುವ ವಕ್ಫ್ ಮಂಡಳಿಗಳು

ಆಧಾರ: ಲೋಕಸಭೆಯಲ್ಲಿ ಮಂಡಿಸಲಾದ ಮಸೂದೆ, ಪಿಟಿಐ

ಕೇಂದ್ರ ಸರ್ಕಾರದಿಂದ ಆಡಿಟ್

ವಕ್ಫ್ ಮಂಡಳಿಗಳ ಖಾತೆಗಳ ಲೆಕ್ಕಪರಿಶೋಧನೆಗೆ (ಆಡಿಟ್) ಸಂಬಂಧಿಸಿದ ಸೆಕ್ಷನ್ 47ಕ್ಕೆ ಹೊಸ ಮಸೂದೆಯಲ್ಲಿ ತಿದ್ದುಪಡಿ ತರಲಾಗಿದ್ದು, ರಾಜ್ಯ ಸರ್ಕಾರ ಸಿದ್ಧಪಡಿಸುವ ಲೆಕ್ಕ ಪರಿಶೋಧಕರ ಸಮಿತಿಯು ಲೆಕ್ಕ ಪರಿಶೋಧನೆ ಮಾಡಬೇಕು. ಮೂಲ ಕಾಯ್ದೆಯಲ್ಲಿ, ವಕ್ಫ್ ಮಂಡಳಿ ನೇಮಿಸುವ ಲೆಕ್ಕಪರಿಶೋಧಕರು ಲೆಕ್ಕಪರಿಶೋಧನೆ ಮಾಡಲು ಅವಕಾಶ ಇತ್ತು. ಇದರೊಂದಿಗೆ ರಾಜ್ಯ ಸರ್ಕಾರವೂ ಲೆಕ್ಕ ಪರಿಶೋಧನೆ ಮಾಡಬಹುದಿತ್ತು.



ಸೆಕ್ಷನ್ 48ಕ್ಕೆ ಮಾಡಿರುವ ತಿದ್ದುಪಡಿಯು ಲೆಕ್ಕಪರಿಶೋಧನೆ ನಡೆಸಲು ಕೇಂದ್ರ ಸರ್ಕಾರಕ್ಕೂ ಅವಕಾಶ ನೀಡುತ್ತದೆ. ಕೇಂದ್ರ ಸರ್ಕಾರವು ಯಾವುದೇ ಸಂದರ್ಭದಲ್ಲಿ ಮಹಾಲೇಖಪಾಲರು ನೇಮಿಸುವ ಲೆಕ್ಕಪರಿಶೋಧಕರಿಂದ ಲೆಕ್ಕ ಪರಿಶೋಧನೆ ಮಾಡಲು ಆದೇಶ ನೀಡಬಹುದು. ಲೆಕ್ಕಪರಿಶೋಧನಾ ವರದಿಯನ್ನು ಯಾವುದೇ ರೂಪದಲ್ಲಿ ಪ್ರಕಟ ಮಾಡಲೂ ಕೇಂದ್ರ ಆದೇಶಿಸಬಹುದು.

ಮಹಿಳೆ, ಮುಸ್ಲಿಮೇತರರಿಗೆ ಸ್ಥಾನ

ಮಸೂದೆಯಲ್ಲಿ ಕಾಯ್ದೆಯ 9ನೇ ಸೆಕ್ಷನ್ನಿನ 2ನೇ ಉಪ ಸೆಕ್ಷನ್‌ಗೆ ತಿದ್ದುಪಡಿ ತರಲಾಗಿದ್ದು, ಅದರ ಪ್ರಕಾರ, ಕೇಂದ್ರ ವಕ್ಫ್ ಮಂಡಳಿಯನ್ನು ರಚಿಸುವಾಗ ಕೇಂದ್ರ ಸರ್ಕಾರ ನೇಮಕ ಮಾಡುವ ಸದಸ್ಯರಲ್ಲಿ ಇಬ್ಬರು ಮಹಿಳೆಯರು ಇರಬೇಕು. ಅದೇ ರೀತಿ, ಮುಸ್ಲಿಮೇತರ ಸಮುದಾಯದ ಇಬ್ಬರು ಸದಸ್ಯರನ್ನು ನೇಮಕ ಮಾಡಬೇಕು ಎಂದು ಹೇಳಿದೆ.

ಉಳಿದಂತೆ ಮಂಡಳಿಯ ಸ್ವರೂಪ ಮೂಲ ಕಾಯ್ದೆಯಲ್ಲಿ ನಿರೂಪಿಸಿದಂತೆಯೇ ಇದೆ.

ಸೆಕ್ಷನ್ 14, ರಾಜ್ಯ ವಕ್ಫ್ ಮಂಡಳಿ ರಚನೆಯ ಕುರಿತಾಗಿದ್ದು, ಹೊಸ ಮಸೂದೆಯಲ್ಲಿ ಉಪ ಸೆಕ್ಷನ್‌ಗಳಾದ 1, 1ಎ, 2, 3 ಮತ್ತು 4ಕ್ಕೆ ತಿದ್ದುಪಡಿ ಮಾಡಲಾಗಿದೆ.

ಇದರ ಪ್ರಕಾರ, ರಾಜ್ಯ ವಕ್ಫ್ ಮಂಡಳಿಗಳಿಗೆ ಇಬ್ಬರು ಮಹಿಳೆಯರು ಮತ್ತು ಇಬ್ಬರು ಮುಸ್ಲಿಮೇತರರನ್ನು ಸದಸ್ಯರನ್ನಾಗಿ ನೇಮಕ ಮಾಡಬೇಕು. ಶಿಯಾ, ಸುನ್ನಿ ಮತ್ತು ಮುಸ್ಲಿಂ ಸಮುದಾಯದ ಇತರ ಹಿಂದುಳಿದ ವರ್ಗಗಳಿಂದ ತಲಾ ಒಬ್ಬರನ್ನು ಸದಸ್ಯರನ್ನಾಗಿ ನೇಮಕ ಮಾಡಬೇಕು.

ಸಿನಿ ಬಿಟ್ಸ್

ಭಿನ್ನ ಪ್ರಯೋಗದ ‘ಪೌಡರ್’



‘ಪೌಡರ್’ ಸಿನಿಮಾ ಪೋಸ್ಟರ್

ಜನಾರ್ದನ್ ಚಿಕ್ಕಣ್ಣ ನಿರ್ದೇಶಿಸಿರುವ ದಿಗಂತ್ ಮುಖ್ಯಭೂಮಿಕೆಯಲ್ಲಿ ನಟಿಸಿರುವ ‘ಪೌಡರ್’ ಸಿನಿಮಾದ ಟ್ರೇಲರ್ ಬಿಡುಗಡೆಯಾಗಿದೆ. ಸಿನಿಮಾ ಆಗಸ್ಟ್ 23ರಂದು ತೆರೆಕಾಣುತ್ತಿದೆ.


‘ನಾನು ‘ಗುಲ್ಟು’ ಸಿನಿಮಾದ ಫ್ಯಾನ್. ಆ ಸಿನಿಮಾ ಹೊಸ ಅಲೆಯನ್ನೇ ಸೃಷ್ಟಿಸಿತ್ತು. ಇಂತಹ ಸಿನಿಮಾ ಮಾಡಿದ ನಿರ್ದೇಶಕರ ಜೊತೆ ಕೆಲಸ ಮಾಡುವ ಅವಕಾಶ ಸಿಕ್ಕಿದೆ. ಹಾಸ್ಯದ ಔತಣ ಈ ಸಿನಿಮಾದಲ್ಲಿದೆ’ ಎಂದರು ನಟ ದಿಗಂತ್.

‘ಪೌಡರ್ ಒಂದು ಪೂರ್ಣಪ್ರಮಾಣದ ಮನರಂಜನಾತ್ಮಕ ಸಿನಿಮಾ. ಇದರಲ್ಲಿ ಶೇ 90ರಷ್ಟು ಮನರಂಜನೆ ಹಾಗೂ ಶೇ 10ರಷ್ಟು ಪ್ರಯೋಗವಿದೆ. ಮೂಲಕಥೆಯನ್ನು ಮುಂಬೈನ ದೀಪಕ್ ವೆಂಕಟೇಶನ್ ಮಾಡಿದ್ದಾರೆ. ಮೊದಲ ಬಾರಿಗೆ ಹಾಸ್ಯ ಪ್ರಧಾನ ಜಾನರ್ ಸಿನಿಮಾವನ್ನು ನಿರ್ದೇಶಿಸುತ್ತಿದ್ದೇನೆ. ಕಾಮಿಡಿ ಎನ್ನುವುದು ಟೈಮಿಂಗ್ ಮೇಲೆ ನಿಂತಿರುತ್ತದೆ. ಇದನ್ನು ನಾವು ಸಾಧಿಸಿದ್ದೇವೆ ಎನ್ನುವ ಭರವಸೆ ಇದೆ’ ಎಂದಿದ್ದಾರೆ ಜನಾರ್ದನ್ ಚಿಕ್ಕಣ್ಣ. ಇಬ್ಬರು ಯುವಕರು ಒಂದು ನಿಗೂಢವಾದ ‘ಪೌಡರ್’ ಪ್ರಭಾವದಿಂದಾಗಿ ದಿಢೀರನೆ ಸಿರಿವಂತರಾಗಲು ಮಾಡುವ ಪ್ರಯತ್ನಗಳು, ಅವರಿಗೆ ಎದುರಾಗುವ ಸಮಸ್ಯೆಗಳು ಈ ಚಿತ್ರದ ಕಥಾಹಂದರ. ದಿಗಂತ್, ಧನ್ಯ ರಾಮ್‌ಕುಮಾರ್, ಶರ್ಮಿಳಾ ಮಾಂಡ್ರೆ, ಅನಿರುದ್ಧ್ ಆಚಾರ್ಯ, ರಂಗಾಯಣ ರಘು, ಗೋಪಾಲಕೃಷ್ಣ ದೇಶಪಾಂಡೆ, ರವಿಶಂಕರ್ ಗೌಡ ಮುಂತಾದವರು ತಾರಾಬಳಗದಲ್ಲಿದ್ದಾರೆ. ಕೆ.ಆರ್.ಜಿ. ಸ್ಟುಡಿಯೊಸ್ ಮತ್ತು ಟಿ.ವಿ.ಎಫ್ ಮೋಷನ್ ಪಿಕ್ಚರ್ಸ್ ಸಹಯೋಗದಲ್ಲಿ ಈ ಸಿನಿಮಾ ನಿರ್ಮಾಣವಾಗಿದೆ.

‘ಪೆಪೆ’ ಸಿನಿಮಾದಲ್ಲಿ ಜೇನು ಕುರುಬರ ಹಾಡು

‘ಒಂದು ಸರಳ ಪ್ರೇಮಕಥೆ’ ಸಿನಿಮಾ ಬಳಿಕ ನಟ ವಿನಯ್ ರಾಜ್‌ಕುಮಾರ್ ನಟನೆಯ ‘ಪೆಪೆ’ ಸಿನಿಮಾ ರಿಲೀಸ್‌ಗೆ ಸಜ್ಜಾಗುತ್ತಿದೆ. ಪ್ರಚಾರದ ಅಂಗವಾಗಿ ಚಿತ್ರತಂಡ ‘ಪೆಪೆ ಪ್ರಿಸೆಟ್’ ಹೆಸರಿನಲ್ಲಿ ಹಾಡೊಂದನ್ನು ಬಿಡುಗಡೆ ಮಾಡಿದ್ದು, ಜೇನು ಕುರುಬರು ಧ್ವನಿಯಾಗಿರುವುದು ವಿಶೇಷ.

ಪಿಆರ್‌ಕೆ ಆಡಿಯೊದಲ್ಲಿ ಬಿಡುಗಡೆಯಾಗಿರುವ ಈ ಹಾಡು ಜೇನು ಕುರುಬ ಜನಾಂಗದ ಆಚಾರ ವಿಚಾರ ತೆರೆದಿಟ್ಟಿದೆ. ಗೀತೆಗೆ ಗಿರಿಜನ ಸಮಗ್ರ ಅಭಿವೃದ್ದಿ ಕಲಾಸಂಸ್ಥೆ ಸದಸ್ಯರು ಹಾಗೂ ಜೆ.ಜಿ.ಕುಮಾರ ಧ್ವನಿಯಾಗಿದ್ದಾರೆ. ಪೂರ್ಣಚಂದ್ರ ತೇಜಸ್ವಿ ಸಂಗೀತ ಸಂಯೋಜನೆ ಈ ಹಾಡಿಗಿದೆ. ಶ್ರೀಲೇಶ್ ಎಸ್. ನಾಯರ್ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಈ ಸಿನಿಮಾದಲ್ಲಿ ನಾಯಕಿಯಾಗಿ ಕಾಜಲ್ ಕುಂದರ್ ನಟಿಸಿದ್ದು, ಮಯೂರ್ ಪಟೇಲ್, ಯಶ್ ಶೆಟ್ಟಿ, ಬಲ ರಾಜವಾಡಿ, ಮೇದಿನಿ ಕೆಳಮನೆ, ಅರುಣಾ ಬಾಲರಾಜ್, ನವೀನ್ ಡಿ. ಪಡೀಲ್ ಸೇರಿದಂತೆ ದೊಡ್ಡ ತಾರಾಬಳಗವಿದೆ. ‘ಪೆಪೆ’ ಚಿತ್ರಕ್ಕೆ ಅಭಿಷೇಕ್ ಜಿ. ಕಾಸರಗೋಡು ಛಾಯಾಚಿತ್ರಗ್ರಹಣವಿದೆ. ರವಿವರ್ಮ, ಚೇತನ್ ಡಿಸೋಜಾ, ಡಿಫ್ರೆಂಟ್ ಡ್ಯಾನಿ, ನರಸಿಂಹ ಅವರ ತಂಡ ಚಿತ್ರದ ಸಾಹಸ ದೃಶ್ಯಗಳನ್ನು ನಿರ್ದೇಶನ ಮಾಡಿದೆ. ಉದಯ್ ಶಂಕರ್. ಎಸ್ ಹಾಗೂ ಬಿ.ಎಂ.ಶ್ರೀರಾಮ್ ಚಿತ್ರಕ್ಕೆ ಬಂಡವಾಳ ಹೂಡಿದ್ದು ಸದ್ಯದಲ್ಲೇ ಚಿತ್ರ ತೆರೆಗೆ ಬರಲಿದೆ ಎಂದಿದೆ ಚಿತ್ರತಂಡ.




ವಿನಯ್ ರಾಜ್‌ಕುಮಾರ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ನುಡಿ ಬೆಳಗು





ಪ್ರೊ.ಎಂ. ಕೃಷ್ಣೇಗೌಡ

ಲೋಕನಿಂದಿತರಾಗಿ ಬದುಕುವುದು ಎಷ್ಟು ಅವಮಾನ ಅಲ್ಲವಾ?

ಅಶೋಕ ವನದ ಶಿಂಶುಪಾ ವೃಕ್ಷದ ಕೆಳಗೆ ಕುಳಿತಿದ್ದಾಳೆ ಶೋಕಾಕುಲಿತೆ ಸೀತೆ. ಆಗ ಅಲ್ಲಿಗೆ ಬಂದಳು ವಿಭೀಷಣನ ಹೆಂಡತಿ ಸರಮಾದೇವಿ. ಸೀತೆಯೊಂದಿಗೆ ಮಾತಾಡುವುದಕ್ಕೆಂದೇ ಬಂದಿದ್ದಳು ಅವಳು. ಆದರೆ ಸೀತೆಗೆ ಯಾರೊಂದಿಗೆ ಮಾತಾಡುವುದಕ್ಕೂ ಇಷ್ಟವಿಲ್ಲ. ಸರಮೆ, ‘ನಾನು ನಿನ್ನೊಂದಿಗೆ ಮಾತಾಡಬೇಕು ಸೀತೆ’ ಅಂದಾಗ ಸೀತೆ ‘ನಾನು ದೌರ್ಭಾಗ್ಯೆ, ದುಃಖಿ, ಪೂಜ್ಯ ಪತಿಯನ್ನಗಲಿರುವವಳು, ನನ್ನೊಂದಿಗೆ ಮಾತಾಡುವುದಕ್ಕೇನಿದೆ?’ ಅಂದಳು. ಆಗ ಸರಮೆ, ‘ಸೀತೆ, ನೀನು ದುಃಖಿ ನಿಜ, ನಿನಗಿಂತಲೂ ಹೆಚ್ಚು ದುಃಖಿತಳು ನಾನು. ದಯವಿಟ್ಟು ಅವಕಾಶ ಕೊಡು, ನಾನು ನಿನ್ನೊಂದಿಗೆ ಮಾತಾಡಬೇಕು’ ಸೀತೆಗೆ ಅಚ್ಚರಿ. ರಾವಣನ ನಾದಿನಿ ನನಗಿಂತಲೂ ಹೆಚ್ಚು ದುಃಖಿತಳೆ?

ಆಗ ಸೀತೆಯ ಮುಖಭಾವವನ್ನು ಗ್ರಹಿಸಿ ಸರಮೆಯೇ ಹೇಳಿದಳು- ‘ಹೌದು ಸೀತೆ, ನೀನು ನನ್ನ ಭಾವ ರಾವಣನಿಂದ ಅಪಹೃತಳಾಗಿ, ನಮ್ಮ ರಾಕ್ಷಸರ ಹಿಂಸೆಯನ್ನೂ ಅನುಭವಿಸುತ್ತ ದುಃಖಿತಳಾಗಿದ್ದೀಯೆ. ಆದರೆ ನಿನಗೆ ಲೋಕಾನುಕಂಪೆ ಎಂಬುದೊಂದಿದೆ. ನಿನ್ನ ಪರಿಸ್ಥಿತಿಯನ್ನು ಕಂಡವರು, ಕೇಳಿದವರು ನಿನಗಾಗಿ ಮರುಗುತ್ತಾರೆ. ಆದರೆ ನಮ್ಮ ಪರಿಸ್ಥಿತಿ ನೋಡು, ನಾವು ಲೋಕ ನಿಂದಿತರು. ನಮ್ಮ ಭಾವ ಅವರ ವಯಸ್ಸಿಗೆ, ವಿದ್ಯೆಗೆ, ಘನತೆಗೆ, ಪೌರುಷಕ್ಕೆ ತಕ್ಕುದಲ್ಲದ ನೀಚ ಕೆಲಸ ಮಾಡಿದ್ದಾರೆ. ಅದು ನಮ್ಮ ಕುಟುಂಬಕ್ಕೊಂದು ಅಸಹ್ಯ ಕಳಂಕ. ಅವಮಾನ. ಲಂಕೆಯ ಜನರೇ ನಮ್ಮನ್ನು ಛೀ ಥೂ ಅನ್ನುತ್ತಿದ್ದಾರೆ. ದುಃಖದಲ್ಲಿದ್ದಾಗಲೂ ಲೋಕದ ಅನುಕಂಪೆಯಿದ್ದರೆ ಅದೊಂದು ಸಮಾಧಾನ. ಆದರೆ ಎಷ್ಟೇ ಸಿರಿ, ಸಂಪತ್ತು ಅಧಿಕಾರಗಳಿದ್ದರೂ ಲೋಕ ಅಸಹ್ಯ ಪಡುವಂತಿದ್ದರೆ ಅಂಥ ಮನೆಯವರಾಗಿರುವುದು ತುಂಬಾ ಅವಮಾನ. ರಾವಣನ ಅರಮನೆಯ ರಾಣೀವಾಸವೆಲ್ಲವೂ ಇಂಥದೊಂದು ಅವಮಾನದಲ್ಲಿ ಬೇಯುತ್ತಿದ್ದೇವೆ ಸೀತೆ’ ಎಂದು ಗಳಗಳನೆ ಅತ್ತುಬಿಟ್ಟಳು ಸರಮೆ.

ದುಃಖಿಗಳಿಗೆ ಮಾತ್ರ ಇನ್ನೊಬ್ಬ ದುಃಖಿಯ ಬೇಗುದಿ ತಾಕುತ್ತದೆ. ಹಾಗಾಗಿ ಸೀತೆಯೇ ಈಗ ಸರಮೆಯನ್ನು ಸಮಾಧಾನಮಾಡಿ ಸಂತೈಸುತ್ತಾಳೆ. ಆಗ ಸರಮೆ ಇನ್ನೊಂದು ಮಾತು ಹೇಳುತ್ತಾಳೆ- ‘ಸೀತೆ ನನ್ನ ಮಗಳೊಬ್ಬಳಿದ್ದಾಳೆ ಅನಲೆ. ಒಂಬತ್ತು ವರ್ಷದ ಮುಗ್ಧ ಮಗು. ಅವಳನ್ನು ಕಂಡರೆ ನನ್ನ ಭಾವನಿಗೆ ಪ್ರಾಣ. ಅವಳಿಗೂ ದೊಡ್ಡಪ್ಪನಲ್ಲಿ ತುಂಬಾ ಸಲಿಗೆ. ಆದರೆ ಮೊನ್ನೆ ಅವಳು ಹೇಳಿದಳು- ಅಮ್ಮಾ, ದೊಡ್ಡಪ್ಪ ಈ ಸೀತೆಯನ್ನು ಕದ್ದು ತಂದ ಮೇಲೆ ನನಗೇಕೋ ಅವರು ಇಷ್ಟವಾಗುತ್ತಿಲ್ಲ, ಅಷ್ಟೇ ಅಲ್ಲ, ಈಚೀಚೆಗೆ ಅವರು ಏಕಾಂತದಲ್ಲಿರುವಾಗ ಅವರ ಬಳಿ ಹೋಗಲು ನನಗೂ ಭಯ- ಅನ್ನುತ್ತಾಳೆ. ನಾವು ಯಾರು ಯಾರಿಂದ ಎಂತೆಂಥ ಮಾತುಗಳನ್ನು ಕೇಳಬೇಕಾಯಿತಲ್ಲ ಸೀತೆ, ಹೇಳು, ನಿನಗಿಂತ ದುಃಖಿಗಳಲ್ಲವಾ ನಾವು?’

ನಿಜ, ಎಷ್ಟೇ ಸಿರಿ ಸಂಪತ್ತು ಅಧಿಕಾರವಿದ್ದರೂ ಲೋಕನಿಂದೆ ಎನ್ನುವುದು ಎಷ್ಟು ಅವಮಾನಕರ ಅಲ್ಲವಾ?

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶುಕ್ರವಾರ ಆಗಸ್ಟ್ 9, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಶುಕ್ಲ ಪಂಚಮಿ ಗಂ. 27-15 ನಕ್ಷತ್ರ: ಹಸ್ತ ಗಂ. 26-45 ಯೋಗ: ಸಿದ್ಧ ಗಂ. 13-45 ಕರಣ: ಬವ ಗಂ. 13-56, ಕರ್ಕಾಟಕ ಮಾಸದ 23 ನೇ ದಿನ, ಮಳೆನಕ್ಷತ್ರ: ಆಶ್ಲೇಷ 2.
ರಾಹುಕಾಲ : ಬೆಳಿಗ್ಗೆ 10-30 – 12-00
ಸೂರ್ಯೋದಯ : 06-21 ಸೂರ್ಯಾಸ್ತ : 06-51
ಮುಸ್ಲಿಂ ದಿನಾಂಕ : 29 ಮೊಹರಮ್
ದಿನ ವಿಶೇಷ : ನಾಗ ಪಂಚಮಿ, ಅದೃಷ್ಟ ಸಂಖ್ಯೆ : 8, 11

ಮೇಷ: ಹಿರಿಯರು ಗಹನವಾದ ಸಮಸ್ಯೆಗಳಿಗೆ ತಕ್ಷಣ ಸುಲಭ ಪರಿಹಾರಗಳನ್ನು ತಿಳಿಸಿಕೊಡುವರು. ಸಹೋದರರಲ್ಲಿ ಬರಬೇಕಿದ್ದ ಹಣ ಹಿಂತಿರುಗಿ ಬಂದು ಕೈ ಸೇರುವುದು. ಸೌಂದರ್ಯ ವಿನ್ಯಾಸಕರಿಗೆ ಉತ್ತಮ ದಿನ.

ವೃಷಭ: ಆಫೀಸಿನಲ್ಲಿ ವಿನಯದಿಂದ ವರ್ತಿಸಿ ಕೆಲಸಗಳನ್ನು ಸಾಧಿಸಿಕೊಳ್ಳುವಿರಿ. ಮನೆಯವರ ಮಾತುಗಳಿಗೆ ಸಮಾಧಾನದಿಂದ ಉತ್ತರಿಸಿ. ಉತ್ತಮ ಆದಾಯದಿಂದ ಹಣಕಾಸಿನ ತೊಂದರೆ ಕಾಣಿಸದು.

ಮಿಥುನ: ಸಮಯಕ್ಕೆ ಸರಿಯಾಗಿ ಪೌಷ್ಟಿಕ ಆಹಾರ ಸೇವಿಸುವ ಅಭ್ಯಾಸ ಮಾಡುವುದರಿಂದ ಆರೋಗ್ಯ ವೃದ್ಧಿ.ಕಚ್ಚಾ ತೈಲದ ವ್ಯವಹಾರದಲ್ಲಿರುವವರಿಗೆ ಅಧಿಕವಾಗಿ ಲಾಭ ಸಿಗಲಿದೆ.

ಕರ್ಕಾಟಕ: ವಿದ್ಯಾರ್ಥಿಗಳು ಹೆಚ್ಚಿನ ಯಶಸ್ಸಿಗಾಗಿ ಅದರಲ್ಲೂ ವಿಶೇಷವಾಗಿ ವಿಜ್ಞಾನ ವಿಷಯದಲ್ಲಿ ಪರಿಶ್ರಮ ಪಡಬೇಕಾಗುತ್ತದೆ. ಕೋರ್ಟು-ಕಚೇರಿ ಕಾರ್ಯಗಳಲ್ಲಿ ನಿರೀಕ್ಷಿತ ಯಶಸ್ಸು ಪಡೆಯುವಲ್ಲಿ ತೊಡಕು ಇರಲಿದೆ.

ಸಿಂಹ: ನಿಮಗೆದುರಾಗುವ ಎಲ್ಲಾ ಸವಾಲುಗಳನ್ನು ಬುದ್ಧಿವಂತಿಕೆಯಿಂದ ಎದುರಿಸಿ. ಇನ್ನಷ್ಟು ಮನೋಬಲವನ್ನು ಹೆಚ್ಚಿಸಿಕೊಳ್ಳಿರಿ. ಬಹಳ ಬೇಗ ಗುರಿ ತಲುಪಬೇಕು ಎಂಬ ತೀವ್ರ ಇಚ್ಛೆ ಫಲಿತಾಂಶಕ್ಕೆ ಅಡ್ಡಿ ಮಾಡುವ ಸಾಧ್ಯತೆಯಿದೆ.

ಕನ್ಯಾ: ಕೆಲಸದ ಒತ್ತಡದಿಂದ ದೇಹಾಯಾಸ ತೋರಿಬಂದು ಆರೋಗ್ಯದ ಮೇಲೆ ಪರಿಣಾಮ ಬೀರಲಿದೆ. ಪೊಲೀಸ್ ಅಧಿಕಾರಿಗಳಿಗೆ ಸಂತಸದ ಸುದ್ದಿ ಸಿಗಲಿದೆ. ಹಿರಿಯರ ಆಸೆಯಂತೆ ಹೊಸ ಆಸ್ತಿ ಕೊಳ್ಳುವ ಅವಕಾಶ ಸಿಗಲಿದೆ.

ತುಲಾ: ರಾಜಕೀಯ ವ್ಯಕ್ತಿಗಳಿಗೆ ಸಾಮಾಜಿಕವಾಗಿ ಜನ ಬೆಂಬಲದ ಮತ್ತು ಆರ್ಥಿಕತೆಯ ಕೊರತೆ ಕಾಡಲಿದೆ. ಹಣ್ಣಿನ ವ್ಯಾಪಾರಿಗಳಿಗೆ ಲಾಭದ ದಿನ. ಪ್ರಯಾಣದಲ್ಲಿ ಆಪತ್ತುಗಳು ಎದುರಾಗಬಹುದು, ಜಾಗ್ರತರಾಗಿರಿ.

ವೃಶ್ಚಿಕ: ಕೆಲಸಗಳಲ್ಲಿನ ಜವಾಬ್ದಾರಿಗಳು ಹೆಚ್ಚಿ ಆರ್ಥಿಕ ಸ್ಥಿತಿಯು ಸುಧಾರಣೆ ಹಂತದಲ್ಲಿರುವುದು. ರಾಜಕಾರಣಿಗಳು ಹೆಚ್ಚಿನ ಸಮಯವನ್ನು ಸಾಮಾಜಿಕ ಹಿತಾಸಕ್ತಿಗಾಗಿ ಕಳೆಯಬೇಕಾಗುವುದು.

ಧನು: ಜಾಗ ಖರೀದಿಸಲು ಅಥವಾ ಒಪ್ಪಂದಕ್ಕೆ ಸಹಿ ಹಾಕಲು ಸುದಿನ. ಚಿತ್ರಕಲೆ, ಗಣಿತದಂಥ ವಿಚಾರದಲ್ಲಿ ಆಸಕ್ತಿ ಮೂಡುವುದು. ಔದ್ಯೋಗಿಕ ವಿದ್ಯಾರ್ಥಿಗಳು ಹೆಚ್ಚಿನ ಶ್ರಮದಿಂದ ಉತ್ತಮ ಅಂಕಗಳನ್ನು ಗಳಿಸುವಲ್ಲಿ ಯಶಸ್ವಿಯಾಗುವಿರಿ.

ಮಕರ: ಕುಟುಂಬದಲ್ಲಿ ಇರುವಂಥ ಎಲ್ಲರ ಅಭಿಪ್ರಾಯವನ್ನೂ ಕೇಳಿ ತೀರ್ಮಾನಿಸುವ ಮನಸ್ಥಿತಿಯನ್ನು ಬೆಳೆಸಿಕೊಳ್ಳಿ. ವೃತ್ತಿರಂಗದಲ್ಲಿ ನಿಮ್ಮ ಪ್ರಾಮಾಣಿಕ ಪ್ರಯತ್ನ ಇದ್ದಲ್ಲಿ ಸ್ಥಾನ ಬದಲಾವಣೆ ಸಾಧ್ಯತೆಯಿದೆ.

ಕುಂಭ: ಮನೆಯಲ್ಲಿರುವ ಆಂತರಿಕ ಸಮಸ್ಯೆಗಳನ್ನು ಶೀಘ್ರ ಬಗೆಹರಿಸಿಕೊಳ್ಳಲು ಪ್ರಯತ್ನಿಸಿ. ಬಟ್ಟೆ ಮಾರಾಟಗಾರರಿಗೆ ಉತ್ತಮ ವ್ಯಾಪಾರವಿದ್ದು ಅಧಿಕ ಲಾಭ. ಸಾಮಾಜಿಕ ಬದುಕಿನಲ್ಲಿ ಹೊಸ ಹುರುಪು ಕಾಣಲಿದ್ದೀರಿ.

ಮೀನ: ವಿವಾಹದ ವಿಷಯದಲ್ಲಿ ಮೌನ ಮುರಿಯುವುದು ಅನಿವಾರ್ಯ ವಿಷಯವಾಗಿ ಪರಿಣಮಿಸುವುದು. ಅಗಾಧ ಜ್ಞಾನ ಶಕ್ತಿ ಹೊರ ಹೊಮ್ಮಿಬರಲು ಸೂಕ್ತ ಕಾಲವಿದು. ಮನೆಯ ಖರ್ಚಿನಲ್ಲಿ ಹಿಡಿತವಿರಲಿ.

ಪದಬಂಧ 5767


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

2.ಪಾಕದ ನಂತರ ಕುಡಿದಿರುವ ಶರಬತ್ತು (3)
4.ಗ್ರಹ ಹಾಗೂ ಉಪಗ್ರಹಗಳು ಸುತ್ತುವ ಮಾರ್ಗ (2)
5.ಪ್ರಾಯದ ಎಮ್ಮೆ ಅಥವಾ ಹಸು (3)
7.ನಮ್ಮ ಸುತ್ತ ಮುತ್ತಲಿನ ಪ್ರದೇಶ (4)
8.ಇದು ಕುದುರೆಯ ಮುಖ (5)
11.ಯಾರ ಆಶ್ರಯಕ್ಕೂ ಒಳಗಾಗದವನು (4)
13.ಕಾಡನ್ನು ಹೀಗೂ ಹೇಳುವರು (3)
14.ಮೂಗಿಗೆ ಏರಿಸುವ ತಂಬಾಕಿನ ಪುಡಿ (2)
15.ಶಿವನ ಕಣ್ಣು ಎಂಬರ್ಥದ ಕಾಯಿ (3)

ಮೇಲಿಂದ ಕೆಳಕ್ಕೆ

1.ಅತ್ಯಂತ ಚಲುವಾದುದು (5)
3.ಕರಿ ಬಿದ್ದಿರುವ ಆಳವಾದ ಗುಂಡಿ (3)
4.ಕರದಲ್ಲಿರುವ ನೈದಿಲೆ ಕಾಣುತ್ತಿದೆಯೇ? (3)
6.ಅತಿಯಾದ ಬಾಯಾರಿಕೆ (4)
7.ಬೇರೆಯವರನ್ನು ಆಶ್ರಯಿಸಿರುವವನು (5)
9.ಕಾಡಿನ ಮಧ್ಯಭಾಗ (4)
10.ಮಧುರವಾದ ಸ್ವಪ್ನ (5)
11.ರಹಸ್ಯವಲ್ಲ! ವಿನೋದಪೂರ್ಣವಾದುದು! (3)
12.ಬಂದರಿನಲ್ಲಿ ಹಡಗನ್ನು ನಿಲ್ಲಿಸುವ ಸಲಕರಣೆ (3)



5766ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ತೆಂಕಣ 4.ಅಡವಿ
6.ಅನುಭಾವ 7.ಸೊಡರು
8.ಳನ 9.ನಾರಿ
12.ತಾಕತ್ತು 14.ಶಿವದಾನ
15.ಸಮರ 16.ವಾನರ

ಮೇಲಿಂದ ಕೆಳಕ್ಕೆ:
2.ಕನ್ನಡ 3.ಅನುಜ
4.ಅವಧೂತ 5.ವಿಧಾನಪರಿಷತ್ತು
7.ಸೊಡ್ಡಳಬಾಚರಸ
10.ಮಾರ್ಗಶಿರ 11.ಸಂದಾಯ
13.ಕದನ

ಸುಡೊಕು 6152

	4	3			1		2	
8		7		3				9
					9		8	3
	6					3		8
	7	4	1	8	3			
3						5		1
	8		3		4		1	
		1		9		8		4
4	3		5			2		

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6151 ಸುಡೊಕು

8	3	1	6	7	2	5	4	9
6	9	2	5	4	1	8	7	3
5	4	7	3	8	9	2	1	6
4	7	8	9	6	5	3	2	1
3	6	9	2	1	8	4	5	7
2	1	5	4	3	7	9	6	8
1	5	6	8	2	3	7	9	4
7	2	3	1	9	4	6	8	5
9	8	4	7	5	6	1	3	2

ನಾಗಪೂಜೆಯಲ್ಲಿ ಸಂಸ್ಕೃತಿಯ ಪದರಗಳು



ನಾಗರ ಪಂಚಮಿ ಅಂಗವಾಗಿ ಕೊಪ್ಪಳ ಸಮೀಪದ ಭಾಗ್ಯನಗರದಲ್ಲಿ ಗುರುವಾರ ಜೋಕಾಲಿ ಜೀಕಿ ಸಂಭ್ರಮಿಸಿದ ಬಾಲಕಿಯರು– ಪ್ರಜಾವಾಣಿ ಚಿತ್ರ/ಭರತ್ ಕಂದಕೂರ

● ನವೀನ ಗಂಗೋತ್ರಿ

ಇಂದು ನಾಗಪಂಚಮಿ

ಸಾಂಪ್ರದಾಯಿಕವಾಗಿ ಭಾರತೀಯರು ಆಚರಿಸಿಕೊಂಡು ಬಂದಿರುವ ಹಬ್ಬಗಳು ಪ್ರಕೃತಿಯ ನಾನಾ ಸಂಗತಿಗಳೊಡನೆ ನಾವು ಬೆಳೆಸಿಕೊಂಡ ಪರಂಪರಾಗತ ಸಂವಾದವೆಂದೇ ಹೇಳಬಹುದು. ಮಳೆ, ಚಳಿ, ಬೇಸಿಗೆ – ಹೀಗೆ ಪ್ರಕೃತಿಯ ಎಲ್ಲ ಅವಸ್ಥಾಂತರದ ಹೊತ್ತಿಗೂ ಒಂದಿಲ್ಲೊಂದು ಹಬ್ಬಗಳು ನಮ್ಮಲ್ಲಿ ಆಚರಣೆಗೊಳ್ಳುತ್ತವೆ. ಮಳೆಗಾಲದ ಹಬ್ಬಗಳ ಸಂತೆಗೆ ನಾಂದಿಯಂತೆ ಬರುವ ಹಬ್ಬವೇ ಶ್ರಾವಣಮಾಸದ ಶುಕ್ಲ ಪಂಚಮಿಯಂದು ಆಚರಣೆಯಾಗುವ ನಾಗರಹಬ್ಬ. ಜೀವಲೋಕದ ಇನ್ನೊಂದು ಅಂಚಿನಲ್ಲಿರುವ ನಾಗಕುಲದ ಜೊತೆಗೆ ನಮ್ಮ ನಾಗರಿಕತೆಯು ಬೆಳೆಸಿಕೊಂಡು ಬಂದ ಸಂವಹನಗಳಿಗೆ ಸಾಕ್ಷಿಯಂತೆ ಇವತ್ತಿಗೂ ಆಚರಣೆಗೊಳ್ಳುತ್ತಿರುವ ಹಬ್ಬವಿದು. ವೇದಸಂಹಿತೆಯಲ್ಲಿ ಸಹ ನಾಗನನ್ನು ಸ್ತುತಿಸಿ, ಅವನ ವಾಸಸ್ಥಾನವನ್ನು ನೆನೆದು ನಮಸ್ಕಾರಗಳನ್ನು ಅರ್ಪಿಸುವ ಮಂತ್ರಗಳನ್ನು ಕಾಣಬಹುದು. ಪುರಾಣಪ್ರಸಿದ್ಧರಾದ ನಮ್ಮ ದೇವತೆಗಳಂತೂ ನಾಗನ ಜೊತೆ ಅತ್ಯಂತ ಸೌಹಾರ್ದ ಭಾವದಲ್ಲಿ ಇರುವವರು. ಅಂದರೆ ನಮ್ಮ ನಾಗರಿಕತೆಯ ಅತಿ ಪ್ರಾಚೀನ ದಾಖಲೆಗಳಲ್ಲಿಯೂ ನಾಗಾರಾಧನೆಯ ಸೆಲೆ ಇದೆ ಎಂದಂತಾಯಿತು.

ನಮ್ಮ ನಾಗರಿಕತೆ ಮಾತ್ರವೇ ಅಲ್ಲದೆ, ಜಗತ್ತಿನ ಬೇರೆ ಭಾಗದ ನಾಗರಿಕತೆಗಳಲ್ಲಿಯೂ ನಾಗನ ಪೂಜೆಯ ಪದ್ಧತಿ ಇದ್ದಂತೆ ತಿಳಿಯುತ್ತದೆ. ಈಜಿಪ್ಟ್‌ನವರು, ಗ್ರೀಕರು, ಆಫ್ರಿಕಾ ಮತ್ತು ಅಮೆರಿಕದ ಮೂಲನಿವಾಸಿಗಳು ಸಹ ನಾಗನನ್ನು (ಹಾವನ್ನು) ನಾನಾ ರೀತಿಯಲ್ಲಿ ತಮ್ಮ ಶ್ರದ್ಧಾಸ್ಥಾನಗಳಲ್ಲಿ ನೆಲೆಯಾಗಿಸಿಕೊಂಡಿದ್ದು ಇತ್ತು. ಆದರೆ ಜಗತ್ತಿನ ಬೇರೆ ಭಾಗದ ಈ ಎಲ್ಲ ಬಹುದೇವತಾರಾಧಕ ನಾಗರಿಕತೆಗಳು ಮತ್ತು ಸ್ಥಳೀಯ ಸಂಸ್ಕೃತಿಗಳು ಏಕದೇವೋಪಾಸನೆಯ ಯುಗದಲ್ಲಿ ಮುಗಿದೇ ಹೋಗಿವೆ. ಇವತ್ತಿಗೂ ಇಷ್ಟು ವ್ಯಾಪಕವಾಗಿ ಉಳಿದುಕೊಂಡು ಬಂದಿರುವ ಒಂದೇ ಒಂದು ಸರ್ಪಾರಾಧನೆಯ ಸಂಸ್ಕೃತಿ ನಮ್ಮದು. ಸಂತಾನ, ರಕ್ಷೆ, ಅಭಯ, ನಿರ್ವಿಷೀಕರಣ - ಹೀಗೆ ನಾಗನ ಸುತ್ತ ಭಾರತದಲ್ಲಿ ಹಬ್ಬಿಕೊಂಡಿರುವ ಶ್ರದ್ಧೆಯ ಜಾಲ ಜಟಿಲವಾದದ್ದು. ಈ ಹಬ್ಬಕ್ಕೆ ಸ್ಕಂದಪುರಾಣದ ಕಥೆಯೊಂದರ ಆಲಂಬನವೂ ಇದೆ. ಮುಂದುವರಿದು, ಜನಮೇಜಯನ ಸರ್ಪಯಾಗವು ಕೊನೆಯಾಗಿ ನಾಗಗಳಿಗೆ ಅಭಯ ದೊರಕಿದ ದಿನವೂ, ಕೃಷ್ಣಾವತಾರದಲ್ಲಿ ವಿಷ್ಣುವು ಕಾಲಿಯಮರ್ದನಗೈದ ದಿನವೂ ಇದಂತೆ.

ಭಾರತೀಯ ಹಬ್ಬಗಳು ಒಳಗಿನ ತಾತ್ತ್ವಿಕ ತಿರುಳಿನಲ್ಲಿ ಶಾಂತವಾದ ಅಂತಃಪ್ರವಾಹವಾಗಿಯೂ, ಬಾಹ್ಯದಲ್ಲಿ ಉತ್ಸಾಹ, ಆವೇಗ ಮತ್ತು ಗಮ್ಮತ್ತಿನ ಸಂತೆಯೂ ಆಗಿ ತೋರುವುದು ಸಹಜವೇ. ದೀಪಾವಳಿ, ನವರಾತ್ರಿ, ಗಣೇಶೋತ್ಸವಗಳನ್ನು ಲಕ್ಷಿಸಿದಾಗ ಈ ಮಾತು ಇನ್ನಷ್ಟು ದಿಟವಾಗುತ್ತದೆ. ಆದರೆ ನಾಗರಪಂಚಮಿಯಂಥ ಹಬ್ಬಗಳು ಇವತ್ತಿಗೂ ತಮ್ಮ ಅಂತರ್ಮುಖಿತ್ವ ಹಾಗೂ ನಿರುದ್ವೇಗವನ್ನು ಕಳೆದುಕೊಂಡಿಲ್ಲ, ಬಾಹ್ಯದ ಆಡಂಬರವನ್ನು ಹೆಚ್ಚಾಗಿ ಆತುಕೊಂಡಿಲ್ಲ. ಹಳ್ಳಿಗಳಲ್ಲಿ ಆಚರಣೆಯಾಗುವ ನಾಗರಪಂಚಮಿ ಹಬ್ಬವು ಇವತ್ತಿಗೂ ಹೊರಗಿನ ಆಡಂಬರಕ್ಕಿಂತ ಆಂತರಿಕ ಶುದ್ಧಿ ಮತ್ತು ನಿರುಮ್ಮಳತೆಯನ್ನೇ ಕೇಂದ್ರವಾಗಿ ಇಟ್ಟುಕೊಂಡಿದೆ. ಅದರಲ್ಲಿಯೂ ಕರ್ನಾಟಕದ ದಕ್ಷಿಣೋತ್ತರ ಜಿಲ್ಲೆಗಳಲ್ಲಿ, ಉಕ್ಕುವ ನದಿ ಝರಿ ಸಾಗರಗಳ ಹಿನ್ನೆಲೆಯಲ್ಲಿ, ಜಡಿಮಳೆಯ ಕುಳಿರಿನಲ್ಲಿ, ಕಾಡಿನ ಕಪ್ಪಿನಲ್ಲೆಲ್ಲೋ ಸುಪ್ತನಾಗಿರುವ ನಾಗನ ಪ್ರತಿಮೆಯನ್ನು ಹುಡುಕಿ ಹೋಗಿ ತನಿಯೆರೆದು ಬರುವ ಅನೂಚಾನ ಆಚಾರ, ಎಚ್ಚರ ತಪ್ಪದ ಶುದ್ಧಿ, ಇವತ್ತಿಗೂ ಜೀವಂತ. ಕೆಲವು ಸಮುದಾಯ ಮತ್ತು ಸಂಪ್ರದಾಯಗಳಲ್ಲಿ ಇದು ಸ್ತ್ರೀಪ್ರಧಾನ ಹಬ್ಬವಾಗಿದ್ದರೆ, ಇನ್ನು ಕೆಲವು ಸಮುದಾಯಗಳಲ್ಲಿ ಪುರುಷರೇ ನೆರವೇರಿಸುವ ಹಬ್ಬ.

ಅಣ್ಣ–ತಂಗಿಯರ ಸಹೋದರತೆಯ ಭಾವಬಂಧವೂ ಈ ಹಬ್ಬಕ್ಕಿದೆ. ಹಲವೆಡೆ ಹೆಣ್ಣುಮಕ್ಕಳು ಈ ದಿನ ಕಡ್ಡಾಯವಾಗಿ ಉಯ್ಯಾಲೆ ಯಾಡುವರು. ಹುತ್ತಕ್ಕೆ, ನಾಗರಕಲ್ಲಿಗೆ, ಕೊನೆಗೆ ಸಾಕ್ಷಾತ್ ಜೀವಂತ ನಾಗನಿಗೆ ಹಾಲೆರೆಯುವ ವಿಶಿಷ್ಟ ಆಚರಣೆಯ ದಿನವಿದು.

‘ನಾಗರಿಕರ ಸುರಕ್ಷತೆಗೆ ಆದ್ಯತೆ’

ಬಾಂಗ್ಲಾದೇಶಕ್ಕೆ ಎರಡನೇ ಸ್ವಾತಂತ್ರ್ಯ: ಮೊಹಮ್ಮದ್ ಯೂನಸ್ ವ್ಯಾಖ್ಯಾನ



ಬಾಂಗ್ಲಾದೇಶದ ಮಧ್ಯಂತರ ಸರ್ಕಾರದ ಮುಖ್ಯಸ್ಥರಾಗಿ ಮೊಹಮ್ಮದ್ ಯೂನಸ್ ಗುರುವಾರ ಪ್ರಮಾಣ ವಚನ ಸ್ವೀಕರಿಸಿದರು. ಅಧ್ಯಕ್ಷ ಮೊಹಮ್ಮದ್ ಶಹಾಬುದ್ದೀನ್ ಪ್ರಮಾಣ ವಚನ ಬೋಧಿಸಿದರು – ಎಎಫ್‌ಪಿ ಚಿತ್ರ

ಢಾಕಾ (ಪಿಟಿಐ): ಬಾಂಗ್ಲಾದೇಶದ ಮಧ್ಯಂತರ ಸರ್ಕಾರದ ನೇತೃತ್ವ ವಹಿಸಿಕೊಳ್ಳಲು ಗುರುವಾರ ಪ್ಯಾರಿಸ್‌ನಿಂದ ಢಾಕಾಗೆ ಬಂದ ನೊಬೆಲ್ ಶಾಂತಿ ಪ್ರಶಸ್ತಿ ಪುರಸ್ಕೃತ ಮೊಹಮ್ಮದ್ ಯೂನಸ್ (84) ಅವರು, ‘ನಮ್ಮ ಸರ್ಕಾರವು ದೇಶದ ನಾಗರಿಕರ ಸುರಕ್ಷತೆಗೆ ಆದ್ಯತೆ ನೀಡಲಿದೆ’ ಎಂದು ಭರವಸೆ ನೀಡಿದರು.

ದೇಶಕ್ಕೆ ಮರಳಿದ ಯೂನಸ್ ಅವರನ್ನು ಸೇನಾ ಮುಖ್ಯಸ್ಥ ಜನರಲ್ ವಕಾರ್-ಉಝ್-ಝಮಾನ್, ಹಿರಿಯ ಅಧಿಕಾರಿಗಳು, ವಿದ್ಯಾರ್ಥಿ ನಾಯಕರು ವಿಮಾನ ನಿಲ್ದಾಣದಲ್ಲಿ ಸ್ವಾಗತಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ದೇಶ ಕಟ್ಟುವ ಕಾರ್ಯಕ್ಕೆ ಎಲ್ಲರೂ ನನಗೆ ನೆರವಾಗಬೇಕು’ ಎಂದು ಕೋರಿದರು.

‘ಎರಡನೇ ಸ್ವಾತಂತ್ರ್ಯ’: ಆಡಳಿತ ಬದಲಾವಣೆಯನ್ನು ದೇಶದ ‘ಎರಡನೇ ಸ್ವಾತಂತ್ರ್ಯ’ ಎಂದು ಕರೆದ ಅವರು, ‘ಇದು ನಮ್ಮ ಹೆಮ್ಮೆಯ ದಿನವಾಗಿದೆ’ ಎಂದು ಹೇಳಿದರು.

‘ನಮಗೆ ದೊರೆತಿರುವ ಈ ಎರಡನೇ ಸ್ವಾತಂತ್ರ್ಯವನ್ನು ನಾವು ರಕ್ಷಿಸಿಕೊಳ್ಳಬೇಕಿದೆ. ದೇಶದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಮರಳಿ ತರುವುದು, ಅರಾಜಕತಾ ಚಟುವಟಿಕೆಗಳು ಮತ್ತು ಅಲ್ಪಸಂಖ್ಯಾತ ಸಮುದಾಯಗಳ ಮೇಲಿನ ದಾಳಿಗಳನ್ನು ನಿಯಂತ್ರಿಸುವುದು ನನ್ನ ಮೊದಲ ಕಾರ್ಯವಾಗಿದೆ’ ಎಂದು ಅವರು ಪ್ರತಿಕ್ರಿಯಿಸಿದರು.

ಯುವ ಜನರ ಕೈಯಲ್ಲಿ ದೇಶ: ವಿದ್ಯಾರ್ಥಿಗಳು ಮತ್ತು ಯುವ ಜನರ ಕರೆಗೆ ಓಗೊಟ್ಟು ಮಧ್ಯಂತರ ಸರ್ಕಾರದ ನೇತೃತ್ವ ವಹಿಸಿಕೊಳ್ಳಲು ಒಪ್ಪಿದ್ದಾಗಿ ಹೇಳಿದ ಅವರು, ದೇಶ ಈಗ ಯುವ ಜನರ ಕೈಯಲ್ಲಿದೆ ಎಂದರು.

‘ನಾಗರಿಕರ ಸುರಕ್ಷತೆಯನ್ನು ಖಾತರಿಪಡಿಸುವಂತಹ ಸರ್ಕಾರವನ್ನು ನಾವು ರಚಿಸಬೇಕಿದೆ. ಅಂತೆಯೇ ಪ್ರತಿಭಟನಾ ಸಮಯದಲ್ಲಿ ಉಂಟಾದ ಅವ್ಯವಸ್ಥೆಯಿಂದ ದೇಶವನ್ನು ರಕ್ಷಿಸಲು ನಾಗರಿಕರು ಸಹಕರಿಸಬೇಕಿದೆ’ ಎಂದು ಹೇಳಿದರು.

‘ಹಿಂಸೆ ಆಗದಂತೆ ನೋಡಿಕೊಳ್ಳಿ’: ‘ನಿಮಗೆ ನನ್ನ ಮೇಲೆ ನಂಬಿಕೆ ಇದ್ದರೆ, ದೇಶದಲ್ಲಿ ಎಲ್ಲೂ, ಯಾರ ಮೇಲೂ ದಾಳಿ ನಡೆಯದಂತೆ ನೋಡಿಕೊಳ್ಳಿ. ಇದು ನಮ್ಮ ಮೊದಲ ಜವಾಬ್ದಾರಿಯಾಗಿದೆ’ ಎಂದು ಯೂನಸ್ ಕರೆ ನೀಡಿದರು.

‘ದೇಶ ನಿಮ್ಮ ಕೈಯಲ್ಲಿದೆ. ನಿಮ್ಮ ಆಶಯದಂತೆ ದೇಶವನ್ನು ಮರುನಿರ್ಮಿಸಬೇಕಿದೆ. ಅದಕ್ಕೆ ನಿಮ್ಮ ಸೃಜನಶೀಲತೆಯನ್ನು ಬಳಸಬೇಕು’ ಎಂದು ಅವರು ಯುವ ಜನರಿಗೆ ಕರೆ ನೀಡಿದರು.

ವಿದ್ಯಾರ್ಥಿ ಆಂದೋಲನದ ವೇಳೆ ಪೊಲೀಸ್ ಗೋಲಿಬಾರ್‌ನಲ್ಲಿ ಮೃತಪಟ್ಟ ಮೊದಲ ವಿದ್ಯಾರ್ಥಿ ಅಬು ಸೈಯದ್ ಅವರಿಗೆ ಯೂನಸ್ ಅವರು ನಮನ ಸಲ್ಲಿಸಿದರು.

ದರೋಡೆಕೋರರ ಹಾವಳಿ

ಢಾಕಾ (ಪಿಟಿಐ): ಹಿಂಸಾಚಾರದಿಂದ ನಲುಗಿರುವ ಬಾಂಗ್ಲಾದೇಶದಲ್ಲಿ ಲೂಟಿ ಮತ್ತು ದರೋಡೆಕೋರರ ಹಾವಳಿಯೂ ತೀವ್ರಗೊಂಡಿದ್ದು, ನಿವಾಸಿಗಳು ಕೆಲ ದಿನಗಳಿಂದ ನಿದ್ರೆಯಿಲ್ಲದ ರಾತ್ರಿಗಳನ್ನು ಕಳೆಯುತ್ತಿದ್ದಾರೆ.

ದೇಶದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕುಸಿದಿದ್ದು, ಪೊಲೀಸರು ಕಾರ್ಯ ನಿರ್ವಹಿಸಲು ಹಿಂಜರಿದಿರುವ ಕಾರಣ ಅಪರಾಧಿಗಳು ಗುಂಪು ಗುಂಪಾಗಿ ಲೂಟಿ, ದರೋಡೆ ಕೃತ್ಯಗಳನ್ನು ಎಸಗುತ್ತಿದ್ದಾರೆ ಎನ್ನಲಾಗಿದೆ.

ನಿವಾಸಿಗಳು ದೊಣ್ಣೆಗಳನ್ನು ಹಿಡಿದು ಗಸ್ತು ತಿರುಗುವ ಮೂಲಕ, ತಮ್ಮ ಮನೆ ಮತ್ತು ರಸ್ತೆಗಳನ್ನು ರಕ್ಷಿಸಿಕೊಳ್ಳುವ ಕಾರ್ಯದಲ್ಲಿ ನಿರತರಾಗಿದ್ದಾರೆ.

ದಿನದ ಬೆಳವಣಿಗೆಗಳು

- ಬಾಂಗ್ಲಾದೇಶದಲ್ಲಿ ಸಿಲುಕಿದ್ದ ಭಾರತದ 17 ಕಾರ್ಮಿಕರನ್ನು (ರಸ್ತೆ ನಿರ್ಮಿಸುವವರು) ಸುರಕ್ಷಿತವಾಗಿ ಗುರುವಾರ ದೇಶಕ್ಕೆ ಕರೆತರಲಾಯಿತು ಎಂದು ಬಿಎಸ್‌ಎಫ್ ತಿಳಿಸಿದೆ.
- ತೀವ್ರ ಹಿಂಸಾಚಾರದ ಕಾರಣಕ್ಕೆ ಕೆಲಸಕ್ಕೆ ಬರಲು ಹಿಂಜರಿಯುತ್ತಿದ್ದ ಪೊಲೀಸರು ಕ್ರಮೇಣ ಕರ್ತವ್ಯಕ್ಕೆ ಹಾಜರಾಗುತ್ತಿದ್ದು, ಕಾನೂನು ಮತ್ತು ಸುವ್ಯವಸ್ಥೆ ಪಾಲನೆಯತ್ತ ಮುಖ ಮಾಡಿದ್ದಾರೆ.

560ಕ್ಕೆ ಏರಿದ ಮೃತರ ಸಂಖ್ಯೆ

ಶೇಖ್ ಹಸೀನಾ ಅವರು ಸೋಮವಾರ ದೇಶ ತೊರೆದ ಬಳಿಕ ನಡೆದ ಹಿಂಸಾಚಾರದಲ್ಲಿ ಇಲ್ಲಿಯವರೆಗೆ ಮೃತಪಟ್ಟವರ ಸಂಖ್ಯೆ 232ಕ್ಕೆ ಏರಿಕೆಯಾಗಿದೆ. ಈ ಮೂಲಕ ಮೀಸಲಾತಿ ನಿಯಮ ವಿರೋಧಿಸಿ ಜುಲೈನಿಂದ ದೇಶದಾದ್ಯಂತ ನಡೆಯುತ್ತಿರುವ ಹಿಂಸಾಚಾರದಲ್ಲಿ ಮೃತಪಟ್ಟವರ ಸಂಖ್ಯೆ 560ಕ್ಕೆ ಏರಿದಂತಾಗಿದೆ.

ಪೂರ್ವ ಲಡಾಖ್: ಸಶಸ್ತ್ರ ಪಡೆಗಳಿಂದ ತಾಲೀಮು

ಪ್ರಜಾವಾಣಿ ವಾರ್ತೆ



ಶ್ರೀನಗರ: ಪೂರ್ವ ಲಡಾಖ್‌ನ ವಾಸ್ತವ ನಿಯಂತ್ರಣ ರೇಖೆ (ಎಲ್‌ಎಸಿ) ಉದ್ದಕ್ಕೂ ಸಶಸ್ತ್ರ ಪಡೆಗಳು ಭಾರಿ ತಾಲೀಮು ಆರಂಭಿಸಿವೆ.

ಗಡಿ ವಿಚಾರವಾಗಿ ಚೀನಾದೊಂದಿಗಿನ ಸಂಘರ್ಷ ಮುಂದುವರಿದಿರುವ ನಡುವೆಯೇ ಭಾರತ ಸಶಸ್ತ್ರ ಪಡೆಗಳ ಅಭ್ಯಾಸಕ್ಕೆ ಚಾಲನೆ ನೀಡಿದೆ.

ಸೇನೆ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಅವರು ಶೀಘ್ರವೇ ಗಡಿಗೆ ಭೇಟಿ ನೀಡಿ, ಸಶಸ್ತ್ರ ಪಡೆಗಳ ತಾಲೀಮು ಪರಿಶೀಲಿಸಲಿದ್ದಾರೆ ಎಂದು ಮೂಲಗಳು ಹೇಳಿವೆ.

‘ಸಶಸ್ತ್ರ ಪಡೆಗಳ ಯುದ್ಧ ಸನ್ನದ್ಧತೆ ಹಾಗೂ ಯೋಧರ ನೈತಿಕ ಸ್ಥೈರ್ಯ ಹೆಚ್ಚಿಸುವುದು ಈ ಅಭ್ಯಾಸಗಳ ಉದ್ದೇಶವಾಗಿದೆ. ನೆರೆ ದೇಶದೊಂದಿಗಿನ ಸಂಘರ್ಷದ ಗಂಭೀರತೆ ಹಾಗೂ ಯುದ್ಧತಂತ್ರದ ಭಾಗವಾಗಿ ಈ ಪ್ರದೇಶದ ಮಹತ್ವವನ್ನು ಪರಿಗಣಿಸಿ ಸೇನೆಯು ಪೂರ್ವ ಲಡಾಖ್‌ನಲ್ಲಿ ಕಳೆದ ನಾಲ್ಕು ವರ್ಷಗಳಿಂದ ಗಣನೀಯ ಸಂಖ್ಯೆಯ ಯೋಧರನ್ನು ನಿಯೋಜಿಸಿದೆ’ ಎಂದು ರಕ್ಷಣಾ ಮೂಲಗಳು ತಿಳಿಸಿವೆ.

ಎತ್ತರದ ಪ್ರದೇಶಗಳಲ್ಲಿ ಯುದ್ಧ ತರಬೇತಿ ಸೇರಿದಂತೆ ಹಲವು ಸಂಕೀರ್ಣ ಕಾರ್ಯಾಚರಣೆಗಳನ್ನು ಈ ಸಮರಾಭ್ಯಾಸ ಒಳಗೊಂಡಿದೆ ಎಂದೂ ಹೇಳಿವೆ.

ಬಾಂಗ್ಲಾ ಮಾಜಿ ಪ್ರಧಾನಿ ಪುತ್ರ ಸಾಜೀಬ್ ಹೇಳಿಕೆ ● ಭಾರತದ ಪ್ರಧಾನಿಗೆ ಧನ್ಯವಾದ ಅರ್ಪಣೆ

ಸ್ವದೇಶಕ್ಕೆ ಮರಳಲಿದ್ದಾರೆ ಶೇಖ್ ಹಸೀನಾ



ಶೇಖ್ ಹಸೀನಾ

ಕೋಲ್ಕತ್ತ (ಪಿಟಿಐ): ಬಾಂಗ್ಲಾದೇಶದ ಪ್ರಧಾನಿ ಹುದ್ದೆಗೆ ರಾಜೀನಾಮೆ ಸಲ್ಲಿಸಿ, ದೇಶದಿಂದ ಪಲಾಯನಗೈದಿರುವ ಶೇಖ್ ಹಸೀನಾ ಅವರು ಪ್ರಜಾತಂತ್ರದ ಮರುಸ್ಥಾಪನೆ ಆದ ನಂತರ ದೇಶಕ್ಕೆ ಮರಳಲಿದ್ದಾರೆ ಎಂದು ಅವರ ಮಗ ಸಾಜೀಬ್ ವಾಜೆದ್ ಜಾಯ್ ಗುರುವಾರ ಹೇಳಿದ್ದಾರೆ.

ದೇಶದಲ್ಲಿ ಈಗ ಸೃಷ್ಟಿಯಾಗಿರುವ ಅಶಾಂತಿಯ ಕಿಚ್ಚಿಗೆ ತುಪ್ಪ ಸುರಿಯುವ ಕೆಲಸವನ್ನು ಪಾಕಿಸ್ತಾನದ ಬೇಹುಗಾರಿಕಾ ಸಂಸ್ಥೆ ಐಎಸ್‌ಐ ಮಾಡುತ್ತಿದೆ ಎಂದು ಅವರು ಆರೋಪಿಸಿದ್ದಾರೆ.

ಹಸೀನಾ ಅವರು ಬಾಂಗ್ಲಾದೇಶಕ್ಕೆ ಮರಳುವುದು ಖಚಿತವಾಗಿದ್ದರೂ ಅವರು ಸಕ್ರಿಯ ರಾಜಕಾರಣಿಯಾಗಿ ಮರಳುತ್ತಾರೋ ಅಥವಾ ನಿವೃತ್ತ ರಾಜಕಾರಣಿಯಾಗಿ ಮರಳುತ್ತಾರೋ ಎಂಬುದು ಇನ್ನೂ ತೀರ್ಮಾನವಾಗಿಲ್ಲ ಎಂದು ಸುದ್ದಿಸಂಸ್ಥೆಗೆ ನೀಡಿರುವ ಸಂದರ್ಶನದಲ್ಲಿ ಜಾಯ್ ಹೇಳಿದ್ದಾರೆ.

ಶೇಖ್ ಮುಜೀಬುರ್ ರಹಮಾನ್ ಕುಟುಂಬದವರು ತಮ್ಮ ಜನ ರನ್ನಾಗಲೀ, ಅವಾಮಿ ಲೀಗ್ ಪಕ್ಷವನ್ನಾಗಲಿ ಕೈಬಿಡುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಅಲ್ಲದೆ, ತಮ್ಮ ತಾಯಿಗೆ ರಕ್ಷಣೆ ನೀಡಿದ್ದಕ್ಕಾಗಿ ಜಾಯ್ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಧನ್ಯವಾದ ಅರ್ಪಿಸಿದ್ದಾರೆ.

ಬಾಂಗ್ಲಾದೇಶದಲ್ಲಿ ಪ್ರಜಾತಂತ್ರದ ಮರುಸ್ಥಾಪನೆಗೆ ಒತ್ತಡ ತರಲು ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಅಭಿಪ್ರಾಯ ರೂಪಿಸುವಲ್ಲಿ ಭಾರತ ನೆರವಾಗಬೇಕು ಎಂದು ಕೋರಿದ್ದಾರೆ.

‘ಅವರು ಬಾಂಗ್ಲಾದೇಶಕ್ಕೆ ಮರಳುವುದಿಲ್ಲ ಎಂದು ನಾನು ಹೇಳಿದ್ದುದು ನಿಜ. ಆದರೆ ಕಳೆದ ಎರಡು ದಿನಗಳಲ್ಲಿ ನಮ್ಮ ಪಕ್ಷದ ನಾಯಕರು ಮತ್ತು ಕಾರ್ಯಕರ್ತರ ಮೇಲೆ ದೇಶದಾದ್ಯಂತ ನಿರಂತರ ದಾಳಿಗಳು ನಡೆದ ನಂತರದಲ್ಲಿ ಬಹಳಷ್ಟು ಬದಲಾವಣೆಗಳಾಗಿವೆ. ಈಗ ನಾವು ನಮ್ಮ ಜನರನ್ನು ಸುರಕ್ಷಿತವಾಗಿಸಲು ಸಾಧ್ಯವಿರುವ ಎಲ್ಲವನ್ನೂ ಮಾಡಲಿದ್ದೇವೆ; ಅವರನ್ನು ಒಬ್ಬಂಟಿಯಾಗಿ ಬಿಡುವುದಿಲ್ಲ’ ಎಂದು ಜಾಯ್ ಹೇಳಿದ್ದಾರೆ.

‘ಅವಾಮಿ ಲೀಗ್ ಪಕ್ಷವು ಬಾಂಗ್ಲಾ ದೇಶದ ಅತ್ಯಂತ ಹಳೆಯ ಹಾಗೂ ಅತ್ಯಂತ ದೊಡ್ಡ ರಾಜಕೀಯ ಪಕ್ಷ. ಹೀಗಾಗಿ ನಾವು ಜನರಿಂದ ದೂರವಾಗಲು ಸಾಧ್ಯವಿಲ್ಲ. ಪ್ರಜಾತಂತ್ರದ ಮರುಸ್ಥಾಪನೆ ಆದ ನಂತರ ಹಸೀನಾ ಅವರು ಖಂಡಿತವಾಗಿಯೂ ಬಾಂಗ್ಲಾದೇಶಕ್ಕೆ ಮರಳಲಿದ್ದಾರೆ’ ಎಂದು ಸ್ಪಷ್ಟಪಡಿಸಿದ್ದಾರೆ.

ಜೀವ ಉಳಿಸಿಕೊಳ್ಳಲು ಪಲಾಯನಗೈದಿದ್ದಲ್ಲ: ಹಸೀನಾ ಅವರು ತಮ್ಮ ಜೀವ ಉಳಿಸಿಕೊಳ್ಳಲು ದೇಶದಿಂದ ಓಡಿಹೋದರು ಎಂಬ ವರದಿಗಳನ್ನು ಅಲ್ಲಗಳೆದಿರುವ ಜಾಯ್ ಅವರು, ‘ಅವರು ದೇಶ ತೊರೆಯಲು ಒಪ್ಪಿರಲಿಲ್ಲ. ಪ್ರಧಾನಿಯವರ ಭದ್ರತಾ ಸಿಬ್ಬಂದಿ ಕೊನೆಯವರೆಗೂ ಅವರಿಗೆ ರಕ್ಷಣೆ ಒದಗಿಸಲು ಸಿದ್ಧರಿದ್ದರು. ಆದರೆ, ಹಾಗೆ ಮಾಡಿದ್ದರೆ ಪ್ರಧಾನಿ ನಿವಾಸದ ಕಡೆ ಬರುತ್ತಿದ್ದ ಪ್ರತಿಭಟನಕಾರರಲ್ಲಿ ನೂರಾರು ಮಂದಿ ಸಾಯುತ್ತಿದ್ದರು. ಬಾಂಗ್ಲಾದ ಹಿತದ ಕಾರಣಕ್ಕೆ ನಾವು ಹಸೀನಾ ಅವರನ್ನು ದೇಶ ತೊರೆಯಲು ಒಪ್ಪಿಸಿದೆವು’ ಎಂದರು.

ಜಾಯ್ ಹೇಳಿದ್ದು...

- ದೇಶವು ಅರಾಜಕತೆಯತ್ತ ಸಾಗುತ್ತಿದೆ, ಅದು ಈ ಪ್ರದೇಶದಲ್ಲಿ ಎರಡನೆಯ ಅಫ್ಗಾನಿಸ್ತಾನವಾಗುತ್ತಿದೆ
- ಬಾಂಗ್ಲಾದಲ್ಲಿ ಪ್ರಜಾತಂತ್ರದ ಮರುಸ್ಥಾಪನೆಯಾದ ನಂತರ ಅವಾಮಿ ಲೀಗ್ ಅಥವಾ ಬಿಎನ್‌ಪಿ ಅಧಿಕಾರಕ್ಕೆ ಬರಬಹುದು

ಅತೀವ ದುಃಖವಾಗುತ್ತಿದೆ: ಸೈಮಾ

ನವದೆಹಲಿ (ಪಿಟಿಐ): ಬಾಂಗ್ಲಾದೇಶದಲ್ಲಿ ನೂರಾರು ಮಂದಿ ಜೀವ ಕಳೆದುಕೊಂಡಿರುವುದನ್ನು ಕಂಡು ತಮಗೆ ಅತೀವ ದುಃಖವಾಗುತ್ತಿದೆ ಎಂದು ಶೇಖ್ ಹಸೀನಾ ಅವರ ಮಗಳು ಸೈಮಾ ವಾಜೆದ್ ಹೇಳಿದ್ದಾರೆ. ಇಂತಹ ಕಷ್ಟದ ಸಮಯದಲ್ಲಿ ತಾಯಿಯನ್ನು ಕಾಣಲು ಆಗುತ್ತಿಲ್ಲ, ಆಕೆಯನ್ನು ಅಪ್ಪಿಕೊಳ್ಳಲು ಆಗುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಸೈಮಾ ಅವರು ವಿಶ್ವ ಆರೋಗ್ಯ ಸಂಸ್ಥೆಯ ಆಗ್ನೇಯ ಏಷ್ಯಾ ಪ್ರಾದೇಶಿಕ ನಿರ್ದೇಶಕಿ ಆಗಿ ಕೆಲಸ ಮಾಡುತ್ತಿದ್ದಾರೆ.

ಬ್ರಿಟನ್ ಸಚಿವರ ಜತೆ ಜೈಶಂಕರ್ ಚರ್ಚೆ

ನವದೆಹಲಿ (ಪಿಟಿಐ): ನೆರೆಯ ಬಾಂಗ್ಲಾದೇಶದಲ್ಲಿ ಮೂಡಿರುವ ಅರಾಜಕತೆ ಸ್ಥಿತಿ ಕುರಿತು ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಅವರು ಗುರುವಾರ ಬ್ರಿಟನ್‌ನ ವಿದೇಶಾಂಗ ಸಚಿವ ಡೇವಿಡ್ ಲ್ಯಾಮೆ ಅವರ ಜೊತೆಗೆ ದೂರವಾಣಿಯಲ್ಲಿ ಚರ್ಚಿಸಿದರು.

ಈ ಕುರಿತು ‘ಎಕ್ಸ್’ ಸಾಮಾಜಿಕ ಮಾಧ್ಯಮದಲ್ಲಿ ಜೈಶಂಕರ್ ಮಾಹಿತಿ ಹಂಚಿಕೊಂಡಿದ್ದರು. ಡೇವಿಡ್ ಲ್ಯಾಮೆ ಅವರೇ ಕರೆ ಮಾಡಿದ್ದರು.

ಸೋಮವಾರ ಹೇಳಿಕೆ ನೀಡಿದ್ದ ಲ್ಯಾಮೆ ಅವರು, ‘ಬಾಂಗ್ಲಾದ ಬೆಳವಣಿಗೆಗಳನ್ನು ಕುರಿತು ವಿಶ್ವಸಂಸ್ಥೆಯ ನೇತೃತ್ವದಲ್ಲಿ ಸಮಗ್ರ ಮತ್ತು ಸ್ವತಂತ್ರ ತನಿಖೆ ಅಗತ್ಯ’ ಎಂದಿದ್ದರು.

‘ಅರಾಜಕತೆ ಸೃಷ್ಟಿಯತ್ನ ಬೇಡ’

ಇಸ್ಲಾಮಾಬಾದ್(ಪಿಟಿಐ): ಬಾಂಗ್ಲಾದೇಶದಲ್ಲಿ ಕಂಡುಬಂದ ರೀತಿಯ ಅರಾಜಕತೆಯನ್ನು ದೇಶದಲ್ಲಿ ಸೃಷ್ಟಿಸುವ ಪ್ರಯತ್ನಗಳಿಗೆ ಕೈಹಾಕದಂತೆ ಪಾಕಿಸ್ತಾನ ಸೇನೆ ಮುಖ್ಯಸ್ಥ ಜನರಲ್ ಅಸಿಮ್ ಮುನಿರ್ ಗುರುವಾರ ಎಚ್ಚರಿಸಿದ್ದಾರೆ.

ವಿಭಜನಕಾರಿ ರಾಜಕಾರಣ: ಮಸೂದೆಗೆ ‘ಇಂಡಿಯಾ’ ತೀವ್ರ ವಿರೋಧ

ಸದನ ಸಮಿತಿಗೆ ವಕ್ಫ್ ಮಸೂದೆ



ಮಸೂದೆಯ ಕುರಿತು ಸಚಿವ ಕಿರಣ್ ರಿಜಿಜು ಮತ್ತು ಸಂಸದ ಕೆ.ಸಿ. ವೇಣುಗೋಪಾಲ್ ಮಾತನಾಡಿದರು

ನವದೆಹಲಿ (ಪಿಟಿಐ): ‘ವಕ್ಫ್ (ತಿದ್ದುಪಡಿ) ಮಸೂದೆ’ಯನ್ನು ಕೇಂದ್ರ ಸರ್ಕಾರವು ಲೋಕಸಭೆಯಲ್ಲಿ ಗುರುವಾರ ಮಂಡಿಸಿದೆ. ಮಸೂದೆಯು ಮಸೀದಿಗಳ ಚಟುವಟಿಕೆಗಳಲ್ಲಿ ಹಸ್ತಕ್ಷೇಪ ಮಾಡುವ ಉದ್ದೇಶ ಹೊಂದಿಲ್ಲ ಎಂದು ಕೇಂದ್ರ ಸರ್ಕಾರ ಸಮರ್ಥಿಸಿಕೊಂಡಿದೆ.

ಆದರೆ, ಈ ಮಸೂದೆಯು ಮುಸ್ಲಿಮರನ್ನು ಗುರಿಯಾಗಿಸಿಕೊಂಡಿದೆ, ಇದು ಸಂವಿಧಾನದ ಮೇಲಿನ ದಾಳಿ ಎಂದು ವಿರೋಧ ಪಕ್ಷಗಳು ಕಟುವಾಗಿ ಆರೋಪಿಸಿವೆ. ಮಸೂದೆಯ ಕುರಿತು ಲೋಕಸಭೆಯಲ್ಲಿ ಬಿರುಸಿನ ಚರ್ಚೆಗಳು ನಡೆದ ನಂತರ, ಅದನ್ನು ಜಂಟಿ ಸಂಸದೀಯ ಸಮಿತಿಯ (ಜೆಪಿಸಿ) ಪರಿಶೀಲನೆಗೆ ಒಪ್ಪಿಸಲಾಗಿದೆ.

ಜೆಪಿಸಿ ರಚಿಸಲು ತಾವು ಎಲ್ಲ ಪಕ್ಷಗಳ ಮುಖಂಡರ ಜೊತೆ ಮಾತುಕತೆ ನಡೆಸುವುದಾಗಿ ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಪ್ರಕಟಿಸಿದ್ದಾರೆ. ಅಲ್ಪಸಂಖ್ಯಾತರ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರು ಮಸೂದೆಯ ಮಂಡನೆಗೆ ಅವಕಾಶ ಕೋರಿದ ತಕ್ಷಣ, ‘ಇಂಡಿಯಾ’ ಸದಸ್ಯರು ವಿರೋಧ ವ್ಯಕ್ತಪಡಿಸಿದರು. ಮಸೂದೆ ಮಂಡನೆಯನ್ನು ವಿರೋಧಿಸಲು ನೋಟಿಸ್ ನೀಡಿದ್ದ ಕಾಂಗ್ರೆಸ್ಸಿನ ಕೆ.ಸಿ. ವೇಣುಗೋಪಾಲ್ ಅವರು ‘ಮುಂಬರುವ ವಿಧಾನಸಭಾ ಚುನಾವಣೆಗಳ ಮೇಲೆ ಕಣ್ಣಿಟ್ಟು ಮಸೂದೆಯನ್ನು ಮಂಡಿಸಲಾಗುತ್ತಿದೆ’ ಎಂದು ದೂರಿದರು.

ಬಿಜೆಪಿಯ ವಿಭಜನಕಾರಿ ರಾಜಕಾರಣಕ್ಕೆ ಲೋಕಸಭಾ ಚುನಾವಣೆಯಲ್ಲಿ ಜನ ಪಾಠ ಕಲಿಸಿದ್ದಾರೆ. ಆದರೂ ಆ ಪಕ್ಷವು ಅದನ್ನೇ ಮುಂದುವರಿಸಿದೆ ಎಂದರು. ‘ಇದು ಧಾರ್ಮಿಕ ಸ್ವಾತಂತ್ರ್ಯದ ಮೇಲಿನ ನೇರ ಆಕ್ರಮಣ... ಮುಂದೆ ನೀವು ಕ್ರೈಸ್ತರ ವಿರುದ್ಧ, ನಂತರ ಜೈನರ ವಿರುದ್ಧ ಹೋಗುತ್ತೀರಿ’ ಎಂದರು.

ನ್ಯಾಯಮಂಡಳಿ ನೀಡಿದ ಆದೇಶಕ್ಕೆ ಮೇಲ್ಮನವಿ ಸಲ್ಲಿಸಲು ಹಿಂದಿನ ಕಾನೂನಿನಲ್ಲಿ ಅವಕಾಶ ಇಲ್ಲ. ಈಗ ಆದೇಶಗಳನ್ನು ಪ್ರಶ್ನಿಸಲು ಅವಕಾಶ ಕಲ್ಪಿಸಲಾಗುತ್ತಿದೆ ಎಂದು ರಿಜಿಜು ವಿವರಿಸಿದರು.

‘ಯಾವ ಕಾನೂನು ಕೂಡ ಸಂವಿಧಾನಕ್ಕೂ ಮಿಗಿಲಾಗಲು ಅವಕಾಶವಿಲ್ಲ. ಆದರೆ 1995ರ ವಕ್ಫ್ ಕಾಯ್ದೆಯಲ್ಲಿ, ಸಂವಿಧಾನದ ಚೌಕಟ್ಟನ್ನೂ ಮೀರಿದ ಅಂಶಗಳಿವೆ. ಇಂಥವು ಬದಲಾಗಬೇಡವೇ’ ಎಂದರು.

ಕೆಲವರು ವಕ್ಫ್ ಮಂಡಳಿಗಳನ್ನು ಕೈವಶ ಮಾಡಿಕೊಂಡಿದ್ದಾರೆ. ಸಾಮಾನ್ಯ ಮುಸ್ಲಿಮರಿಗೆ ನ್ಯಾಯ ಕೊಡಿಸಲು ಈ ಮಸೂದೆ ತರಲಾಗುತ್ತಿದೆ
ಕಿರಣ್ ರಿಜಿಜು, ಅಲ್ಪಸಂಖ್ಯಾತರ ವ್ಯವಹಾರಗಳ ಸಚಿವ

ಮಸೂದೆಯ ಉದ್ದೇಶ, ಅದನ್ನು ಮಂಡಿಸುತ್ತಿರುವ ಸಂದರ್ಭದ ಬಗ್ಗೆ ಸರ್ಕಾರ ಸ್ಪಷ್ಟನೆ ನೀಡಬೇಕು. ನಾವು ಇದನ್ನು ವಿರೋಧಿಸುತ್ತೇವೆ. ಮಸೂದೆಯನ್ನು ಹಿಂಪಡೆಯಿರಿ
ಸುಪ್ರಿಯಾ ಸುಳೆ, ಎನ್‌ಸಿಪಿ (ಪವಾರ್ ಬಣ)

ನೀವು ಮುಸ್ಲಿಮರ ವಿರೋಧಿಗಳು. ಈ ಮಾತಿಗೆ ಈ ಮಸೂದೆ ಸಾಕ್ಷಿ
ಅಸಾದುದ್ದೀನ್ ಒವೈಸಿ, ಎಐಎಂಐಎಂ ನಾಯಕ

ಬಿಜೆಪಿಯ ಕಟ್ಟಾ ಬೆಂಬಲಿಗರನ್ನು ಓಲೈಸಲು ಈ ಮಸೂದೆ ತರಲಾಗಿದೆ. ವಕ್ಫ್ ಮಂಡಳಿಗೆ ಮುಸ್ಲಿಮೇತರರನ್ನು ನೇಮಕ ಮಾಡುವುದು ಏಕೆ? ಬೇರೆ ಧರ್ಮಗಳ ಮಂಡಳಿಗಳಲ್ಲಿ ಹೀಗೇ ಮಾಡಲಾಗುತ್ತದೆಯೇ?
ಅಖಿಲೇಶ್ ಯಾದವ್, ಎಸ್‌ಪಿ ನಾಯಕ

ಬರೇಲಿ: ಸರಣಿ ಹಂತಕನಿಗೆ ಹುಡುಕಾಟ

ಬರೇಲಿ, ಉತ್ತರ ಪ್ರದೇಶ (ಪಿಟಿಐ): ಇಲ್ಲಿನ ಶಾಹಿ- ಶೀಶ್‌ಗಢ ಪ್ರದೇಶದಲ್ಲಿ ಕಳೆದ ಒಂದು ವರ್ಷದಲ್ಲಿ ಒಂಬತ್ತು ಮಹಿಳೆಯರ ಕೊಲೆಯಾಗಿದ್ದು, ಸ್ಥಳೀಯರಲ್ಲಿ ಆತಂಕ ಮೂಡಿಸಿದೆ.

ಎಲ್ಲ ಮೃತದೇಹಗಳು ಕತ್ತು ಹಿಸುಕಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದು, ಈ ಕೊಲೆಗಳನ್ನು ಒಬ್ಬನೇ ವ್ಯಕ್ತಿ ನಡೆಸಿದ್ದಾನೆ ಎಂದು ಪೊಲೀಸರು ಶಂಕಿಸಿದ್ದಾರೆ. ಸರಣಿ ಹಂತಕನ ಪತ್ತೆಗೆ ಹುಡುಕಾಟ ತೀವ್ರಗೊಳಿಸಿದ್ದಾರೆ.

ಬರೇಲಿಯ ಐಜಿಪಿ ರಾಕೇಶ್ ಸಿಂಗ್ ಅವರು ಸ್ವತಃ ತನಿಖೆಯ ನೇತೃತ್ವ ವಹಿಸಿಕೊಂಡಿದ್ದಾರೆ. ‘ಎಲ್ಲಾ ಒಂಬತ್ತು ಕೊಲೆಗಳಲ್ಲಿ ಸಾಮ್ಯತೆ ಇವೆ. ಸ್ಥಳೀಯ ಪೊಲೀಸರಿಗೆ ಪ್ರಕರಣವನ್ನು ಭೇದಿಸಲು ಸಾಧ್ಯವಾಗಿಲ್ಲ. ಈ ನಿಷ್ಕ್ರಿಯತೆ ಮುಂದುವರಿಯಲು ಅವಕಾಶ ನೀಡುವುದಿಲ್ಲ’ ಎಂದು ಹೇಳಿದ್ದಾರೆ.

ಪ್ರತ್ಯಕ್ಷದರ್ಶಿಗಳ ಹೇಳಿಕೆಗಳನ್ನು ಆಧರಿಸಿ ಶಂಕಿತನ ರೇಖಾಚಿತ್ರ ಬಿಡಿಸಲಾಗಿದ್ದು, ಪೊಲೀಸರು ಅದನ್ನು ಮೂರು ದಿನಗಳ ಹಿಂದೆ ಬಿಡುಗಡೆಗೊಳಿಸಿದ್ದಾರೆ.

ಸದನದಿಂದ ಹೊರನಡೆದ ಸಭಾಪತಿ

ರಾಜ್ಯಸಭೆಯಲ್ಲಿ ವಿನೇಶ್ ಫೋಗಟ್ ವಿಚಾರ ಪ್ರಸ್ತಾಪ, ಗದ್ದಲ

ನವದೆಹಲಿ (ಪಿಟಿಐ): ರಾಜ್ಯಸಭೆಯ ಸಭಾಪತಿ ಜಗದೀಪ್ ಧನಕರ್ ಮತ್ತು ವಿರೋಧ ಪಕ್ಷಗಳ ನಡುವಿನ ಸಂಬಂಧ ಚೆನ್ನಾಗಿಲ್ಲದಿರುವುದು ಸದನದಲ್ಲಿ ಗುರುವಾರ ಮತ್ತೆ ಎದ್ದುಕಂಡಿತು.

ವಿನೇಶ್ ಫೋಗಟ್ ಅವರು ಪ್ಯಾರಿಸ್ ಒಲಿಂಪಿಕ್ಸ್‌ನಿಂದ ಅನರ್ಹಗೊಂಡಿದ್ದರ ಬಗ್ಗೆ ರಾಜ್ಯಸಭೆಯಲ್ಲಿ ಚರ್ಚೆಗೆ ಅವಕಾಶ ನಿರಾಕರಿಸಲಾಯಿತು. ಟಿಎಂಸಿ ನಾಯಕರು, ವಿರೋಧ ಪಕ್ಷಗಳ ಇತರ ಪ್ರಮುಖರ ಜೊತೆ ಧನಕರ್ ಅವರು ವಾಗ್ವಾದ ನಡೆಸಿದರು. ನಂತರ ಧನಕರ್ ಅವರು ಸದನದಿಂದ ಹೊರನಡೆದರು.

ಫೋಗಟ್ ಅವರನ್ನು ಅನರ್ಹಗೊಳಿಸಿದ ವಿಷಯವನ್ನು ಸದನದಲ್ಲಿ ಪ್ರಸ್ತಾಪಿಸಲು ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಮುಂದಾದರು. ಆದರೆ, ಇದಕ್ಕೆ ಧನಕರ್ ಅವಕಾಶ ನೀಡಲಿಲ್ಲ. ಇದರಿಂದಾಗಿ ಧನಕರ್ ಹಾಗೂ ಟಿಎಂಸಿ ನಾಯಕ ಡೆರೆಕ್ ಒ'ಬ್ರಯಾನ್ ನಡುವೆ ಬಿರುಸಿನ ವಾಗ್ವಾದ ನಡೆಯಿತು.

‘ಇದು ಮುಖ್ಯವಾದ ಸಂಗತಿ. ಇದು ಒಬ್ಬ ವ್ಯಕ್ತಿಗೆ ಸಂಬಂಧಿಸಿದ ವಿಷಯ ಅಲ್ಲ’ ಎಂದು ಖರ್ಗೆ ಹೇಳಿದರು. ಅನರ್ಹತೆಯ ‘ಹಿಂದೆ ಯಾರಿದ್ದಾರೆ’ ಎಂಬುದನ್ನು ತಿಳಿದುಕೊಳ್ಳಬೇಕಿದೆ ಎಂದೂ ಹೇಳಿದರು. ಆದರೆ, ಈ ವಿಷಯ ಪ್ರಸ್ತಾಪಿಸಲು ಖರ್ಗೆ ಅವರಿಗೆ ಸಭಾಪತಿ ಅವಕಾಶ ನೀಡಲಿಲ್ಲ. ನಿಗದಿಯಂತೆ ಶೂನ್ಯ ವೇಳೆಯ ಕಲಾಪಗಳನ್ನು ನಡೆಸಲು ಮುಂದಾದರು.

ಈ ನಡುವೆ ಮಧ್ಯಪ್ರವೇಶಿಸಿ ಒಬ್ರಯಾನ್ ಮಾತನಾಡಲು ಮುಂದಾದರು. ಆದರೆ ಸದನದಲ್ಲಿ ನಡೆಯುತ್ತಿದ್ದ ಗದ್ದಲದ ಪರಿಣಾಮವಾಗಿ ಅವರು ಏನು ಹೇಳುತ್ತಿದ್ದಾರೆ ಎಂಬುದು ಕೇಳಿಸಲಿಲ್ಲ. ‘ನೀವು ಸಭಾಪತಿಯನ್ನು ಉದ್ದೇಶಿಸಿ ಅರಚುತ್ತಿದ್ದೀರಿ. ನಿಮ್ಮ ನಡತೆಯು ಸದನದಲ್ಲಿ ಅತ್ಯಂತ ಕೊಳಕಾಗಿದೆ. ಇದನ್ನು ನಾನು ಖಂಡಿಸುತ್ತೇನೆ. ಮುಂದಿನ ಬಾರಿ ನಿಮ್ಮನ್ನು ಹೊರಹಾಕಬೇಕಾಗುತ್ತದೆ’ ಎಂದು ಧನಕರ್ ಅವರು, ಒಬ್ರಯಾನ್ ಅವರನ್ನು ಉದ್ದೇಶಿಸಿ ಹೇಳಿದರು.

ಸದನದಲ್ಲಿ ಗದ್ದಲ ಮುಂದುವರಿದಾಗ, ವಿರೋಧ ಪಕ್ಷಗಳ ಸದಸ್ಯರು ಸಭಾತ್ಯಾಗ ನಡೆಸಿದರು. ‘ಅವರು (ವಿರೋಧ ಪಕ್ಷಗಳು) ತಮ್ಮನ್ನೆಲ್ಲ ವಿವೇಕಿಗಳು ಎಂದು ಭಾವಿಸಿದ್ದಾರೆ. ತಮ್ಮ ಹೃದಯ ಮಾತ್ರವೇ ನೋವಿನಿಂದ ಮಿಡಿಯುತ್ತಿದೆ ಎಂದೂ ಅವರು ಭಾವಿಸಿದ್ದಾರೆ. ನಮ್ಮ ಹುಡುಗಿಯ ಕಾರಣಕ್ಕಾಗಿ ಇಡೀ ದೇಶ ನೋವಿನಲ್ಲಿದೆ. ರಾಷ್ಟ್ರಪತಿ, ಪ್ರಧಾನಿ, ನಾನು, ಇನ್ನೂ ಹಲವರಷ್ಟೆ ಅಲ್ಲ... ಇಡೀ ದೇಶ ನೋವು ಅನುಭವಿಸುತ್ತಿದೆ. ಇದನ್ನು ರಾಜಕೀಯಗೊಳಿಸುವುದು ಆ ಹುಡುಗಿಗೆ ತೋರುವ ಅತಿದೊಡ್ಡ ಅಗೌರವ. ಆಕೆ ಸಾಗಬೇಕಾದ ಹಾದಿ ಇನ್ನೂ ದೀರ್ಘವಾಗಿದೆ’ ಎಂದು ಧನಕರ್ ಹೇಳಿದರು.

ವಿರೋಧ ಪಕ್ಷಗಳ ನಡೆಯ ಬಗ್ಗೆ ಧನಕರ್ ಅವರು ನೋವು ತೋಡಿಕೊಂಡರು. ಕೆಲವು ಸಮಯದ ಮಟ್ಟಿಗೆ ತಮಗೆ ಸದನದಲ್ಲಿ ಇರಲು ಸಾಧ್ಯವಾಗುತ್ತಿಲ್ಲ ಎಂದು ಹೇಳಿ, ಸದನದಿಂದ ಅವರು ಹೊರನಡೆದರು.

ಕೆಲವು ಸಮಯದ ನಂತರ ಸದನಕ್ಕೆ ಮರಳಿದ ಧನಕರ್ ಅವರು, ‘ನಾನು ಆತ್ಮಾವಲೋಕನದ ಉದ್ದೇಶದಿಂದ ಹೊರನಡೆದೆ. ಇಲ್ಲಿ ನಡೆದಿದ್ದು ಹಿಂದೆಂದೂ ಆಗಿರದಂಥದ್ದು. ಅದನ್ನು ಜೀರ್ಣಿಸಿಕೊಳ್ಳಲು ಆಗದು’ ಎಂದರು.

ಸಂಕ್ಷಿಪ್ತ ಸುದ್ದಿ

ಸೂಕ್ತ ಪರಿಹಾರ ಕಂಡುಹಿಡಿಯಲು ಕೇಂದ್ರಕ್ಕೆ ಸೂಚನೆ


ನವದೆಹಲಿ (ಪಿಟಿಐ): ಜಿಲ್ಲಾ ನ್ಯಾಯಾಧೀಶರಾಗಿ ನಿವೃತ್ತರಾದವರಿಗೆ ನೀಡುತ್ತಿರುವ ಪಿಂಚಣಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಆದಷ್ಟು ಶೀಘ್ರ ಬಗೆಹರಿಸಬೇಕು ಎಂದು ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಸೂಚಿಸಿದೆ.

‘ಜಿಲ್ಲಾ ನ್ಯಾಯಾಲಯದ ಪಾಲಕರಾಗಿ, (ಅಟಾರ್ನಿ ಜನರಲ್, ಸಾಲಿಸಿಟರ್ ಜನರಲ್)ಗಳು ಅಮಿಕಸ್ ಕ್ಯೂರಿ ಜೊತೆ ಕೂತು ಚರ್ಚೆ ನಡೆಸಿ ಪರಿಹಾರ ಕಂಡುಕೊಳ್ಳಬೇಕು’ ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ನ್ಯಾಯಪೀಠವು ಕೇಂದ್ರ ಸರ್ಕಾರಕ್ಕೆ ತಿಳಿಸಿತು.

‘ದಾಖಲಾದ ಪ್ರಕರಣಗಳಲ್ಲಿ ಕೆಲವು ಅತ್ಯಂತ ಕಠಿಣ’ ಎಂದು ಬಣ್ಣಿಸಿದ ಸಿಜೆಐ, ಕ್ಯಾನ್ಸರ್ ಕಾಯಿಲೆಯಿಂದ ಬಳಲುತ್ತಿರುವ ನ್ಯಾಯಾಧೀಶರ ಪ್ರಕರಣವನ್ನು ಉಲ್ಲೇಖಿಸಿದರು. ಪಿಂಚಣಿ ಹೆಚ್ಚಳದ ಕುಂದುಕೊರತೆಗಳ ಕುರಿತು ಜಿಲ್ಲಾ ನ್ಯಾಯಾಧೀಶರು ಹೈಕೋರ್ಟ್‌ನಲ್ಲಿ ಹಲವು ಅರ್ಜಿಗಳನ್ನು ದಾಖಲಿಸಿದ್ದಾರೆ’ ಎಂದು ಈ ವೇಳೆ ಪ್ರಸ್ತಾಪಿಸಿದರು.

ಜಿಲ್ಲಾ ನ್ಯಾಯಾಧೀಶರಾಗಿ ನಿವೃತ್ತರಾದವರು ಮಾಸಿಕ ₹15 ಸಾವಿರ ಪಿಂಚಣಿ ಪಡೆಯುತ್ತಿದ್ದಾರೆ. 56–57ನೇ ವಯಸ್ಸಿಗೆ ಹೈಕೋರ್ಟ್‌ಗೆ ಬಡ್ತಿ ಪಡೆದು, ಸೇವಾವಧಿ ಮುಗಿದು ನಿವೃತ್ತಿ ಪಡೆದರೆ ₹30 ಸಾವಿರ ಪಿಂಚಣಿ ಪಡೆಯುತ್ತಿದ್ದಾರೆ’ ಎಂದು ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದಿವಾಲಾ, ಮನೋಜ್ ಮಿಶ್ರಾ ಅವರು ತಿಳಿಸಿದರು.

ದರ್ಗಾ ನವೀಕರಣ: ₹1.2 ಕೋಟಿ ನೀಡಿದ ಅಕ್ಷಯ್



ಮುಂಬೈ(ಪಿಟಿಐ): ನಗರದ ಹಾಜಿ ಅಲಿ ದರ್ಗಾ ನವೀಕರಣ ಯೋಜನೆಗೆ ಬಾಲಿವುಡ್ ನಟ ಅಕ್ಷಯ್ ಕುಮಾರ್ ₹1.21 ಕೋಟಿ ದೇಣಿಗೆ ನೀಡಿದ್ದಾರೆ.

ದರ್ಗಾ ಟ್ರಸ್ಟ್‌ನ ವ್ಯವಸ್ಥಾಪಕ ಟ್ರಸ್ಟಿ ಸುಹೇಲ್ ಖಂಡ್ವಾನಿ ಅವರು ‘ಎಕ್ಸ್’ನಲ್ಲಿ ಈ ಕುರಿತು ಪೋಸ್ಟ್ ಮಾಡಿದ್ದಾರೆ. ಐತಿಹಾಸಿಕ ದರ್ಗಾಕ್ಕೆ ಅಕ್ಷಯ್ ಕುಮಾರ್ ಭೇಟಿ ನೀಡಿದ್ದು, ಈ ಕುರಿತ ವಿಡಿಯೊವನ್ನು ಸಹ ಅವರು ಹಂಚಿಕೊಂಡಿದ್ದಾರೆ.ಈ ದರ್ಗಾದಲ್ಲಿ ಸಯ್ಯದ್ ಪೀರ್ ಹಾಜಿ ಅಲಿ ಶಾ ಬುಖಾರಿ ಅವರ ಸಮಾಧಿ ಇದೆ.

‘2,100 ಬುಡಕಟ್ಟು ವಿದ್ಯಾರ್ಥಿಗಳಿಗೆ ತರಬೇತಿ’

ನವದೆಹಲಿ (ಪಿಟಿಐ): ಮುಂದಿನ ಮೂರು ವರ್ಷಗಳಲ್ಲಿ ಸುಮಾರು 2100 ಬುಡಕಟ್ಟು ವಿದ್ಯಾರ್ಥಿಗಳಿಗೆ ಸೆಮಿಕಂಡಕ್ಟರ್ ತಂತ್ರಜ್ಞಾನದ ಕುರಿತು ತರಬೇತಿ ನೀಡಲಾಗುವುದು ಎಂದು ಸರ್ಕಾರವು ಸಂಸತ್ತಿನಲ್ಲಿ ಗುರುವಾರ ತಿಳಿಸಿದೆ.

ಬುಡಕಟ್ಟು ವ್ಯವಹಾರ ಸಚಿವಾಲಯವು ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ ಸಹಯೋಗದೊಂದಿಗೆ ಸುಮಾರು 1500 ಬುಡಕಟ್ಟು ವಿದ್ಯಾರ್ಥಿಗಳಿಗೆ ಮೂಲಭೂತ ಮತ್ತು 600 ವಿದ್ಯಾರ್ಥಿಗಳಿಗೆ ಅತ್ಯಾಧುನಿಕ ಸೆಮಿಕಂಡಕ್ಟರ್ ತಂತ್ರಜ್ಞಾನದ ಕುರಿತು ತರಬೇತಿ ನೀಡಲು ಮುಂದಾಗಿದೆ.

ಬಿಜೆಪಿ ಸಂಸದ ಸಿ. ಎಂ. ರಮೇಶ್ ಅವರ ಪ್ರಶ್ನೆಗೆ ಉತ್ತರಿಸಿದ ಕೇಂದ್ರ ಬುಡಕಟ್ಟು ವ್ಯವಹಾರಗಳ ರಾಜ್ಯ ಸಚಿವ ದುರ್ಗಾದಾಸ್ ಉಯಿಕೆ ಅವರು, ‘ಭಾರತೀಯ ವಿಜ್ಞಾನ ಸಂಸ್ಥೆಯ ನ್ಯಾನೊ ವಿಜ್ಞಾನ ಮತ್ತು ಎಂಜಿನಿಯರಿಂಗ್ ಕೇಂದ್ರವು ಸೆಮಿಕಂಡಕ್ಟರ್ ತಯಾರಿಕೆ ಮತ್ತು ಗುಣಲಕ್ಷಣ ಕುರಿತ ತರಬೇತಿ ನೀಡುತ್ತದೆ’ ಎಂದು ಹೇಳಿದರು.

ಎಂಜಿನಿಯರಿಂಗ್ ಪದವಿ ಪಡೆದ ಬುಡಕಟ್ಟು ವಿದ್ಯಾರ್ಥಿಗಳು ಈ ತರಬೇತಿಗಾಗಿ ಅರ್ಜಿ ಸಲ್ಲಿಸಲು ಅರ್ಹರು ಎಂದು ತಿಳಿಸಿದ್ದಾರೆ.

ಕೇಜ್ರಿವಾಲ್ ನಿವಾಸಕ್ಕೆ ಉದ್ಧವ್ ಭೇಟಿ

ನವದೆಹಲಿ (ಪಿಟಿಐ): ಶಿವಸೇನಾ (ಯುಬಿಟಿ) ಮುಖ್ಯಸ್ಥ ಉದ್ಧವ್ ಠಾಕ್ರೆ ಅವರು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ನಿವಾಸಕ್ಕೆ ಗುರುವಾರ ತೆರಳಿ, ಅವರ ಪತ್ನಿ ಸುನೀತಾ ಕೇಜ್ರಿವಾಲ್ ಅವರನ್ನು ಭೇಟಿಯಾದರು.

ಮಹಾರಾಷ್ಟ್ರ, ಹರಿಯಾಣ ಮತ್ತು ಜಾರ್ಖಂಡ್ ರಾಜ್ಯಗಳ ವಿಧಾನಸಭೆ ಚುನಾವಣೆಗಳು ಸನ್ನಿಹಿತವಾಗುತ್ತಿರುವ ಹಿನ್ನೆಲೆಯಲ್ಲಿ ‘ಇಂಡಿಯಾ’ ಮೈತ್ರಿಕೂಟದ ಉನ್ನತ ನಾಯಕರ ಜೊತೆ ಸಭೆ ನಡೆಸಲು ಅವರು ದೆಹಲಿಗೆ ತೆರಳಿದ್ದರು. ಕೇಜ್ರಿವಾಲ್ ನಿವಾಸಕ್ಕೂ ತೆರಳಿ ಮಾತುಕತೆ ನಡೆಸಿದರು. ಎಎಪಿ ರಾಜ್ಯಸಭಾ ಸದಸ್ಯರಾದ ಸಂಜಯ್ ಸಿಂಗ್ ಮತ್ತು ರಾಘವ್ ಛಡ್ಡಾ ಇದ್ದರು.

ಸಿಪಿಎಂ ಪಕ್ಷದ ಧುರೀಣ, ಪಶ್ಚಿಮ ಬಂಗಾಳದ ಮಾಜಿ ಸಿ.ಎಂ

ಬುದ್ಧದೇವ್ ಭಟ್ಟಾಚಾರ್ಯ ನಿಧನ



ಬುದ್ಧದೇವ್ ಭಟ್ಟಾಚಾರ್ಯ 1944-2024

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಮಾಜಿ ಮುಖ್ಯಮಂತ್ರಿ, ಸಿಪಿಎಂ ಪಕ್ಷದ ಧುರೀಣ ಬುದ್ಧದೇವ್ ಭಟ್ಟಾಚಾರ್ಯ ಗುರುವಾರ ಬೆಳಿಗ್ಗೆ ಇಲ್ಲಿನ ತಮ್ಮ ನಿವಾಸದಲ್ಲಿ ನಿಧನರಾದರು. ಅವರಿಗೆ 80 ವರ್ಷ ವಯಸ್ಸಾಗಿತ್ತು.

ವಯೋಸಹಜ ಅನಾರೋಗ್ಯದಿಂದ ಅವರು ಬಳಲುತ್ತಿದ್ದರು ಎಂದು ಸಿಪಿಎಂ ರಾಜ್ಯ ಕಾರ್ಯದರ್ಶಿ ಮಹಮ್ಮದ್ ಸಲೀಂ ತಿಳಿಸಿದ್ದಾರೆ. ಬುದ್ಧದೇವ್ ಭಟ್ಟಾಚಾರ್ಯ ಅವರಿಗೆ ಪತ್ನಿ ಮೀರಾ, ಪುತ್ರಿ ಸುಚೇತನಾ ಇದ್ದಾರೆ. ಮಗಳು ಲಿಂಗಪರಿವರ್ತನೆ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು.

ಭಟ್ಟಾಚಾರ್ಯ ಅವರ ಪಾರ್ಥಿವ ಶರೀರವನ್ನು ಗುರುವಾರ ಶವಾಗಾರದಲ್ಲೇ ಇರಿಸಲಾಗುತ್ತದೆ. ಶುಕ್ರವಾರ, ಅಲಿಮುದ್ದೀನ್ ರಸ್ತೆಯಲ್ಲಿರುವ ಪಕ್ಷದ ಕಚೇರಿಗೆ ತರಲಾಗುವುದು. ಅಲ್ಲಿ ಸಾರ್ವಜನಿಕರಿಗೆ ಅಂತಿಮ ದರ್ಶನಕ್ಕೆ ಅವಕಾಶ ಕಲ್ಪಿಸಲಾಗುವುದು ಎಂದು ಸಲೀಂ ತಿಳಿಸಿದರು.

ಭಟ್ಟಾಚಾರ್ಯ ಅವರು ತಮ್ಮ ದೇಹವನ್ನು ವೈದ್ಯಕೀಯ ಸಂಶೋಧನೆಗೆ ಒಪ್ಪಿಸಲು ತೀರ್ಮಾನಿಸಿದ್ದರು. ಅಂತಿಮ ದರ್ಶನದ ಬಳಿಕ ಪಾರ್ಥಿವ ಶರೀರವನ್ನು ಆಸ್ಪತ್ರೆಗೆ ಒಪ್ಪಿಸಲಾಗುತ್ತದೆ ಎಂದರು.

ಸರ್ಕಾರಿ ಗೌರವ: ಭಟ್ಟಾಚಾರ್ಯ ಅವರ ಅಗಲಿಕೆಗೆ ಸಂತಾಪ ವ್ಯಕ್ತಪಡಿಸಿರುವ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು, ‘ಅವರ ಅಂತಿಮ ಯಾತ್ರೆಯಲ್ಲಿ ಪೂರ್ಣಪ್ರಮಾಣದ ಸರ್ಕಾರಿ ಗೌರವ ಸಲ್ಲಿಸಲಾಗುವುದು’ ಎಂದು ತಿಳಿಸಿದ್ದಾರೆ.


ಪರಿಚಯ: ಸಿಪಿಎಂ ಪಕ್ಷದ ಹಿರಿಯ ನಾಯಕರಾಗಿದ್ದ ಬುದ್ಧದೇವ್ ಭಟ್ಟಾಚಾರ್ಯ ಅವರು 2000ರಲ್ಲಿ ರಾಜ್ಯದ ಮುಖ್ಯಮಂತ್ರಿಯಾಗಿ, ಪಕ್ಷದ ಹಿರಿಯ ಧುರೀಣ ಜ್ಯೋತಿಬಸು ಅವರ ಉತ್ತರಾಧಿಕಾರಿಯಾಗಿ ಅಧಿಕಾರ ಸ್ವೀಕರಿಸಿದ್ದರು.

2011ರ ವಿಧಾನಸಭೆ ಚುನಾವಣೆಯಲ್ಲಿ ಮಮತಾ ಬ್ಯಾನರ್ಜಿ ನೇತೃತ್ವದ ತೃಣಮೂಲ ಕಾಂಗ್ರೆಸ್ ಪಕ್ಷದ ವಿರುದ್ಧ ಸಿಪಿಎಂ ನೇತೃತ್ವದ ಎಡರಂಗ ಪರಾಭವಗೊಂಡಿತ್ತು. ಈ ಮೂಲಕ ರಾಜ್ಯದಲ್ಲಿ ಸಿಪಿಎಂ ಪಕ್ಷದ 34 ವರ್ಷಗಳ ಸುದೀರ್ಘ ಆಡಳಿತವೂ ಅಂತ್ಯಗೊಂಡಿತ್ತು.

ರಾಜ್ಯದಲ್ಲಿ ಕೈಗಾರಿಕೆಗಳ ಸ್ಥಾಪನೆಗೆ ಭೂಸ್ವಾಧೀನ ಪಡೆಯುವುದರ ವಿರುದ್ಧ ತೀವ್ರ ಪ್ರತಿಭಟನೆಗಳು ಇವರ ಅಧಿಕಾರಾವಧಿಯಲ್ಲಿ ನಡೆದಿದ್ದವು. ‘ನಂದಿಗ್ರಾಮ ಆಂದೋಲನ’ ಸೇರಿದಂತೆ ಬಹುತೇಕ ಪ್ರತಿಭಟನೆಗಳ ಮುಂದಾಳತ್ವವನ್ನು ಮಮತಾ ಬ್ಯಾನರ್ಜಿ ಅವರೇ ವಹಿಸಿದ್ದರು.

ಸಿಪಿಎಂ ಪಕ್ಷದ ಪಾಲಿಟ್‌ಬ್ಯೂರೊ ಮತ್ತು ಕೇಂದ್ರ ಸಮಿತಿಯ ಸದಸ್ಯತ್ವಕ್ಕೆ 2015ರಲ್ಲಿ ರಾಜೀನಾಮೆ ನೀಡಿದ್ದರು. 2018ರಲ್ಲಿ ಪಕ್ಷದ ರಾಜ್ಯ ಕಾರ್ಯದರ್ಶಿ ಸ್ಥಾನಕ್ಕೂ ರಾಜೀನಾಮೆ ಸಲ್ಲಿಸಿದ್ದರು.

ಷೇರುಪೇಟೆ ವಹಿವಾಟು 581



ಎನ್ಎಸ್ಇ ನಿಫ್ಟಿ

ಹಿಂದಿನ ಅಂತ್ಯ	24,297
ಇಂದಿನ ಅಂತ್ಯ	24,117
▼	180
ದಿನದ ಕನಿಷ್ಠ	24,079

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಪ್ರ.ಬಿ)	₹255-480
ದ್ವಿತಳಿ (ಬಿ.ವಿ)	₹270-602

ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹470
12 ಕ್ಕೆ	₹68
ಮೈಸೂರು	
100ಕ್ಕೆ	₹470

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಹಿಂದಿನ ವಹಿವಾಟಿನ ದರ)




ಶೇಂಗಾ (ರಿಫೈನ್ಡ್)	₹1520 (1540)
ಸೋಯಾ (ರಿಫೈನ್ಡ್)	₹950 (950)
ಸೂರ್ಯಕಾಂತಿ (ರಿಫೈನ್ಡ್)	₹955 (955)
ಪಾಮೋಲಿನ್	₹912 (910)

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)



ಅರಸೀಕೆರೆ	₹8000-10000
ಕೆ.ಆರ್.ಪೇಟೆ	₹9455-9455
ತಿಪಟೂರು	₹9500-9800
ತುರುವೇಕೆರೆ	₹9400-9600

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹238
ಆರ್‌ಎಸ್‌ಎಸ್-5	₹228
ಗುಡ್ ಲಾಟ್ (ಪ್ರತಿ ಕೆ.ಜಿಗೆ)	₹217

ಮುದ್ರೆಮನೆ ಕಾಫಿ (50 ಕೆಜಿಗೆ)



ಎಪಿ	₹16900
ಎಸಿ	₹10220
ಆರ್‌ಪಿ	₹18500
ಆರ್‌ಸಿ	₹10010

ಅಂಕೆಗೆ ಸಿಗದ ಆಹಾರ ಹಣದುಬ್ಬರ

9ನೇ ಬಾರಿಗೆ ರೆಪೊ ದರ ಯಥಾಸ್ಥಿತಿ: ಆರ್‌ಬಿಐ ಎಂಪಿಸಿ ಸಭೆ ನಿರ್ಧಾರ

ಮುಂಬೈ (ಪಿಟಿಐ): ಭಾರತೀಯ ರಿಸರ್ವ್ ಬ್ಯಾಂಕ್‌ನ ಹಣಕಾಸು ನೀತಿ ಸಮಿತಿ (ಎಂಪಿಸಿ) ಸಭೆಯು, ಸತತ ಒಂಬತ್ತನೇ ಬಾರಿಗೆ ರೆಪೊ ದರದಲ್ಲಿ ಯಥಾಸ್ಥಿತಿ ಕಾಯ್ದುಕೊಂಡಿದೆ.

ಗುರುವಾರ ಮುಕ್ತಾಯಗೊಂಡ ಸಭೆಯಲ್ಲಿ ಆರು ಸದಸ್ಯರ ಪೈಕಿ ನಾಲ್ವರು ಸದಸ್ಯರು, ರೆಪೊ ದರವನ್ನು ಶೇ 6.5ರಲ್ಲಿಯೇ ಉಳಿಸಿಕೊಳ್ಳಲು ಸಹಮತ ಸೂಚಿಸಿದ್ದಾರೆ. 2023ರ ಫೆಬ್ರುವರಿಯಿಂದಲೂ ರೆಪೊ ದರದಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ.

ಆಹಾರ ಪದಾರ್ಥಗಳ ಬೆಲೆಯು ನಿರಂತರವಾಗಿ ಏರಿಕೆಯಾಗುತ್ತಿದೆ. ಇದರ ನಿಯಂತ್ರಣದ ಮೇಲೆ ನಿಗಾವಹಿಸಲಾಗಿದೆ. ಮತ್ತೊಂದೆಡೆ ಚಿಲ್ಲರೆ ಹಣ ದುಬ್ಬರವನ್ನು ಶೇ 4ರ ಮಿತಿಯಲ್ಲಿ ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಸಭೆ ಹೇಳಿದೆ.

ಸರ್ಕಾರಿ ಸಾಲ ಪತ್ರಗಳನ್ನು ವಾಣಿಜ್ಯ ಬ್ಯಾಂಕ್‌ಗಳಲ್ಲಿ ಅಡಮಾನ ಇಡದೆ ಅವುಗಳ ಬಳಿ ಇರುವ ಹೆಚ್ಚುವರಿ ಹಣವನ್ನು ಆರ್‌ಬಿಐ ತನ್ನ ವಶಕ್ಕೆ ಪಡೆಯುತ್ತದೆ (ಸ್ಟ್ಯಾಂಡಿಂಗ್ ಡಿಪಾಸಿಟ್ ಫೆಸಿಲಿಟಿ- ಎಸ್‌ಡಿಎಫ್). ಇದರಿಂದ ನಗದು ಹರಿವಿನ ಪ್ರಮಾಣ ತಗ್ಗಲಿದೆ. ಈ ಹಣಕ್ಕೆ ನೀಡುವ ಶೇ 6.25ರಷ್ಟು ಬಡ್ಡಿದರದಲ್ಲೂ ಬದಲಾವಣೆ ಮಾಡಿಲ್ಲ. ಬ್ಯಾಂಕ್‌ಗಳು ತುರ್ತು ಸಮಯದಲ್ಲಿ ಆರ್‌ಬಿಐನಿಂದ ಪಡೆಯುವ ಸಾಲಕ್ಕೆ ನಿಗದಿಪಡಿಸಿರುವ ಶೇ 6.75ರಷ್ಟು ಬಡ್ಡಿದರ ವನ್ನು ಪರಿಷ್ಕರಿಸಿಲ್ಲ.

ಜೂನ್‌ನಲ್ಲಿ ಗ್ರಾಹಕ ಬೆಲೆ ಸೂಚ್ಯಂಕ ಆಧಾರಿತ ಚಿಲ್ಲರೆ ಹಣದುಬ್ಬರವು ಶೇ 5.08ರಷ್ಟು ದಾಖಲಾಗಿದೆ.

'ಆಹಾರದ ಹಣದುಬ್ಬರವು ಅಂಕೆಗೆ ಸಿಗುತ್ತಿಲ್ಲ. ಚಿಲ್ಲರೆ ಹಣದುಬ್ಬರದ ಹೆಚ್ಚಳಕ್ಕೆ ಆಹಾರ ಪದಾರ್ಥಗಳ ದರ ಏರಿಕೆಯು ಶೇ 46ರಷ್ಟು ಹಾಗೂ ತರಕಾರಿಗಳ ಬೆಲೆ ಏರಿಕೆಯು ಶೇ 35ರಷ್ಟು ಕೊಡುಗೆ ನೀಡಿದೆ' ಎಂದು ಗವರ್ನರ್ ಶಕ್ತಿಕಾಂತ ದಾಸ್ ತಿಳಿಸಿದ್ದಾರೆ.

ಆಹಾರ ಪದಾರ್ಥಗಳ ಬೆಲೆ ಏರಿಕೆ ನಿಯಂತ್ರಿಸದ ಹೊರತು ಸುಸ್ಥಿರ ಬೆಳವಣಿಗೆಯು ಅಸಾಧ್ಯ. ಬೆಲೆ ಇಳಿಸುವುದೇ ಸಭೆಯ ಗುರಿಯಾಗಿದೆ ಎಂದು ತಿಳಿಸಿದ್ದಾರೆ.

'ಚಿಲ್ಲರೆ ಹಣದುಬ್ಬರ ಮತ್ತು ಆರ್ಥಿಕತೆ ಬೆಳವಣಿಗೆಯು ಸಮತೋಲಿತವಾಗಿದೆ. ಜಿಡಿಪಿ, ಹಣದುಬ್ಬರ, ಬಡ್ಡಿದರ, ನಿರುದ್ಯೋಗ ಆಧಾರಿತ ಸ್ಥೂಲ ಆರ್ಥಿಕ ಸ್ಥಿತಿಯು ಸ್ಥಿರವಾಗಿದೆ. ಜಿಡಿಪಿ ಬೆಳವಣಿಗೆಯು ಚೇತರಿಕೆ ಕಂಡಿದೆ. ಹಣದುಬ್ಬರವು ಇಳಿಕೆಯ ಪಥದಲ್ಲಿದೆ. ಆಹಾರ ಪದಾರ್ಥಗಳ ಬೆಲೆ ಏರಿಕೆ ನಿಯಂತ್ರಿಸುವ ಹಾದಿಯಲ್ಲಿದ್ದೇವೆ. ಆದರೆ, ಸಾಗುವ ದಾರಿಯು ಬಹಳಷ್ಟು ದೂರವಿದೆ' ಎಂದು ಹೇಳಿದ್ದಾರೆ.

'ಆಹಾರ ಹಣದುಬ್ಬರದ ಏರಿಕೆಯು ಶಾಶ್ವತವಲ್ಲ. ಇದರ ಅನುಭವವೂ ನಮಗಿದೆ. ಸದ್ಯದ ಮಟ್ಟಿಗೆ ಎಂಪಿಸಿಗೆ ಇದರ ನಿರ್ವಹಣೆಯು ಕಷ್ಟಕರವಾಗಿದೆ' ಎಂದು ಹೇಳಿದ್ದಾರೆ.



ಜಿಡಿಪಿ ಬೆಳವಣಿಗೆ

2024–25ನೇ ಆರ್ಥಿಕ ವರ್ಷದ ಜಿಡಿಪಿ ಬೆಳವಣಿಗೆ ಮತ್ತು ಚಿಲ್ಲರೆ ಹಣದುಬ್ಬರಕ್ಕೆ ಸಂಬಂಧಿಸಿದಂತೆ ಆರ್‌ಬಿಐ ಪರಿಷ್ಕರಣೆ ಮಾಡಿಲ್ಲ. ಹಿಂದಿನ ಸಭೆಯಲ್ಲಿ ಅಂದಾಜಿಸಿದ್ದಂತೆ ಜಿಡಿಪಿಯು ಶೇ 7.2ರಷ್ಟು ಪ್ರಗತಿ ಕಾಣಲಿದೆ. ಚಿಲ್ಲರೆ ಹಣದುಬ್ಬರವು ಶೇ 4.5ರಷ್ಟು ಇರಲಿದೆ ಎಂದು ಹೇಳಿದೆ.

ಚೆಕ್ ತ್ವರಿತ ವಿಲೇವಾರಿ

ಪ್ರಸ್ತುತ ಬ್ಯಾಂಕ್‌ಗಳು ಸಿಟಿಎಸ್ (ಚೆಕ್ ಟ್ರಂಕೇಷನ್ ಸಿಸ್ಟಂ) ಮೂಲಕ ಎರಡು ದಿನದಲ್ಲಿ ಚೆಕ್ ಕ್ಲಿಯರೆನ್ಸ್ ಮಾಡುತ್ತವೆ. ಇನ್ನು ಮುಂದೆ ಬ್ಯಾಂಕ್‌ಗಳು ಕಾರ್ಯ ನಿರ್ವಹಿಸುವ ಅವಧಿಯಲ್ಲಿಯೇ ಚೆಕ್‌ಗಳನ್ನು ಸ್ಕ್ಯಾನ್ ಮಾಡಿ, ಕೆಲವೇ ಗಂಟೆಗಳಲ್ಲಿ ಅವುಗಳ ತ್ವರಿತ ವಿಲೇವಾರಿಗೆ ಆರ್‌ಬಿಐ ಕ್ರಮವಹಿಸಿದೆ. ಇದರಿಂದ ಚೆಕ್ ಪಾವತಿದಾರರು ಮತ್ತು ಹಣ ಪಡೆಯುವವರಿಗೆ ಅನುಕೂಲವಾಗಲಿದೆ. 2021ರಲ್ಲಿ ಸಿಟಿಎಸ್ ವ್ಯವಸ್ಥೆ ಜಾರಿಗೆ ಬಂದಿದೆ. ಸಿಟಿಎಸ್ ಸೌಲಭ್ಯದ ಚೆಕ್‌ಗಳನ್ನು ಸ್ಕ್ಯಾನ್ ಮಾಡಿದರೆ ಚೆಕ್ ಕುರಿತ ದತ್ತಾಂಶಗಳ ಮಾಹಿತಿಯು ಕ್ಲಿಯರಿಂಗ್ ಹೌಸ್‌ಗೆ ನೇರವಾಗಿ ಹೋಗುತ್ತದೆ. ಬೇರೆ ಖಾತೆಗೆ ಹಣ ಸಂದಾಯವಾಗುವ ಸಾಧ್ಯತೆ ಕಡಿಮೆ.

ಯುಪಿಐ ಮಿತಿ ಏರಿಕೆ

ಸದ್ಯ ಯುಪಿಐ ಮೂಲಕ ₹1 ಲಕ್ಷದವರೆಗೆ ಹಣ ಪಾವತಿಗೆ ಮಿತಿ ನಿಗದಿಪಡಿಸಲಾಗಿದೆ. ಇದನ್ನು ₹5 ಲಕ್ಷಕ್ಕೆ ಹೆಚ್ಚಿಸಲಾಗಿದೆ. ಈ ಹೊಸ ವ್ಯವಸ್ಥೆಯು ತೆರಿಗೆ ಪಾವತಿಗಷ್ಟೇ ಸೀಮಿತವಾಗಿದೆ.

ನಿಯೋಜಿತ ಪಾವತಿ

ಯುಪಿಐ ಮೂಲಕ ನಿಯೋಜಿತ ಪಾವತಿ ವ್ಯವಸ್ಥೆಗೆ ಆರ್‌ಬಿಐ ಅವಕಾಶ ಕಲ್ಪಿಸಿದೆ. ಅಂದರೆ ಒಬ್ಬರ ಬದಲಿಗೆ ಬೇರೊಬ್ಬರು ಹಣ ಪಾವತಿಸುವ ವ್ಯವಸ್ಥೆ ಇದಾಗಿದೆ. ಉದಾಹರಣೆಗೆ ಒಂದು ಬ್ಯಾಂಕ್ ಖಾತೆ ಹೊಂದಿರುವ ವ್ಯಕ್ತಿಯನ್ನು ಪ್ರಾಥಮಿಕ ಬಳಕೆದಾರ ಎಂದು ಪರಿಗಣಿಸಲಾಗುತ್ತದೆ. ಈ ವ್ಯಕ್ತಿಯು ತನ್ನ ಖಾತೆಯನ್ನು ಯುಪಿಐ ಮೂಲಕ ಎರಡನೇ ವ್ಯಕ್ತಿಗೆ ಬಳಸಲು (ಯುಪಿಐ ವ್ಯವಸ್ಥೆ ಹೊಂದಿದವರು) ಅವಕಾಶ ಕೊಡಬಹುದಾಗಿದೆ. ಯುಪಿಐ ಮೂಲಕ ಎಷ್ಟು ಮೊತ್ತದ ವಹಿವಾಟು ನಡೆಸಬಹುದು ಎನ್ನುವುದನ್ನು ಪ್ರಾಥಮಿಕ ಸದಸ್ಯ ನಿರ್ಧರಿಸಬಹುದಾಗಿದೆ.

ಸೆನ್ಸೆಕ್ಸ್, ನಿಫ್ಟಿ ಇಳಿಕೆ



ಮುಂಬೈ (ಪಿಟಿಐ): ಆರ್‌ಬಿಐನ ಎಂಪಿಸಿ ಸಭೆಯು ರೆಪೊ ದರದಲ್ಲಿ ಯಥಾಸ್ಥಿತಿ ಕಾಯ್ದುಕೊಂಡಿರುವುದರಿಂದ ದೇಶದ ಷೇರುಪೇಟೆಗಳಲ್ಲಿ ಗುರುವಾರ ನಡೆದ ವಹಿವಾಟಿನಲ್ಲಿ, ಸೂಚ್ಯಂಕಗಳು ಇಳಿಕೆ ದಾಖಲಿಸಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 581 ಅಂಶ ಇಳಿಕೆ (ಶೇ 0.73ರಷ್ಟು) ಕಂಡಿದ್ದು, 78,886 ಅಂಶಗಳಲ್ಲಿ ವಹಿವಾಟನ್ನು ಮುಕ್ತಾಯಗೊಳಿಸಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 180 ಅಂಶ ಇಳಿಕೆ (ಶೇ 0.74ರಷ್ಟು) ಕಂಡು 24,117 ಅಂಶಗಳಲ್ಲಿ ಸ್ಥಿರಗೊಂಡಿತು.

ವಿದೇಶಿ ಬಂಡವಾಳದ ಹೊರಹರಿವು ಹೆಚ್ಚಿದೆ. ಅಮೆರಿಕ ಮತ್ತು ಯುರೋಪಿಯನ್ ಮಾರುಕಟ್ಟೆಗಳಲ್ಲಿ ನಕಾರಾತ್ಮಕ ವಹಿವಾಟು ನಡೆದಿರುವುದರಿಂದ ದೇಶೀಯ ಷೇರುಪೇಟೆಗಳು ಇಳಿಕೆ ಕಂಡಿವೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

'ಚಿಲ್ಲರೆ ಹಣದುಬ್ಬರದ ಏರಿಕೆಯಿಂದಾಗಿ ರೆಪೊ ದರ ಇಳಿಕೆಗೆ ಎಂಪಿಸಿ ಸಭೆಯು ಮುಂದಾಗಿಲ್ಲ. ಅಲ್ಲದೆ, ಜೂನ್ ತ್ರೈಮಾಸಿಕದ ಜಿಡಿಪಿ ಬೆಳವಣಿಗೆಯನ್ನು ಪರಿಷ್ಕರಿಸಿಲ್ಲ. ಹಾಗಾಗಿ, ಷೇರು ಸೂಚ್ಯಂಕಗಳು ಇಳಿಕೆ ದಾಖಲಿಸಿವೆ' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ (ಸಂಶೋಧನಾ ವಿಭಾಗ) ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಸೆನ್ಸೆಕ್ಸ್ ಗುಚ್ಛದಲ್ಲಿನ ಏಷ್ಯನ್ ಪೇಂಟ್ಸ್, ಇನ್ಫೊಸಿಸ್, ಜೆಎಸ್‌ಡಬ್ಲ್ಯು ಸ್ಟೀಲ್, ಅಲ್ಟ್ರಾಟೆಕ್ ಸಿಮೆಂಟ್, ಪವರ್ ಗ್ರಿಡ್, ಎಲ್ ಆ್ಯಂಡ್ ಟಿ, ಎಚ್‌ಸಿಎಲ್ ಟೆಕ್ನಾಲಜೀಸ್, ಟಾಟಾ ಸ್ಟೀಲ್ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ಟಾಟಾ ಮೋಟರ್ಸ್, ಎಚ್‌ಡಿಎಫ್‌ಸಿ ಬ್ಯಾಂಕ್, ಭಾರ್ತಿ ಏರ್‌ಟೆಲ್, ಐಟಿಸಿ, ಇಂಡಸ್ ಇಂಡ್ ಬ್ಯಾಂಕ್, ಎಕ್ಸಿಸ್ ಬ್ಯಾಂಕ್ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ಬಿಎಸ್‌ಇ ಮಿಡ್ ಕ್ಯಾಪ್ ಶೇ 0.44ರಷ್ಟು ಹಾಗೂ ಸ್ಮಾಲ್ ಕ್ಯಾಪ್ ಶೇ 0.16ರಷ್ಟು ಇಳಿಕೆಯಾಗಿದೆ. ಲೋಹ (ಶೇ2.02), ಐ.ಟಿ (ಶೇ1.82), ಯುಟಿಲಿಟಿ (ಶೇ 1.62), ಸರಕು (ಶೇ 1.45), ಟೆಕ್ (ಶೇ 1.40) ಮತ್ತು ರಿಯಾಲ್ಟಿ (ಶೇ 1.22) ಸೂಚ್ಯಂಕಗಳು ಇಳಿಕೆ ಕಂಡಿವೆ. ಹೆಲ್ತ್‌ಕೇರ್ ಸೂಚ್ಯಂಕ ಏರಿಕೆಯಾಗಿದೆ.

ಬುಧವಾರದ ವಹಿವಾಟಿನಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹3,314 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

1 ಕೋಟಿ ಹೊಸ ಹೂಡಿಕೆದಾರರ ಸೇರ್ಪಡೆ

ನವದೆಹಲಿ (ಪಿಟಿಐ): 'ಕಳೆದ ಐದು ತಿಂಗಳಲ್ಲಿ ಷೇರುಪೇಟೆಗೆ ಹೊಸದಾಗಿ ಒಂದು ಕೋಟಿ ಹೂಡಿಕೆದಾರರು ಸೇರ್ಪಡೆಯಾಗಿದ್ದು, ಹೂಡಿಕೆದಾರರ ಒಟ್ಟು ಸಂಖ್ಯೆಯು 10 ಕೋಟಿ ದಾಟಿದೆ' ಎಂದು ರಾಷ್ಟ್ರೀಯ ಷೇರು ವಿನಿಮಯ ಕೇಂದ್ರ (ಎನ್‌ಎಸ್‌ಇ) ತಿಳಿಸಿದೆ.

ಕಳೆದ ಐದು ವರ್ಷಗಳಲ್ಲಿ ಷೇರುಪೇಟೆಯಲ್ಲಿ ಹೂಡಿಕೆದಾರರ ಸಂಖ್ಯೆಯು ಮೂರು ಪಟ್ಟು ಹೆಚ್ಚಾಗಿದೆ. ಡಿಜಿಟಲೀಕರಣ, ಹೂಡಿಕೆ ಬಗ್ಗೆ ಅರಿವು ಹೆಚ್ಚಳ ಹಾಗೂ ಮಾರುಕಟ್ಟೆಯ ಸುಸ್ಥಿರ ಬೆಳವಣಿಗೆಯಿಂದಾಗಿ ಹೂಡಿಕೆದಾರರ ಸಂಖ್ಯೆ ಹೆಚ್ಚಾಗುತ್ತಿದೆ ಎಂದು ತಿಳಿಸಿದೆ.

ವಿನಿಮಯ ದರ

$ ಡಾಲರ್	83.97
£ ಪೌಂಡ್	106.43
€ ಯುರೊ	91.76
¥ ಯೆನ್ (100ಕ್ಕೆ)	57

ಡಿಸೆಂಬರ್‌ನಲ್ಲಿ 'ಟೈ ಜಾಗತಿಕ ಶೃಂಗಸಭೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇದೇ ವರ್ಷದ ಡಿಸೆಂಬರ್ 9–12ರ ವರೆಗೆ ನಡೆಯಲಿರುವ 'ಟೈ ಜಾಗತಿಕ ಶೃಂಗಸಭೆ–2024 (ಟಿಜಿಎಸ್–24)'ರಲ್ಲಿ 750ಕ್ಕೂ ಹೆಚ್ಚು ಹೂಡಿಕೆದಾರರು ಭಾಗಿಯಾಗಲಿದ್ದಾರೆ. ಭಾಗಿಯಾಗುವ ನವೋದ್ಯಮಗಳಿಗೆ ಹೂಡಿಕೆಯ ವಿಪುಲ ಅವಕಾಶ ಇರಲಿದೆ ಎಂದು ಟೈ-ಬೆಂಗಳೂರು ಅಧ್ಯಕ್ಷ ಮದನ್ ಪದಕೆ ಹೇಳಿದರು.

ನಗರದಲ್ಲಿ ಗುರುವಾರ ಆಯೋಜಿಸಲಾಗಿದ್ದ ಟಿಜಿಎಸ್–24 ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

ಶೃಂಗಸಭೆಯ ಲಾಂಛನ ಅನಾವರಣ ಮಾಡಿದ ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ, 'ಭಾರತದಲ್ಲಿ ಇಂತಹ ಶೃಂಗಸಭೆ ನಡೆಸುವುದಾದರೆ, ಅದಕ್ಕೆ ಕರ್ನಾಟಕ ಮಾತ್ರವೇ ಅತ್ಯುತ್ತಮ ಮತ್ತು ಏಕೈಕ ಆಯ್ಕೆ' ಎಂದರು.

'ಉದ್ಯಮಗಳು ರಾಜ್ಯವನ್ನು ಬಿಟ್ಟು ಹೋಗುತ್ತಿವೆ. ತೆಲಂಗಾಣವು ರಾಜ್ಯದ ಉದ್ಯಮಗಳನ್ನು ಸೆಳೆಯುತ್ತಿದೆ ಎಂದು ಪದೇ ಪದೇ ಹೇಳಲಾಗುತ್ತಿದೆ. ಆದರೆ, ಇದರಲ್ಲಿ ಹುರುಳಿಲ್ಲ. ರಾಜ್ಯವು ಆರ್ಥಿಕ ವರ್ಷವೊಂದರಲ್ಲಿ ₹4.5 ಲಕ್ಷ ಕೋಟಿಯಷ್ಟು ಮೌಲ್ಯದ ಐಟಿ ಸೇವೆಯನ್ನು ರಫ್ತು ಮಾಡುತ್ತಿದ್ದು, ವಾರ್ಷಿಕ ಶೇ 29ರಷ್ಟು ಬೆಳವಣಿಗೆ ದಾಖಲಿಸುತ್ತಿದೆ. ತೆಲಂಗಾಣದ ಐ.ಟಿ ರಫ್ತು ಮೊತ್ತ ₹2.2 ಲಕ್ಷ ಕೋಟಿ. ಅವರು ನಮ್ಮನ್ನು ಹಿಂದಿಕ್ಕಲು ಸಾಧ್ಯವೇ' ಎಂದು ಪ್ರಶ್ನಿಸಿದರು.



ಸಚಿವರಾದ ಎಂ.ಬಿ.ಪಾಟೀಲ ಮತ್ತು ಪ್ರಿಯಾಂಕ್ ಖರ್ಗೆ ಅವರು, 'ಟೈ ಜಾಗತಿಕ ಶೃಂಗಸಭೆ–2024'ರ ಲಾಂಛನವನ್ನು ಅನಾವರಣ ಮಾಡಿದರು. ಟೈ ಬೆಂಗಳೂರು ಅಧ್ಯಕ್ಷ ಮದನ್ ಪದಕೆ ಇದ್ದರು

ಬೆಂಗಳೂರಿನಲ್ಲಿ 'ನವೋದ್ಯಮ ಪಾರ್ಕ್' ಆರಂಭಿಸಲಾಗುತ್ತದೆ. ಕೈಗೆಟುಕುವ ದರದಲ್ಲಿ ಭೂಮಿ, ಕಚೇರಿ, ಸಕಲ ಸವಲತ್ತು ನೀಡಲಾಗುತ್ತದೆ

ಎಂ.ಬಿ.ಪಾಟೀಲ, ಕೈಗಾರಿಕಾ ಸಚಿವ

ಜಾಗತಿಕ ಶೃಂಗಸಭೆಗಳಲ್ಲಿ ಭಾರತೀಯ ಮಾದರಿಯನ್ನು ರೂಪಿಸಬೇಕಿದೆ. ಆ ಕೆಲಸವನ್ನು ಕರ್ನಾಟಕದಿಂದಲೇ ಆರಂಭಿಸಲಾಗಿದೆ

ಶರತ್ ಬಚ್ಚೇಗೌಡ

ಅಧ್ಯಕ್ಷ, ಕಿಯೋನಿಕ್ಸ್

- ಬೆಂಗಳೂರು ಅಂತರರಾಷ್ಟ್ರೀಯ ಪ್ರದರ್ಶನ ಕೇಂದ್ರದಲ್ಲಿ ಶೃಂಗಸಭೆ
- ಡಿ. 12ರಂದು ಮೈಸೂರಿನಲ್ಲಿ ಸಮಾರೋಪ ಸಮಾರಂಭ. ಬೆಂಗಳೂರಿನಿಂದ ಮೈಸೂರಿಗೆ ಬಸ್ ಯಾತ್ರೆ
- 50 ದೇಶಗಳ 25,000 ಉದ್ಯಮಿಗಳು, 5,000 ನವೋದ್ಯಮಗಳು ಭಾಗಿಯಾಗುವ ನಿರೀಕ್ಷೆ

ನವೋದ್ಯಮ ಸ್ಪರ್ಧೆ: ₹2.5 ಕೋಟಿ ಬಹುಮಾನ

'ಜಾಗತಿಕ ನವೋದ್ಯಮ ಸವಾಲು–ವೆಂಚುರೈಸ್'ನ 2ನೇ ಆವೃತ್ತಿಗೆ ಸಚಿವ ಎಂ.ಬಿ. ಪಾಟೀಲ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಪಾಟೀಲ, 'ವೆಂಚುರೈಸ್–24ಕ್ಕೆ ಅರ್ಜಿ ಆಹ್ವಾನ ಮಾಡಲಾಗಿದೆ. ವಿಶ್ವದಾದ್ಯಂತ 1000ಕ್ಕೂ ಹೆಚ್ಚು ನವೋದ್ಯಮಗಳು ಈ ಸ್ಪರ್ಧೆಯಲ್ಲಿ ಭಾಗಿಯಾಗುವ ನಿರೀಕ್ಷೆ ಇದೆ. ಮೂರು ಸುತ್ತುಗಳಲ್ಲಿ ನಡೆಯುವ ಸ್ಪರ್ಧೆಯಲ್ಲಿ ಮುಂಚೂಣಿಗೆ ಬರುವ ನವೋದ್ಯಮಗಳಿಗೆ ₹2.50 ಕೋಟಿ ಮೊತ್ತದ ಬಹುಮಾನ ನೀಡಲಾಗುವುದು' ಎಂದರು.

'ರಾಜ್ಯದಲ್ಲಿ ದಶಕಗಳ ಹಿಂದೆಯೇ ಎಚ್‌ಎಂಟಿ ಆರಂಭವಾಗಿತ್ತು. ರಾಜ್ಯವನ್ನು ತಯಾರಿಕಾ ಕೇಂದ್ರವನ್ನಾಗಿ ರೂಪಿಸುವ ಅವಕಾಶವನ್ನು ನಾವು ಕೈಚೆಲ್ಲಿದೆವು. ಈಗ ಮತ್ತೆ ಅಂತಹ ಅವಕಾಶ ಬಂದೊದಗಿದ್ದು, ಸರ್ಕಾರವು ಅಗತ್ಯ ಕ್ರಮ ತೆಗೆದುಕೊಳ್ಳಲಿದೆ' ಎಂದರು.

₹5,188 ಕೋಟಿ ಕಬ್ಬು ಬಿಲ್ ಬಾಕಿ



ನವದೆಹಲಿ (ಪಿಟಿಐ): ಜುಲೈ ಅಂತ್ಯದವರೆಗೆ ಸಕ್ಕರೆ ಕಾರ್ಖಾನೆಗಳು ಕಬ್ಬು ಬೆಳೆಗಾರರಿಗೆ ₹1.06 ಲಕ್ಷ ಕೋಟಿ ಪಾವತಿಸಿದ್ದು, ಇನ್ನೂ ₹5,188 ಕೋಟಿ ಮೊತ್ತವನ್ನು ಬಾಕಿ ಉಳಿಸಿಕೊಂಡಿವೆ ಎಂದು ಕೇಂದ್ರ ಸರ್ಕಾರವು, ಲೋಕಸಭೆಗೆ ತಿಳಿಸಿದೆ.

'ರೈತರಿಗೆ ಕಬ್ಬು ಬಾಕಿ ಪಾವತಿಯು ನಿರಂತರ ಪ್ರಕ್ರಿಯೆಯಾಗಿದೆ. ಹಂತ ಹಂತವಾಗಿ ಬಾಕಿ ಮೊತ್ತ ಪಾವತಿಸುತ್ತವೆ' ಎಂದು ಕೇಂದ್ರ ಆಹಾರ ಮತ್ತು ಗ್ರಾಹಕ ವ್ಯವಹಾರಗಳ ರಾಜ್ಯ ಖಾತೆ ಸಚಿವೆ ನಿಮುಬೇನ್ ಜಯಂತಿಭಾಯ್ ಬಮ್ಹಾನಿಯಾ ತಿಳಿಸಿದ್ದಾರೆ.

2023–24ರ ಮಾರುಕಟ್ಟೆ ವರ್ಷದಲ್ಲಿ (ಅಕ್ಟೋಬರ್–ಸೆಪ್ಟೆಂಬರ್) ರೈತರಿಗೆ ಸಕ್ಕರೆ ಕಾರ್ಖಾನೆಗಳು ಪಾವತಿಸಬೇಕಿರುವ ಮೊತ್ತವು ₹1.11 ಲಕ್ಷ ಕೋಟಿ ಆಗಿದೆ. ಉತ್ತರ ಪ್ರದೇಶದಲ್ಲಿರುವ ಕಾರ್ಖಾನೆಗಳು ಬೆಳೆಗಾರರಿಗೆ ಪಾವತಿಸಬೇಕಿರುವ ಮೊತ್ತ ₹35,910 ಕೋಟಿ ಆಗಿದೆ. ಈ ಪೈಕಿ ₹32,470 ಕೋಟಿ ಪಾವತಿಸಿವೆ. ಇನ್ನೂ ₹3,340 ಕೋಟಿ ಬಾಕಿ ಉಳಿಸಿಕೊಂಡಿವೆ ಎಂದು ವಿವರಿಸಿದ್ದಾರೆ.

ಬೆಳ್ಳಿ ದರ ಕೆ.ಜಿಗೆ ₹1,100 ಇಳಿಕೆ



ನವದೆಹಲಿ/ ಬೆಂಗಳೂರು (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ಬೆಳ್ಳಿ ಧಾರಣೆಯಲ್ಲಿ ಇಳಿಕೆಯಾಗಿದ್ದರೆ, ಚಿನ್ನದ ದರವು ಸ್ಥಿರವಾಗಿದೆ.

ಬೆಳ್ಳಿ ದರವು ಕೆ.ಜಿಗೆ ₹1,100 ಕಡಿಮೆಯಾಗಿ, ₹81,100ರಂತೆ ಮಾರಾಟವಾಗಿದೆ. 10 ಗ್ರಾಂ ಚಿನ್ನದ ಧಾರಣೆ ₹71,350 ಇದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ಹೇಳಿದೆ.

ಬೆಂಗಳೂರಿನಲ್ಲಿ 10 ಗ್ರಾಂ ಚಿನ್ನದ ದರವು ₹71,000 ಮತ್ತು ಕೆ.ಜಿ ಬೆಳ್ಳಿ ಧಾರಣೆಯು ₹81,300 ಇದೆ.

ಜಗತ್ತಿನ ಬೃಹತ್ ಅನಿಲ ನಿಕ್ಷೇಪ ಪತ್ತೆ: ಖಚಿತಪಡಿಸಿದ ಚೀನಾ

ಬೀಜಿಂಗ್(ಪಿಟಿಐ): ವಿವಾದಿತ ದಕ್ಷಿಣ ಚೀನಾ ಸಮುದ್ರದಲ್ಲಿ ಜಗತ್ತಿನ ಅತಿ ದೊಡ್ಡ ನೈಸರ್ಗಿಕ ಅನಿಲ ನಿಕ್ಷೇಪ ಪತ್ತೆ ಮಾಡಲಾಗಿದೆ ಎಂದು ಚೀನಾ ಹೇಳಿದೆ.

ದಕ್ಷಿಣ ಚೀನಾ ಸಮುದ್ರ ಪ್ರದೇಶ ವಿಚಾರವಾಗಿ ಚೀನಾ ಮತ್ತು ಇತರೆ ದೇಶಗಳ ನಡುವೆ ಈಗಾಗಲೇ ರಾಜತಾಂತ್ರಿಕ ಮತ್ತು ಸೇನೆ ಮಟ್ಟದಲ್ಲಿ ಸಂಘರ್ಷ ನಡೆಯುತ್ತಿದೆ. ಈಗ, ನೈಸರ್ಗಿಕ ಅನಿಲ ನಿಕ್ಷೇಪ ಪತ್ತೆಯಿಂದಾಗಿ ಈ ಸಂಘರ್ಷ ಮತ್ತಷ್ಟು ಉಲ್ಬಣಿಸಲಿದೆ ಎಂದು ನಿರೀಕ್ಷಿಸಲಾಗಿದೆ.

'ಲಿಂಗ್‌ಶುಯಿ 36–1' ಎಂದು ಗುರುತಿಸಲಾಗುವ, ಆಳವಿಲ್ಲದ ಈ ಪ್ರದೇಶದಲ್ಲಿ 10 ಸಾವಿರ ಕೋಟಿ ಘನ ಮೀಟರ್‌ಗಳಷ್ಟು ಅನಿಲ ಪತ್ತೆಯಾಗಿದೆ ಎಂದು ಚೀನಾದ 'ನ್ಯಾಷನಲ್ ಆಫ್‌ಶೋರ್ ಆಯಿಲ್ ಕೋ–ಆಪರೇಷನ್' (ಸಿಎನ್‌ಒಒಸಿ) ಎಂಬ ಸಂಸ್ಥೆ ಬುಧವಾರ ಘೋಷಿಸಿದೆ.

ಚೀನಾದ ಹೈನನ್ ಪ್ರಾಂತ್ಯದ ಆಗ್ನೇಯ ಭಾಗದ ಸಮುದ್ರದಲ್ಲಿ ಈ ನಿಕ್ಷೇಪ ಪತ್ತೆಯಾಗಿದೆ ಎಂದು ಸಿಎನ್‌ಒಒಸಿ ತಿಳಿಸಿದೆ. ಆದರೆ, ಈ ಅನಿಲ ನಿಕ್ಷೇಪ ಇರುವ ಪ್ರದೇಶವು ವಿವಾದಿತ ದಕ್ಷಿಣ ಚೀನಾ ಸಮುದ್ರ ವ್ಯಾಪ್ತಿಯೊಳಗೆ ಇದೆಯೋ ಅಥವಾ ಇಲ್ಲವೋ ಎಂಬ ಬಗ್ಗೆ ಅದು ಯಾವುದೇ ಮಾಹಿತಿ ನೀಡಿಲ್ಲ.

ಜಟಾಪಟಿ: ದಕ್ಷಿಣ ಚೀನಾ ಸಮುದ್ರ (ಎಸ್‌ಸಿಎಸ್) ಪ್ರದೇಶ ವಿಚಾರವಾಗಿ ಹಲವು ದೇಶಗಳು ಚೀನಾದೊಂದಿಗೆ ಸಂಘರ್ಷ ನಡೆಸುತ್ತಲೇ ಇವೆ. ಇದು ತನಗೆ ಸೇರಿದ್ದು ಎಂದು ಹೇಳುತ್ತಲೇ ಇರುವ ಚೀನಾ, ಈ ಪ್ರದೇಶದಲ್ಲಿ ತನ್ನ ಸೇನಾ ಸಾಮರ್ಥ್ಯವನ್ನು ವೃದ್ಧಿಸುತ್ತಿದೆ.

ಚೀನಾ ವಾದವನ್ನು ವಿರೋಧಿಸುತ್ತಿರುವ, ಫಿಲಿಪ್ಪೀನ್ಸ್, ವಿಯೆಟ್ನಾಂ, ಮಲೇಷ್ಯಾ, ಬ್ರೂನಿ, ತೈವಾನ್ ಎಸ್‌ಸಿಎಸ್ ಮೇಲೆ ತಮಗೂ ಹಕ್ಕಿದೆ ಎನ್ನುತ್ತವೆ. ಅಮೆರಿಕ, ಐರೋಪ್ಯ ಒಕ್ಕೂಟ, ಜಪಾನ್ ಹಾಗೂ ಇತರ ಮಿತ್ರರಾಷ್ಟ್ರಗಳು ಈ ಸಣ್ಣ ದೇಶಗಳ ಬೆಂಬಲಕ್ಕೆ ನಿಂತಿವೆ.

ಅಡಿಕೆ ಧಾರಣೆ (₹ಗಳಲ್ಲಿ)

ಮಾರುಕಟ್ಟೆ	ವಿಧ	ಧಾರಣೆ
ಬಂಟ್ವಾಳ	ಕೋಕ	18000-28500
	ಹೊಸತು	28500-38500
	ಹಳತು	38500-46500
ಚಿತ್ರದುರ್ಗ	ಅಪಿ	49600-50000
	ಬೆಟ್ಟೆ	35129-35559
	ಕೆಂಪುಗೋಟು	29619-30099
	ರಾಶಿ	49139-49569
ಕಾರ್ಕಳ	ಹೊಸತು	25000-38500
	ಹಳತು	30000-46500
ಕುಮಟ	ಹಳೆಚಾಲಿ	37099-39899
	ಹೊಸಚಾಲಿ	30669-35369
	ಚಿಪ್ಪು	20119-31369
	ಕೋಕ	9109-26309
ಸಾಗರ	ಬಿಳಿಗೋಟು	10786-25099
	ಚಾಲಿ	26699-32899
	ಕೋಕ	10321-28199
	ಕೆಂಪುಗೋಟು	14389-33509
	ರಾಶಿ	36899-50499
	ಸಿಪ್ಪೆಗೋಟು	11669-17610
ಶಿವಮೊಗ್ಗ	ಬೆಟ್ಟೆ	42899-55009
	ಗೊರಬಲು	17900-36899
	ರಾಶಿ	30000-50709
	ಸರಕು	40000-87210
ಸಿದ್ದಾಪುರ	ಬಿಳಿಗೋಟು	25809-28709
	ಚಾಲಿ	32509-34799
	ಕೋಕ	25899-27399
	ರಾಶಿ	47000-48099
ಶಿರಸಿ	ಬೆಟ್ಟೆ	32169-41190
	ಬಿಳಿಗೋಟು	23069-29899
	ಚಾಲಿ	32866-36611
	ಕೆಂಪುಗೋಟು	23699-26299
	ರಾಶಿ	44181-48399
ಯಲ್ಲಾಪುರ	ಅಪಿ	62535-62535
	ಬಿಳಿಗೋಟು	20112-31000
	ಚಾಲಿ	31299-36401
	ಕೋಕ	8012-28899
	ಕೆಂಪುಗೋಟು	24199-30899
	ರಾಶಿ	44603-54239
	ತಟ್ಟಿಬೆಟ್ಟೆ	31799-38780

ಮುಂಬೈ ಧಾರಣೆ (ಶೇಂಗಾ)

08-08-2024

ಜಾವಾ 70/80(ಹೊಸ)	11500-11600
ಜಾವಾ 80/90(ಹೊಸ)	10900-11000
ದಪ್ಪ ಮಧ್ಯಪ್ರದೇಶ(ಹೊಸ)	9300-9400
ದಪ್ಪ ಗುಜರಾತ್(ಹೊಸ)	10100-10200

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1530 (1550)
ಒಂದು ವಾರದ ಡೆಲಿವರಿ	1525 (1545)
ಸೋಯಾ ಕಚ್ಚಾ	885 (885)
ಪಾಮ್ ವಾರದ ಡೆಲಿವರಿ	910 (910)
ಸೂರ್ಯಕಾಂತಿ ಎಣ್ಣೆ ಕಚ್ಚಾ	910 (910)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಚಿನ್ನ 10ಗ್ರಾಂ	₹69,000 (69,550)
ಬೆಳ್ಳಿ ಕೆ.ಜಿ	₹79,050 (79,100)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಕರೆ ಮಾಡಿದವರ ಹೆಸರು ಪ್ರದರ್ಶನಕ್ಕೆ ಕ್ರಮ

ನವದೆಹಲಿ (ಪಿಟಿಐ): ಮೊಬೈಲ್ ಪರದೆ ಮೇಲೆ ಕರೆ ಮಾಡಿದ ವ್ಯಕ್ತಿಯ ಹೆಸರು ತೋರಿಸುವ ಸೇವಾ ವ್ಯವಸ್ಥೆಯ (ಸಿಎನ್‌ಎಪಿ) ಪರೀಕ್ಷೆ ಹಾಗೂ ಅದರ ಅನುಷ್ಠಾನಕ್ಕೆ ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಕೇಂದ್ರ ಸರ್ಕಾರವು, ಗುರುವಾರ ಲೋಕಸಭೆಗೆ ತಿಳಿಸಿದೆ.

ಟೆಲಿಕಾಂ ಕಂಪನಿಗಳು ತಮ್ಮ ಬಳಕೆದಾರರ ಕಾಲರ್ ಐಡಿ ಸೌಲಭ್ಯ ಅಥವಾ ಕರೆ ಮಾಡುವವರ ನಂಬರ್ ಬದಲಿಗೆ, ಅವರ ಹೆಸರು ತೋರಿಸುವ ಫೀಚರ್‌ಗಳನ್ನು ಒದಗಿಸುವಂತೆ ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರವು (ಟ್ರಾಯ್) ಶಿಫಾರಸು ಮಾಡಿದೆ.

'ಫೆಬ್ರುವರಿ 23ರಂದು ಈ ಶಿಫಾರಸು ಸ್ವೀಕರಿಸಲಾಗಿದೆ' ಎಂದು ಕೇಂದ್ರ ಸಂವಹನ ಖಾತೆಯ ರಾಜ್ಯ ಸಚಿವ ಪೆಮ್ಮಸಾನಿ ಚಂದ್ರಶೇಖರ್ ಅವರು, ರಾಜ್ಯಸಭೆಗೆ ನೀಡಿರುವ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಎಲ್‌ಐಸಿಗೆ ₹10,461 ಕೋಟಿ ಲಾಭ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಭಾರತೀಯ ಜೀವ ವಿಮಾ ನಿಗಮ (ಎಲ್‌ಐಸಿ), 2024–25ನೇ ಆರ್ಥಿಕ ವರ್ಷದ ಜೂನ್ ತ್ರೈಮಾಸಿಕದಲ್ಲಿ ₹10,461 ಕೋಟಿ ನಿವ್ವಳ ಲಾಭ ಗಳಿಸಿದೆ.

ಹಿಂದಿನ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹9,544 ಕೋಟಿ ಲಾಭ ಗಳಿಸಿತ್ತು. ಈ ಲಾಭಕ್ಕೆ ಹೋಲಿಸಿದರೆ ಶೇ 10ರಷ್ಟು ಏರಿಕೆಯಾಗಿದೆ ಎಂದು ಕಂಪನಿಯು ಗುರುವಾರ ಷೇರುಪೇಟೆಗೆ ತಿಳಿಸಿದೆ.

ಕಳೆದ ಜೂನ್ ತ್ರೈಮಾಸಿಕದಲ್ಲಿ ₹1.88 ಲಕ್ಷ ಕೋಟಿ ವರಮಾನ ಗಳಿಸಿತ್ತು. ಈ ಅವಧಿಯಲ್ಲಿ ₹2.10 ಲಕ್ಷ ಕೋಟಿ ಗಳಿಸಿದೆ. ಮೊದಲ ವರ್ಷದಲ್ಲಿ ಪ್ರೀಮಿಯಂ ಮೂಲಕ ₹7,470 ಕೋಟಿ ಮತ್ತು ಪ್ರೀಮಿಯಂ ನವೀಕರಣದಿಂದ ₹56,429 ಕೋಟಿ ಗಳಿಸಿದೆ.

ಹೂಡಿಕೆ ಮೂಲಕ ಗಳಿಸಿರುವ ನಿವ್ವಳ ವರಮಾನ ₹96,183 ಕೋಟಿ ಆಗಿದೆ. ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹90,309 ಕೋಟಿ ಗಳಿಸಲಾಗಿತ್ತು. ಸಾಲ ಮರು ಪಾವತಿಸುವ ಸಾಮರ್ಥ್ಯವು ಶೇ 1.89ರಿಂದ ಶೇ 1.99ಕ್ಕೆ ಏರಿಕೆಯಾಗಿದೆ ಎಂದು ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ಹತ್ತಿ ಮೇಲಿನ ಜಿಎಸ್‌ಟಿ ವಾಪಸ್‌ಗೆ ಆಗ್ರಹ

ನವದೆಹಲಿ: ಭಾರತವು ಹತ್ತಿ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಲು ಹತ್ತಿಯ ಮೇಲೆ ಈಗಿರುವ ಎಪಿಎಂಸಿ ಸೆಸ್ ಮತ್ತು ಜಿಎಸ್‌ಟಿಯನ್ನು ತೆಗೆದು ಹಾಕಬೇಕು ಎಂದು ಬಿಜೆಪಿಯ ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ ಆಗ್ರಹಿಸಿದರು.

ಮೇಲ್ಮನೆಯಲ್ಲಿ ಗುರುವಾರ ಮಾತನಾಡಿದ ಅವರು, 'ಹೊರದೇಶಗಳಿಂದ ಕಚ್ಚಾ ಹತ್ತಿಯ ಆಮದು ಮಾಡಿಕೊಳ್ಳುವುದನ್ನು ನಿಷೇಧಿಸಬೇಕು. ಗಂಭೀರ ಸಮಸ್ಯೆ ಎದುರಿಸುತ್ತಿರುವ ಹತ್ತಿ ಬೆಳೆಗಾರರ ಹಿತ ಕಾಪಾಡಬೇಕು. ಜೊತೆಗೆ 4,000 ಹತ್ತಿ ಜಿನ್ನಿಂಗ್ ಕೈಗಾರಿಕೆಗಳು ಹಾಗೂ 3,000 ನೂಲು ಗಿರಣಿಗಳು ಸೇರಿದಂತೆ ದೇಶೀಯ ಜವಳಿ ಉದ್ಯಮವನ್ನು ರಕ್ಷಿಸಲು ಸರ್ಕಾರವು ಅಗತ್ಯ ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದರು.

ಶ್ರೀಲಂಕಾ: ಒಮ್ಮತದ ತಮಿಳು ಅಭ್ಯರ್ಥಿ ಘೋಷಣೆ

ಕೊಲಂಬೊ (ಪಿಟಿಐ): ಶ್ರೀಲಂಕಾದ ಅಧ್ಯಕ್ಷೀಯ ಚುನಾವಣೆಗೆ ಅಲ್ಲಿನ ತಮಿಳು ಪಕ್ಷಗಳ ಸಮೂಹವು ಪಾಕಿಯಾಸೆಲ್ವಂ ಅರಿಯನೇತ್ರನ್ ಅವರನ್ನು ತಮ್ಮ ಒಮ್ಮತದ ಅಭ್ಯರ್ಥಿಯಾಗಿ ಗುರುವಾರ ಘೋಷಿಸಿವೆ.

ದೇಶದ ಪ್ರಮುಖ ತಮಿಳು ಪಕ್ಷವಾದ ಐಟಿಎಕೆ ಇದಕ್ಕೆ ಬೆಂಬಲ ವ್ಯಕ್ತಪಡಿಸಿಲ್ಲ. ಶ್ರೀಲಂಕಾದ ಅಧ್ಯಕ್ಷೀಯ ಚುನಾವಣೆ ಸೆಪ್ಟೆಂಬರ್ 21ರಂದು ಜರುಗಲಿದೆ. ದೇಶದ ಉತ್ತರ ಮತ್ತು ಪೂರ್ವ ಭಾಗದ ತಮಿಳು ಪಕ್ಷಗಳಾದ ಟಿಇಎಲ್‌ಒ, ಪಿಎಲ್‌ಒಟಿಇ, ಟಿಪಿಎ, ಟಿಎನ್‌ಪಿ ಮತ್ತು ಇಪಿಆರ್‌ಎಲ್‌ಎಫ್‌ಗಳ ನಾಯಕರು 'ತಮಿಳು ಪೀಪಲ್ಸ್ ಕಾಂಗ್ರೆಸ್ ಅಸೋಸಿಯೇಷನ್' ಎಂಬ ನಾಗರಿಕ ಗುಂಪಿನೊಂದಿಗೆ ಒಮ್ಮತದ ಅಭ್ಯರ್ಥಿಯನ್ನು ಕಣಕ್ಕಿಳಿಸುವ ಕುರಿತು ಜುಲೈನಲ್ಲಿ ಒಪ್ಪಂದಕ್ಕೆ ಸಹಿ ಮಾಡಿದ್ದರು.

ಸುನಿತಾ, ವಿಲ್ಮೋರ್ ಫೆಬ್ರುವರಿಗೆ ವಾಪಸ್ ಸಾಧ್ಯತೆ: ನಾಸಾ ಹೇಳಿಕೆ

ವಾಷಿಂಗ್ಟನ್(ರಾಯಿಟರ್ಸ್): ಗಗನನೌಕೆಯಲ್ಲಿ ಕಂಡುಬಂದ ತಾಂತ್ರಿಕ ದೋಷದಿಂದ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿಯೇ (ಐಎಸ್‌ಎಸ್) ಉಳಿದುಕೊಂಡಿರುವ ಗಗನಯಾತ್ರಿಗಳಾದ ಸುನಿತಾ ವಿಲಿಯಮ್ಸ್ ಹಾಗೂ ಬುಚ್ ವಿಲ್ಮೋರ್ ಅವರನ್ನು ಭೂಮಿಗೆ ಕರೆತರುವ ಕುರಿತು ಸ್ಪೇಸ್‌ಎಕ್ಸ್ ಜೊತೆ ನಾಸಾ ಚರ್ಚೆ ನಡೆಸುತ್ತಿದೆ.

ಒಂದು ವೇಳೆ, ಬೋಯಿಂಗ್‌ನ ಸ್ಟಾರ್‌ಲೈನರ್ ಗಗನನೌಕೆ ಸುರಕ್ಷಿತವಲ್ಲ ಎಂದಾದಲ್ಲಿ, ಸ್ಪೇಸ್‌ಎಕ್ಸ್‌ನ 'ಡ್ರ್ಯಾಗನ್' ಗಗನನೌಕೆಯಲ್ಲಿ ಈ ಇಬ್ಬರು ಗಗನಯಾತ್ರಿಗಳನ್ನು ಮುಂದಿನ ವರ್ಷ ಫೆಬ್ರುವರಿ ವೇಳೆಗೆ ಮರಳಿ ಭೂಮಿಗೆ ಕರೆತರುವ ಯೋಜನೆ ರೂಪಿಸಲಾಗುತ್ತಿದೆ ಎಂದು ನಾಸಾ ತಿಳಿಸಿದೆ.

ಬೋಯಿಂಗ್‌ನ ಸ್ಟಾರ್‌ಲೈನರ್ ಗಗನನೌಕೆಯಲ್ಲಿ ಈ ಇಬ್ಬರು ಗಗನಯಾತ್ರಿಗಳು ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ತೆರಳಿದ್ದಾರೆ. ನಿಗದಿತ ಯೋಜನೆಯಂತೆ, ಎಂಟು ದಿನ ಇವರು ಬಾಹ್ಯಾಕಾಶ ನಿಲ್ದಾಣದಲ್ಲಿ ಉಳಿದು ಕೊಳ್ಳುವುದಿತ್ತು. ಆದರೆ, ಸ್ಟಾರ್‌ಲೈನರ್‌ನ ಪ್ರೊಪೆಲ್ಷನ್ ಸಿಸ್ಟಮ್‌ನಲ್ಲಿ ಕಾಣಿಸಿಕೊಂಡ ತೊಂದರೆ ಕಾರಣ ಅವರು ಭೂಮಿಗೆ ಮರಳುವುದನ್ನು ಮುಂದೂಡಲಾಗಿದೆ.

ಇನ್ನೊಂದೆಡೆ, ಸ್ಟಾರ್‌ಲೈನರ್ ಈ ಗಗನಯಾತ್ರಿಗಳನ್ನು ಸುರಕ್ಷಿತವಾಗಿ ಭೂಮಿಗೆ ಕರೆದುಕೊಂಡು ಬರುವ ಸಾಮರ್ಥ್ಯ ಹೊಂದಿದೆಯೇ ಎಂಬ ಬಗ್ಗೆ ಪ್ರಶ್ನೆಗಳು ಉದ್ಭವಿಸಿವೆ. ಈ ಕಾರಣಕ್ಕಾಗಿಯೇ ಸ್ಪೇಸ್‌ಎಕ್ಸ್ ಸಂಸ್ಥೆಯ 'ಡ್ರ್ಯಾಗನ್' ಗಗನನೌಕೆ ಮೂಲಕ ಇವರನ್ನು ಭೂಮಿಗೆ ಕರೆತರುವ ಯೋಜನೆಯನ್ನು ಸಿದ್ಧಪಡಿಸಲಾಗುತ್ತಿದೆ.

'ಸುನಿತಾ ವಿಲಿಯಮ್ಸ್ ಹಾಗೂ ಬುಚ್ ವಿಲ್ಮೋರ್ ಅವರನ್ನು ಮರಳಿ ಕರೆ ತರುವುದಕ್ಕಾಗಿ ಡ್ರ್ಯಾಗನ್ ನೌಕೆಯಲ್ಲಿ ಎರಡು ಸೀಟುಗಳನ್ನು ಖಾಲಿ ಬಿಡುವಂತೆ ಸ್ಪೇಸ್‌ಎಕ್ಸ್ ಜೊತೆ ಚರ್ಚಿಸಲಾಗುತ್ತಿದೆ' ಎಂದು ನಾಸಾ ತಿಳಿಸಿದೆ.

'ತನ್ನ ಗಗನಯಾತ್ರಿಗಳನ್ನು ಕರೆತರಲು ಸ್ಪೇಸ್‌ಎಕ್ಸ್ ನೆರವು ಪಡೆದುಕೊಳ್ಳಲು ನಾಸಾ ನಿರ್ಧರಿಸಿದಲ್ಲಿ, ನಮ್ಮ ಗಗನನೌಕೆ ಸ್ಟಾರ್‌ಲೈನರ್ ಅನ್ನು ಸಿಬ್ಬಂದಿರಹಿತವಾಗಿ ಮರಳಿ ತರುವುದಕ್ಕೆ ಅಗತ್ಯವಿರುವ ತಾಂತ್ರಿಕ ಬದಲಾವಣೆಗಳನ್ನು ಮಾಡಲಾಗುವುದು' ಎಂದು ಬೋಯಿಂಗ್ ಸಂಸ್ಥೆ ವಕ್ತಾರ ಹೇಳಿದ್ದಾರೆ.

ಗಗನಯಾನ ಕ್ಷೇತ್ರದಲ್ಲಿ ತನ್ನ ಛಾಪು ಮೂಡಿಸುವುದಕ್ಕೆ ಸಂಬಂಧಿಸಿ ಬೋಯಿಂಗ್ ಸಂಸ್ಥೆ ಹಲವು ವರ್ಷಗಳಿಂದ ಸ್ಪೇಸ್‌ಎಕ್ಸ್ ಜೊತೆ ಪೈಪೋಟಿ ನಡೆಸುತ್ತಿದೆ. ಹೀಗಾಗಿ, ನಾಸಾ ಈ ಇಬ್ಬರು ಗಗನಯಾತ್ರಿಗಳನ್ನು ಸ್ಪೇಸ್‌ಎಕ್ಸ್‌ನ ನೆರವಿನಿಂದ ಮರಳಿ ಕರೆತಂದಲ್ಲಿ, ಅದನ್ನು ಬೋಯಿಂಗ್ ಪಾಲಿಗೆ ದೊಡ್ಡ ಹಿನ್ನಡೆ ಎಂದು ವಿಶ್ಲೇಷಿಸಲಾಗುತ್ತಿದೆ.



ಗಗನಯಾತ್ರಿಗಳಾದ ಬುಚ್ ವಿಲ್ಮೋರ್ ಹಾಗೂ ಸುನಿತಾ ವಿಲಿಯಮ್ಸ್ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ ತಲುಪಿದ್ದ ನಂತರದ ಕ್ಷಣ —ಎಎಫ್‌ಪಿ ಚಿತ್ರ

ವಿನೇಶ್‌ಗೆ ಬೆಳ್ಳಿ ಕೊಡಿ: ಜೋರ್ಡಾನ್

ನವದೆಹಲಿ (ಪಿಟಿಐ): ವಿನೇಶ್ ಫೋಗಟ್ ಅವರಿಗೆ ಬೆಳ್ಳಿ ಪದಕ ಕೊಡಬೇಕು. ತೂಕದ ನಿಯಮವನ್ನು ಪರಿಷ್ಕರಣೆಗೊಳಿಸಬೇಕು ಎಂದು ಅಮೆರಿಕದ ಕುಸ್ತಿ ದಂತಕಥೆ ಜೋರ್ಡನ್ ಬರೋಸ್ ಆಗ್ರಹಿಸಿದ್ದಾರೆ.

ಆರು ಬಾರಿ ವಿಶ್ವ ಚಾಂಪಿಯನ್ ಆಗಿರುವ ಜೋರ್ಡನ್ ಅವರು ಐದು ಬೇಡಿಕೆಗಳ ಪಟ್ಟಿಯನ್ನು ಸಾಮಾಜಿಕ ಜಾಲತಾಣದಲ್ಲಿ ಹಾಕಿದ್ದಾರೆ. ವಿನೇಶ್ ಅವರನ್ನು ಅನರ್ಹಗೊಳಿಸಿರುವುದರ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ. 'ತತ್‌ಕ್ಷಣದಿಂದಲೇ ನಿಯಮವನ್ನು ಪರಿಷ್ಕರಣೆಗೊಳಿಸುವ ಅಗತ್ಯವಿದೆ' ಎಂದು ಬರೆದಿದ್ದಾರೆ.

'ಒಂದೊಮ್ಮೆ ಸೆಮಿಫೈನಲ್ ಗೆದ್ದು ಫೈನಲ್ ಪ್ರವೇಶಿಸಿದ ಸ್ಪರ್ಧಿಗಳಿಗೆ ಬೆಳ್ಳಿ ಖಚಿತವಾಗಬೇಕು. ಸೆಣಸಿ ಗೆದ್ದವರಿಗೆ ಚಿನ್ನ ಸಿಗುತ್ತದೆ. ಆದ್ದರಿಂದ ವಿನೇಶ್ ಸೆಮಿಫೈನಲ್ ಜಯಿಸಿದಾಗಲೇ ಬೆಳ್ಳಿ ಖಚಿತವಾಗಿತ್ತು. ಆದ್ದರಿಂದ ಅವರಿಗೆ ನೀಡಬೇಕು' ಎಂದಿದ್ದಾರೆ.

'ಎರಡನೇ ದಿನ ನಡೆಸುವ ತೂಕದ ಪರೀಕ್ಷೆಯಲ್ಲಿ ಹೆಚ್ಚುವರಿ 1 ಕೆ.ಜಿ.ಗೆ ಅವಕಾಶ ಕೊಡಬೇಕು. ತೂಕವನ್ನು ಬೆಳಿಗ್ಗೆ 8.30ರ ಬದಲು 10.30ಕ್ಕೆ ತೆಗೆದುಕೊಳ್ಳಬೇಕು' ಎಂದೂ ಸಲಹೆ ನೀಡಿದ್ದಾರೆ. ಕುಸ್ತಿಪಟುಗಳಾದ ಸಾಕ್ಷಿ ಮಲಿಕ್, ಬಜರಂಗ್ ಪೂನಿಯಾ ಹಾಗೂ ಗೀತಾ ಫೋಗಟ್ ಅವರೂ ವಿನೇಶ್‌ಗೆ ಬೆಳ್ಳಿ ನೀಡುವಂತೆ ಆಗ್ರಹಿಸಿದ್ದಾರೆ.

ಟೀಕೆ ಎದುರಿಸಲಿ: ಸೈನಾ ನೆಹ್ವಾಲ್

ನವದೆಹಲಿ: ಪ್ಯಾರಿಸ್ ಒಲಿಂಪಿಕ್ಸ್ ಕುಸ್ತಿ ಸ್ಪರ್ಧೆಯ ಫೈನಲ್‌ನಿಂದ ಅನರ್ಹಗೊಂಡಿರುವುದಕ್ಕೆ ವಿನೇಶ್ ಫೋಗಟ್ ಅವರೇ ಕಾರಣ ಎಂದು ಮಾಜಿ ಬ್ಯಾಡ್ಮಿಂಟನ್ ಆಟಗಾರ್ತಿ ಸೈನಾ ನೆಹ್ವಾಲ್ ಹೇಳಿದ್ದಾರೆ.

ವಿನೇಶ್ ಅನರ್ಹತೆಯಿಂದ ಇಡೀ ದೇಶವೇ ಬೇಸರದಲ್ಲಿದೆ ಎಂದಿರುವ ಅವರು, ಒಲಿಂಪಿಕ್ಸ್‌ನಂತಹ ವೇದಿಕೆಯಲ್ಲಿ ಆಡುವುದಕ್ಕಾಗಿ ಪ್ರತಿಯೊಬ್ಬ ಅಥ್ಲೀಟ್ ಯಾವ ರೀತಿ ಕಠಿಣ ಪರಿಶ್ರಮ ಪಟ್ಟಿರುತ್ತಾರೆ ಎಂಬುದು ನನಗೆ ಗೊತ್ತಿದೆ. ಹಾಗಾಗಿ ಕಳೆದ ಕೆಲವು ದಿನಗಳಿಂದ ಫೋಗಟ್ ಅವರನ್ನು ಬೆಂಬಲಿಸಿದ್ದೆ. ಅಥ್ಲೀಟ್ ಆಗಿ ಎಷ್ಟು ನೋವಾಗುತ್ತಿದೆ ಎಂಬುದನ್ನು ವಿವರಿಸಲು ನನ್ನಲ್ಲಿ ಪದಗಳಿಲ್ಲ ಎಂದು ಹೇಳಿದ್ದಾರೆ.

ಇದೇ ವೇಳೆ ಅವರು, ಅನರ್ಹತೆಯ ಹೊಣೆಯನ್ನು ಫೋಗಟ್ ಅವರೇ ಹೊರಬೇಕು ಎಂದು ಪ್ರತಿಪಾದಿಸಿದ್ದಾರೆ.

ಕುಸ್ತಿ ಕ್ರೀಡೆಗೆ ವಿದಾಯ ಘೋಷಿಸಿದ ಛಲಗಾತಿ • ಮಹಿಳೆಯರ ಕ್ರೀಡೆಗೆ ಕಳೆ ತಂದ ಹರಿಯಾಣ ಹುಡುಗಿ

ಫೋಗಟ್ ಅಖಾಡದ ಕಲಿ ವಿನೇಶ್

• ಗಿರೀಶ ದೊಡ್ಡಮನಿ

ಬೆಂಗಳೂರು: ರೈಲನ್ನು ಗಮ್ಯ ಸೇರಿಸುವ ಹಳಿಗಳ ನಡುವಿನ ಅಂತರ ಎಂದಿಗೂ ಕೂಡು ವುದಿಲ್ಲ. ಅದೇ ರೀತಿ ಹರಿಯಾಣದ ಫೋಗಟ್ ಕುಟುಂಬ ಮತ್ತು ಒಲಿಂಪಿಕ್ಸ್ ಪದಕಕ್ಕೂ ಸಂಬಂಧವಿದೆ.

ದಶಕಗಳ ಹಿಂದೆ ಕುಸ್ತಿ ಕೋಚ್ ಮಹಾವೀರ್ ಸಿಂಗ್ ಫೋಗಟ್ ಗಂಡುಮಕ್ಕಳಿಲ್ಲದೇ ಕೊರಗಿದ್ದರು. ತಾನು ಕುಸ್ತಿ ಕ್ರೀಡೆಯಲ್ಲಿ ಸಾಧಿಸಲಾಗದ್ದನ್ನು ತನ್ನ ಮಗ ಸಾಧಿಸಬಹುದು ಎಂಬ ಅವರ ಕನಸು ಕೈಗೂಡಲಿಲ್ಲ. ಅವರಿಗೆ ನಾಲ್ವರು ಹೆಣ್ಣುಮಕ್ಕಳು ಜನಿಸುತ್ತಾರೆ. ಪುತ್ರ ಸಂತಾನ ಒಲಿಯಲಿಲ್ಲ. ತನ್ನ ಕೋಣೆಯ ಗೋಡೆಯ ಮೇಲೆ ಒಲಿಂಪಿಕ್ಸ್ ಕುಸ್ತಿಯ ಪದಕ ತಂದು ನೇತುಹಾಕುವ ಮಗ ಹುಟ್ಟಲಿಲ್ಲ ಎಂಬ ಕೊರಗು ಕಾಡುತ್ತಲೇ ಇತ್ತು. ಆದರೆ ವಿಧಿಲಿಖಿತ ಬೇರೆಯೇ ಆಗಿತ್ತು.

ದೊಡ್ಡ ಮಗಳು ಗೀತಾ ಫೋಗಟ್ ಮತ್ತು ಎರಡನೇ ಮಗಳು ಬಬಿತಾ ತಮ್ಮನ್ನು ಛೇಡಿಸಿದ್ದ ಹುಡುಗರನ್ನು ತದುಕಿ ಬರುತ್ತಾರೆ. ಹುಡುಗರ ಪಾಲಕರು ಬಂದು ಮಹಾವೀರ್ ದಂಪತಿಗೆ ದೂರು ನೀಡುತ್ತಾರೆ. ಈ ಘಟನೆ ಮಹಾವೀರ್ ಮನದಲ್ಲಿದ್ದ ಕುಸ್ತಿ ಪ್ರೀತಿಯನ್ನು ಮತ್ತೆ ಬಡಿದೆಬ್ಬಿಸುತ್ತದೆ. ಹೆಣ್ಣುಮಕ್ಕಳೇಕೆ ಕುಸ್ತಿ ಆಡಬಾರದು ಎಂಬ ಪ್ರಶ್ನೆ ಹುಟ್ಟಿದ್ದೇ ತಡ. ಅಪ್ಪ, ಕಡುಕಠಿಣ ಕೋಚ್ ಆಗುತ್ತಾರೆ. ತಮ್ಮ ಹೊಲದಲ್ಲಿಯೇ ಅಖಾಡ ಸಿದ್ಧಗೊಳಿಸುತ್ತಾರೆ. ಗ್ರಾಮದ ಪಂಚಾಯಿತಿ, ಹಿರಿಯರು ಮತ್ತು ಸಂಪ್ರದಾಯವಾದಿಗಳ ಕಣ್ಣುಗಳು ಕೆಂಪಾಗುತ್ತವೆ. ಹುಡುಗಿಯರು ಕುಸ್ತಿ ಆಡಕೂಡದು ಎಂಬ ಎಚ್ಚರಿಕೆಗಳು ಬರುತ್ತವೆ. ಆದರೆ ಮಹಾವೀರ್ ಎಲ್ಲರ ವಿರುದ್ಧ ತೊಡೆ ತಟ್ಟುತ್ತಾರೆ. ತನ್ನ ಪುತ್ರಿಯರನ್ನು ಅಖಾಡಕ್ಕಿಳಿಸುತ್ತಾರೆ.

ಗೀತಾ ಫೋಗಟ್ ಒಲಿಂಪಿಕ್ಸ್‌ನಲ್ಲಿ ಭಾರತವನ್ನು ಪ್ರತಿನಿಧಿಸಿದ ಮೊದಲ ಮಹಿಳಾ ಕುಸ್ತಿಪಟುವಾಗುತ್ತಾರೆ. ಗೀತಾ ಅವರ ಹಾದಿಯಲ್ಲಿ ಬಬಿತಾ ಸಾಗುತ್ತಾರೆ. ಅವರ ಜೊತೆ ಇನ್ನಿಬ್ಬರು ಪುತ್ರಿಯರೂ (ರಿತು, ಸಂಗೀತಾ) ಕುಸ್ತಿ ಕಣಕ್ಕೆ ಇಳಿಯುತ್ತಾರೆ. ಇವರೆಲ್ಲರ ಕುಸ್ತಿ ನೋಡುತ್ತ ತನ್ನ ಪುಟ್ಟ ಕೈಗಳಿಂದ ಚಪ್ಪಾಳೆ ತಟ್ಟಿ ಸಂಭ್ರಮಿಸುತ್ತಿದ್ದ ಬಾಲಕಿಯೊಬ್ಬಳು ಕೂಡ ಅಲ್ಲಿದ್ದಳು. ಆ ಹುಡುಗಿ ಮಹಾವೀರ್ ತಮ್ಮ ರಾಜಪಾಲ್ ಅವರ ಮಗಳು. ಆಕೆಯೇ ವಿನೇಶ್ ಫೋಗಟ್. ತನ್ನ ದೊಡ್ಡಪ್ಪ ಮತ್ತು ಸಹೋದರಿಯರಿಗಿಂತಲೂ ಎತ್ತರದ ಸಾಧನೆ ಮಾಡಿ ಕುಸ್ತಿ ಕಣಕ್ಕೆ 'ಕೊನೆ ನಮಸ್ಕಾರ' ಮಾಡಿದ್ದಾರೆ.

'ಅಮ್ಮಾ ಕುಸ್ತಿ ಗೆದ್ದಿದೆ. ನಾನು ಸೋತೆ. ದಯವಿಟ್ಟು ನನ್ನನ್ನು ಕ್ಷಮಿಸು. ನಿನ್ನ ಕನಸು , ನನ್ನ ಧೈರ್ಯ ಮತ್ತೆಲ್ಲವೂ ಚೂರಾಗಿವೆ. ನನ್ನಲ್ಲಿ ಇನ್ನೂ ಹೆಚ್ಚಿನ ಶಕ್ತಿ ಉಳಿದಿಲ್ಲ. ವಿದಾಯ ಕುಸ್ತಿ 2001-2024. ತಮಗೆಲ್ಲರಿಗೂ ಆಭಾರಿ ಯಾಗಿರುವೆ. ಮನ್ನಿಸಿ' ಎಂದು ಗುರುವಾರ ಸಾಮಾಜಿಕ ಜಾಲತಾಣದಲ್ಲಿ ತಮ್ಮ ತಾಯಿ ತಮ್ಮ ತಾಯಿ ಪ್ರೇಮಲತಾ ಅವರನ್ನು ಉದ್ದೇಶಿಸಿ ಸಂದೇಶ ಹಾಕಿದ್ದಾರೆ. ಆ ಮೂಲಕ ವಿದಾಯ ಘೋಷಿಸಿದ್ದಾರೆ.

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ (ಚಿನ್ನ ಅಥವಾ ಬೆಳ್ಳಿ) ಪದಕ ಗೆದ್ದು ನಿವೃತ್ತಿ ಘೋಷಿಸುವ ಅವರ ಆಸೆ ಈಡೇರಲಿಲ್ಲ. ಅಲ್ಲದೇ ಫೋಗಟ್ ಕುಟುಂಬದ ಪದಕ, ಪ್ರಶಸ್ತಿ ಸಂಗ್ರಹದ ಕೋಣೆಯಲ್ಲಿ ಒಲಿಂಪಿಕ್ ಪದಕಕ್ಕಾಗಿ ಮೀಸಲಿಟ್ಟಿರುವ ಸ್ಥಳ ಖಾಲಿಯೇ ಉಳಿಯಿತು. ವಿನೇಶ್ ಕುಸ್ತಿ ಕಣದಲ್ಲಿ ಮಾಡಿದ ಸಾಧನೆಗಳ ದೊಡ್ಡ ಪಟ್ಟಿಯೇ ಇದೆ.

ಸತತ ಮೂರು ಒಲಿಂಪಿಕ್ಸ್‌ಗಳಲ್ಲಿಯೂ ಅವರು ಕಣಕ್ಕಿಳಿದಿದ್ದರು. ಎಲ್ಲ ಒಲಿಂಪಿಕ್ ಕೂಟಕ್ಕೂ ಮುನ್ನ ಪದಕ ಜಯದ ಭರವಸೆ ಮೂಡಿಸಿದ್ದರು. ಆದರೆ ರಿಯೊ ಒಲಿಂಪಿಕ್ಸ್‌ನಲ್ಲಿ ಕಾಲಿಗೆ ಆದ ಗಾಯ ಮುಂದುವರಿಯಲು ಬಿಡಲಿಲ್ಲ. 2020ರ ಒಲಿಂಪಿಕ್ಸ್‌ನಲ್ಲಿ ಮೊದಲ ಸುತ್ತಿನಲ್ಲಿಯೇ ಸೋಲು ಎದುರಾಯಿತು. ಇದೀಗ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಫೈನಲ್ ತಲುಪಿದ್ದ ವಿನೇಶ್ ಪದಕ ಜಯವನ್ನು ಖಚಿತಗೊಳಿಸಿಕೊಂಡಿದ್ದರು.

ಆದರೆ ಫೈನಲ್ ಪಂದ್ಯಪೂರ್ವ ದೇಹತೂಕ ಪರೀಕ್ಷೆಯಲ್ಲಿ 100 ಗ್ರಾಂ ಹೆಚ್ಚು ತೂಗಿದ ಅವರು ಅನರ್ಹರಾದರು. ಇದಕ್ಕೆ ದೇಶದ ಕ್ರೀಡಾವಲಯವೇ ಮಮ್ಮಲ ಮರುಗಿದೆ.

ಕಳೆದ ಸುಮಾರು ಒಂದೂವರೆ ವರ್ಷದ ಅವಧಿಯಲ್ಲಿ ವಿನೇಶ್ ಕುಸ್ತಿ ಕಣದಲ್ಲಿ ತಾಲೀಮು ನಡೆಸಿದ್ದೇ ಕಡಿಮೆ. ಮಹಿಳಾ ಕುಸ್ತಿಪಟುಗಳ ಮೇಲೆ ಕುಸ್ತಿ ಫೆಡರೇಷನ್ ಅಧ್ಯಕ್ಷ ಬ್ರಿಜ್ ಭೂಷಣ್ ಸರಣ್ ಸಿಂಗ್ ಅವರು ಲೈಂಗಿಕ ದೌರ್ಜನ್ಯ ನಡೆಸಿದ್ದಾರೆಂದು ಆರೋಪಿಸಿ ನಡೆದ ಧರಣಿಯಲ್ಲಿ ವಿನೇಶ್ ಮುಂಚೂಣಿಯಲ್ಲಿದ್ದರು. ಸಂತ್ರಸ್ತೆಯರ ದನಿಯಾಗಿ ತಮ್ಮ ಕ್ರೀಡಾ ಭವಿಷ್ಯವನ್ನೇ ಪಣಕ್ಕೊಡ್ಡಿ ನಿಂತಿದ್ದರು. ಅವರ ಆತ್ಮಸ್ಥೈರ್ಯವನ್ನು ಕುಗ್ಗಿಸಲು ವಿರೋಧಿಗಳು ನಡೆಸಿದ ಹುನ್ನಾರಗಳೂ ದೊಡ್ಡ ಸುದ್ದಿಯಾದವು. ಅಂತರರಾಷ್ಟ್ರೀಯ ಮಟ್ಟದಲ್ಲಿ ಧರಣಿಯು ಸುದ್ದಿಯಾಯಿತು.

ಇದೆಲ್ಲದರಾಚೆ ಒಲಿಂಪಿಕ್ಸ್‌ಗೆ ಅರ್ಹತೆ ಗಿಟ್ಟಿಸಿದ್ದ ಅವರ ಸಾಧನೆ ದೊಡ್ಡದು. ಆದರೆ, ಕಟ್ಟಕಡೆಯಲ್ಲಿ ಪದಕ ಕಚ್ಚಿ ಸಂಭ್ರಮಿಸಬೇಕಿದ್ದ ವಿನೇಶ್ ಅವರನ್ನು ನೋಡುವ ಕ್ರೀಡಾಪ್ರೇಮಿಗಳ ಕನಸು ಕೈಗೂಡಲಿಲ್ಲ. ಆದರೆ ಅವರ ಎಲ್ಲ ಸಾಧನೆ ಮತ್ತು ವ್ಯಕ್ತಿತ್ವ ಮಾತ್ರ ಆ ಪದಕಕ್ಕಿಂತಲೂ ದೊಡ್ಡದು ಎಂಬುದನ್ನು ಅಲ್ಲಗಳೆಯಲಾಗದು.


ಪ್ಯಾರಿಸ್ ಒಲಿಂಪಿಕ್ಸ್ ಸೆಮಿಫೈನಲ್ ಪಂದ್ಯದಲ್ಲಿ ಗೆದ್ದ ನಂತರ ವಿನೇಶ್ ಫೋಗಟ್ –ಪ್ರಜಾವಾಣಿ ಚಿತ್ರ/ಕೆ.ಎನ್. ಶಾಂತಕುಮಾರ್


ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ವಿನೇಶ್ ಫೋಗಟ್ ಅವರನ್ನು ಒಲಿಂಪಿಯನ್ ಶೂಟರ್ ಅಭಿನವ್ ಬಿಂದ್ರಾ ಗುರುವಾರ ಭೇಟಿಯಾದರು –ಪಿಟಿಐ ಚಿತ್ರ


ಹೋದ ವರ್ಷ ನಡೆದ ಪ್ರತಿಭಟನೆಯಲ್ಲಿ ವಿನೇಶ್ ಫೋಗಟ್ –ಎಎಫ್‌ಪಿ ಚಿತ್ರ

ವಿನೇಶಾ ಫೋಗಾಟ್



ವಿಭಾಗ	ಮಹಿಳೆಯರ 50 ಕೆ.ಜಿ	
ಶೈಲಿ	ಫ್ರೀ ಸ್ಟೈಲ್	
ವಯಸ್ಸು	29	
ಪತಿ	ಸೋಮವೀರ್ ರಾಠಿ	
2016 ರಿಯೊ ಒಲಿಂಪಿಕ್ಸ್ –9ನೇ ಸ್ಥಾನ		
2020	ಟೋಕಿಯೊ ಒಲಿಂಪಿಕ್ಸ್	10ನೇ ಸ್ಥಾನ
2024	ಪ್ಯಾರಿಸ್ ಒಲಿಂಪಿಕ್ಸ್	ಫೈನಲ್ ಪ್ರವೇಶ, ತೂಕ ಏರಿಕೆಯ ಕಾರಣ ಅನರ್ಹ

- 2019 ಮತ್ತು 2022ರ ವಿಶ್ವ ಚಾಂಪಿಯನ್‌ಷಿಪ್‌ಗಳಲ್ಲಿ ಕಂಚು
- 2014 ಮತ್ತು 2018ರ ಏಷ್ಯನ್ ಕ್ರೀಡಾಕೂಟಗಳಲ್ಲಿ ಕ್ರಮವಾಗಿ ಕಂಚು ಮತ್ತು ಚಿನ್ನ
- 2014, 2018, 2022ರ ಕಾಮನ್‌ವೆಲ್ತ್ ಗೇಮ್ಸ್‌ಗಳಲ್ಲಿ ಚಿನ್ನ
- 2021ರ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ
- 2013ರ ಯೂತ್ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ

ಎಂದೆಂದಿಗೂ ಚಾಂಪಿಯನ್: ಬಜರಂಗ್


ಬಜರಂಗ್ ಪೂನಿಯಾ

ನವದೆಹಲಿ (ಪಿಟಿಐ): ಕುಸ್ತಿಪಟು ವಿನೇಶ್ ಫೋಗಟ್ ಅವರಿಗೆ ಬೆಂಬಲ ಸೂಚಿಸಿರುವ ಟೋಕಿಯೊ ಒಲಿಂಪಿಕ್ ಪದಕ ವಿಜೇತ ಕುಸ್ತಿಪಟು ಬಜರಂಗ್ ಪೂನಿಯಾ, 'ನೀವು ಸೋತಿಲ್ಲ, ನಿಮ್ಮನ್ನು ಸೋಲಿಸಲಾಗಿದೆ' ಎಂದು ಹೇಳಿದ್ದಾರೆ.

ವಿನೇಶ್ ನಿವೃತ್ತಿ ಪ್ರಕಟಿಸಿದ ಬೆನ್ನಲ್ಲೇ ಎಕ್ಸ್‌ನಲ್ಲಿ ಪ್ರತಿಕ್ರಿಯೆ ನೀಡಿರುವ ಬಜರಂಗ್, 'ನಮ್ಮ ಪಾಲಿಗೆ ನೀವು ಎಂದೆಂದಿಗೂ ಚಾಂಪಿಯನ್ ಆಗಿದ್ದೀರಿ. ಭಾರತದ ಪುತ್ರಿಯಾಗಿರುವ ನೀವು ನಮ್ಮ ದೇಶದ ಹೆಮ್ಮೆ' ಎಂದು ಹೇಳಿದ್ದಾರೆ.

ಮಗದೊಂದು ಪೋಸ್ಟ್‌ನಲ್ಲಿ ವಿನೇಶ್ ಅವರ ಹೋರಾಟದ ವಿಡಿಯೊವನ್ನು ಹಂಚಿಕೊಂಡಿರುವ ಬಜರಂಗ್, 'ದೇವರು ನಿಮ್ಮಂತಹ ಮಗಳನ್ನು ಪ್ರತಿ ಮನೆಗೂ ನೀಡಲಿ. ನೀವು ಎಂದೆಂದಿಗೂ ಕುಸ್ತಿಯ ದಿಗ್ಗಜೆಯಾಗಿ ಗುರುತಿಸಲ್ಪಡುವಿರಿ' ಎಂದು ಹೇಳಿದ್ದಾರೆ.

ಹೆಣ್ಣುಮಗಳ ಸೋಲು: ವಿನೇಶ್ ಅನರ್ಹಗೊಂಡಿರುವುದಕ್ಕೆ ಆಘಾತ ವ್ಯಕ್ತಪಡಿಸಿರುವ ಸಾಕ್ಷಿ ಮಲಿಕ್, 'ಇದು ನಿಮ್ಮ ಮಾತ್ರ ಸೋಲು ಅಲ್ಲ. ನೀವು ಹೋರಾಡಿದ ದೇಶದ ಪ್ರತಿಯೊಬ್ಬ ಹೆಣ್ಣುಮಗಳ ಸೋಲಾಗಿದೆ' ಎಂದು ಹೇಳಿದ್ದಾರೆ.

'ಇದು ಇಡೀ ದೇಶಕ್ಕೆ ಎದುರಾದ ಸೋಲು. ಇಡೀ ದೇಶವೇ ನಿಮ್ಮೊಂದಿಗೆ ಇದೆ. ಒಬ್ಬ ಕ್ರೀಡಾಪಟುವಾಗಿ ನಿಮ್ಮ ಹೋರಾಟಕ್ಕೆ ಸೆಲ್ಯೂಟ್ ಸಲ್ಲಿಸುತ್ತೇನೆ' ಎಂದು ಹೇಳಿದ್ದಾರೆ.

ಕುಸ್ತಿಪಟು ಮೇಲೆ ಮಾನ್ಯತಾ ಪತ್ರ ದುರುಪಯೋಗ ಆರೋಪ

ಅಂತಿಮ್ ಪಂಘಲ್ ಮೇಲೆ ನಿಷೇಧ ಸಾಧ್ಯತೆ

ಪ್ಯಾರಿಸ್ (ಪಿಟಿಐ): ತನ್ನ ಮಾನ್ಯತಾ ಪತ್ರದ ಮೂಲಕ ಸೋದರಿಯನ್ನು ಕ್ರೀಡಾ ಗ್ರಾಮಕ್ಕೆ ಕಳುಹಿಸಲು ಪ್ರಯತ್ನಿಸಿ ಮುಜುಗರಕ್ಕೆ ಕಾರಣರಾದ ಮಹಿಳಾ ಕುಸ್ತಿಪಟು ಅಂತಿಮ್ ಪಂಘಲ್ ಅವರಿಗೆ ಭಾರತ ಒಲಿಂಪಿಕ್ ಸಂಸ್ಥೆ (ಐಒಎ) ಮೂರು ವರ್ಷಗಳ ನಿಷೇಧ ಹೇರುವ ಸಾಧ್ಯತೆಯಿದೆ.

ಐಒಎ ಮೂಲವೊಂದು ಗುರುವಾರ ಪಿಟಿಐಗೆ ಈ ವಿಷಯ ತಿಳಿಸಿದೆ. ಬುಧವಾರ ನಡೆದ 53 ಕೆ.ಜಿ. ವಿಭಾಗದ ಮೊದಲ ಸೆಣಸಾಟದಲ್ಲೇ ಅಂತಿಮ್ ದೊಡ್ಡ ಅಂತರದಲ್ಲಿ ಟರ್ಕಿಯ ಎದುರಾಳಿಗೆ 0–10ರಿಂದ ಸೋತಿದ್ದರು.

'ಎಲ್ಲರಿಗೂ ಮುಜುಗರಕ್ಕೆ ಕಾರಣವಾದ ಈ ವಿಷಯದ ಬಗ್ಗೆ ಐಒಎ ಅಧಿಕಾರಿಗಳು ಚರ್ಚೆ ನಡೆಸಿದ್ದಾರೆ. ಕೋಚ್ ಸೇರಿದಂತೆ ಈ ವಿಷಯದಲ್ಲಿ ಭಾಗಿಯಾದ ಎಲ್ಲರ ಮೇಲೂ ಮೂರು ವರ್ಷಗಳ ನಿಷೇಧ ಹೇರಲು ಚಿಂತನೆ ನಡೆಸಲಾಗಿದೆ' ಎಂದು ಭಾರತದ ಪಾಳಯದ ಮೂಲವೊಂದು ತಿಳಿಸಿದೆ.

'ಅವರು ಮೊದಲು ಭಾರತಕ್ಕೆ ತಲುಪುವುದನ್ನು ಖಚಿತಪಡಿಸಿಕೊಳ್ಳಬೇಕಾಗಿದೆ. ಅವರು ಸ್ವದೇಶಕ್ಕೆ ತಲುಪಿದ ಮೇಲಷ್ಟೇ ನಿರ್ಧಾರ ಪ್ರಕಟಿಸಲಾಗುವುದು' ಎಂದು ಮೂಲ ತಿಳಿಸಿದೆ.

ಅಂತಿಮ್ ಅವರು ಗುರುವಾರ ಸಂಜೆ ದೆಹಲಿಗೆ ವಿಮಾನ ಹತ್ತಿದ್ದಾರೆ. ಶಿಸ್ತುಕ್ರಮದ ಭಾಗವಾಗಿ ಅವರು ಮತ್ತು ಅವರ ನೆರವು ಸಿಬ್ಬಂದಿಯನ್ನು ಭಾರತಕ್ಕೆ ಕಳುಹಿಸಲು ಐಒಎ ನಿರ್ಧರಿಸಿದೆ.

ಆಗಿದ್ದೇನು: ಅಂತಿಮ್ ಅವರು ಪಂದ್ಯ ಮುಗಿಸಿದ ಮೇಲೆ ಕೋಚ್ ಭಗತ್ ಸಿಂಗ್ ಮತ್ತು ಅಭ್ಯಾಸ ನಡೆಸಲು ಜೊತೆಗೆ ಬಂದಿದ್ದ ಇನ್ನೊಬ್ಬ ಕೋಚ್ ವಿಕಾಸ್ ಅವರು ಉಳಿದುಕೊಂಡಿದ್ದ ಹೋಟೆಲ್‌ಗೆ ತೆರಳಿದ್ದರು.


ಅಂತಿಮ್ ಪಂಘಲ್

ಕ್ರೀಡಾಗ್ರಾಮದಲ್ಲಿದ್ದ ತನ್ನ ವಸ್ತುಗಳನ್ನು ತರಲು ಸೋದರಿಯನ್ನು ಮಾನ್ಯತಾ ಪತ್ರದೊಡನೆ ಅಲ್ಲಿಗೆ ಕಳುಹಿಸಿದ್ದರು. ಇಬ್ಬರೂ ಒಂದೇ ರೀತಿಯಿದ್ದರೂ ಅಧಿಕಾರಿ ಕೈಗೆ ಸಿಕ್ಕಿಹಾಕಿಕೊಂಡಿದ್ದರು. ಅವರ ಹೇಳಿಕೆ ದಾಖಲಿಸಲು ಪೊಲೀಸ್ ಠಾಣೆಗೆ ಕರೆದೊಯ್ಯಲಾಯಿತು.

ಅಂತಿಮ್ ಅವರ ನೆರವು ಸಿಬ್ಬಂದಿ ವಿಕಾಸ್ ಮತ್ತು ಭಗತ್ ಅವರು ಟ್ಯಾಕ್ಸಿಯಲ್ಲಿ ಕುಡಿದ ಮತ್ತಿನಲ್ಲಿ ತೆರಳಿದ್ದರು. ನಂತರ ಚಾಲಕನಿಗೆ ಹಣ ನೀಡಲು ನಿರಾಕರಿಸಿದ್ದರು. ಚಾಲಕ ನಂತರ ಪೊಲೀಸರಿಗೆ ದೂರು ನೀಡಿದ್ದರು. 'ನಾವು ಇದನ್ನೆಲ್ಲ ಶಮನಗೊಳಿಸಬೇಕಾಯಿತು' ಎಂದು ಐಒಎ ಅಧಿಕಾರಿಯೊಬ್ಬರು ಅಸಮಾಧಾನ ವ್ಯಕ್ತಪಡಿಸಿದರು.

ಈ ಬಗ್ಗೆ ಸಂಪರ್ಕಿಸಿದಾಗ, ವಿಕಾಸ್ ಇಂಥ ಪ್ರಕರಣ ನಡೆದಿರುವುದನ್ನು ನಿರಾಕರಿಸಿದರು.

ಅಂತಿಮ್ ಶಿಸ್ತು ಉಲ್ಲಂಘಿಸಿದ್ದನ್ನು ಫ್ರಾನ್ಸ್‌ನ ಅಧಿಕಾರಿಗಳು ತನ್ನ ಗಮನಕ್ಕೆ ತಂದಿರುವುದಾಗಿ ಐಒಎ ಹೇಳಿಕೆಯಲ್ಲಿ ತಿಳಿಸಿದೆ.

ವಿಮಾನ ನಿಲ್ದಾಣಕ್ಕೆ ಹೋಗುವ ಮುನ್ನ ಪಿಟಿಐ ಜೊತೆ ಮಾತನಾಡಿದ 19 ವರ್ಷದ ಅಂತಿಮ್, 'ನಾನು ಉದ್ದೇಶಪೂರ್ವಕವಾಗಿ ಯಾವುದೇ ತಪ್ಪು ಮಾಡಿಲ್ಲ. ನನಗೆ ಅನಾರೋಗ್ಯವಿದ್ದು, ಸ್ವಲ್ಪ ಗೊಂದಲವಾಯಿತು. ಇದೆಲ್ಲಾ ಗೊಂದಲದಿಂದ ಆಗಿರುವುದು' ಎಂದು ಪ್ರತಿಕ್ರಿಯಿಸಿದ್ದಾರೆ.

ಆದರೆ ನಂತರ ವಿಡಿಯೊ ಹೇಳಿಕೆಯಲ್ಲಿ ಅಂತಿಮ್ ಅವರು 'ತಾವು ಪೊಲೀಸ್ ಠಾಣೆಗೆ ಹೋಗಿದ್ದನ್ನು ಒಪ್ಪಿಕೊಂಡರು. ಅದು ಕೇವಲ ಮಾನ್ಯತಾ ಪತ್ರ ದೃಢೀಕರಣಕ್ಕಾಗಿಯಷ್ಟೇ' ಎಂದಿದ್ದಾರೆ.

'ನನಗೆ ಒಳ್ಳೆಯ ದಿನವಾಗಿರಲಿಲ್ಲ. ನಾನು ಸೆಣಸಾಟದಲ್ಲಿ ಸೋತೆ. ನನ್ನ ಬಗ್ಗೆ ಇಲ್ಲಸಲ್ಲದ್ದು ಹಬ್ಬಿಸಲಾಯಿತು. ಅವೆಲ್ಲಾ ಸುಳ್ಳು. ನನಗೆ ತುಂಬಾ ಜ್ವರವಿತ್ತು. ನನ್ನ ಸೋದರಿಯ ಜೊತೆ ಹೋಟೆಲ್‌ಗೆ ಹೋಗಲು ನನ್ನ ಕೋಚ್‌ನಿಂದ ಅನುಮತಿ ಪಡೆದಿದ್ದೆ' ಎಂದಿದ್ದಾರೆ.

'ಕ್ರೀಡಾ ಗ್ರಾಮದಲ್ಲಿದ್ದ ನನ್ನ ಕೆಲವು ವಸ್ತುಗಳನ್ನು ತರಬೇಕಿತ್ತು. ನನ್ನ ಸೋದರಿ ನನ್ನ ಮಾನ್ಯತಾ ಪತ್ರ ಪಡೆದಳು. ಅಲ್ಲಿದ್ದ ಅಧಿಕಾರಿಗಳ ಬಳಿ ತನ್ನ ವಸ್ತುಗಳನ್ನು ಪಡೆಯಬಹುದೇ ಎಂದು ಕೇಳಿದಳು. ಅವರು ಆಕೆಯನ್ನು ಮಾನ್ಯತಾ ಪತ್ರ ದೃಢೀಕರಣಕ್ಕೆ ಠಾಣೆಗೆ ಕರೆದೊಯ್ದರು' ಎಂದು ವಿವರಿಸಿದರು.

ತಮ್ಮ ಕೋಚ್‌ಗಳು ಕುಡಿದ ಮತ್ತಿನಲ್ಲಿ ಕ್ಯಾಬ್ ಚಾಲಕನ ಜೊತೆ ದರಕ್ಕೆ ಸಂಬಂಧಿಸಿ ಮಾತಿನ ಚಕಮಕಿ ನಡೆಸಿದ್ದನ್ನು ಅಂತಿಮ್ ನಿರಾಕರಿಸಿದರು. 'ನನ್ನ ಕೋಚ್‌ಗಳು ಸ್ಥಳದಲ್ಲೇ ಉಳಿದಿದ್ದರು. ಅವರೂ ನಮ್ಮ ಜೊತೆ ಬರಲು ಬಯಸಿದ್ದರು. ನಾವು ಅವರಿಗೆ ಕ್ಯಾಬ್ ಬುಕ್ ಮಾಡಿದ್ದೆವು. ಅವರ ಬಳಿ ಸಾಕಷ್ಟು ಹಣವಿರಲಿಲ್ಲ. ಭಾಷೆ ಬರದಿದ್ದ ಕಾರಣ ಚಾಲಕನ ಜೊತೆ ವಾದ ಆರಂಭವಾಗಿರಬಹುದು' ಎಂದರು.

ಹೋಟೆಲ್ ರೂಮ್‌ನಿಂದ ಅವರು ಕೆಲವು ಯುರೋಗಳನ್ನು ಪಡೆಯಲು ಬಂದಿದ್ದರು. ಇದು ವಾಗ್ವಾದಕ್ಕೆ ದಾರಿ ಮಾಡಿತು. ನಾನು ಈಗಾಗಲೇ ಸೋತಿದ್ದೇನೆ. ದಯವಿಟ್ಟು ವದಂತಿಗಳನ್ನು ಹಬ್ಬಿಸಬೇಡಿ. ನನ್ನನ್ನು ಬೆಂಬಲಿಸಿ' ಎಂದು ಅಂತಿಮ್ ಮನವಿ ಮಾಡಿದ್ದಾರೆ.

ಆಘಾತ, ಮುಜುಗರ...

ಪ್ಯಾರಿಸ್ (ಪಿಟಿಐ): ಭಾರತಕ್ಕೆ ಕ್ರೀಡೆಗಳ 13ನೇ ದಿನ (ಬುಧವಾರ) ಸುದಿನವಾಗಲಿಲ್ಲ. ಫೈನಲ್ ಆಡಬೇಕಾದ ವಿನೇಶ್ ಫೋಗಟ್ ಬೆಳಿಗ್ಗೆ 100 ಗ್ರಾಂ ಹೆಚ್ಚು ತೂಕ ತೂಗಿದ ಕಾರಣ ಅನರ್ಹರಾಗಿದ್ದು ಆಘಾತಕ್ಕೆ ಕಾರಣವಾಯಿತು. ಅಂತಿಮ್ ಪಂಘಲ್ ಅವರು ಶಿಸ್ತುಕ್ರಮ ಉಲ್ಲಂಘಿಸಿ ಭಾರತದ ಪಾಳಯ ಮುಜುಗರ ಎದುರಿಸಬೇಕಾಯಿತು.

ಸಂಜೆ ವೇಟ್‌ಲಿಫ್ಟಿಂಗ್‌ನಲ್ಲಿ ಮೀರಾಬಾಯಿ ಚಾನು ಬಹುತೇಕ ಹೊತ್ತು ಮೂರನೇ ಸ್ಥಾನದಲ್ಲಿದ್ದರು, ಅಂತಿಮವಾಗಿ ನಾಲ್ಕನೇ ಸ್ಥಾನಕ್ಕೆ ಸರಿಯಬೇಕಾಯಿತು. ಮೂರು ವರ್ಷ ಹಿಂದೆ ಚಾನು ಅವರು ಟೋಕಿಯೊದಲ್ಲಿ ಬೆಳ್ಳಿ ಗೆದ್ದಿದ್ದರು. ಅಥ್ಲೀಟುಗಳ ನಿರಾಶಾದಾಯಕ ಪ್ರದರ್ಶನ ಮುಂದುವರಿದಿತ್ತು.

ಕುಸ್ತಿ: ಹಿಲ್ಡ್‌ಬ್ರಾಂಟ್‌ಗೆ ಚಿನ್ನ

ಪ್ಯಾರಿಸ್ (ಎಎಫ್‌ಪಿ): ಅಮೆರಿಕದ ಸಾರಾ ಹಿಲ್ಡ್‌ಬ್ರಾಂಟ್ ಅವರು ಒಲಿಂಪಿಕ್ಸ್ ಮಹಿಳೆಯರ 50 ಕೆ.ಜಿ. ಕುಸ್ತಿಯಲ್ಲಿ ಚಿನ್ನ ಗೆದ್ದರು. ವಿನೇಶ್ ಫೋಗಟ್ ಅವರ ಅನರ್ಹತೆಯ ನಂತರ ಅವರು ಫೈನಲ್ ತಲುಪಿದ ಕ್ಯೂಬಾದ ಯುಸ್ನೆಲಿಸ್ ಗುಜ್ಮಾನ್ ಅವರನ್ನು ಸಾರಾ ಹಿಲ್ಡ್‌ಬ್ರಾಂಟ್ 3–0 ಯಿಂದ ಸೋಲಿಸಿದರು.

ಭಾರತದ ವಿನೇಶ್, ಮಂಗಳವಾರ ನಡೆದ ಸೆಮಿಫೈನಲ್‌ನಲ್ಲಿ ಯುಸ್ನೆಲಿಸ್ ಗುಜ್ಮಾನ್ ಅವರನ್ನು ಸೋಲಿಸಿದ್ದರು. ಆದರೆ ಫೈನಲ್ ದಿನ ತೂಕ ನೋಡುವ ವೇಳೆ 100 ಗ್ರಾಂ ಅಧಿಕ ತೂಕವಿದ್ದ ಕಾರಣ ವಿನೇಶ್ ಅವರನ್ನು ಅನರ್ಹಗೊಳಿಸಲಾಗಿತ್ತು.

ಹಿಲ್ಡ್‌ಬ್ರಾಂಟ್ ಅವರು ಮೂರು ವರ್ಷಗಳ ಹಿಂದೆ ನಡೆದ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದಿದ್ದರು.


ಅಮೆರಿಕದ ಸಾರಾ ಹಿಲ್ಡ್‌ಬ್ರಾಂಟ್

'ಎದುರಾಳಿ ಬದಲಾವಣೆಯಾಗಿದ್ದು ಬೆಳಿಗ್ಗೆ ನನಗೆ ಗೊಂದಲ ಮೂಡಿಸಿದ್ದು ನಿಜ. ಆದರೆ ಮನಸ್ಸು ಮತ್ತು ದೇಹ ಇದಾವುದನ್ನೂ ಲೆಕ್ಕಿಸಲಿಲ್ಲ' ಎಂದು ವಿಶ್ರಾಂತಿಗೆ ಇದ್ದ ಜಾಗದಲ್ಲಿ ಕುಳಿತು ಮಫಿನ್ ಮೆಲ್ಲುತ್ತಿದ್ದ ಹಿಲ್ಡ್‌ಬ್ರಾಂಟ್ ಹೇಳಿದರು.


ಲೈಲ್ಸ್ ಹಿಂದಿಕ್ಕಿ ಚಿನ್ನ ಗೆದ್ದ ಟೆಬೊಗೊ

ಪ್ಯಾರಿಸ್ (ಎಎಫ್‌ಪಿ): ಬೊಟ್ಸ್‌ವಾನಾದ ಲೆಟ್ಸಿಲೆ ಟೆಬೊಗೊ ಅವರು ಒಲಿಂಪಿಕ್ 200 ಮೀ. ಓಟದ ಸ್ಪರ್ಧೆಯಲ್ಲಿ ಚಿನ್ನ ಪದಕ ಗೆದ್ದ ಆಫ್ರಿಕನ್ ಅಥ್ಲೀಟ್ ಎಂಬ ಹೆಗ್ಗಳಿಕೆಗೆ ಪಾತ್ರವಾದರು.


ಪ್ಯಾರಿಸ್ ಒಲಿಂಪಿಕ್ಸ್‌ನ ಸ್ಪ್ರಿಂಟ್‌ನಲ್ಲಿ ಎರಡನೇ ಚಿನ್ನದ ಪದಕ ಪಡೆಯುವ ನೊವಾ ಲೈಲ್ಸ್ ಅವರ ಕನಸನ್ನು ಟೆಬೊಗೊ ಭಗ್ನಗೊಳಿಸಿದರು.

21 ವರ್ಷ ವಯಸ್ಸಿನ ಟೆಬೊಗೊ ಅವರು 19.45 ಸೆಕೆಂಡ್‌ಗಳಲ್ಲಿ ಗುರಿ ತಲುಪಿದರು. ಅಮೆರಿಕದ ಕೆನ್ನಿ ಬೆಡ್ನಾರೆಕ್ ಅವರು 19.62 ಸೆಕೆಂಡ್‌ಗಳಲ್ಲಿ ತಲುಪಿ ಬೆಳ್ಳಿ ಮತ್ತು ಲೈಲ್ಸ್ (19.70 ಸೆಕೆಂಡು) ಕಂಚಿನ ಪದಕ ಪಡೆದರು.

1908ರ ಲಂಡನ್ ಕೂಟದಲ್ಲಿ ರೆಗ್ಗಿ ವಾಕರ್ 100 ಮೀ. ವೇಗದ ಓಟದ ಪ್ರಶಸ್ತಿ ಗೆದ್ದ ಆಫ್ರಿಕಾದ ಏಕೈಕ ವ್ಯಕ್ತಿಯಾಗಿದ್ದಾರೆ. ಇತ್ತೀಚೆಗಷ್ಟೆ 100 ಮೀ. ಓಟದಲ್ಲಿ ಚಿನ್ನ ಗೆದ್ದಿದ್ದ ಲೈಲ್ಸ್‌ಗೆ ಕ್ರೀಡಾಂಗಣದಲ್ಲಿ ಅದ್ದೂರಿಯಾಗಿ ಸ್ವಾಗತ ಕೋರಲಾಯಿತು.



ಬೊಟ್ಸ್‌ವಾನಾದ ಲೆಟ್ಸಿಲೆ ಟೆಬೊಗೊ


ಗಾಲ್ಫ್
ಭಾರತದ ದೀಕ್ಷಾ ದಾಗರ್ ಅವರು ಗುರುವಾರ ಪ್ಯಾರಿಸ್ ಒಲಿಂಪಿಕ್ಸ್‌ನ ಮಹಿಳೆಯರ ವೈಯಕ್ತಿಕ ಗಾಲ್ಫ್‌ನ ಎರಡನೇ ಸುತ್ತಿನಲ್ಲಿ ಸ್ಪರ್ಧಿಸಿದರು –ಪಿಟಿಐ ಚಿತ್ರ

ರಜತ ರಥವೇರಿದ ನೀರಜ್ ನದೀಂಗೆ ಚಿನ್ನದ ಕಿರೀಟ



ಪುರುಷರ ಜಾವೆಲಿನ್ ಥ್ರೋ ಸ್ಪರ್ಧೆಯಲ್ಲಿ ಬೆಳ್ಳಿ ಗೆದ್ದ ನೀರಜ್ ಚೋಪ್ರಾ, ಚಿನ್ನ ಗೆದ್ದ ಪಾಕಿಸ್ತಾನದ ಅರ್ಷದ್ ನದೀಮ್ ಮತ್ತು ಕಂಚು ಗೆದ್ದ ಗ್ರೆನೆಡಾದ ಆ್ಯಂಡರ್ಸನ್ ಪೀಟರ್ –ಎಎಫ್‌ಪಿ ಚಿತ್ರ

ಪ್ಯಾರಿಸ್: 2020ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಭಾರತದ ನೀರಜ್ ಚೋಪ್ರಾ ಚಿನ್ನದ ಪದಕ ಜಯಿಸಿ ದಾಖಲೆ ಮಾಡಿದ್ದರು. ಅದೇ ಸ್ಪರ್ಧೆಯಲ್ಲಿ ಚೋಪ್ರಾಗೆ ಪೈಪೋಟಿಯೊಡ್ಡಿದ್ದ ನದೀಮ್ ಅವರು 84.62 ಮೀಟರ್ಸ್ ದೂರ ಎಸೆದು ಐದನೇ ಸ್ಥಾನ ಗಳಿಸಿದ್ದರು.

ಆದರೆ ಅಲ್ಲಿಂದ ಇಲ್ಲಿಯವರೆಗೂ ನದೀಂ ಮತ್ತು ನೀರಜ್ ಅವರ ಸ್ನೇಹ ಉತ್ತಮವಾಗಿ ಬೆಳೆದಿದೆ. ಉಭಯ ದೇಶಗಳ ನಡುವೆ ರಾಜತಾಂತ್ರಿಕ ವಿರಸವಿದ್ದರೂ ಇವರಿಬ್ಬರ ಕ್ರೀಡಾಸ್ಫೂರ್ತಿ ಉತ್ತಮ ಉದಾಹರಣೆಯಾಗಿ ಗಮನ ಸೆಳೆದಿದೆ.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಸ್ಪರ್ಧೆ ನಡೆದ ಸಂದರ್ಭದಲ್ಲಿ ಕೊನೆ ಸುತ್ತಿಗೂ ಮುನ್ನ ಅಭ್ಯಾಸ ನಡೆಸುವಾಗ ನದೀಂ ಅವರು ನೀರಜ್ ಅವರಿಂದಲೇ ಜಾವೆಲಿನ್ ಪಡೆದು ಬಳಸಿದ್ದರು. ಇದು ಸಾಮಾಜಿಕಕ ಜಾಲತಾಣಗಳಲ್ಲಿ ಚರ್ಚೆಗೆ ಗ್ರಾಸವಾಗಿತ್ತು.

ಆಗ ಚೋಪ್ರಾ ಅವರು, 'ಕ್ರೀಡೆಯು ನಮಗೆ ಒಟ್ಟಿಗೆ ಇರಲು, ಒಗ್ಗೂಡಲು ಹೇಳಿಕೊಡುತ್ತದೆ. ನದೀಂ ಅವರು ನನ್ನ ಜಾವೆಲಿನ್ ತೆಗೆದುಕೊಂಡಿದ್ದರ ಕುರಿತು ಎದ್ದಿರುವ ವಿವಾದ, ಜನರ ಪ್ರತಿಕ್ರಿಯೆಗಳು ನನಗೆ ಬೇಸರ ತರಿಸಿವೆ' ಎಂದು ನೀರಜ್ ಚೋಪ್ರಾ ಹೇಳಿದ್ದರು.

ಹೋದ ವರ್ಷ ಬುಡಾಪೆಸ್ಟ್‌ನಲ್ಲಿ ವಿಶ್ವ ಅಥ್ಲೆಟಿಕ್ಸ್ ಕೂಟ ನಡೆಯಿತು. ಈ ವೇಳೆಯಲ್ಲಿ ನೀರಜ್ ಅವರು ಚಿನ್ನ ಗೆದ್ದುಕೊಂಡರು. ನದೀಮ್ ಅವರು ಬೆಳ್ಳಿ ಜಯಿಸಿದ್ದರು. ಪದಕ ಪ್ರದಾನದ ಬಳಿಕ, ಫೋಟೊ ತೆಗೆಯುವ ವೇಳೆ, ನೀರಜ್ ಅವರು ನದೀಮ್ ಅವರನ್ನೂ ಕರೆದರು. ನೀರಜ್ ಅವರ ಈ ನಡವಳಿಕೆಯು ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ಮೆಚ್ಚುಗೆ ಪಡೆದುಕೊಂಡಿತು.

ನೀರಜ್‌ಗೆ ಎರಡನೇ ಪದಕ: ಟೋಕಿಯೊ ಒಲಿಂಪಿಕ್ಸ್‌ನಲ್ಲಿ 87.58 ಮೀಟರ್ ಜಾವೆಲಿನ್ ಎಸೆದು ನೀರಜ್ ಚೋಪ್ರಾ ಚಿನ್ನದ ಪದಕಕ್ಕೆ ಕೊರಳೊಡ್ಡಿದ್ದರು. ಆದರೆ, ಈ ಬಾರಿ 26 ವರ್ಷದ ನೀರಜ್ ಎರಡನೇ ಪ್ರಯತ್ನದಲ್ಲಿ 89.45 ಮೀಟರ್ ಥ್ರೋ ಮಾಡುವ ಮೂಲಕ ಬೆಳ್ಳಿಗೆ ತೃಪ್ತಿಪಟ್ಟುಕೊಂಡರು. ಫೈನಲ್‌ನಲ್ಲಿ 12 ಸ್ಪರ್ಧಿಗಳ ಜತೆ ಹೋರಾಟ ನಡೆಸಿದರು.

ಒಲಿಂಪಿಕ್ ಕೂಟದ ವೈಯಕ್ತಿಕ ವಿಭಾಗದಲ್ಲಿ ಎರಡು ಪದಕ ಗೆದ್ದ ಭಾರತದ ನಾಲ್ಕನೇ ಕ್ರೀಡಾಪಟು ಎಂಬ ಖ್ಯಾತಿಯೂ ಅವರದ್ದಾಯಿತು. ಬ್ಯಾಡ್ಮಿಂಟನ್ ತಾರೆ ಪಿ.ವಿ. ಸಿಂಧು (ಒಂದು ಬೆಳ್ಳಿ, ಒಂದು ಕಂಚು), ಕುಸ್ತಿಪಟು ಸುಶೀಲ್ ಕುಮಾರ್ (ಒಂದು ಬೆಳ್ಳಿ, ಒಂದು ಕಂಚು) ಮತ್ತು ಶೂಟರ್ ಮನು ಭಾಕರ್ (ಎರಡು ಕಂಚು)ಸ್ವಾತಂತ್ರ್ಯದ ನಂತರ ಎರಡು ಒಲಿಂಪಿಕ್ ಪದಕ ಗೆದ್ದ ಭಾರತದ ಕ್ರೀಡಾಪಟು ಅವರಾಗಿದ್ದಾರೆ.

ಇದು ಅವರ ಎರಡನೇ ವೈಯಕ್ತಿಕ ಶ್ರೇಷ್ಠ ಸಾಧನೆಯಾಗಿದೆ. 2022ರ ಜೂನ್‌ನಲ್ಲಿ ಚೋಪ್ರಾ ಅವರು 89.94 ಮೀ ದೂರ ಥ್ರೋ ಮಾಡಿದ್ದು, ವೈಯಕ್ತಿಕ ಶ್ರೇಷ್ಠ ದಾಖಲೆಯಾಗಿದೆ.

ಮಂಗಳವಾರ ನಡೆದಿದ್ದ ಅರ್ಹತಾ ಸುತ್ತಿನ ಮೊದಲ ಎಸೆತದಲ್ಲೇ 89.34 ಮೀಟರ್ ಜಾವೆಲಿನ್ ಎಸೆದು ಫೈನಲ್‌ಗೆ ಲಗ್ಗೆ ಹಾಕಿದ್ದರು.

ನೀರಜ್ ಚೋಪ್ರಾ ಸಾಧನೆಯ ಹಾದಿ

ವಯಸ್ಸು: **26**
ರಾಜ್ಯ: ಹರಿಯಾಣ
ಎತ್ತರ: **1.86** ಮೀಟರ್
ತೂಕ: **86** ಕೆಜಿ
ವೈಯಕ್ತಿಕ ಶ್ರೇಷ್ಠ: **89.94** ಮೀಟರ್ಸ್ (**2022**, ಸ್ಟಾಕ್‌ಹೋಮ್, ಡೈಮಂಡ್ ಲೀಗ್)
ಕೋಚ್: ಕ್ಲಾಸ್ ಬಾರ್ಟೋನಿಟ್ಜ್ (ಜರ್ಮನಿ)

ಫೈನಲ್‌ನ ಆರು ಪ್ರಯತ್ನ
ಎರಡನೇ: **89.45**
ಉಳಿದ ಎಲ್ಲರೂ ಫೌಲ್

ಪ್ರಶಸ್ತಿಗಳು
- ಅರ್ಜುನ ಪ್ರಶಸ್ತಿ (2018)
- ಖೇಲ್ ರತ್ನ ಪ್ರಶಸ್ತಿ (2021)
- ಪದ್ಮಶ್ರೀ (2022)

ಚೋಪ್ರಾ ಪದಕಗಳ ಸಾಧನೆ

ಕ್ರೀಡಾಕೂಟ	ಸ್ಥಳ	ಇಸವಿ	ಪದಕ
ಒಲಿಂಪಿಕ್ಸ್	ಪ್ಯಾರಿಸ್	2024	ಬೆಳ್ಳಿ
ಒಲಿಂಪಿಕ್ಸ್	ಟೋಕಿಯೊ	2021	ಚಿನ್ನ
ವಿಶ್ವ ಚಾಂಪಿಯನ್‌ಷಿಪ್	ಬುಡಾಪೆಸ್ಟ್	2023	ಚಿನ್ನ
ವಿಶ್ವ ಚಾಂಪಿಯನ್‌ಷಿಪ್	ಯೂಜೀನ್	2022	ಬೆಳ್ಳಿ
ಡೈಮಂಡ್ ಲೀಗ್	–	2023	ಬೆಳ್ಳಿ
ಡೈಮಂಡ್ ಲೀಗ್	–	2022	ಚಿನ್ನ
ಏಷ್ಯನ್ ಗೇಮ್ಸ್	ಹಾಂಗ್‌ಝೌ	2022	ಚಿನ್ನ
ಏಷ್ಯನ್ ಗೇಮ್ಸ್	ಜಕಾರ್ತ	2018	ಚಿನ್ನ
ಕಾಮನ್‌ವೆಲ್ತ್ ಗೇಮ್ಸ್	ಗೋಲ್ಡ್‌ಕೋಸ್ಟ್	2018	ಚಿನ್ನ
ಏಷ್ಯನ್ ಚಾಂಪಿಯನ್‌ಷಿಪ್	ಭುವನೇಶ್ವರ	2017	ಚಿನ್ನ
ದಕ್ಷಿಣ ಏಷ್ಯಾ ಗೇಮ್ಸ್	ಗುವಾಹಟಿ	2016	ಚಿನ್ನ
ವಿಶ್ವ ಜೂ.ಚಾಂಪಿಯನ್‌ಷಿಪ್	ಬಿಡ್‌ಗೋಷ್	2016	ಚಿನ್ನ
ಏಷ್ಯನ್ ಜೂ.ಚಾಂಪಿಯನ್‌ಷಿಪ್	ಹೊ ಚಿ ಮಿನ್ ಸಿಟಿ	2016	ಬೆಳ್ಳಿ

ಭಾರತದ ಅನುಭವಿ ಗೋಲ್‌ಕೀಪರ್‌ಗೆ ಪದಕದ ವಿದಾಯ • ಸ್ಪೇನ್ ವಿರುದ್ಧ 2–1 ಗೋಲುಗಳ ಜಯ

ಹರ್ಮನ್‌ಪ್ರೀತ್ ಪಡೆಗೆ ಕಂಚಿನ ಸಂಭ್ರಮ

ಪ್ಯಾರಿಸ್ (ಪಿಟಿಐ): ಭಾರತ ಪುರುಷರ ತಂಡ ಒಲಿಂಪಿಕ್ ಕ್ರೀಡೆಗಳ ಹಾಕಿಯಲ್ಲಿ ಸತತ ಎರಡನೇ ಬಾರಿ ಕಂಚಿನ ಪದಕ ಗೆದ್ದುಕೊಂಡಿತು. ಗುರುವಾರ ಮೂರನೇ ಸ್ಥಾನಕ್ಕಾಗಿ ನಡೆದ 'ಪ್ಲೇ ಆಫ್' ಪಂದ್ಯದಲ್ಲಿ ಸ್ಪೇನ್ ತಂಡವನ್ನು 2–1 ಗೋಲುಗಳಿಂದ ಸೋಲಿಸಿದ ಹರ್ಮನ್‌ಪ್ರೀತ್ ಬಳಗ, ಗೋಲ್‌ಕೀಪರ್ ಪಿ.ಆರ್.ಶ್ರೀಜೇಶ್ ಅವರಿಗೆ ಅರ್ಹ ರೀತಿಯಲ್ಲೇ ವಿದಾಯದ ಉಡುಗೋರೆ ನೀಡಿತು.

ಸ್ಕೋರ್ ಸಮ ಮಾಡಲು ಸ್ಪೇನ್ ತಂಡ ಕೊನೆಯ ಕೆಲವು ನಿಮಿಷ ಭಾರತದ ಗೋಲಿನ ಆವರಣದಲ್ಲಿ ಸತತ ದಾಳಿಗಳನ್ನು ನಡೆಸಿ ಒತ್ತಡ ಹೇರಿತು. ಪೆನಾಲ್ಟಿ ಕಾರ್ನರ್‌ಗಳನ್ನೂ ಪಡೆಯಿತು. ಆದರೆ ಭಾರತದ ರಕ್ಷಣಾ ಪಡೆ ಕಂಗೆಡದೇ ಅವುಗಳನ್ನು ತಡೆದು ಆತಂಕ ನಿವಾರಿಸಿತು.

ಭಾರತ 41 ವರ್ಷಗಳ ನಂತರ, 2020ರ ಟೋಕಿಯೊ ಕ್ರೀಡೆಗಳಲ್ಲಿ ಕಂಚಿನ ಪದಕ ಗಳಿಸಿತ್ತು. ಕ್ರೀಡೆಗಳಿಗೆ ಹೋಗುವ ಮೊದಲು ಅಂಥ ಲಯದಲ್ಲಿ ಇಲ್ಲದಿದ್ದರೂ ಪ್ಯಾರಿಸ್‌ನಲ್ಲಿ ನಿರೀಕ್ಷೆಗೆ ತಕ್ಕಂತೆ ಆಡಿತು.

ಭಾರತ 52 ವರ್ಷಗಳ ನಂತರ ಸತತ ಕ್ರೀಡೆಗಳಲ್ಲಿ ಕಂಚಿನ ಪದಕ ಪಡೆದಿದೆ. ಈ ಹಿಂದೆ 1968ರ ಮೆಕ್ಸಿಕೊ ಮತ್ತು 1972ರ ಮ್ಯೂನಿಕ್ ಕ್ರೀಡೆಗಳಲ್ಲಿ ಕಂಚಿನ ಪದಕಗಳನ್ನು ಗೆದ್ದುಕೊಂಡಿತ್ತು.

ಈ ಪದಕಕ್ಕಾಗಿ ಭಾರತ ಕಾತರದಿಂದ ಕಾದಿತ್ತು. ವಿನೇಶ್ ಫೋಗಟ್ ಬುಧವಾರ ಚಿನ್ನಕ್ಕಾಗಿ ಸೆಣಸಾಡುವ ಮೊದಲು ಅನರ್ಹಗೊಂಡಿದ್ದರು. ಮೀರಾಬಾಯಿ ಚಾನು ವೇಟ್‌ಲಿಫ್ಟಿಂಗ್‌ನಲ್ಲಿ ನಾಲ್ಕನೇ ಸ್ಥಾನ ಪಡೆದಿದ್ದರು. ಒಟ್ಟಾರೆ ಆರು ಸ್ಪರ್ಧೆಗಳಲ್ಲಿ ಕಂಚು ಕೈತಪ್ಪಿದ್ದವು. ಪದಕಕ್ಕೆ ಹಾತೊರೆಯುವ ಪರಿಸ್ಥಿತಿ ಎದುರಾಗಿತ್ತು.

ಹಿನ್ನಡೆಯಿಂದ ಚೇತರಿಕೆ: ಸ್ಪೇನ್ ತಂಡ ಪಂದ್ಯದ 18ನೇ ನಿಮಿಷ ಮಾರ್ಕ್ ಮಿರಾಲಸ್ ಮೂಲಕ ಮುನ್ನಡೆಯಿತು. ಅವರು ಪೆನಾಲ್ಟಿ ಸ್ಟ್ರೋಕ್ ಅನ್ನು ಗೋಲಾಗಿ ಪರಿವರ್ತಿಸಿದರು. ಭಾರತದ ನಾಯಕ ಹರ್ಮನ್‌ಪ್ರೀತ್ 30 ಮತ್ತು 33ನೇ ನಿಮಿಷ ಗೋಲುಗಳನ್ನು ಗಳಿಸಿ ಗಮನಸೆಳೆದರು.

ಜರ್ಮನಿ ವಿರುದ್ಧ ಸೆಮಿಫೈನಲ್‌ನಲ್ಲಿ 2-3ರಲ್ಲಿ ಸೋತು ನಿರಾಶೆ ಅನುಭವಿಸಿದ್ದ ಭಾರತ ಈ ಪಂದ್ಯದಲ್ಲಿ ಆರಂಭದಿಂದಲೇ ಹಿಡಿತಕ್ಕೆ ಮುಂದಾಯಿತು. ಮೊದಲ 15 ನಿಮಿಷ ಭಾರತ ಚೆಂಡಿನ ಮೇಲೆ ನಿಯಂತ್ರಣವಿರಿಸಿತ್ತು.

ಆರನೇ ನಿಮಿಷ ಉಪನಾಯಕ ಹಾರ್ದಿಕ್ ಸಿಂಗ್ ಅವರು ಬಲಭಾಗದಿಂದ ಚೆಂಡನ್ನು 'ಡಿ' ಆವರಣದಲ್ಲಿದ್ದ ಸುಖಜೀತ್ ಅವರಿಗೆ ಪಾಸ್ ಮಾಡಿದರು. ಆದರೆ ಅವರ ಯತ್ನದಲ್ಲಿ ಚೆಂಡು ಗೋಲುಪೆಟ್ಟಿಗೆಯ ಎಡಬದಿಯಿಂದ ಹೋಯಿತು.

ಸ್ಪೇನ್ ನಂತರ ಪ್ರತಿದಾಳಿಗೆ ಮುಂದಾಯಿತು. 18ನೇ ನಿಮಿಷ ಮಿರಾಲಸ್ ಅವರನ್ನು ಮನ್‌ಪ್ರೀತ್ ಸಿಂಗ್ 'ಡಿ' ಆವರಣದಲ್ಲಿ ಒರಟಾಗಿ ತಡೆದರು. ಪರಿಣಾಮವಾಗಿ ದೊರೆತ 'ಪೆನಾಲ್ಟಿ' ಅವಕಾಶದಲ್ಲಿ ಮಿರಾಲಸ್ ಗುರಿತಪ್ಪಲಿಲ್ಲ.

ಮುನ್ನಡೆ ಪಡೆದ ಸ್ಪೇನ್ ಒತ್ತಡ ಹೇರಿತು. ವಿರಾಮಕ್ಕೆ ಮೊದಲು ಮೂರು ಪೆನಾಲ್ಟಿ ಕಾರ್ನರ್‌ಗಳು ದೊರೆತವು. ಇಂಥ ಒಂದು ಯತ್ನದಲ್ಲಿ ಬೋರ್ಜಾ ಲಾಕಾಲೆ ಅವರು ಚೆಂಡನ್ನು ಪೋಸ್ಟ್‌ಗೆ ಹೊಡೆದರು. ಉಳಿದಂತೆ ಅಪಾಯ ಎದುರಾಗಲಿಲ್ಲ.

ಈ ಹಿನ್ನಡೆಯಿಂದ ಚೇತರಿಸಲು ಭಾರತ ಎಲ್ಲ ಯತ್ನಗಳನ್ನು ನಡೆಸಿತು. ವಿರಾಮಕ್ಕೆ 21 ಸೆಕೆಂಡುಗಳಿರುವಾಗ ಮನ್‌ಪ್ರೀತ್ ತಮ್ಮ ಹಿಂದಿನ ತಪ್ಪನ್ನು ತಿದ್ದಿಕೊಳ್ಳುವಂತೆ ಪೆನಾಲ್ಟಿ ಕಾರ್ನರ್‌ಗೆ ಕಾರಣರಾದರು. ಈ ಅವಕಾಶದಲ್ಲಿ ಹರ್ಮನ್‌ಪ್ರೀತ್ ಚೆಂಡನ್ನು ಗುರಿಮುಟ್ಟಿಸಿದರು.

ವಿರಾಮದ ನಂತರ ಎರಡನೇ ನಿಮಿಷವೇ ಭಾರತ ಮುನ್ನಡೆ ಪಡೆಯಿತು. ತಂಡಕ್ಕೆ ದೊರೆತ ಮತ್ತೊಂದು ಕಾರ್ನರ್‌ನಲ್ಲಿ ಅವರು ನಿಖರ ಮತ್ತು ಕರಾರುವಾಕ್ 'ಫ್ಲಿಕ್'ನೊಡನೆ ಚೆಂಡನ್ನು ಗೋಲಿನೊಳಗೆ ಕಳಿಸಿದರು. ಅದನ್ನು ತಡೆಯುವ ಅವಕಾಶವೇ ಸ್ಪೇನ್ ರಕ್ಷಣೆ ಆಟಗಾರರಿಗೆ ಇರಲಿಲ್ಲ.

35ನೇ ನಿಮಿಷ ಭಾರತಕ್ಕೆ ಮತ್ತೊಂದು ಪೆನಾಲ್ಟಿ ಕಾರ್ನರ್ ದೊರೆತರೂ ಹರ್ಮನ್‌ಪ್ರೀತ್ ಅವರ ಬೀಸುಹೊಡೆತವನ್ನು ಸ್ಪೇನ್ ಕೀಪರ್ ಲೂಯಿಸ್ ಕಾಲ್ಜಾದೊ ತಡೆದರು.

ಮೂರನೇ ಕ್ವಾರ್ಟರ್ ಅಂತ್ಯಕ್ಕೆ ಸ್ಕೋರ್ 2–1 ಆಗಿತ್ತು. ಐದು ನಿಮಿಷಗಳ ನಂತರ ಹಾರ್ದಿಕ್, ಎದುರಾಳಿ ಆಟಗಾರನಿಗೆ ಡಿಕ್ಕಿಯಾದ ಪರಿಣಾಮ ಗಾಯಾಳಾಗಿ ನಿರ್ಗಮಿಸಬೇಕಾಯಿತು. ಪಂದ್ಯ ಮುಗಿಯಲು ಮೂರು ನಿಮಿಷಗಳಿರುವಾಗ ಸ್ಪೇನ್‌ಗೆ ಮತ್ತೊಂದು ಪೆನಾಲ್ಟಿ ಕಾರ್ನರ್ ದೊರೆತರೂ ಆ ಅವಕಾಶವನ್ನು ಭಾರತ ಸುರಕ್ಷಿತವಾಗಿ ತಡೆಯಿತು.

ಅಭಿನಂದನೆಗಳ ಸುರಿಮಳೆ

ಪ್ರಧಾನಿ ನರೇಂದ್ರ ಮೋದಿ ಹಾಕಿ ತಂಡಕ್ಕೆ ಅಭಿನಂದನೆ ಸಲ್ಲಿಸಿದ್ದು, ಆಟಗಾರರ ಜೊತೆ ಮೊಬೈಲ್‌ನಲ್ಲಿ ಮಾತನಾಡಿ ಹರ್ಷ ವ್ಯಕ್ತಪಡಿಸಿದರು.

ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ ನಿರ್ದೇಶಕ ವಿ.ವಿ.ಎಸ್.ಲಕ್ಷ್ಮಣ್, ಒಡಿಶಾ ಮಾಜಿ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಅಭಿನಂದನೆ ಸಲ್ಲಿಸಿದ್ದಾರೆ. 'ಇದು ತಮಗೆ ತೀವ್ರ ಭಾವನಾತ್ಮಕ ಸಂದರ್ಭ' ಎಂದು ಪಟ್ನಾಯಕ್ ಹೇಳಿದ್ದಾರೆ.

2008ರ ಒಲಿಂಪಿಕ್ಸ್‌ನಲ್ಲಿ ಶೂಟಿಂಗ್ ಚಿನ್ನ ಗೆದ್ದ ಅಭಿನವ್ ಬಿಂದ್ರಾ ಅವರೂ ತಂಡವನ್ನು ಅಭಿನಂದಿಸಿದ್ದಾರೆ.

ಪಿ.ಆರ್. ಶ್ರೀಜೇಶ್ ನಿವೃತ್ತಿ

ನವದೆಹಲಿ: ಸ್ಪೇನ್ ವಿರುದ್ಧ ಗುರುವಾರ ಕಂಚಿನ ಪದಕದ ಪ್ಲೇ ಆಫ್ ಪಂದ್ಯದ ನಂತರ ದಣಿದರೂ, ಪಿ.ಆರ್.ಶ್ರೀಜೇಶ್ ಮುಖದ ತುಂಬಾ ಮಂದಹಾಸ ಮೂಡಿತ್ತು. ತಂಡ ಸತತ ಎರಡನೇ ಬಾರಿ ಕಂಚಿನ ಪದಕ ಗೆದ್ದ ತೃಪ್ತಿಯ ಭಾವದಲ್ಲಿ ಅವರು ನಿವೃತ್ತರಾದರು. ತಂಡದ ಸದಸ್ಯರು ಅವರನ್ನು ಸುತ್ತುವರಿದು ಭುಜದ ಮೇಲೆ ಕುಳ್ಳಿರಿಸಿ ಸಂಭ್ರಮಪಟ್ಟರು.



ಒಲಿಂಪಿಕ್ಸ್ ನನ್ನ ಕೊನೆಯ ಅಂತರರಾಷ್ಟ್ರೀಯ ಹಾಕಿ ಸ್ಪರ್ಧೆ ಎಂದು ಅವರು ಆರಂಭದಲ್ಲೇ ಘೋಷಿಸಿದ್ದರು. ಎರಡು ದಶಕಗಳ ಕಾಲ ಅವರು ಗೋಲ್ ಕೀಪರ್ ಆಗಿ ಭಾರತ ತಂಡದ ಹಲವು ಗೆಲುವುಗಳಿಗೆ ಹೆಗಲು ನೀಡಿದ್ದರು. 2006ರಲ್ಲಿ ತಂಡಕ್ಕೆ ಪದಾರ್ಪಣೆ ಮಾಡಿದಾಗ ಅವರ ವಯಸ್ಸು 18. ಅವರು ಸತತ ನಾಲ್ಕು ಒಲಿಂಪಿಕ್ಸ್ ಗಳಲ್ಲಿ ಆಡಿದ ಮೊದಲ ಗೋಲ್‌ಕೀಪರ್. ಇತ್ತೀಚಿನ ವರ್ಷಗಳಲ್ಲಿ ಕೇರಳದ ಈ ಆಟಗಾರ ಕಿರಿಯ ಆಟಗಾರರಿಗೆ ಮೆಂಟರ್ ರೂಪ ದಲ್ಲೂ ಮಾರ್ಗದರ್ಶನ ನೀಡಿದ್ದಾರೆ. ಪ್ಯಾರಿಸ್ ಒಲಿಂಪಿಕ್ಸ್‌ನಲ್ಲೂ ಅವರು ಹೆಚ್ಚಿನ ಪಂದ್ಯಗಳಲ್ಲಿ ಭಾರತ ತಂಡದ ಗೆಲುವಿನ ರೂವಾರಿಯಾಗಿದ್ದರು.

'ಈ ಪದಕವನ್ನು ನಾನು ಶ್ರೀಜೇಶ್ ಅವರಿಗೆ ಅರ್ಪಿಸಲು ಬಯಸುತ್ತೇನೆ' ಎಂದು ಮತ್ತೊಬ್ಬ ಆಟಗಾರ ಹಾಗೂ ಅವರ ದೀರ್ಘಕಾಲದ ಗೆಳೆಯ ಮನ್‌ಪ್ರೀತ್ 'ಎಕ್ಸ್'ನಲ್ಲಿ ಪೋಸ್ಟ್ ಹಾಕಿದರು.





ಸ್ಪೇನ್ ವಿರುದ್ಧದ ಪಂದ್ಯದಲ್ಲಿ ಗೆದ್ದ ಭಾರತ ಹಾಕಿ ತಂಡದ ಆಟಗಾರರ ಸಂಭ್ರಮ (ಮೊದಲ ಚಿತ್ರ). ಪಂದ್ಯದಲ್ಲಿ ಸ್ಪೇನ್‌ನ ಮಾರ್ಕ್ ರೇನಾ ಅವರನ್ನು ಭಾರತದ ಡಿಫೆಂಡರ್‌ಗಳಾದ ಅಭಿಷೇಕ್, ಅಮಿತ್ ರೋಹಿದಾಸ್, ಸುಮಿತ್ ಸುತ್ತುವರಿದಿರುವುದು –ಪ್ರಜಾವಾಣಿ ಚಿತ್ರ: ಕೆ.ಎನ್. ಶಾಂತಕುಮಾರ್

ಪದಕ ಪಟ್ಟಿ

ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಅಮೆರಿಕ	29	37	35	101
ಚೀನಾ	28	25	19	72
ಆಸ್ಟ್ರೇಲಿಯಾ	18	14	12	44
ಫ್ರಾನ್ಸ್	14	18	21	53
ಬ್ರಿಟನ್	13	17	21	51
ಜಪಾನ್	13	7	13	33
ದ.ಕೊರಿಯಾ	12	8	7	27
ನೆದರ್‌ಲೆಂಡ್ಸ್	11	6	8	25
ಇಟಲಿ	10	11	9	30
ಭಾರತ	0	1	4	5

ಪಟ್ಟಿಯಲ್ಲಿ ಭಾರತ 63ನೇ ಸ್ಥಾನದಲ್ಲಿದೆ

ಒಲಿಂಪಿಕ್ಸ್‌ನಲ್ಲಿ ಇಂದು (ಭಾರತದ ಸ್ಪರ್ಧೆ)

ಗಾಲ್ಫ್
ಮಹಿಳೆಯರ ವೈಯಕ್ತಿಕ
ಅದಿತಿ ಅಶೋಕ್, ದೀಕ್ಷಾ ದಾಗರ್, ಮಧ್ಯಾಹ್ನ 12.30

ಅಥ್ಲೆಟಿಕ್ಸ್
ಮಹಿಳೆಯರ 4x400 ರಿಲೆ ಮೊದಲ ಸುತ್ತು: ಮಧ್ಯಾಹ್ನ 2.10
ಪುರುಷರ 4x400 ರಿಲೆ ಮೊದಲ ಸುತ್ತು ಮಧ್ಯಾಹ್ನ 2.35

ಕುಸ್ತಿ
ಪುರುಷರ 57 ಕೆ.ಜಿ. ಫ್ರೀಸ್ಟೈಲ್ ಕಂಚಿನ ಪದಕ ಪಂದ್ಯ: ಅಮನ್ ಸೆಹ್ರಾವತ್ ವಿರುದ್ಧ ಡಾರಿಯಾನ್ ಟಿ ಕ್ರುಜ್ (ಪೋರ್ಟರಿಕೊ) ರಾತ್ರಿ 9.45

ನೇರ ಪ್ರಸಾರ: ಸ್ಪೋರ್ಟ್ಸ್ 18, ಜಿಯೊ ಸಿನಿಮಾ ಆ್ಯಪ್

ಸೆಮಿಯಲ್ಲಿ ಸೋತ ಅಮನ್

ಪ್ಯಾರಿಸ್ (ಪಿಟಿಐ): ಭಾರತ ಯುವ ಕುಸ್ತಿಪಟು ಅಮನ್ ಸೆಹ್ರಾವತ್ ಅವರು ಒಲಿಂಪಿಕ್ಸ್ ಪುರುಷರ ಕುಸ್ತಿ ಸ್ಪರ್ಧೆಗಳ 57 ಕೆ.ಜಿ. ವಿಭಾಗದಲ್ಲಿ ಅಗ್ರ ಶ್ರೇಯಾಂಕದ ಜಪಾನ್‌ನ ರೀ ಹಿಗುಚಿ ಅವರಿಗೆ 0–10 ರಿಂದ ಮಣಿದರು.

ರಿಯೊ ಒಲಿಂಪಿಕ್ಸ್‌ನಲ್ಲಿ (2016) ಬೆಳ್ಳಿ ಗೆದ್ದಿದ್ದ, 28 ವರ್ಷ ವಯಸ್ಸಿನ ಹಿಗುಚಿ ಅವರು ಕೇವಲ ಮೂರು ನಿಮಿಷಗಳಲ್ಲಿ ಮುಕ್ತಾಯಗೊಂಡ ಈ ಸೆಣಸಾಟವನ್ನು ಉತ್ತಮ ತಾಂತ್ರಿಕ ಕೌಶಲದ ಆಧಾರದಲ್ಲಿ ಗೆದ್ದರು.

ಪುರುಷರ ವಿಭಾಗದಲ್ಲಿ ಭಾರತದ ಏಕೈಕ ಕುಸ್ತಿಪಟುವಾಗಿ ಪ್ಯಾರಿಸ್ ಕ್ರೀಡೆಗಳಿಗೆ ಅರ್ಹತೆ ಪಡೆದಿದ್ದ ಅಮನ್ ಶುಕ್ರವಾರ ಕಂಚಿನ ಪದಕಕ್ಕಾಗಿ ನಡೆಯುವ ಪಂದ್ಯದಲ್ಲಿ ಉಜ್ಬೇಕಿಸ್ತಾನದ ಗುಲೊಮ್‌ಜಾನ್ ಅಬ್ದುಲ್ಲೇವ್ ಅವರನ್ನು ಎದುರಿಸಲಿದ್ದಾರೆ.

ಟೋಕಿಯೊ ಕ್ರೀಡೆಗಳಲ್ಲಿ ಈ ಕ್ಲಾಸ್‌ನಲ್ಲಿ ರವಿ ದಹಿಯಾ ಅವರು ಬೆಳ್ಳಿ ಗೆದ್ದಿದ್ದರು. ಆದರೆ ಈ ಬಾರಿ ರಾಷ್ಟ್ರೀಯ ಆಯ್ಕೆ ಟ್ರಯಲ್ಸ್‌ನಲ್ಲಿ ಅಮನ್, ರವಿ ಅವರನ್ನು ಸೋಲಿಸಿ ಒಲಿಂಪಿಕ್ಸ್‌ಗೆ ಅರ್ಹತೆ ಗಿಟ್ಟಿಸಿಕೊಂಡಿದ್ದರು.

ಇದಕ್ಕೆ ಮೊದಲು ಅಮನ್ ಕ್ವಾರ್ಟರ್‌ಫೈನಲ್‌ನಲ್ಲಿ ಮಾಜಿ ವಿಶ್ವ ಚಾಂಪಿಯನ್, ಅಲ್ಬೇನಿಯಾದ ಝೆಲಿಮ್‌ಖಾನ್ ಅಬಕರೊವ್ ಅವರನ್ನು ತಾಂತ್ರಿಕ ಕೌಶಲದ ಆಧಾರದಲ್ಲಿ ಸೋಲಿಸಿ ನಾಲ್ಕರ ಘಟ್ಟಕ್ಕೆ ಮುನ್ನಡೆದಿದ್ದರು.

21 ವರ್ಷದ ಅಮನ್ ಉತ್ತಮ ಲಯದಲ್ಲಿದ್ದು ಎರಡನೇ ಸುತ್ತಿನಲ್ಲಿ ಎದುರಾಳಿಯ ಕಾಲುಗಳನ್ನು 'ಲಾಕ್' ಮಾಡಿಟ್ಟರು. ಕೆಲವು ಬಾರಿ ಅವರನ್ನು ಕೆಡವಿ ಎಂಟು ಪಾಯಿಂಟ್ಸ್ ಗಳಿಸಿದರು. ಅಂತಿಮವಾಗಿ 12–0ಯಿಂದ ಗೆಲುವು ಪಡೆದರು. ಪ್ರಿ ಕ್ವಾರ್ಟರ್‌ಫೈನಲ್‌ನಲ್ಲಿ ಅವರು ಮಾಜಿ ಯುರೋಪಿಯನ್ ಚಾಂಪಿಯನ್, ನಾರ್ತ್ ಮ್ಯಾಸಿಡೊನಿಯಾದ ವ್ಲಾದಿಮಿರ್ ಇಗೊರೊವ್ ಅವರನ್ನು 10–0ಯಿಂದ ಮಣಿಸಿದ್ದರು.

ಅನ್ಶು ಮಲಿಕ್‌ಗೆ ಸೋಲು: ಮಹಿಳೆಯರ ವಿಭಾಗದ 57 ಕೆ.ಜಿ. ಸ್ಪರ್ಧೆಯಲ್ಲಿ ಭಾರತದ ಅನ್ಶು ಮಲಿಕ್ ಹೊರಬಿದ್ದರು. ಅವರು ಪ್ರಿಕ್ವಾರ್ಟರ್‌ಫೈನಲ್ ಬೌಟ್‌ನಲ್ಲಿ ಹಿರಿಯ ಕುಸ್ತಿಪಟು ಹೆಲೆನ್ ಲೂಯಿಸ್ ಮರೊಲಿಸ್ ಅವರಿಗೆ 2–7 ರಲ್ಲಿ ಸೋತರು. ಈ ಸೆಣಸಾಟ 2021ರ ವಿಶ್ವಚಾಂಪಿಯನ್‌ಷಿಪ್ ಫೈನಲ್‌ನ ಪುನರಾವರ್ತನೆಯಂತೆ ಇತ್ತು. ಆ ಬಾರಿ ಅಮೆರಿಕದ ಅನುಭವಿ ಹೆಲೆನ್, ಭಾರತದ ಕುಸ್ತಿಪಟುವನ್ನು ಸೋಲಿಸಿದ್ದು, ಅನ್ಶು ಬೆಳ್ಳಿ ಗೆದ್ದಿದ್ದರು. 2016ರ ರಿಯೊ ಗೇಮ್ಸ್‌ನಲ್ಲಿ ಚಿನ್ನ, 2020ರ ಒಲಿಂಪಿಕ್ಸ್‌ನಲ್ಲಿ ಕಂಚು ಗೆದ್ದ ಹೆಲೆನ್ ಅವರು ಫೈನಲ್ ತಲುಪಿದಲ್ಲಿ ಅನ್ಶು ಅವರಿಗೆ ರೆಪೆಷಾಜ್ ಮೂಲಕ ಕಂಚಿನ ಪದಕಕ್ಕೆ ಪೈಪೋಟಿ ನಡೆಸುವ ಅವಕಾಶ ದಕ್ಕಲಿದೆ.



ಪುರುಷರ 57 ಕೆ.ಜಿ. ಕುಸ್ತಿ ಸ್ಪರ್ಧೆಯಲ್ಲಿ ಭಾರತದ ಅಮನ್ ಸೆಹ್ರಾವತ್ (ನೀಲಿ ಪೋಷಾಕು) ಮತ್ತು ಜಪಾನ್‌ನ ರೀ ಹಿಗುಚಿ ನಡುವಣ ಸೆಮಿಫೈನಲ್ ಸೆಣಸಾಟ ನಡೆಯಿತು. ಹಿಗುಚಿ ಈ ಬೌಟ್ ಗೆದ್ದು ಫೈನಲ್‌ಗೆ ಅರ್ಹತೆ ಪಡೆದರು
ಪ್ರಜಾವಾಣಿ ಚಿತ್ರ: ಕೆ.ಎನ್.ಶಾಂತಕುಮಾರ್

ಸ್ವಪ್ನಿಲ್‌ಗೆ ಅದ್ದೂರಿ ಸ್ವಾಗತ

ಪುಣೆ (ಪಿಟಿಐ): ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದು ಗುರುವಾರ ತವರಿಗೆ ಮರಳಿದ ಸ್ವಪ್ನಿಲ್ ಕುಸಾಳೆ ಅವರಿಗೆ ಅದ್ದೂರಿ ಸ್ವಾಗತ ನೀಡಲಾಯಿತು.

ಕೊಲ್ಹಾಪುರದ ಸ್ವಪ್ನಿಲ್ ಅವರು 50 ಮೀ ರೈಫಲ್ ತ್ರೀ ಪೊಸಿಷನ್ ವಿಭಾಗದಲ್ಲಿ ಭಾರತಕ್ಕೆ ಮೂರನೇ ಪದಕ ತಂದುಕೊಟ್ಟಿದ್ದಾರೆ.

ಪುಣೆಯ ವಿಮಾನ ನಿಲ್ದಾಣ ನಿಲ್ದಾಣದಲ್ಲಿ ಅವರನ್ನು ಆತ್ಮೀಯವಾಗಿ ಬರಮಾಡಿಕೊಳ್ಳಲಾಯಿತು.

ಬಳಿಕ ಸ್ವಪ್ನಿಲ್, ದಗ್ದುಶೇತ್ ಹಲ್ವಾಯಿ ಗಣಪತಿ ದೇವಸ್ಥಾನಕ್ಕೆ ತೆರಳಿ ಪೂಜೆ ಸಲ್ಲಿಸಿದರು. ಕುಟುಂಬದ ಸದಸ್ಯರು, ಕೋಚ್ ಜೊತೆಗಿದ್ದರು.

'ಈ ಪದಕ ನನ್ನದಲ್ಲ, ಅದು ದೇಶಕ್ಕೆ ಮತ್ತು ಮಹಾರಾಷ್ಟ್ರಕ್ಕೆ ಸೇರಿದ್ದು. ನನ್ನ ಸಾಧನೆಯ ಹಾದಿಯಲ್ಲಿ ಪ್ರೋತ್ಸಾಹ ನೀಡಿದ ಸರ್ಕಾರಗಳು, ರಾಷ್ಟ್ರೀಯ ಒಕ್ಕೂಟ ಮತ್ತು ಎಲ್ಲರಿಗೂ ಚಿರಋಣಿ. ಮಹಾರಾಷ್ಟ್ರಕ್ಕೆ ಕೀರ್ತಿ ತರಲು ಸಾಧ್ಯವಾಗಿದ್ದು ನನ್ನ ಅದೃಷ್ಟ' ಎಂದು ಬಾಳೆವಾಡಿ ಕ್ರೀಡಾ ಸಂಕೀರ್ಣದಲ್ಲಿ ನಡೆದ ಸನ್ಮಾನ ಸಮಾರಂಭದಲ್ಲಿ ಅವರು ಮಾಧ್ಯಮಗಳಿಗೆ ತಿಳಿಸಿದರು.

'ಈ ಸಾಧನೆಯ ಯಶಸ್ಸು ನನ್ನ ಕುಟುಂಬಕ್ಕೆ ಮತ್ತು ಕೋಚ್‌ಗೆ ಸಲ್ಲಬೇಕು. ಅವರ ಪರಿಶ್ರಮ ಮತ್ತು ತ್ಯಾಗದಿಂದಾಗಿ ಇಂದು ನನ್ನ ಕನಸು ನನಸಾಗಿದೆ. ಮುಂದಿನ ಬಾರಿ ಚಿನ್ನದ ಪದಕದ ಗುರಿ ಹೊಂದಿದ್ದೇನೆ' ಎಂದು 29 ವರ್ಷ ವಯಸ್ಸಿನ ಸ್ವಪ್ನಿಲ್ ಹೇಳಿದರು.

ಒಲಿಂಪಿಕ್ಸ್‌ನ 50 ಮೀ ರೈಫಲ್ ತ್ರೀ ಪೊಸಿಷನ್ ವಿಭಾಗದಲ್ಲಿ ಫೈನಲ್‌ಗೆ ಅರ್ಹತೆ ಪಡೆದ ಮೊದಲ ಭಾರತೀಯ ಎಂಬ ಹೆಗ್ಗಳಿಕೆಗೆ ಪಾತ್ರರಾದ ಸ್ವಪ್ನಿಲ್, ಸ್ಪರ್ಧೆಯ ಹಾದಿಯಲ್ಲಿ ಒತ್ತಡವನ್ನು ನಿಭಾಯಿಸಲು ಕಲಿತಿದ್ದೇನೆ ಎಂದು ಹೇಳಿದರು.



ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದ ಸ್ವಪ್ನಿಲ್ ಕುಸಾಳೆ ಅವರಿಗೆ ಪುಣೆಯಲ್ಲಿ ಗುರುವಾರ ಅದ್ದೂರಿ ಸ್ವಾಗತ ನೀಡಲಾಯಿತು –ಪಿಟಿಐ ಚಿತ್ರ

ಸ್ಟೀಪಲ್ ಚೇಸ್: ಸಾಬಳೆಗೆ 11ನೇ ಸ್ಥಾನ

ಪ್ಯಾರಿಸ್ (ಪಿಟಿಐ): ಭಾರತದ ಅವಿನಾಶ್ ಸಾಬಳೆ ಅವರು ಪ್ಯಾರಿಸ್ ಒಲಿಂಪಿಕ್ಸ್ ಪುರುಷರ 3,000 ಮೀ. ಸ್ಟೀಪಲ್ ಚೇಸ್ ಫೈನಲ್ ರೇಸ್‌ನಲ್ಲಿ 11ನೇ ಸ್ಥಾನ ಪಡೆದರು.

ಆರಂಭದಲ್ಲಿ ಕೊಂಚ ಮುನ್ನಡೆಯಲ್ಲಿದ್ದ 29 ವರ್ಷ ವಯಸ್ಸಿನ ಸಾಬ್ಳೆ ಅವರು 8 ನಿಮಿಷ 14.18 ಸೆ.ಗಳಲ್ಲಿ ಗುರಿ ತಲುಪಿದರು. ಇತ್ತೀಚೆಗೆ ಪ್ಯಾರಿಸ್‌ನಲ್ಲಿ ನಡೆದಿದ್ದ ಡೈಮಂಡ್ ಲೀಗ್‌ನಲ್ಲಿ 8 ನಿಮಿಷ 09.91 ಸೆಕೆಂಡುಗಳಲ್ಲಿ ಗುರಿ ತಲುಪುವ ಮೂಲಕ ತಮ್ಮದೇ ರಾಷ್ಟ್ರೀಯ ದಾಖಲೆಯನ್ನು ಸಾಬಳೆ ಉತ್ತಮಪಡಿಸಿಕೊಂಡಿದ್ದರು.

ಟೋಕಿಯೊದಲ್ಲಿ ಕೂಟದಲ್ಲಿ ಚಿನ್ನ ಗೆದ್ದಿದ್ದ ಮೊರಾಕ್ಕೊದ ಸೊಫಿಯಾನ್ ಅಲ್ ಬಕಾಲಿ ಅವರು ಪ್ರಶಸ್ತಿಯನ್ನು ಉಳಿಸಿಕೊಂಡರು. ಈ ಋತುವಿನಲ್ಲಿ ಶ್ರೇಷ್ಠ 8 ನಿಮಿಷ 06.05 ಸೆಕೆಂಡುಗಳಲ್ಲಿ ಗುರಿ ತಲುಪಿದರು.

ಅಮೆರಿಕದ ಕೆನ್ನೆತ್ ರೂಕ್ಸ್ (8 ನಿ 06.41 ಸೆ) ಮತ್ತು ಕೆನ್ಯಾದ ಅಬ್ರಹಾಮ್ ಕಿಬಿವೊಟ್ (8 ನಿ 06.47 ಸೆ) ಕ್ರಮವಾಗಿ ಬೆಳ್ಳಿ ಹಾಗೂ ಕಂಚಿನ ಪದಕ ತಮ್ಮದಾಗಿಸಿಕೊಂಡರು.

ತಮ್ಮ ಹೆಸರಿನಲ್ಲಿ ವಿಶ್ವ ದಾಖಲೆ ಹೊಂದಿರುವ ಇಥಿಯೋಪಿಯಾದ ಲಮೆಚಾ ಗರ್ಮಾ ಟ್ರ್ಯಾಕ್‌ನಲ್ಲಿ ಬಿದ್ದಿದ್ದರಿಂದ ರೇಸ್ ಪೂರ್ಣಗೊಳಿಸಲು ಸಾಧ್ಯವಾಗಲಿಲ್ಲ.

ಸೆಮಿ ತಲುಪಲು ಜ್ಯೋತಿ ವಿಫಲ: ರಾಷ್ಟ್ರೀಯ ದಾಖಲೆ ಹೊಂದಿರುವ ಜ್ಯೋತಿ ಯರ್ರಾಜಿ ಅವರು ಒಲಿಂಪಿಕ್ಸ್ ಮಹಿಳೆಯರ 100 ಮೀ. ಹರ್ಡಲ್ಸ್ ಸೆಮಿಫೈಣಲ್ ತಲುಪಲು ವಿಫಲರಾದರು. ಗುರುವಾರ ನಡೆದ ತಮ್ಮ ರೆಪೆಷಾಜ್ ಹೀಟ್‌ನಲ್ಲಿ ಅವರು ನಾಲ್ಕನೇ ಸ್ಥಾನ ಪಡೆದರು.

ಒಲಿಂಪಿಕ್ಸ್‌ನ 100 ಮೀ. ಹರ್ಡಲ್ಸ್ ಸ್ಪರ್ಧೆಯಲ್ಲಿ ಭಾಗವಹಿಸಿದ ಮೊದಲ ಅಥ್ಲೀಟ್ ಎನಿಸಿದ ಜ್ಯೋತಿ, ರೆಪೆಷಾಜ್ ಹೀಟ್‌ನಲ್ಲಿ 13.17 ಸೆ.ಗಳಲ್ಲಿ ಗುರಿತಲುಪಿದರು. ಒಟ್ಟು 40 ಓಟಗಾರ್ತಿಯಲ್ಲಿ 16ನೇ ಸ್ಥಾನ ಪಡೆದರು.

ಆದರೆ ಇದು ಅವರ ಒಳ್ಳೆಯ ಸಾಧನೆಯೇನಲ್ಲ. ರಾಷ್ಟ್ರೀಯ ದಾಖಲೆ ಸ್ಥಾಪಿಸುವಾಗ 12.78 ಸೆ.ಗಳಲ್ಲಿ ಓಡಿದ್ದ ಅವರು, ಬುಧವಾರ ನಡೆದ ಗೇಮ್ಸ್‌ನ ಹೀಟ್ಸ್‌ನಲ್ಲಿ 13.16 ಸೆ.ಗಳಲ್ಲಿ ಅಂತ[illegible] ಕ್ರಮಿಸಿದ್ದರು.

ಪ್ರತಿ ರೆಪೆಷಾಜ್‌ನಲ್ಲಿ ಮೊದ[illegible] ಎರಡು ಸ್ಥಾನ ಪಡೆದವರು ಸೆಮಿಫೈನ[illegible] ತಲುಪುತ್ತಾರೆ.

ದಕ್ಷಿಣ ಆಫ್ರಿಕಾದ ಮರಿಯೋ[illegible] ಫೌರಿ (12.79 ಸೆ.) ಮತ್ತು ಡ[illegible] ಅಥ್ಲೀಟ್ ಮಾಯ್ಕೆ ಟಿನ್-ಎ-ಲಿವ[illegible] ಅವರು ರೆಪೆಪಾಜ್ ಹೀಟ್ 1ರಿಂ[illegible] ಸೆಮಿಫೈನಲ್‌ಗೆ ಮುನ್ನಡೆದರು.

ಲಾಂಗ್‌ಜಂಪ್‌ನಲ್ಲಿ ಭಾರತಕ್ಕೆ ನಿರಾಶೆ: ಭಾರತದ ಪ್ರವೀಣ್ ಚಿತ್ರವೇಲ್ (16.2[illegible] ಮೀ) ಮತ್ತು ಅಬ್ದುಲ್ಲಾ ಅಬೂಬಕ್ಕ[illegible] (16.49 ಮೀ) ಅವರು ಒಲಿಂಪಿಕ್ಸ್[illegible] ಪುರುಷರ ಲಾಂಗ್‌ಜಂಪ್ ಸ್ಪರ್ಧೆಯ[illegible] ಫೈನಲ್ ತಲುಪಲು ವಿಫಲರಾದರು.

ಧೀನಿಧಿ, ಖುಜುಲಾ ದಾಖಲೆ


ಬೆಂಗಳೂರು: ರಾಜ್ಯದ ಧೀನಿಧಿ ದೇಸಿಂಗು ಮತ್ತು ಖುಜುಲಾ ಎಸ್. ಅವರು ಒಡಿಶಾದ ಭುವನೇಶ್ವರ ದಲ್ಲಿ ನಡೆಯುತ್ತಿರುವ 40ನೇ ಸಬ್ ಜೂನಿಯರ್ ಮತ್ತು 50ನೇ ಜೂನಿಯರ್ ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್ ನಲ್ಲಿ ಕೂಟ ದಾಖಲೆ ನಿರ್ಮಿಸಿದರು.

ಬಾಲಕಿಯರ ಗುಂಪು–2ರ 50 ಮೀ ಫ್ರೀಸ್ಟೈಲ್ ವಿಭಾಗದಲ್ಲಿ 26.89 ಸೆಕೆಂಡುಗಳಲ್ಲಿ ಗುರಿ ತಲುಪಿ ದಾಖಲೆ ಬರೆದರು. ಬಾಲಕಿಯರ ಗುಂಪು–1ರ 50 ಮೀ.ಫ್ರೀಸ್ಟೈಲ್ ವಿಭಾಗದಲ್ಲಿ ಖುಜಲಾ 26.91 ಸೆಕೆಂಡುಗಳಲ್ಲಿ ಗುರಿ ತಲುಪಿದರು.



ಪ್ರಶಸ್ತಿಯೊಂದಿಗೆ ಧೀನಿಧಿ ದೇಸಿಂಗು (ಮಧ್ಯ) ಮತ್ತು ಚರಿತಾ ಫಣೀಂದ್ರನಾಥ್ (ಬಲ)

ಕರ್ನಾಟಕದ ಸ್ಪರ್ಧಿಗಳ ಫಲಿತಾಂಶಗಳು: ಬಾಲಕಿಯರ ಗುಂಪು–1: 400 ಮೀ. ಮೆಡ್ಲೆ: ಹಷಿಕಾ ರಾಮಚಂದ್ರ (5ನಿ 08.79 ಸೆ)–1, ರಿತಿಕಾ ಮಹೇಶ ಬೆಂಗಳೂರು (5ನಿ 17.99ಸೆ)–2. 50 ಮೀ. ಬ್ಯಾಕ್‌ಸ್ಟ್ರೋಕ್: ವಿಹಿತಾ ನಯನಾ ಲೋಗನಾಥನ್ (30.44ಸೆ)–1. 50 ಮೀ. ಫ್ರೀಸ್ಟೈಲ್: ಖುಜುಲಾ ಎಸ್. (26.91 ಸೆ)–1. ಗುಂಪು–2: 100 ಮೀ. ಬಟರ್‌ಫ್ಲೈ: ತ್ರಿಶಾ ಸಿಂಧು ಎಸ್. (1 ನಿ 07.86 ಸೆ)–3. 50 ಮೀ ಬ್ಯಾಕ್ಸ್ ಸ್ಟ್ರೋಕ್: ನೈಶಾ (32.21ಸೆ)–3. 50 ಮೀ ಫ್ರೀಸ್ಟೈಲ್: ಧೀನಿಧಿ ದೇಸಿಂಗು (26.89ಸೆ)–1, ಚರಿತಾ ಫಣೀಂದ್ರನಾಥ್ (28.05ಸೆ)–3. 1500 ಮೀ. ಫ್ರೀಸ್ಟೈಲ್: ಅದಿತಿ ವಿನಾಯಕ ರೆಲೇಕರ್: (18ನಿ 42.62ಸೆ)–3. ಗುಂಪು–3: 100 ಮೀ ಬ್ರೆಸ್ಟ್ ಸ್ಟ್ರೋಕ್: ಶ್ರೇಯಾ ಸುರೇಶ್ ಪೂಜಾರ್ (1ನಿ 26.82ಸೆ)–3. 400 ಮೀ.ಫ್ರೀಸ್ಟೈಲ್: ಸ್ತುತಿ ಸಿಂಗ್ (5ನಿ 04.29 ಸೆ)–3. ಬಾಲಕರ ಗುಂಪು–1: 200 ಮೀ.ಬ್ರೆಸ್ಟ್‌ಸ್ಟ್ರೋಕ್: ಕ್ರಿಷ್ ಕುಮಾರ್ (2 ನಿ 26.30ಸೆ)–2. ಗುಂಪು–2: 50 ಮೀ.ಬ್ಯಾಕ್‌ಸ್ಟ್ರೋಕ್: ಸಮರ್ಥ್ ಗೌಡ ಬಿ.ಎಸ್. (28.30ಸೆ)–1. ಗುಂಪು–3: 400 ಮೀ. ಫ್ರೀಸ್ಟೈಲ್: ಅಮಿತ್ ಎಚ್.ಪವನ್ (4 ನಿ. 50.40ಸೆ)–2, ಲೋಹಿತಾಶ್ವ ನಾಗೇಶ್ ಶಶಿಕುಮಾರ್ (4ನಿ 54.49 ಸೆ)–3.



'ಮೈಸೂರು ಓಪನ್–2024' ಗಾಲ್ಫ್ ಟೂರ್ನಿಯ ಅರ್ಹತಾ ಸುತ್ತಿನಲ್ಲಿ ಪಾಲ್ಗೊಂಡ ಮೈಸೂರಿನ ಎಂ.ಎಸ್ ಯಶಸ್ ಚಂದ್ರ ಆಟದ ಭಂಗಿ – ಪ್ರಜಾವಾಣಿ ಚಿತ್ರ: ಅನೂಪ್ ರಾಘ ಟಿ.

ಗಾಲ್ಫ್: ಅಮನ್‌ಗೆ ಮುನ್ನಡೆ

ಪ್ರಜಾವಾಣಿ ವಾರ್ತೆ

ಮೈಸೂರು: ಬಿಹಾರದ ಗಾಲ್ಫರ್ ಅಮನ್ ರಾಜ್ ಗುರುವಾರ ಇಲ್ಲಿ ಆರಂಭಗೊಂಡ 'ಮೈಸೂರು ಓಪನ್–2024' ಗಾಲ್ಫ್ ಟೂರ್ನಿಯ ಅರ್ಹತಾ ಸುತ್ತಿನಲ್ಲಿ ಮುನ್ನಡೆ ಸಾಧಿಸಿದ್ದು, ಮೈಸೂರಿನ ಹವ್ಯಾಸಿ ಗಾಲ್ಫರ್ ವೀರ್ ಗಣಪತಿ ಅಚ್ಚರಿಯ ಪ್ರದರ್ಶನದೊಂದಿಗೆ ಎರಡನೇ ಸ್ಥಾನದಲ್ಲಿದ್ದಾರೆ.

ಪ್ರೊಫೆಷನಲ್ ಗಾಲ್ಫ್ ಟೂರ್ ಆಫ್ ಇಂಡಿಯಾ (ಪಿಜಿಟಿಐ) ಹಾಗೂ ಜಯಚಾಮರಾಜೇಂದ್ರ ಒಡೆಯರ್ ಗಾಲ್ಫ್ ಕ್ಲಬ್ (ಜೆಡಬ್ಲ್ಯುಜಿಸಿ) ಸಹಯೋಗದಲ್ಲಿ ನಡೆದಿರುವ ಟೂರ್ನಿಯ ಮೊದಲ ಸುತ್ತಿನ ಅಂತ್ಯಕ್ಕೆ ಅಮನ್ –8 ಅಂಕಗಳೊಂದಿಗೆ ಮುನ್ನಡೆ ಕಾಯ್ದುಕೊಂಡರು. ವೀರ್ –7 ಅಂಕಗಳೊಂದಿಗೆ ಅರ್ಜುನ್ ಶರ್ಮ ಹಾಗೂ ಅಂಗದ್ ಚೀಮ ಅವರೊಂದಿಗೆ ಜಂಟಿ ಎರಡನೇ ಸ್ಥಾನ ಪಡೆದರು.

ಮೈಸೂರಿನವರೇ ಆದ 6ನೇ ಶ್ರೇಯಾಂಕದ ಎಂ.ಎಸ್. ಯಶಸ್ ಚಂದ್ರ ಹಾಗೂ ಐ.ಎಲ್. ಆಲಾಪ್ –6 ಅಂಕಗಳೊಂದಿಗೆ ಇತರೆ ಐವರು ಗಾಲ್ಫ್‌ರ್‌ಗಳೊಂದಿಗೆ ಜಂಟಿ ಐದನೇ ಸ್ಥಾನದಲ್ಲಿ ಇದ್ದಾರೆ.

ಟೂರ್ನಿಯಲ್ಲಿ ಒಟ್ಟು 126 ಆಟಗಾರರು ಪಾಲ್ಗೊಂಡಿದ್ದು, ಶನಿವಾರ ಮುಖ್ಯ ಸುತ್ತಿನ ಪಂದ್ಯಗಳು ಆರಂಭ ಆಗಲಿವೆ. ವಿಜೇತರು ಒಟ್ಟು ₹1 ಕೋಟಿ ಮೊತ್ತದ ಬಹುಮಾನ ಪಡೆಯಲಿದ್ದಾರೆ.

ಅಂಶುಮಾನ್ ಗಾಯಕವಾಡ್‌ಗೆ ಶ್ರದ್ಧಾಂಜಲಿ



ವಡೋದರ (ಪಿಟಿಐ): ಭಾರತದ ಕ್ರಿಕೆಟ್ ದಿಗ್ಗಜರಾದ ಸುನೀಲ್ ಗಾವಸ್ಕರ್, ಕಪಿಲ್ ದೇವ್, ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಕಾರ್ಯದರ್ಶಿ ಜಯ್ ಶಾ ಸೇರಿದಂತೆ ಹಲವು ಗಣ್ಯರು, ಅಂಶುಮಾನ್ ಗಾಯಕವಾಡ್ ಅವರಿಗೆ ಗುರುವಾರ ಏರ್ಪಡಿಸಿದ್ದ ಶ್ರದ್ಧಾಂಜಲಿ ಸಭೆಯಲ್ಲಿ ಭಾಗಿಯಾಗಿದ್ದರು.

ರಕ್ತದ ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಗಾಯಕವಾಡ್ (71) ಅವರು ಜುಲೈ 31ರಂದು ವಡೋದರದ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾಗಿದ್ದರು. ಅವರು ಭಾರತ ತಂಡದ ಆರಂಭ ಆಟಗಾರ-ರಾಗಿದ್ದು, ನಂತರ ಕೋಚ್ ಹಾಗೂ ಆಯ್ಕೆಗಾರ ಪಾತ್ರವನ್ನೂ ನಿರ್ವಹಿಸಿದ್ದರು.

ವಡೋದರದ ಸೇವಾಸಿ ಪ್ರದೇಶದಲ್ಲಿ ಗಾಯಕವಾಡ ಅವರ ಕುಟುಂಬಸ್ಥರು ಶ್ರದ್ಧಾಂಜಲಿ ಸಭೆ ಏರ್ಪಡಿಸಿದ್ದರು.

'ಗಾಯಕವಾಡ್ ನನ್ನ ಸ್ನೇಹಿತ ಮತ್ತು ನನ್ನ ಜೊತೆ ಇನಿಂಗ್ಸ್ ಆರಂಭಿಸುತ್ತಿದ್ದರು. ಯಾವುದೇ ಪಂದ್ಯಕ್ಕೆ ಒಂದು ದಿನ ಮೊದಲು ನಾವು, ವೇಗದ ಬೌಲರ್‌ಗಳನ್ನು ಯಾವ ರೀತಿ ನಿಭಾಯಿಸಬೇಕೆಂದು ಕುಳಿತು ಚರ್ಚಿಸುತ್ತಿದ್ದೆವು. ಇದರಿಂದ ನಾವು ಆರಂಭ ಜೊತೆಯಾಟಗಾರರಷ್ಟೇ ಅಲ್ಲ, ಆತ್ಮೀಯ ಮಿತ್ರರಾದೆವು' ಎಂದು ಗಾವಸ್ಕರ್ ಸ್ಮರಿಸಿದರು.

ಭಾರತ ತಂಡದ ಪರ ಗಾಯಕವಾಡ್ 40 ಟೆಸ್ಟ್, 15 ಏಕದಿನ ಪಂದ್ಯಗಳನ್ನು ಆಡಿದ್ದಾರೆ.

ಮೋಹನ್ ಬಾಗನ್ ತಂಡಕ್ಕೆ ಗೆಲುವು

ಕೋಲ್ಕತ್ತಾ (ಪಿಟಿಐ): ಮೋಹನ್ ಬಾಗನ್ ಸೂಪರ್ ಜೈಂಟ್ ತಂಡವು 133ನೇ ಡ್ಯುರಾಂಡ್ ಕಪ್ ಟೂರ್ನಿಯಲ್ಲಿ 6-0 ಅಂತರದಿಂದ ಇಂಡಿಯನ್ ಏರ್‌ಫೋರ್ಸ್ ಎಫ್‌ಟಿ ತಂಡವನ್ನು ಸೋಲಿಸಿ ಸಾಂಪ್ರದಾಯಿಕ ಎದುರಾಳಿ ಈಸ್ಟ್ ಬೆಂಗಾಲ್ ತಂಡ ಹಿಂದಿಕ್ಕಿ 'ಎ' ಗುಂಪಿನಲ್ಲಿ ಅಗ್ರಸ್ಥಾನಕ್ಕೇರಿತು.

ಮೋಹನ್ ಬಾಗನ್ ತಂಡದ ಜೇಸನ್ ಕಮ್ಮಿಂಗ್ಸ್ (4 ಮತ್ತು 76ನೇ ನಿ) ಎರಡು ಹಾಗೂ ಟಾಮ್ ಆಲ್ಡ್ರೆಡ್ (10ನೇ ನಿ), ಲಿಸ್ಟನ್ ಕೊಲಾಕೊ (38ನೇ ನಿಮಿಷ), ಅನಿರುಧ್ ಥಾಪಾ (65ನೇ ನಿ), ಗ್ರೆಗ್ ಸ್ಟೇವಾರ್ಟ್ (90 + 1) ತಲಾ ಒಂದು ಗೋಲು ದಾಖಲಿಸಿದರು.

21ರಿಂದ ಏಷ್ಯನ್ ಟೇಕ್ವಾಂಡೊ ಚಾಂಪಿಯನ್‌ಷಿಪ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 10ನೇ ಏಷ್ಯನ್ ಐಟಿಎಫ್ ಟೇಕ್ವಾಂಡೊ ಚಾಂಪಿಯನ್‌ಷಿಪ್ ಇದೇ 21ರಿಂದ 25ರ ವರೆಗೆ ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯಲಿದೆ. ಭಾರತದ ಟೇಕ್ವಾಂಡೊ ಇತಿಹಾಸದಲ್ಲೇ ಮೊದಲ ಬಾರಿಗೆ ಒಂಬತ್ತು ವಿಭಾಗಗಳಲ್ಲಿ ಸ್ಪರ್ಧೆಗಳನ್ನು ಆಯೋಜಿಸಲಾಗುತ್ತಿದೆ.

ರಾಜ್ಯಪಾಲ ಥಾವರಚಂದ್ ಗೆಹಲೋತ್ ಸ್ಪರ್ಧೆಯನ್ನು ಉದ್ಘಾಟಿಸಲಿದ್ದಾರೆ. ಕಂದಾಯ ಸಚಿವ ಕೃಷ್ಣ ಬೈರೇಗೌಡ, ಐಟಿಎಫ್ ಅಧ್ಯಕ್ಷ ರಿ ಯಾಂಗ್ ಸನ್, ಕೆಟಿಎಫ್ ಅಧ್ಯಕ್ಷ ಕಿಮ್ ಮಿಯಾಂಗ್ ಗನ್ ಉಪಸ್ಥಿತರಿರಲಿದ್ದಾರೆ.

ವೈಯಕ್ತಿಕ ಸ್ಪಾರಿಂಗ್, ವೈಯಕ್ತಿಕ ಪ್ಯಾಟರ್ನ್, ವೈಯಕ್ತಿಕ ಪವರ್, ವೈಯಕ್ತಿಕ ಸ್ಪೆಷಲ್ ಟೆಕ್ನಿಕ್, ಟೀಮ್ ಸ್ಪಾರಿಂಗ್, ಟೀಮ್ ಪ್ಯಾಟರ್ನ್, ಟೀಮ್ ಪವರ್, ಟೀಮ್ ಸ್ಪೆಷಲ್ ಟೆಕ್ನಿಕ್, ಸೆಲ್ಫ್ ಡಿಫೆನ್ಸ್ ರುಟೀನ್ ವಿಭಾಗಗಳಲ್ಲಿ ಸ್ಪರ್ಧೆ ನಡೆಯಲಿದೆ. ಏಷ್ಯಾ ಖಂಡದ 30 ದೇಶಗಳ 700ಕ್ಕೂ ಹೆಚ್ಚು ಸ್ಪರ್ಧಿಗಳು ಭಾಗವಹಿಸಲಿದ್ದಾರೆ.